ಮಂಗಳೂರು

ಸೋಮವಾರ, 2 ಮಾರ್ಚ್ 2026

ಸಂಪುಟ 47, ಸಂಚಿಕೆ 333 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಒಳ್ಳೆಯದನ್ನು ಮಾಡುವ ಇಷ್ಟವಿದ್ದರೆ ಈಗಲೇ ಮಾಡು. ಕೆಟ್ಟದ್ದಾದರೆ ನಿಧಾನಿಸು ಹಾಗೂ ಯೋಚಿಸು.

▲ ಲೋಕೋಕ್ತಿ

ಭಕ್ತಿಮಾರ್ಗದ ಹೊಂಬೆಳಕು: ಶ್ರೀ ಚೈತನ್ಯ ಮಹಾಪ್ರಭು

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಕನ್ನಡಿಗರ ರಕ್ಷಣೆಗೆ ತ್ವರಿತ ಕ್ರಮ

• **ಶಿವಮೊಗ್ಗ:** ಯುದ್ಧಪೀಡಿತ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆ ತರುವ ಯತ್ನ ಮಾಡಲಾಗುತ್ತಿದ್ದು, ಈ ಸಂಬಂಧ ಮುಖ್ಯಕಾರ್ಯದರ್ಶಿ ಹಾಗೂ ವಿದೇಶಾಂಗ ಸಚಿವಾಲಯದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಭಾನುವಾರ ಖಾಸಗಿ ಕಾರ್ಯಕ್ರಮಕ್ಕೆ ತೆರಳುವ ಸಲುವಾಗಿ ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಲ್ಲರನ್ನು ಸುರಕ್ಷಿತವಾಗಿ ಕರೆ ತರುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿದೆ. ಬಳ್ಳಾರಿ ಸೇರಿದಂತೆ ಬೇರೆ ಬೇರೆ ಜಿಲ್ಲೆ ಗಳಲ್ಲಿನ ಜನರು ವಿದೇಶಗಳಲ್ಲಿ ಸಿಲುಕಿಕೊಂಡಿದ್ದಾರೆ ಎಂದರು. ➡ಪುಟ ೪

ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಹತ್ಯೆ | ಶನಿವಾರ ಮಧ್ಯರಾತ್ರಿಯೇ ಟ್ರಂಪ್ ಘೋಷಣೆ

ಸುಪ್ರೀಂ ಲೀಡರ್ ಖಮೇನಿ ಖತಂ

• **ದುಬೈ/ಟೆಹ್ರಾನ್/ವಾಷಿಂಗ್ಟನ್/ಹೊಸದಿಲ್ಲಿ:** ಅತ್ಯಂತ ಮಹತ್ವದ ಬೆಳವಣಿಗೆಯಲ್ಲಿ ಇರಾನ್‌ನ ಸುಪ್ರೀಂ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರನ್ನು ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಹತ್ಯೆ ಮಾಡಿವೆ. ಶನಿವಾರ ಮಧ್ಯರಾತ್ರಿ ವೇಳೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಈ ಮಾಹಿತಿಯನ್ನು ಬಹಿರಂಗಪಡಿಸಿದರು. ಇದನ್ನು ಇರಾನ್ ಕೂಡ ಅಧಿಕೃತಪಡಿಸಿದ್ದು, ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಪ್ರತೀಕಾರ ತೆಗೆದುಕೊಳ್ಳುವುದಾಗಿ ಘೋಷಿಸಿದೆ.



ಖಮೇನಿ ಹತ್ಯೆ ಬಳಿಕ, ಭಾರತ, ಪಾಕಿಸ್ತಾನ ಸೇರಿದಂತೆ ಜಗತ್ತಿನ ಬೇರೆ ಬೇರೆ ಮುಸ್ಲಿ ದೇಶಗಳು, ಅದರಲ್ಲೂ ಶಿಯಾ ಮುಸ್ಲಿಮರು ಹೆಚ್ಚು ಇರುವ ಕಡೆಗಳಲ್ಲಿ ಭಾರೀ ಪ್ರತಿಭಟನೆಯಾಗಿದೆ. ಪಾಕಿಸ್ತಾನದ ಕರಾಚಿಯಲ್ಲಿ ಅಮೆರಿಕ ರಾಯಭಾರ ಕಚೇರಿಗೆ ನುಗ್ಗಿರುವ ದುಷ್ಕರ್ಮಿಗಳು ದಾಂಧಲೆ ನಡೆಸಿದ್ದಾರೆ. ಈ ವೇಳೆ ಅಮೆರಿಕ ಸೇನೆ ಗುಂಡಿನ ದಾಳಿ ನಡೆಸಿ 21 ಮಂದಿಯನ್ನು ಹತ್ಯೆ ಮಾಡಿದೆ.

ಇರಾನ್‌ನಿಂದಲೇ ಬಹಿರಂಗ: ಟೆಹ್ರಾನ್‌ನ ಡೌನ್ ಟೌನ್‌ನಲ್ಲಿರುವ ಖಮೇನಿ ಅವರ ಕಾಂಪೌಂಡ್ ಅನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಲಾಗಿದ್ದು, ಈ ವೇಳೆ 86 ವರ್ಷದ ಆಯತೊಲ್ಲಾ ಅಲಿ ಖಮೇನಿ ಅವರು ಮೃತಪಟ್ಟಿದ್ದಾರೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ಉಪಗ್ರಹ ಫೋಟೋಗಳು ಸೈಟ್ ಮೇಲೆ ಭಾರಿ ಬಾಂಬ್ ದಾಳಿ ನಡೆಸಲಾಗಿದೆ ಎಂದು ತೋರಿಸಿದೆ.

ಟ್ರಂಪ್ ಘೋಷಣೆ: ಇತಿಹಾಸದ ಅತ್ಯಂತ ದುಷ್ಟ ಜನರಲ್ಲಿ ಒಬ್ಬರಾದ ಖಮೇನಿ ನಿಧನರಾಗಿದ್ದಾರೆ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿ ದ್ದಾರೆ. ದೇಶದ ಪರಮಾಣು ಸಾಮರ್ಥ್ಯಗಳನ್ನು ನಿಷ್ಕ್ರಿಯ ಗೊಳಿಸಬೇಕು ಎಂದು ಸೂಚಿಸಲಾಗಿದ್ದು, ಇದನ್ನು ಒಪ್ಪದ ಹಿನ್ನೆಲೆಯಲ್ಲಿ ಈ ದಾಳಿ ನಡೆಸಲಾಗಿದೆ ಎಂದು ಅವರು ಸಮರ್ಥಿಸಿಕೊಂಡಿದ್ದಾರೆ. ಜತೆಗೆ ಇದು ವಾರವಿಡೀ ಅಥವಾ ಅದಕ್ಕೂ ಮೀರಿ ಮುಂದು ವರಿಯುತ್ತದೆ ಎಂದು ಅವರು ಎಚ್ಚರಿಸಿದರು. ➡ಪುಟ ೪





ಇರಾನ್ ಪ್ರತೀಕಾರದ ಎಚ್ಚರಿಕೆ

ಖಮೇನಿ ಹತ್ಯೆ ಬಳಿಕ ಪ್ರತಿಕ್ರಿಯೆ ನೀಡಿರುವ ಇರಾನ್, ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಪ್ರತೀಕಾರ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ಜತೆಗೆ, ಇಸ್ರೇಲ್, ಸೌದಿ ಅರೇಬಿಯಾ, ಯುಎಇ, ಬಹ್ರೈನ್, ಕುವೈತ್, ಕತಾರ್ ಸೇರಿದಂತೆ ಅಮೆರಿಕದ ಸೇನಾ ನೆಲೆಗಳು ಇರುವ ಕಡೆಗಳಲ್ಲಿ ಮತ್ತು ದುಬೈ, ರಿಯಾದ್, ದೋಹಾ ಸೇರಿದಂತೆ ಪ್ರಮುಖ ನಗರಗಳ ಮೇಲೂ ದಾಳಿ ನಡೆಸಿದೆ. ಇಸ್ರೇಲ್ ಮೇಲೆ ನಡೆಸಿದ ದಾಳಿಯಿಂದಾಗಿ ಬೈತ್ ಸಮೇಶ್‌ನಲ್ಲಿ 8 ಮಂದಿ ಸತ್ತಿದ್ದಾರೆ. ಹೀಗಾಗಿ ಇರಾನ್ ದಾಳಿಯಿಂದ ಸತ್ತವರ ಸಂಖ್ಯೆ 9ಕ್ಕೆ ಏರಿದೆ. ಅಮೆರಿಕದ ಕಡೆಯಿಂದಲೂ ನಾಲ್ವರು ಯೋಧರು ಮೃತರಾಗಿದ್ದಾರೆ ಎಂದು ಸೇನೆ ಹೇಳಿದೆ. ➡ಪುಟ ೪

ಭಾರತೀಯರಿದ್ದ ಶಿಪ್ ಮೇಲೆ ದಾಳಿ

ಹೋರ್ಮುಜ್ ಕಾಲುವೆಯನ್ನೂ ಇರಾನ್ ಗುರಿಯಾಗಿಸಿಕೊಂಡಿದ್ದು, 15 ಮಂದಿ ಭಾರತೀಯ ಸಿಬ್ಬಂದಿ ಇದ್ದ ಹಡಗಿನ ಮೇಲೆ ದಾಳಿ ನಡೆಸಿದೆ. ಒಮಾನ್ ಕರಾವಳಿ ಸಮೀಪದಲ್ಲಿ ಈ ದಾಳಿಯಾಗಿದ್ದು, ಪಲಾವು ಧ್ವಜವನ್ನು ಹೊಂದಿದ್ದ ಹಡಗು ಇದಾಗಿದೆ. ಸ್ಕೈಲೈಟ್ ಎಂಬ ಈ ಹಡಗಿನಲ್ಲಿ 15 ಭಾರತೀಯರು ಮತ್ತು ಐವರು ಇರಾನಿಯನ್ನರು ಇದ್ದರು. ಇವರೆಲ್ಲರನ್ನೂ ರಕ್ಷಿಸಲಾಗಿದೆ ಎಂದೂ ಮೆರಿಟೈನ್ ಸೆಕ್ಯೂರಿಟಿ ಸೆಂಟರ್ ಹೇಳಿದೆ.

ಲಿಂಕನ್ ಸಮರನೌಕೆ ಮೇಲೆ ದಾಳಿ

ಖಮೇನಿ ಸಾವಿನ ಬಳಿಕ ದಾಳಿಯ ತೀವ್ರತೆಯನ್ನು ಹೆಚ್ಚು ಮಾಡಿರುವ ಇರಾನ್ ಪಡೆಗಳು, ಅಮೆರಿಕ ಮಿತ್ರ ದೇಶಗಳ ಜತೆಯಲ್ಲಿ ಅಮೆರಿಕದ ಸಮರ ನೌಕೆ ಮೇಲೂ ದಾಳಿ ನಡೆಸಿದೆ. ಶಕ್ತಿಶಾಲಿ ಲಿಂಕನ್ ಸಮರನೌಕೆಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ನಾಲ್ಕು ಬ್ಯಾಲೆಸ್ಟಿಕ್ ಮಿಸೈಲ್‌ಗಳನ್ನು ಬಳಸಲಾಗಿದೆ ಎಂದು ಮೂಲಗಳು ಹೇಳಿವೆ. ಅಮೆರಿಕವು ಇರಾನ್ ಮೇಲೆ ದಾಳಿ ನಡೆಸುವ ಸಲುವಾಗಿ ಲಿಂಕನ್ ಸೇರಿ ಎರಡು ಹಡಗುಗಳನ್ನು ಕಳಿಸಿತ್ತು. ಆದರೆ, ಈ ದಾಳಿ ಬಗ್ಗೆ ಅಮೆರಿಕ ಇನ್ನೂ ಅಧಿಕೃತವಾಗಿ ಏನನ್ನೂ ಹೇಳಿಲ್ಲ.

ಅರಾಫಿ ಇರಾನ್‌ನ ಮಧ್ಯಂತರ ನಾಯಕ

ಖಮೇನಿ ಉತ್ತರಾಧಿಕಾರಿಯಾಗಿ ಮಧ್ಯಂತರವಾಗಿ ಮೌಲ್ವಿ ಅಲಿರೇಜಾ ಅರಾಫಿ ಅವರನ್ನು ನೇಮಕ ಮಾಡಲಾಗಿದೆ. ಇರಾನ್‌ನ ನಾಯಕತ್ವ



ಮಂಡಳಿ ಈ ನಿರ್ಧಾರ ತೆಗೆದುಕೊಂಡಿದೆ. ಅರಾಫಿ ಅವರು ಗಾರ್ಡಿಯನ್ ಕೌನ್ಸಿಲ್‌ನ ಸದಸ್ಯರಾಗಿದ್ದು, ಇದರಲ್ಲಿ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮತ್ತು ನ್ಯಾಯಾಂಗ ಮುಖ್ಯಸ್ಥ ಘೋಲಮ್‌ಹುಸೇನ್ ಮೋಹ್ಸೇನಿ ಇದ್ದಾರೆ. ಈ ಮಧ್ಯೆ ಇರಾನ್ ಅಧ್ಯಕ್ಷರೂ ಮಾತನಾಡಿದ್ದು, ಶತ್ರುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಘೋಷಿಸಿದ್ದಾರೆ.

ಹತ್ಯೆ ಖಂಡಿಸಿ ಭಾರತದಲ್ಲಿ ಶಿಯಾ ಪ್ರತಿಭಟನೆ



ಖಮೇನಿ ಹತ್ಯೆಯನ್ನು ಖಂಡಿಸಿ ಭಾನುವಾರ ಭಾರತದ ವಿವಿಧ ಭಾಗಗಳಲ್ಲಿ ಶಿಯಾ ಸಮುದಾಯದವರು ಪ್ರತಿಭಟನೆ ನಡೆಸಿದರು. ಕಾಶ್ಮೀರದ ಲಾಲ್ ಚೌಕ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಆಕ್ರೋಶ ವ್ಯಕ್ತವಾಗಿದ್ದು, ಅಮೆರಿಕ– ಇಸ್ರೇಲ್ ವಿರುದ್ಧ ಘೋಷಣೆಗಳು ಕೇಳಿಬಂದವು. ಲಖನೌ, ಲುಧಿಯಾನಾ, ಅಜ್ಮೀರ್ ಸೇರಿದಂತೆ ಹಲವೆಡೆ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಅಲಿಪುರ ಗ್ರಾಮದಲ್ಲಿ ಮೌನಾಚರಣೆ ಪಾಲಿಸಿ ಅಂಗಡಿಗಳನ್ನು ಸ್ವಯಂಪ್ರೇರಿತವಾಗಿ ಮುಚ್ಚಲಾಯಿತು.

350ಕ್ಕೂ ಹೆಚ್ಚು ವಿಮಾನ ಸಂಚಾರ ರದ್ದು

ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಭಾನುವಾರವೂ 350 ವಿಮಾನಗಳನ್ನು ರದ್ದು ಮಾಡಲಾಗಿದೆ. ಜತೆಗೆ ಮಧ್ಯರಾತ್ರಿ ವೇಳೆಗೆ ಈ ಸಂಖ್ಯೆ 444ಕ್ಕೆ ಮುಟ್ಟಿದೆ. ಶನಿವಾರ ದೇಶೀಯವಾಗಿಯೂ 410 ವಿಮಾನಗಳ ಸಂಚಾರ ರದ್ದು ಮಾಡಲಾಗಿತ್ತು. ಬಹುತೇಕ ಎಲ್ಲ ವಿಮಾನಯಾನ ಸಂಸ್ಥೆಗಳೂ ಅಂತಾರಾಷ್ಟ್ರೀಯ ಸಂಚಾರಗಳನ್ನು ರದ್ದು ಮಾಡಿವೆ. ಆದರಲ್ಲೂ ದುಬೈ, ದೋಹಾ, ಅಬುದಾಬಿ ಸೇರಿದಂತೆ ಮಧ್ಯಪ್ರಾಚ್ಯ ದೇಶಗಳಿಗೆ ವಿಮಾನ ಓಡಾಟ ನಡೆಸಲಾಗುತ್ತಿಲ್ಲ.

ಕನ್ನಡಿಗರಿಗೂ ತಟ್ಟಿದ ಯುದ್ಧದ ಬಿಸಿ • ಪುಟ ೫

ಭಾರತೀಯರ ರಕ್ಷಣೆ ಕುರಿತು ಮೋದಿ ಚರ್ಚೆ


• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಉದ್ವಿಗ್ನತೆ ಹಿನ್ನೆಲೆಯಲ್ಲಿ, ಪ್ರಧಾನಿ ಮೋದಿ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ರಾತ್ರಿ ದಿಲ್ಲಿಯಲ್ಲಿ ಸಂಪುಟದ ಭದ್ರತಾ ಸಮಿತಿ(ಸಿಸಿಎಸ್) ಮಹತ್ವದ ಸಭೆ ನಡೆಯಿತು. ಸಭೆಯಲ್ಲಿ ಗಲ್ಫ್ ದೇಶಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಭಾರತೀಯರ ಸುರಕ್ಷತೆ ಕುರಿತು ಸಭೆಯಲ್ಲಿ ವಿಶೇಷ ಗಮನ ಹರಿಸಲಾಯಿತು. ಅಗತ್ಯವಿದ್ದಲ್ಲಿ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಸಿದ್ಧತಾ ಕ್ರಮ ವೇಗಗೊಳಿಸಲು ಸೂಚನೆ ನೀಡಲಾಗಿದೆ. ➡ಪುಟ ೪

ಖಮೇನಿ ಸಾವಿನ ಬಳಿಕ ಆಪ್ತ ಸಹಚರ ಅರಾಫಿ ಆಯ್ಕೆ | ಖಮೇನಿ ಸಾವಿಗೆ ಸಂಭ್ರಮಿಸಿದ ಇರಾನ್ | ಅಮೆರಿಕ, ಇಸ್ರೇಲ್ ದಾಳಿಗೆ ಇರಾನಿ ರಾಜಕುಮಾರನ ಪ್ರಶಂಸೆ | ಇರಾನ್ ಸೇನೆಗೆ ಕೈಕೊಟ್ಟ ಚೀನಾ ರಾಡಾರ್ | ಖಮೇನಿ ಹತ್ಯೆ ಖಂಡಿಸಿದ ಪುಟಿನ್

ಅರಾಫಿ ತಾತ್ಕಾಲಿಕ ಸರ್ವೋಚ್ಚ ನಾಯಕ

ಟೆಹ್ರಾನ್: ಅಮೆರಿಕದ ದಾಳಿಯಲ್ಲಿ ಆಯತೊಲ್ಲಾ ಅಲಿ ಖಮೇನಿ ಅವರ ನಿಧನ ದೃಢಪಟ್ಟ ಕೆಲವೇ ಗಂಟೆಗಳ ಬಳಿಕ, ಅನುಭವಿ ಇಸ್ಲಾಮಿಕ್ ನಾಯಕ ಮತ್ತು ಖಮೇನಿ ಆಪ್ತ ಸಹಚರರಾಗಿದ್ದ ಆಯತೊಲ್ಲಾ ಅರಾಫಿ ಅವರನ್ನು ತಾತ್ಕಾಲಿಕವಾಗಿ ಇರಾನ್‌ನ ಸರ್ವೋಚ್ಚ ನಾಯಕರನ್ನಾಗಿ ನೇಮಿಸಲಾಗಿದೆ. ಅರಾಫಿ ಅವರನ್ನು ನೇತೃತ್ವ ಮಂಡಳಿಯ ನ್ಯಾಯಶಾಸ್ತ್ರಜ್ಞ ಸದಸ್ಯರನ್ನಾಗಿ ನೇಮಿಸಲಾಗಿದ್ದು, ಜೊತೆಗೆ ತಾತ್ಕಾಲಿಕ ಸರ್ವೋಚ್ಚ ನಾಯಕರಾಗಿ ಜವಾಬ್ದಾರಿ ವಹಿಸಲಿದ್ದಾರೆ ಎಂದು ವರದಿಯಾಗಿದೆ.

ಅಲಿರೆಜಾ ಅರಾಫಿ ಯಾರು?



ಅರಾಫಿ ಅವರು ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯಾಗಿ ಆಯ್ಕೆಯಾಗುವ ಸ್ಪರ್ಧೆಯಲ್ಲಿ ಪ್ರಮುಖ ಮುಂಚೂಣಿ ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದರು. 67 ವರ್ಷದ ಅರಾಫಿ ಅನುಭವಿ ಇಸ್ಲಾಂ ಧಾರ್ಮಿಕ ನಾಯಕ ಹಾಗೂ ಖಮೇನಿ ಅವರ ಆಪ್ತ ಸಹಚರರು. ಅವರು ಪ್ರಸ್ತುತ ಸರ್ವೋಚ್ಚ ನಾಯಕರನ್ನು ನೇಮಿಸುವ ಅಸೆಂಬ್ಲಿ ಆಫ್ ಎಕ್ಸ್‌ಪರ್ಟ್ಸ್‌ನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹಿಂದಿನ ಹುದ್ದೆಗಳಲ್ಲಿ ಚುನಾವಣಾ ಅಭ್ಯರ್ಥಿಗಳ ಪರಿಶೀಲನೆ ಹಾಗೂ ಸಂಸತ್ತಿನಲ್ಲಿ ಅಂಗೀಕೃತವಾದ ಕಾನೂನುಗಳ ಪರಿಶೀಲನೆಗೆ ಜವಾಬ್ದಾರಿಯಾದ ಪ್ರಭಾವಶಾಲಿ ಗಾರ್ಡಿಯನ್ ಕೌನ್ಸಿಲ್ ಸದಸ್ಯತ್ವವೂ ಸೇರಿದೆ. ಅದರ ಜೊತೆಗೆ, ಅವರು ಇರಾನ್ ಧಾರ್ಮಿಕ ಶಿಕ್ಷಣ(ಸೆಮಿನರಿ) ವ್ಯವಸ್ಥೆಯ ಮುಖ್ಯಸ್ಥರಾಗಿದ್ದಾರೆ. ಧಾರ್ಮಿಕವಾಗಿ ಬಹಳ ಸ್ಥಾಪಿತ ವ್ಯಕ್ತಿಯಾಗಿದ್ದರೂ, ಅವರನ್ನು ಪ್ರಮುಖ ರಾಜಕೀಯ ಶಕ್ತಿಯಾಗಿ ವ್ಯಾಪಕವಾಗಿ ಪರಿಗಣಿಸಲಾಗುವುದಿಲ್ಲ ಮತ್ತು ಭದ್ರತಾ ವ್ಯವಸ್ಥೆಯೊಂದಿಗೆ ಗಟ್ಟಿಯಾದ ಸಂಪರ್ಕಗಳಿರುವ ವ್ಯಕ್ತಿಯಾಗಿ ಅವರು ಪ್ರಸಿದ್ಧರಾಗಿಲ್ಲ.

ಸುಪ್ರೀಂ ಲೀಡರ್ ಆಯ್ಕೆ ಹೇಗಿರುತ್ತೆ?

ತಾತ್ಕಾಲಿಕ ನಾಯಕತ್ವ ಮಂಡಳಿ: ಹೊಸ ಸರ್ವೋಚ್ಚ ನಾಯಕನನ್ನು ಅಧಿಕೃತ ಆಯ್ಕೆ ಮಾಡುವವರೆಗೆ, ದೇಶದ ಉನ್ನತ ಜವಾಬ್ದಾರಿಗಳನ್ನು ಇರಾನ್ ರಚಿಸಲ್ಪಟ್ಟ ತಾತ್ಕಾಲಿಕ ನಾಯಕತ್ವ ಮಂಡಳಿ ವಹಿಸಿಕೊಳ್ಳುತ್ತದೆ. ಇರಾನ್ ರಾಷ್ಟ್ರಪತಿ, ಮುಖ್ಯ ನ್ಯಾಯಮೂರ್ತಿ ಹಾಗೂ ಗಾರ್ಡಿಯನ್ ಕೌನ್ಸಿಲ್‌ನಿಂದ ಆಯ್ಕೆಯಾದ ಹಿರಿಯ ಧಾರ್ಮಿಕ ನಾಯಕ ಸೇರಿ ಚರ್ಚೆ ನಡೆಸಿ ಸರ್ವೋಚ್ಚ ನಾಯಕನನ್ನು ಆಯ್ಕೆ ಮಾಡುತ್ತಾರೆ. ತಜ್ಞರ ಸಭೆಯಲ್ಲಿ ಹೊಸ ನಾಯಕನ ಆಯ್ಕೆ: ಇರಾನ್ ಸಂವಿಧಾನದ ಪ್ರಕಾರ, ಮುಂದಿನ ಸರ್ವೋಚ್ಚ ನಾಯಕನನ್ನು ತಜ್ಞರ ಸಭೆ ಆಯ್ಕೆ ಮಾಡಬೇಕು. ಈ ಸಭೆ, 88 ಹಿರಿಯ ಶಿಯಾ ಧಾರ್ಮಿಕ ಪಂಡಿತರ ಮಂಡಳಿ, ಪ್ರತಿ 8 ವರ್ಷಕ್ಕೊಮ್ಮೆ ಜನ ಆಯ್ಕೆ ಮಾಡುವ ಸದಸ್ಯರು, ತಜ್ಞರನ್ನು ಗಾರ್ಡಿಯನ್ ಕೌನ್ಸಿಲ್ ಆಯ್ಕೆ ಮಾಡುತ್ತದೆ. ಪದವಿ ಖಾಲಿಯಾದ ತಕ್ಷಣ ಸಭೆ ಸೇರಿ ಹೊಸ ನಾಯಕನ ಆಯ್ಕೆ ಮಾಡುತ್ತಾರೆ.
ಯಾರ ಆಯ್ಕೆ ಮಾಡಬಹುದು?: ಇರಾನ್ ಸಂವಿಧಾನದ ನಿಯಮಗಳ ಪ್ರಕಾರ, ಸರ್ವೋಚ್ಚ ನಾಯಕನು ಶಿಯಾ ಕಾನೂನು ಮತ್ತು ರಾಜಕೀಯದಲ್ಲಿ ಆಳವಾದ ಜ್ಞಾನವಿರುವ ಹಿರಿಯ ಇಸ್ಲಾಮಿಕ್ ನ್ಯಾಯಶಾಸ್ತ್ರಜ್ಞನಾಗಿರಬೇಕು. ಅಭ್ಯರ್ಥಿಯು ಧಾರ್ಮಿಕ ಪ್ರಾಧಿಕಾರ, ರಾಜಕೀಯ ವಿವೇಕ ಮತ್ತು ನಾಯಕತ್ವ ಸಾಮರ್ಥ್ಯ ಹೊಂದಿರಬೇಕು. ತಜ್ಞರ ಸಭೆಯಲ್ಲಿನ ಆಯ್ಕೆ ಪ್ರಕ್ರಿಯೆ ಪೋಪ್ ಆಯ್ಕೆಯಂತೆ ಗೌಪ್ಯವಾಗಿ ನಡೆಯುತ್ತದೆ. ಸದಸ್ಯರು ಮತ ಚಲಾಯಿಸಿ ಹೊಸ ನಾಯಕನನ್ನು ಆಯ್ಕೆ ಮಾಡುತ್ತಾರೆ. ಆಯ್ಕೆಗೆ ನಿಗದಿತ ಗಡುವಿಲ್ಲ: ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲು ಇರಾನ್ ಸಂವಿಧಾನದಲ್ಲಿ ನಿಗದಿತ ಗಡುವಿಲ್ಲ. ಸಾಧ್ಯವಾದಷ್ಟು ಬೇಗ ಸಭೆ ಅದನ್ನು ಪೂರ್ಣಗೊಳಿಸಬೇಕು ಎಂದು ಹೇಳಲಾಗಿದೆ. ಅಷ್ಟರೊಳಗೆ ಆಂತರಿಕ ನಾಯಕತ್ವ ಮಂಡಳಿ ಅಧಿಕಾರದಲ್ಲೇ ಇರುತ್ತದೆ. ಸರ್ವೋಚ್ಚ ನಾಯಕನ ಆಯ್ಕೆಗೆ ಯಾವುದೇ ನೇರ ಚುನಾವಣೆ ಇರುವುದಿಲ್ಲ.

ವಿಶ್ವ ಶಾಂತಿಗೆ ಇರಾನ್ ಅಪಾಯಕಾರಿ

ಇಸ್ರೇಲ್ ಹೇಳುವಂತೆ ಇರಾನ್ ತನ್ನ ಪ್ರತಿದಾಳಿಗಳಲ್ಲಿ ಉದ್ದೇಶಪೂರ್ವಕವಾಗಿ ಪಕ್ಕದ ದೇಶಗಳ ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿದೆ. ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಇಸ್ರೇಲಿ ಅಧಿಕಾರಿಗಳು, ಮಧ್ಯಪ್ರಾಚ್ಯ ಮತ್ತು ವಿಶ್ವ ಶಾಂತಿಗೆ ಇರಾನ್ ನಂ.1 ಬೆದರಿಕೆ. ಫೆ.28ರಂದು, ಇರಾನ್ ತನ್ನ ನೆರೆಯ ರಾಷ್ಟ್ರಗಳಲ್ಲಿ ನಾಗರಿಕ ಗುರಿಗಳನ್ನು ಉದ್ದೇಶಪೂರ್ವಕವಾಗಿ ಹೊಡೆದಿದೆ ಎಂದು ತಿಳಿಸಿದ್ದಾರೆ.



ಸುದೀರ್ಘಾವಧಿ ಸುಪ್ರೀಂ ನಾಯಕರಾಗಿದ್ದ ಖಮೇನಿ



ಇರಾನ್‌ನ ಸರ್ವೋಚ್ಚ ನಾಯಕನಾಗಿ ದಶಕಗಳಿಂದ ದೇವಪ್ರಭುತ್ವದ ಅಧಿಕಾರವನ್ನು ಒಟ್ಟುಗೂಡಿಸಿದ ಮತ್ತು ಅದನ್ನು ಪ್ರಾದೇಶಿಕ ಶಕ್ತಿ ಕೇಂದ್ರವನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದ 86 ವರ್ಷದ ಆಯತೊಲ್ಲಾ ಅಲಿ ಖಮೇನಿ ನಿಧನರಾಗಿದ್ದಾರೆ. 1989ರಲ್ಲಿ ಆಯತೊಲ್ಲಾ ರುಹೊಲ್ಲಾ ಖೊಮೇನಿ ಅವರ ಮರಣದ ನಂತರ ಅಧಿಕಾರ ವಹಿಸಿಕೊಂಡ ನಂತರ ಖಮೇನಿ ಇಸ್ಲಾಮಿಕ್ ರಿಪಬ್ಲಿಕ್ ಅನ್ನು ನಾಟಕೀಯವಾಗಿ ಪುನಃಸ್ಥಾಪಿಸಿದರು. ಖೊಮೇನಿ ಶಾಹನನ್ನು ಉರುಳಿಸಲು ಮತ್ತು ಧಾರ್ಮಿಕ ಶುದ್ಧತೆಯನ್ನು ಹರಡುವ ಜವಾಬ್ದಾರಿಯನ್ನು ಹೊತ್ತ ಶಿಯಾ ಮುಸ್ಲಿಂ ಮೌಲ್ವಿಗಳಿಂದ ಆಡಳಿತವನ್ನು ಸ್ಥಾಪಿಸಲು ಕಾರಣವಾದ ಕ್ರಾಂತಿಕಾರಿ. ವಿಶೇಷವೆಂದರೆ, ಶಾಹ ಆಳ್ವಿಕೆ ಕೊನೆಗಾಣಿಸಿದ ಖೊಮೇನಿ ಆಳಿದ್ದು 10 ವರ್ಷ. ಆದರೆ, ಖಮೇನಿ ಸುದೀರ್ಘ ಅವಧಿ ವರೆಗೆ ಇರಾನ್ ಸುಪ್ರೀಂ ನಾಯಕರಾಗಿ ಆಡಳಿತ ನಡೆಸಿದರು. ಶಿಯಾ ಪಾದ್ರಿಯಾಗಿ, ಅರೆಸೈನಿಕ ರೆವಲ್ಯೂಷನರಿ ಗಾರ್ಡ್ ಅನ್ನು ಅವರ ಆಡಳಿತಕ್ಕೆ ಆಧಾರವಾಗಿರುವ ಪ್ರಮುಖ ಸಂಸ್ಥೆಯಾಗಿ ನಿರ್ಮಿಸಿದರು. ಗಾರ್ಡ್ ಮಿಲಿಟರಿ ಮತ್ತು ವ್ಯಾಪಾರ ದೈತ್ಯದಂತಾಯಿತು. ದೇಶದ ಅತ್ಯಂತ ಗಣ್ಯ ಶಕ್ತಿ ಮತ್ತು ಅದರ ಬ್ಯಾಲಿಸ್ಟಿಕ್ ಕ್ಷಿಪಣಿ ಶಸ್ತ್ರಾಸ್ತ್ರದ ಮುಖ್ಯಸ್ಥರು, ಇರಾನ್‌ನ ಆರ್ಥಿಕ ಕ್ಷೇತ್ರಗಳಲ್ಲಿ ಪ್ರಭಾವ ಹೊಂದಿದ್ದರು. ಆದರೆ, ಅಧಿಕಾರದುದ್ದಕ್ಕೂ ಹಲವಾರು ಪ್ರತಿಭಟನೆ ಕಂಡ ಖಮೇನಿ, 2022 ಮತ್ತು ಈಗ 2025ರ ಅಂತ್ಯದ ವೇಳೆಗೆ ಕಾಣಿಸಿದ ಪ್ರತಿಭಟನೆಗಳಿಂದ ಹೆಚ್ಚು ಆಘಾತಗೊಂಡರು. ಈ ಸಂದರ್ಭದಲ್ಲಿ ಜನ ತೀರಾ ಖಮೇನಿಯವರೇ ಬೇಡ ಎಂಬುವಷ್ಟರ ಮಟ್ಟಿಗೆ ಮುಂದಕ್ಕೆ ಹೋಗಿದ್ದರು. ಜತೆಗೆ, ಪ್ರತಿಭಟನೆ ನಡೆಸುತ್ತಿದ್ದವರ ನಿಯಂತ್ರಣಕ್ಕಾಗಿ ಸಾವಿರಾರು ಮಂದಿಯನ್ನು ಹತ್ಯೆ ಮಾಡಿದ ಆರೋಪವನ್ನೂ ಹೊತ್ತರು. ಕಠಿಣ ಸಂಪ್ರದಾಯಗಳು ಜನರನ್ನು ಇನ್ನಷ್ಟು ಸಿಟ್ಟಿಗೆ ನೂಕಿತು

ಖಮೇನಿ ಹತ್ಯೆಗೆ ಪುಟಿನ್ ಖಂಡನೆ

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾನುವಾರ, ಅಮೆರಿಕಾ ಮತ್ತು ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲ ಅಲಿ ಖಮೇನಿ ಹತ್ಯೆಯಾಗಿರುವುದನ್ನು ನೈತಿಕ ಮತ್ತು ಕಾನೂನಿನ ನಿಂದನೀಯ ಉಲ್ಲಂಘನೆ ಎಂದು ಬಲವಾದ ಖಂಡಿಸಿದ್ದಾರೆ. ನೈತಿಕತೆಯ ಎಲ್ಲಾ ಮಾನದಂಡಗಳು ಹಾಗೂ ಅಂತಾರಾಷ್ಟ್ರೀಯ ಕಾನೂನಿನ ನಿಂದನೀಯ ಉಲ್ಲಂಘನೆ ಎಂದು ಹೇಳಿದ್ದಾರೆ. ಉಕ್ರೇನ್ ವಿರುದ್ಧ ಮಾಸ್ಕೋ ನಡೆಸುತ್ತಿರುವ ದಾಳಿಯ ಅವಧಿಯಲ್ಲಿ ಇರಾನ್, ರಷ್ಯಾದ ಅತ್ಯಂತ ಆಪ್ತ ಮಿತ್ರ ರಾಷ್ಟ್ರಗಳಲ್ಲಿ ಒಂದಾಗಿ ನಿಂತಿದೆ. ಇರಾನ್ ಮೇಲಿನ ಅಮೆರಿಕಾ-ಇಸ್ರೇಲ್ ದಾಳಿಗೆ ಮುನ್ನ ರಷ್ಯಾ ತಾಳ್ಮೆ ವಹಿಸುವಂತೆ ಕರೆ ನೀಡಿತ್ತು. ಭಾನುವಾರ, ರಷ್ಯಾ ಪ್ರಕಟಿಸಿದ ಪತ್ರದಲ್ಲಿ ಪುಟಿನ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಅವರಿಗೆ ಕಳುಹಿಸಿದ ಸಂದೇಶದಲ್ಲಿ ಖಮೇನಿಯವರ ಹತ್ಯೆ ಕುರಿತು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಇತಿಹಾಸದಲ್ಲೇ ದುಷ್ಟ ವ್ಯಕ್ತಿ ಸತ್ತ: ಟ್ರಂಪ್

ವಾಷಿಂಗ್ಟನ್: ಇತಿಹಾಸದಲ್ಲೇ ಅತ್ಯಂತ ದುಷ್ಟ ವ್ಯಕ್ತಿಗಳಲ್ಲೊಬ್ಬನಾದ ಖಮೇನಿ ಸತ್ತಿದ್ದಾನೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಘೋಷಣೆ ಮಾಡಿದ್ದಾರೆ. ಖಮೇನಿ ಸಾವು, ಇರಾನ್ ಜನತೆಗೆ ಸಿಕ್ಕ ನ್ಯಾಯವಷ್ಟೇ ಮಾತ್ರವಲ್ಲ, ಮಹಾನ್ ಅಮೆರಿಕನ್ನರಿಗೆ, ಖಮೇನಿ ಹಾಗೂ ಅವನ ರಕ್ತಪಿಪಾಸು ಗುಂಪಿನ ಕ್ರೂರತೆಯಿಂದ ಕೊಲ್ಲಲ್ಪಟ್ಟ ಅಥವಾ ಅಂಗವಿಕಲರಾದ ವಿಶ್ವದ ಅನೇಕ ದೇಶಗಳ ಜನರಿಗೆ ಸಂದ ನ್ಯಾಯ. ನಮ್ಮ ಗುಪ್ತಚರ ಮತ್ತು ಅತ್ಯಾಧುನಿಕ ಟ್ರ್ಯಾಕಿಂಗ್ ವ್ಯವಸ್ಥೆಗಳನ್ನು ತಪ್ಪಿಸಲು ಅವನಿಂದ ಸಾಧ್ಯವಾಗಲಿಲ್ಲ ಎಂದರು.

ಅಮೆರಿಕ-ಇಸ್ರೇಲ್ ಸೇನಾ ದಾಳಿ ಶ್ಲಾಘಿಸಿದ ಇರಾನಿ ರಾಜಕುಮಾರ

ಟೆಹರಾನ್: ಅಮೆರಿಕ-ಇಸ್ರೇಲಿ ಜಂಟಿ ಸೇನಾ ದಾಳಿಗೆ ಇರಾನಿನ ಸರ್ವೋಚ್ಚ ನಾಯಕ ಅಲಿ ಆಯತೊಲ್ಲಾ ಖಮೇನಿ ಸಾವಿಗೀಡಾಗಿರುವುದನ್ನು ಇರಾನ್ ದೃಢಪಡಿಸಿದ ಬಳಿಕ, ದೇಶಭ್ರಷ್ಟ ಇರಾನಿ ರಾಜಕುಮಾರ ರೇಜಾ ಪಹ್ಲವಿ ಈ ಕಾರ್ಯಾಚರಣೆಯನ್ನು ಸ್ವಾಗತಿಸಿದ್ದು, ದೃಢ ಕ್ರಮಕ್ಕಾಗಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಶ್ಲಾಘಿಸಿದರು.



'ಎಕ್ಸ್' ಪೋಸ್ಟ್ ಮೂಲಕ ನೇರವಾಗಿ ಇರಾನಿ ಜನತೆಯನ್ನು ಉದ್ದೇಶಿಸಿ ಸಂದೇಶ ನೀಡಿದ ಪಹ್ಲವಿ, "ನಮ್ಮ ಕಾಲದ ರಕ್ತಪಿಪಾಸು ದಬ್ಬಾಳಿಕೆಯ ಅಲಿ ಖಮೇನಿ ಇತಿಹಾಸ ಪುಟದಿಂದ ಅಳಿಸಲ್ಪಟ್ಟಿದ್ದಾರೆ. ಖಮೇನಿ ಸಾವಿನೊಂದಿಗೆ ಇಸ್ಲಾಮಿಕ್ ಗಣರಾಜ್ಯ ವಾಸ್ತವಿಕವಾಗಿ ಅಂತ್ಯಗೊಂಡಂತಾಗಿದೆ.ಶೀಘ್ರವೇ ಇತಿಹಾಸದ ಕಸದಬುಟ್ಟಿ ಸೇರಲಿದೆ "ಎಂದು ಹೇಳಿದ್ದಾರೆ.

ಇರಾನಿನ ಉಜ್ವಲ ಭವಿಷ್ಯ ರೂಪಿಸಲು 'ಇರಾನ್ ಸಮೃದ್ಧಿ ಯೋಜನೆ'ಯೊಂದಕ್ಕಾಗಿ ಮಾರ್ಗಸೂಚಿಯೊಂದನ್ನು ಪ್ರಕಟಿಸಿದ ಅವರು, ಇದರಡಿ ಹೊಸ ಸಂವಿಧಾನವೊಂದನ್ನು ರೂಪಿಸಲು ಮತ್ತು ಅಂಗೀಕರಿಸಲು ಜನಮತ ಸಂಗ್ರಹಣೆಯ ಪ್ರಸ್ತಾವಿಸಲಾಗಿದೆ.ಇದರ ಬಳಿಕ ಅಂತಾರಾಷ್ಟ್ರೀಯ ಮೇಲ್ವಿಚಾರಣೆಯಡಿ ಚುನಾವಣೆಗಳು ನಡೆದು ಪರಿವರ್ತನಾ ಸರ್ಕಾರವನ್ನು ವಿಸರ್ಜಿಸಲಾಗುವುದು ಎಂದಿದ್ದಾರೆ.

ಈಗ ಖಮೇನಿ ಆಡಳಿತದಲ್ಲಿನ ಅಳಿದುಳಿದವರು ಉತ್ತರಾಧಿಕಾರಿಯ ನೇಮಕಕ್ಕೆ ಮುಂದಾದರೆ ಅದು ವಿಫಲಗೊಳ್ಳಲಿದೆ. ಯಾವುದೇ ಹೊಸ ನಾಯಕನಿಗೆ ಕಾನೂನು ಸಮ್ಮತತೆಯ ಕೊರತೆ ಇರುತ್ತದೆ, ನಿರ್ಗಮಿತ ಆಡಳಿತದ ಅಪರಾಧಗಳು ವಂಶವಾಹಿಯಾಗಿ ಮುಂದುವರಿಸಲು ಅವಕಾಶ ನೀಡುತ್ತದೆ ಎಂದು ಎಚ್ಚರಿಸಿದ ಅವರು, ಮುಕ್ತ ಮತ್ತು ಸಮೃದ್ಧ ಇರಾನ್ ನಿರ್ಮಾಣಕ್ಕಾಗಿ ಸುಸ್ಥಿರ ಅಧಿಕಾರ ವರ್ಗಾವಣೆಯೊಂದಕ್ಕೆ ಸಹಕರಿಸಬೇಕೆಂದು ಅವರು ಸೇನೆ, ಕಾನೂನು ಅನುಷ್ಠಾನ ವಿಭಾಗ ಮತ್ತು ಭದ್ರತಾ ಪಡೆಗಳನ್ನು ಆಗ್ರಹಿಸಿದರು.

ಖಮೇನಿ ಸಾವು: ಭಾರತದಲ್ಲಿ ಪ್ರತಿಭಟನೆ, ಶೋಕಾಚರಣೆ




ಶ್ರೀನಗರ/ಲಕ್ನೋ: ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, ಅಮೆರಿಕ-ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹತರಾದ ಸುದ್ದಿ ತಿಳಿಯುತ್ತಿದ್ದಂತೆಯೇ, ಭಾನುವಾರ ಭಾರತದ ಹಲವು ರಾಜ್ಯಗಳಲ್ಲಿ ಭಾರಿ ಪ್ರತಿಭಟನೆ ಮತ್ತು ಶೋಕಾಚರಣೆಗಳು ನಡೆದಿವೆ. ಇರಾನ್ ಅಧಿಕೃತವಾಗಿ ಈ ಸುದ್ದಿಯನ್ನು ಖಚಿತಪಡಿಸಿದ ಬೆನ್ನಲ್ಲೇ ಆಕ್ರೋಶದ ಅಲೆ ಎದ್ದಿದೆ.
ದೇಶಾದ್ಯಂತ ಪ್ರತಿಭಟನೆಯ ಬಿಸಿ: ಲಕ್ನೋದಲ್ಲಿ ಶಿಯಾ ಸಮುದಾಯದ ನೂರಾರು ಜನರು ಬಾರಾ ಇಮಾಂಬರಾ ಬಳಿ ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿದರು. ಸೋಮವಾರ ಅಮೆರಿಕ ಮತ್ತು ಇಸ್ರೇಲ್ ನಾಯಕರ ಪ್ರತಿಕೃತಿ ದಹಿಸಲು ಅಲ್ಲಿನ ಸಂಘಟನೆಗಳು ನಿರ್ಧರಿಸಿವೆ. ದೆಹಲಿ, ಬಿಹಾರ ಮತ್ತು ತೆಲಂಗಾಣದಲ್ಲಿಯೂ ಪ್ರತಿಭಟನೆಗಳು ನಡೆದಿವೆ.
ಜಮ್ಮು ಮತ್ತು ಕಾಶ್ಮೀರದಲ್ಲಿ ಅಶಾಂತಿ: ಕಾಶ್ಮೀರದ ಲಾಲ್ ಚೌಕ್ ಮತ್ತು ಬದ್ಗಾಮ್ ಸೇರಿ ಹಲವೆಡೆಗಳಲ್ಲಿ ಸಾವಿರಾರು ಜನರು ಬೀದಿಗೆ ಇಳಿದು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜ್ಯದಲ್ಲಿ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದ್ದು, ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರು ಜನರಲ್ಲಿ ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದಾರೆ. ಇರಾನ್‌ನಲ್ಲಿ ಸಿಲುಕಿರುವ ಕಾಶ್ಮೀರಿ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸುತ್ತಿರುವುದಾಗಿ ಹೇಳಿದ್ದಾರೆ.

ಖಮೇನಿ ಹತ್ಯೆಗೆ ಇರಾನಿಗಳ ನೃತ್ಯ!

ಟೆಹ್ರಾನ್: ಖಮೇನಿ ಕೆಲವು ಇರಾನಿಯರು ಶೋಕ ವ್ಯಕ್ತಪಡಿಸಿದರೆ, ಇನ್ನೂ ಹಲವರು ಸರ್ವೋಚ್ಚ ನಾಯಕ ಖಮೇನಿ ಸಾವನ್ನು ಬೀದಿಗಿಳಿದು ನೃತ್ಯ ಮಾಡುವುದರೊಂದಿಗೆ ಸಂಭ್ರಮಿಸಿದರು. 36 ವರ್ಷಗಳಿಂದ ಸರ್ವಾಧಿಕಾರಿ ಆಡಳಿತ ನಡೆಸಿದ ವ್ಯಕ್ತಿಯ ಹತ್ಯೆಯಿಂದ ಬೆಚ್ಚಿಬಿದ್ದ ದೇಶದಲ್ಲಿ ಆಳವಾದ ಭಿನ್ನಾಭಿಪ್ರಾಯ ಇರುವುದು ಜಗಜ್ಜಾಹೀರಾಗಿದೆ.

ಇರಾನ್ ಸರ್ಕಾರದ ರಾಜ್ಯ ಟಿವಿ ಭಾನುವಾರದ ಮುಂಜಾನೆ ಅವರ ಸಾವನ್ನು ಘೋಷಿಸಿತು. ಖಮೇನಿ ಸಾವಿನ ಸುದ್ದಿ ಪ್ರಸಾರ ಮಾಡುತ್ತಿದ್ದಾಗ ಪ್ರಸಾರಕನ ಧ್ವನಿ ಭಾವುಕತೆಯಿಂದ ಕಂಪಿಸುತ್ತಿತ್ತು. ಟೆಹ್ರಾನ್‌ನ ದೃಶ್ಯಗಳಲ್ಲಿ, ಕಪ್ಪು ಬಟ್ಟೆ ತೊಟ್ಟು ಕೆಲವು ಇರಾನಿಯನ್ನರು ಖಮೇನಿ ಚಿತ್ರಗಳನ್ನು ಹಿಡಿದು ಕಣ್ಣೀರಿಟ್ಟರು. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಖಮೇನಿ ಸಾವಿಗೆ ಇರಾನಿಯನ್ನರು ಸಂಭ್ರಮ ಆಚರಿಸಿದರು.
ವೈರಲ್ ಸಿಗರೇಟ್ ಮಹಿಳೆಯ ನೃತ್ಯ: 2026ರ ಜನವರಿ ಆರಂಭದಲ್ಲಿ, ಕೆನಡಾದಲ್ಲಿ ನಡೆದಿದ್ದ ಪ್ರತಿಭಟನಾ ರ್ಯಾಲಿ



ವೇಳೆ ಸರ್ವೋಚ್ಚ ನಾಯಕ ಖಮೇನಿ ಫೋಟೋಗೆ ಬೆಂಕಿ ಹಚ್ಚಿ ಅದರಿಂದ ಸಿಗರೇಟ್ ಹಚ್ಚುತ್ತಿರುವ ಯುವತಿಯೊಬ್ಬಳ ವಿಡಿಯೋ ತುಣುಕೊಂದು ವೈರಲ್ ಆಗಿತ್ತು. ಈ ವಿಡಿಯೋದಲ್ಲಿದ್ದ ಮಹಿಳೆ ಖಮೇನಿ ಸಾವಿನ ಬಳಿಕ ಹೊಸ ವಿಡಿಯೋ ಪೋಸ್ಟ್ ಮಾಡಿದ್ದು, ನಿನ್ನ ಸಮಾಧಿಯ ಮೇಲೆ ನಾವು ನೃತ್ಯ ಮಾಡುತ್ತೇವೆಂದು ಹೇಳಿದ್ದೆನಲ್ಲವೇ? ಎಂದು ಹೇಳಿ ನೃತ್ಯ ಮಾಡಿದ್ದಾರೆ.

ಚೀನಾದಿಂದ ಖರೀದಿಸಿದ ಎಚ್‌ಕ್ಯು-9ಬಿ ವಿಫಲ?

ತೈಲದ ಬದಲಿಗೆ ಶಸ್ತ್ರಾಸ್ತ್ರ ಒಪ್ಪಂದದ ಭಾಗವಾಗಿ ಇರಾನ್ ಚೀನಾದಿಂದ ಖರೀದಿಸಿದ್ದ ಎಚ್‌ಕ್ಯು-9ಬಿ ವಾಯು ರಕ್ಷಣಾ ವ್ಯವಸ್ಥೆ ಇದೀಗ ಪ್ರಶ್ನೆಯ ಕೇಂದ್ರಬಿಂದುವಾಗಿದೆ. ಅಮೆರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ವಾಯುದಾಳಿಗಳಿಂದ ಇರಾನ್ ನಗರಗಳಲ್ಲಿ ಭಾರೀ ವಿನಾಶ ಉಂಟಾದ ಹಿನ್ನೆಲೆ, ಒಳಬರುವ ಕ್ಷಿಪಣಿಗಳನ್ನು ತಡೆಹಿಡಿಯಲು ಇರಾನ್ ವಾಯು ರಕ್ಷಣಾ ವ್ಯವಸ್ಥೆ ವಿಫಲವಾಯಿತೇ ಎಂಬ ಚರ್ಚೆ ನಡೆಯುತ್ತಿದೆ. ಇತ್ತೀಚೆಗೆ ಚೀನಾದಿಂದ ಖರೀದಿಸಿದ ಎಚ್‌ಕ್ಯು-9ಬಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗಿರುವ ಶಂಕೆ ವ್ಯಕ್ತವಾಗಿದೆ.
ಸಿಂದೂರ ವೇಳೆಯೂ ಚೀನಾ ರಾಡಾರ್ ವಿಫಲ: ಇದಕ್ಕೂ ಮೊದಲು, ಭಾರತವು ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಆಪರೇಷನ್ ಸಿಂದೂರ ಆರಂಭಿಸಿದಾಗ ಪಾಕಿಸ್ತಾನದಲ್ಲಿನ ಗುರಿಗಳನ್ನು ಸಮರ್ಪಕವಾಗಿ ರಕ್ಷಿಸುವಲ್ಲಿ ಎಚ್‌ಕ್ಯು-9ಬಿ ವಿಫಲವಾಗಿದೆ ಎಂಬ ವರದಿಗಳು ಬಂದಿವೆ.
ಶೀಘ್ರ, ಅತಿ ಭೀಕರ ದಾಳಿ: ಇರಾನ್: ಆಯತೊಲ್ಲಾ ಅಲಿ ಖಮೇನಿ ಸಾವಿನ ಪ್ರತೀಕಾರ ತೀರಿಸಲು ಇತಿಹಾಸದಲ್ಲೇ ಅತಿ ಭೀಕರ ದಾಳಿ ನಡೆಸುವುದಾಗಿ ಟೆಹ್ರಾನ್ ಪ್ರತಿಜ್ಞೆಗೈದಿದೆ.

ಇರಾನ್ ರಕ್ಷಣಾ ಸಚಿವರೂ ಸೇರಿ ಏಳು ಉನ್ನತ ಸೇನಾ ನಾಯಕರು ಹತ್ಯೆ

ಅಮೆರಿಕ-ಇಸ್ರೇಲ್ ದಾಳಿ ವೇಳೆ ಇರಾನ್ ರಕ್ಷಣಾ ಸಚಿವ ಅಜೀಜ್ ನಸೀರ್ ಜಾದೆ ಸೇರಿದಂತೆ ಏಳು ಹಿರಿಯ ಸೇನಾ ಕಮಾಂಡರ್‌ಗಳು ಸಾವನ್ನಪ್ಪಿರುವುದಾಗಿ ಇಸ್ರೇಲ್ ರಕ್ಷಣಾ ಪಡೆಗಳು(ಐಡಿಎಫ್) ಭಾನುವಾರ ಘೋಷಿಸಿವೆ. ತೆಹ್ರಾನ್‌ನ ಎರಡು ಪ್ರತ್ಯೇಕ ಭದ್ರತಾ ಕೇಂದ್ರಗಳನ್ನು ಗುರಿಯಾಗಿಸಿ ಇಸ್ರೇಲ್ ವಾಯುಪಡೆ (ಐಎಎಫ್) ನಿಖರ ದಾಳಿ ನಡೆಸಲಾಗಿದೆ. ಸಾವನ್ನಪ್ಪಿದವರಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಮುಖ್ಯಸ್ಥ ಮೊಹಮ್ಮದ್ ಪಾಕ್‌ಪೂರ್, ಸುಪ್ರೀಂ ಲೀಡರ್ ಆಯತೊಲ್ಲಾ ಅಲಿ ಖಾಮೆನೇಯಿ ಅವರ ಆಪ್ತ ಸಲಹೆಗಾರ ಅಲಿ ಶಾಮ್ಖಾನಿ ಸೇರಿ ಹಲವರು ಸೇರಿದ್ದಾರೆ ಎಂದು ಹೇಳಿದೆ.

ಮಹಾರಾಷ್ಟ್ರ ಕಾರ್ಖಾನೆ ಅಗ್ನಿ ದುರಂತ 17 ಜನ ಸಜೀವ ದಹನ



ನಾಗ್ಪುರ: ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಸ್ಫೋಟಕ ತಯಾರಿಕಾ ಕಾರ್ಖಾನೆಯೊಂದರಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ಸ್ಫೋಟದಲ್ಲಿ ಕನಿಷ್ಠ 17 ಜನರು ಮೃತಪಟ್ಟಿದ್ದು, 18 ಮಂದಿ ಗಾಯಗೊಂಡಿದ್ದಾರೆ. ನಾಗ್ಪುರದಿಂದ ಸುಮಾರು 50 ಕಿಮೀ ದೂರದಲ್ಲಿರುವ ಕಾಟೋಲ್ ತಹಸಿಲ್‌ನ ಎಸ್‌ಬಿಎಲ್ ಎನರ್ಜಿ ಲಿಮಿಟೆಡ್ ಘಟಕದಲ್ಲಿ ಈ ದುರಂತ ನಡೆದಿದೆ.

ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಸ್ಫೋಟದ ತೀವ್ರತೆಗೆ ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟುಹೋಗಿದ್ದು, ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ ನಡೆಸಲಾಗುತ್ತಿದೆ. ಶನಿವಾರ ಆಂಧ್ರಪ್ರದೇಶದ ಕಾಕಿನಾಡದಲ್ಲಿ ಇಂತಹದ್ದೇ ಪಟಾಕಿ ಕಾರ್ಖಾನೆ ಸ್ಫೋಟದಲ್ಲಿ 21 ಜನರು ಮೃತಪಟ್ಟಿದ್ದರು.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಘಟನೆಯ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದಾರೆ. ಮೃತರ ಕುಟುಂಬಗಳಿಗೆ ರಾಜ್ಯ ಸರ್ಕಾರ 5 ಲಕ್ಷ ರೂ. ಮತ್ತು ಪ್ರಧಾನ ಮಂತ್ರಿ ಕಾರ್ಯಾಲಯ 2 ಲಕ್ಷ ರೂ. ಪರಿಹಾರ ಘೋಷಿಸಿವೆ. ಗಾಯಗೊಂಡವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಜಿಎಸ್‌ಟಿ ಸಂಗ್ರಹ 1.83 ಲಕ್ಷ ಕೋಟಿ ರೂ.ಗೆ ಏರಿಕೆ

ಹೊಸದಿಲ್ಲಿ: ದೇಶದ ಒಟ್ಟು ಜಿಎಸ್‌ಟಿ ಸಂಗ್ರಹ ಫೆಬ್ರವರಿ ತಿಂಗಳಿನಲ್ಲಿ ಕಳೆದ ವಿತ್ತೀಯ ವರ್ಷಕ್ಕಿಂತ ಶೇ.8.1ರಷ್ಟು ಏರಿಕೆಯಾಗಿದ್ದು, 1.83 ಲಕ್ಷ ಕೋಟಿ ರೂಪಾಯಿ ದಾಟಿದೆ. ಆಮದುಗಳ ಮೇಲಿನ ಆದಾಯದಲ್ಲಿನ ಹೆಚ್ಚಳ ಮತ್ತು ಸುಧಾರಿತ ದೇಶೀಯ ಮಾರಾಟ ಈ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ.



ಜಾರಿಗೊಳಿಸಲಾದ ತೆರಿಗೆ ಮರುಪಾವತಿಗಳ ನಂತರ, ಒಟ್ಟು ನಿವ್ವಳ ಸಂಗ್ರಹ 1.61 ಲಕ್ಷ ಕೋಟಿ ರೂಪಾಯಿಯಾಗಿದೆ. 2025ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದ ತೆರಿಗೆ ದರ ಕಡಿತದ ಹೊರತಾಗಿಯೂ, ಗ್ರಾಹಕರ ಖರೀದಿ ಸಾಮರ್ಥ್ಯ ಹೆಚ್ಚಿರುವುದು ಈ ಆದಾಯ ವೃದ್ಧಿಗೆ ಕಾರಣ, ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆರ್ಥಿಕ ಸುಧಾರಣೆಗಳ ಭಾಗವಾಗಿ ಹಲವು ತೆರಿಗೆ ಸ್ಲ್ಯಾಬ್‌ಗಳನ್ನು ವಿಲೀನಗೊಳಿಸಿ, 375ಕ್ಕೂ ಹೆಚ್ಚು ವಸ್ತುಗಳ ಮೇಲಿನ ದರ ಇಳಿಸಲಾಗಿತ್ತು. ನವೆಂಬರ್‌ನಲ್ಲಿ ತೆರಿಗೆ ಇಳಿಕೆಯಿಂದಾಗಿ ಸಂಗ್ರಹ ಸ್ವಲ್ಪ ಕಡಿಮೆಯಾಗಿದ್ದರೂ, ಕಳೆದ ಮೂರು ತಿಂಗಳಿನಿಂದ ನಿರಂತರ ಚೇತರಿಕೆ ಕಾಣುತ್ತಿದೆ.

ವಾಣಿಜ್ಯ ಬಳಕೆಯ ಅಡುಗೆ ಅನಿಲ ಬೆಲೆ 31ರೂ. ಇಳಿಕೆ

ಹೊಸದಿಲ್ಲಿ: ಇರಾನ್-ಇಸ್ರೇಲ್-ಅಮೆರಿಕ ಯುದ್ಧ ನಡುವೆಯೇ ಭಾರತದಲ್ಲಿ ಮಹತ್ವದ ಬೆಳವಣಿಗೆಯೊಂದರಲ್ಲಿ ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯಲ್ಲಿ ಇಳಿಕೆಯಾಗಿದೆ.



ತೈಲ ಕಂಪನಿಗಳು ವಾಣಿಜ್ಯ ಬಳಕೆಯ 19 ಕಿಲೋ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ 18ರಿಂದ 31ರೂ.ಗಳಷ್ಟು ಇಳಿಕೆ ಮಾಡಿದ್ದು, ದಿಲ್ಲಿ, ಕೋಲ್ಕತ್ತಾ, ಮುಂಬೈ, ಮತ್ತು ಚೆನ್ನೈನಂತಹ ಪ್ರಮುಖ ನಗರಗಳಲ್ಲಿ ದರಗಳು ಕಡಿಮೆಯಾಗಿದ್ದು, ಇದು ದೇಶಾದ್ಯಂತ ಜಾರಿಗೆ ಬರುತ್ತಿವೆ. ಹೊಸ ದರಗಳು ಭಾನುವಾರದಿಂದಲೇ ಜಾರಿಗೆ ಬಂದಿವೆ. ಗೃಹ ಬಳಕೆ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ.

ರಾಷ್ಟ್ರ ರಾಜಧಾನಿ ದಿಲ್ಲಿಯಲ್ಲಿ 19 ಕೆ.ಜಿ ಸಿಲಿಂಡರ್ ಬೆಲೆಯಲ್ಲಿ 28 ರೂ.ಗಳಷ್ಟು ಕಡಿಮೆಯಾಗಿ, 1768.5 ರೂ.ಗಳಷ್ಟಿದ್ದ ವಾಣಿಜ್ಯ ಸಿಲಿಂಡರ್ ಬೆಲೆ 1740.5 ರೂ.ಗಳಿಗೆ ಇಳಿಕೆಯಾಗಿದೆ. ಕೋಲ್ಕತ್ತಾದಲ್ಲಿ ಇದು 31 ರೂ. ಇಳಿಕೆಯಾಗಿದ್ದು, 1875.5 ರೂ.ಗಳಿಗೆ ಸಿಗುತ್ತಿದ್ದ ಎಲ್‌ಪಿಜಿ ಸಿಲಿಂಡರ್ 1844.5 ರೂ.ಗೆ ಲಭ್ಯವಾಗಲಿದೆ. ಮುಂಬೈ ಮತ್ತು ಚೆನ್ನೈನಲ್ಲಿ ಕ್ರಮವಾಗಿ 28.5 ಮತ್ತು 29.5 ರೂ. ಇಳಿಕೆಯಾಗಿದೆ. ಬೆಂಗಳೂರಿನಲ್ಲೂ ಎಲ್‌ಪಿಜಿ ಸಿಲಿಂಡರ್ ಬೆಲೆ ಕಡಿಮೆಯಾಗಿದ್ದು, ಗೃಹ ಬಳಕೆಯ 14.2 ಕೆಜಿ ಸಿಲಿಂಡರ್ ಬೆಲೆ 855 ರೂ.ಗಳಿದ್ದು, ವಾಣಿಜ್ಯ ಬಳಕೆಯ 19 ಕೆಜಿ ಸಿಲಿಂಡರ್ ಬೆಲೆ 1841 ರೂ.ಗೆ ಇಳಿಕೆಯಾಗಿದೆ.

ಕರಾಚಿ ಘರ್ಷಣೆ: 21 ಸಾವು

ಕರಾಚಿ: ಇಲ್ಲಿನ ಅಮೆರಿಕ ರಾಯಭಾರಿ ಕಚೇರಿಯ ಹೊರಗೆ ಭಾನುವಾರ ನಡೆದ ಭೀಕರ ಹಿಂಸಾಚಾರದಲ್ಲಿ ಕನಿಷ್ಠ 21 ಜನರು ಸಾವನ್ನಪ್ಪಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇರಾನ್‌ನ ಪರಮೋಚ್ಚ ನಾಯಕ ಖಮೇನಿ ಹತರಾದ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳು ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆ ಹಿಂಸೆಗೆ ತಿರುಗಿ ಈ ದುರಂತ ಸಂಭವಿಸಿದೆ. ಹಿಂಸಾಚಾರಕ್ಕೆ ಕಾರಣ: ನಗರದ ಸಿವಿಲ್ ಆಸ್ಪತ್ರೆಯ ವೈದ್ಯರು ಸಾವಿನ ಸಂಖ್ಯೆಯನ್ನು ಖಚಿತಪಡಿಸಿದ್ದು, ಮೃತರಲ್ಲಿ ಕೆಲವರು ಗುಂಡೇಟಿನಿಂದ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಪೊಲೀಸರು ಲಾಠಿ ಪ್ರಹಾರ, ಅಶ್ರುವಾಯು ಮತ್ತು ರಬ್ಬರ್ ಗುಂಡುಗಳನ್ನು ಬಳಸಿದ್ದಾರೆ. ಆದರೆ, ಪೊಲೀಸರು ನೇರವಾಗಿ ಗುಂಡು ಹಾರಿಸಿದ್ದಾರೆ, ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.

ಎಐ ಬಳಸಿ ಇರಾನ್‌ಗೆ ಪೆಟ್ಟು!

ಪೆಂಟಗನ್: ಆಂಥ್ರೋಪಿಕ್ ಸಂಸ್ಥೆಯ ಕ್ಲಾಡಿ ಎಐ ಬಳಕೆಯನ್ನು ನಿಲ್ಲಿಸುವಂತೆ ತಮ್ಮ ಫೆಡರಲ್ ತನಿಖಾ ಏಜೆನ್ಸಿಗಳಿಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ದೇಶಿಸಿದ ಕೆಲವೇ ಗಂಟೆಗಳಲ್ಲಿ ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕ ಸೇನೆ ಅದೇ ಕ್ಲಾಡಿ ಎಐ ಬಳಸಿಕೊಂಡ ಸ್ವಾರಸ್ಯಕರ ಘಟನೆ ನಡೆದಿದೆ. ಅಮೆರಿಕ ಸೇನೆ, ಸ್ಯಾನ್ ಫ್ರಾನ್ಸಿಸ್ಕೋ ಮೂಲದ ಎಐ ನವೋದ್ಯಮ ಆಂಥ್ರೋಪಿಕ್‌ನ ಕೃತಕ ಬುದ್ಧಿಮತ್ತೆ(ಎಐ) ಸಾಫ್ಟ್‌ವೇರ್ ಕ್ಲಾಡಿಯನ್ನು ಇರಾನ್ ವಿರುದ್ಧದ ಪ್ರಮುಖ ವಾಯು ದಾಳಿಯಲ್ಲಿ ಬಳಸಿತು. ಗುಪ್ತಚರ ಮೌಲ್ಯಮಾಪನ, ನಿಖರ ಗುರಿ ನಿರ್ಧರಿಸಲು ಮತ್ತು ಯುದ್ಧಭೂಮಿಯ ಪರಿಸ್ಥಿತಿಯ ಅವಲೋಕಿಸಲು ಇದನ್ನು ಬಳಸಲಾಗುತ್ತಿದೆ.


ಕಿರುಸುದ್ದಿ

ಮಾ.3: ಪೊಳಲಿಯಲ್ಲಿ ಸೇವೆ ಇಲ್ಲ



ಬಂಟ್ವಾಳ: ಪೊಳಲಿ ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ಮಾ.3 ರಂದು ಚಂದ್ರಗ್ರಹಣ ಪ್ರಯುಕ್ತ ಬೆಳಗ್ಗೆ 7 ಗಂಟೆಯ ಪೂಜೆ ನಡೆದು 10ರ ನಂತರ ಯಾವುದೇ ಸೇವೆಗಳು ನಡೆಯುವುದಿಲ್ಲ, ಆದರೆ ದೇವರ ದರುಶನ ಎಂದಿನಂತೆ ಇರಲಿದೆ. ಮಧ್ಯಾಹ್ನದ ಪೂಜೆ ಬೆಳಿಗ್ಗೆ11 ಗಂಟೆಗೆ, ರಾತ್ರಿ 7.30 ಕ್ಕೆ ಶ್ರೀದೇವರಿಗೆ ಗ್ರಹಣ ಕಲಶ, 8.30 ಕ್ಕೆ ರಾತ್ರಿಯ ಮಹಾಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭೋತ್ಸವದಲ್ಲಿ ರಾಜ್ಯಕ್ಕೆ ಪ್ರಥಮ



ಮಂಗಳೂರು: ಕಲಾ ಪ್ರತಿಭೋತ್ಸವ ಸ್ಪರ್ಧೆಯ ಯುವಪ್ರತಿಭೆ ವಿಭಾಗದಲ್ಲಿ ಮಹತಿ ಪವನಾಸ್ಕರ್ ಅವರು ಭರತನಾಟ್ಯದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಗಾನ ನೃತ್ಯ ಅಕಾಡೆಮಿಯ ನಿರ್ದೇಶಕಿ ವಿದ್ಯಾಶ್ರೀ ರಾಧಾಕೃಷ್ಣ ಶಿಷ್ಯೆಯಾಗಿರುವ ಇವರು ಸಂತ ಅಲೋಶಿಯಸ್ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದು ಇವರು ಮಾಲಿನಿ ಹಾಗೂ ಹರೀಶ್ ಪವನಾಸ್ಕರ್ ಇವರ ಪುತ್ರಿ.

ಉಜಿರೆ: ಅಪರಿಚಿತ ವ್ಯಕ್ತಿಯ ಶವ ಪತ್ತೆ

ಬೆಳ್ತಂಗಡಿ: ಉಜಿರೆ ಬಸ್ ನಿಲ್ದಾಣದಲ್ಲಿ 50-55 ವರ್ಷ ಪ್ರಾಯದ ಶ್ರೀನಿವಾಸ ಬೆಂಗಳೂರು ಎಂಬ ವ್ಯಕ್ತಿಯು ಮಲಗಿಕೊಂಡಿದ್ದು ಅವರನ್ನು ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ದಾಖಲಿಸಿ, ಬಳಿಕ ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದವರು ಬೆಳಗ್ಗೆ ಮೃತಪಟ್ಟಿದ್ದಾರೆ. ಮೃತ ವ್ಯಕ್ತಿಯ ವಾರೀಸುದಾರರ ಪತ್ತೆಯಾದಲ್ಲಿ ದ.ಕ ಜಿಲ್ಲಾ ಕಂಟ್ರೋಲ್ ರೂಂ : 9480805300 ಬೆಳ್ತಂಗಡಿ ಪೊಲೀಸ್ ಠಾಣೆ: 08256-232093. ಪೊಲೀಸ್ ನಿರೀಕ್ಷಕರು ಬೆಳ್ತಂಗಡಿ ಪೊಲೀಸ್ ಠಾಣೆ : 9480805370 ಸಂಪರ್ಕಿಸುವಂತೆ ಕೋರಲಾಗಿದೆ.

ಸಹ್ಯಾದ್ರಿ ಕ್ರೀಡಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ 'ಸಹಕಾರಿ ಕ್ರೀಡೋತ್ಸವ-2026' ಸಂಭ್ರಮ

ಸಹಕಾರಿ ನೀತಿಯಿಂದ ಕ್ಷೇತ್ರ ಬಲಿಷ್ಠ: ಡಾ. ಭಟ್



ಮಂಗಳೂರು: ಸಹಕಾರ ಕ್ಷೇತ್ರ ಇನ್ನಷ್ಟು ಬಲಶಾಲಿಯಾಗಿ ಹೊರಹೊಮ್ಮಲು ಸಹಕಾರ ನೀತಿ ಕಾರಣವಾಗಲಿದೆ ಎಂದು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ.ಕಲ್ಲಡ್ಕ ಪ್ರಭಾಕರ ಭಟ್ ಹೇಳಿದರು.

ಸಹಕಾರ ಭಾರತಿ ಮಂಗಳೂರು ಮಹಾನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆ (ಗ್ರಾಮಾಂತರ) ಸಹಭಾಗಿತ್ವದಲ್ಲಿ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳಿಗಾಗಿ ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಕ್ರೀಡಾಂಗಣದಲ್ಲಿ ಭಾನುವಾರ ನಡೆದ ದ.ಕ. ಜಿಲ್ಲಾ ಮಟ್ಟದ 'ಸಹಕಾರಿ ಕ್ರೀಡೋತ್ಸವ-2026' ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಮನೋಭಾವ ಎಲ್ಲರಲ್ಲೂ ಇರಬೇಕು. ಸಹಕಾರಿ ಸಂಸ್ಥೆಯ ಸಿಬ್ಬಂದಿಗಳು ಮತ್ತು ಆಡಳಿತ ಮಂಡಳಿ ಸಮಾಜದ ಜೊತೆ ಸಹಕಾರಿ ಮನೋ ಭಾವದಿಂದ ಕೆಲಸ ಮಾಡಬೇಕು ಎಂದವರು ಹೇಳಿದರು.

ಸಹಕಾರ ಭಾರತಿ ಮಂಗಳೂರು ಮಹಾನಗರ ಜಿಲ್ಲೆ ಅಧ್ಯಕ್ಷ ಜಿ.ಆರ್. ಪ್ರಸಾದ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಹಕಾರ ಭಾರತಿಯ ವ್ಯಾಪ್ತಿ ಇಂದು ವಿಸ್ತಾರವಾಗಿದ್ದು,ಹಲವಾರು ಕಾರ್ಯಕ್ರಮಗಳ ಮೂಲಕ ಸಮಾಜಮುಖಿಯಾಗಿ ಗುರಿತಿಸಿಕೊಂಡಿದೆ. 650 ಜಿಲ್ಲೆಗಳಲ್ಲಿ ತನ್ನ ಸಂಘಟನೆ ಹೊಂದಿದ್ದು, ಬಹಳ ಪರಿಣಾಮಕಾರಿಯಾಗಿ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹಾಗೂ ಕ್ಷಮತೆಗೆ ತನ್ನನ್ನು ತಾನು ತೊಡಗಿಸಿಕೊಂಡಿದೆ ಎಂದರು.

ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾರ ಸುಪ್ರೀತ್ ಆಳ್ವ ಪೊನ್ನೋಡಿ ಕ್ರೀಡಾ ಜ್ಯೋತಿ ಪ್ರಜ್ವಲನೆ ಮಾಡಿದರು. ಸಹಕಾರ ಭಾರತಿ ರಾಜ್ಯ ಸಹ ಕಾರ್ಯದರ್ಶಿ ಗಣೇಶ ಶೆಣೈ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದ.ಕ. ಜಿಲ್ಲೆ ಅಧ್ಯಕ್ಷ ಬಿ.ಸುಧಾಕರ ರೈ ಬೋಳಂತೂರು ಸ್ವಾಗತಿಸಿದರು. ಮಹಿಳಾ ಪ್ರಮುಖ್ ಸುಭದ್ರಾ ರಾವ್ ವಂದಿಸಿದರು. ಸದಸ್ಯರಾದ ಪ್ರಶಾಂತ್ ಪೈ ಹಾಗೂ ಧನ್ಯ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು.

ಪರಂಪರೆ ಗೌರವಿಸೋಣ: ಪಿ.ಎಸ್. ಪ್ರಕಾಶ್



ಮಂಗಳೂರು: ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಯುವಕರ ಮನಸ್ಸು ಗೊಂದಲ ಮುಕ್ತವಾಗಿ ನವಚೈತನ್ಯದಿಂದ ಕೂಡಿರುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಭಾರತದ ಅಮೂಲ್ಯ ಸಂಪತ್ತಾಗಿರುವ, ರಾಷ್ಟ್ರದ ಭವ್ಯ ಭವಿಷ್ಯ ಸದೃಶ ಯುವಶಕ್ತಿ ಕ್ರೀಡೆ, ಕ್ರೀಡಾಕೂಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮುಖೇನ ತಮ್ಮ ಮನಸ್ಸನ್ನು ಗಟ್ಟಿಯಾಗಿಸಬೇಕು, ರಾಷ್ಟ್ರಪರ ಚಿಂತನೆಯಲ್ಲಿ ತೊಡಗಿಸಬೇಕು ಮತ್ತು ಇಂದಿನ ಸಂಘರ್ಷ ಮಯ ಜಗತ್ತನ್ನು ಅತ್ಯಂತ ಶಕ್ತಿಶಾಲಿಯಾಗಿ ಹಾಗೂ ಸಂಪೂರ್ಣ ಶಾಂತಿಯುತ ಮುನ್ನಡೆಸಬಲ್ಲ ಏಕೈಕ ರಾಷ್ಟ್ರವಾಗಿರುವ ಭಾರತ ವಿಶ್ವಗುರುವಾಗಲು ಕೊಡುಗೆ ನೀಡ ಬೇಕೆಂದು ಆರೆಸ್ಸೆಸ್ ದಕ್ಷಿಣ ಪ್ರಾಂತ ಸಹ ಕಾರ್ಯವಾಹ, 'ಹೊಸ ದಿಗಂತ' ಪತ್ರಿಕೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪಿ.ಎಸ್. ಪ್ರಕಾಶ್ ಕರೆ ನೀಡಿದರು.

ಸಹಕಾರ ಭಾರತಿ ಮಂಗಳೂರು ಮಹಾನಗರಜಿಲ್ಲೆ ಮತ್ತು ದ.ಕ.ಜಿಲ್ಲೆ ಆಯೋಜಿಸಿದ ಸಹಕಾರಿ ಕ್ರೀಡೋತ್ಸವ-2026ರ ಸಮಾರೋಪದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪರಂಪರೆ ಗೌರವಿಸಲು ಕಲಿಯೋಣ

ಯುವಶಕ್ತಿ ಭಾರತೀಯ ಪರಂಪರೆ ಯನ್ನು ಗೌರವಿಸಲು ಕಲಿತಾಗ ನಮ್ಮ ನೆಲ, ಜಲ, ವಾಯುವಲಯ ಸಹಿತ ಸಮಗ್ರ ವ್ಯವಸ್ಥೆ ಪರಿಶುದ್ಧವಾಗುವುದು ಎಂದು ಪಿ.ಎಸ್. ಪ್ರಕಾಶ್ ವಿಶ್ವಾಸ ವ್ಯಕ್ತಪಡಿಸಿದರು.

ಸಹಕಾರ ಭಾರತಿ ದಕ್ಷಿಣ ಕನ್ನಡ ಜಿಲ್ಲೆ ಅಧ್ಯಕ್ಷ ಬಿ. ಸುಧಾಕರ ರೈ, ಶಾಸಕ ವೇದವ್ಯಾಸ ಕಾಮತ್, ಜನತಾ ಬಜಾರ್ ಅಧ್ಯಕ್ಷ ಪ್ರಸನ್ನ ಕೆ., ಬಿಲ್ಡಿಂಗ್ ಸೊಸೈಟಿ ಅಧ್ಯಕ್ಷ ರಂಜನ್ ಮಿಜಾರ್, ಮಂಗಳೂರು ಜಿಲ್ಲಾ ಸಹಕಾರ ಭಾರತಿ ಅಧ್ಯಕ್ಷ ಜಿ.ಆರ್. ಪ್ರಸಾದ್, ಜಿಲ್ಲಾ ಸಂ. ಕಾರ್ಯದರ್ಶಿ ಸುರೇಶ್ ಆಳ್ವ ಉಪಸ್ಥಿತರಿದ್ದರು.

ಶ್ರೀಪೂರ್ಣಾನಂದ ಅಧ್ಯಕ್ಷ ಗಣೇಶ್ ಶೆಣೈ ಕ್ರೀಡಾಕೂಟದ ವ್ಯವಸ್ಥೆ ಆಯೋಜನೆಗೆ ಸಕಲ ರೀತಿಯಲ್ಲಿ ಸಹಕರಿಸಿದರು.

ಗ್ರಾಮೀಣರ ಜೀವನಾಡಿ

ಸಹಕಾರಿ ಕ್ಷೇತ್ರದಲ್ಲಿ ರಾಷ್ಟ್ರೀಯ ಚಿಂತನೆ ಬಿತ್ತುವ ಪ್ರಧಾನ ಆಶಯದೊಂದಿಗೆ ಸ್ಥಾಪನೆಗೊಂಡ ಸಹಕಾರ ಭಾರತಿ , ಇಂದೀಗ ಸಹಕಾರಿ ಸಂಸ್ಥೆಗಳನ್ನು ಮಾತ್ರವಲ್ಲ, ಸಹಕಾರಿ ರಂಗದ ಅಧಿಕಾರಿಗಳ ಜತೆ ಸಿಬ್ಬಂದಿಗಳನ್ನೂ ಈ ತೆರ ಕ್ರೀಡಾಕೂಟಗಳ ಮುಖೇನ ಒಗ್ಗೂಡಿಸಿರುವುದು ಪ್ರಶಂಸಾರ್ಹ. ಸರಕಾರದ ಅದೆಷ್ಟೋ ಜನಪರ ಯೋಜನೆಗಳನ್ನು ಅರ್ಹ ಕೋಟ್ಯಂತರ ಫಲಾನುಭವಿಗಳಿಗೆ ತಲುಪಿಸುವ ಉದಾತ್ತ ಕಾರ್ಯದಲ್ಲಿ ತೊಡಗಿದೆ. ಗ್ರಾಮೀಣರ ಪಾಲಿನ ಜೀವನಾಡಿಯಾಗಿದೆ ಎಂದು ಪಿ.ಎಸ್. ಪ್ರಕಾಶ್ ಕೊಂಡಾಡಿದರು.

ಎಸ್‌ಸಿಡಿಸಿಸಿ ಬ್ಯಾಂಕ್ ಪ್ರಗತಿಯು ಇಂದು ದೇಶಕ್ಕೇ ಮಾದರಿ: ಡಾ. ಸುರೇಂದ್ರ ಬಾಬು



ಮಂಗಳೂರು : ದೇಶದ ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಅಗ್ರಸ್ಥಾನದಲ್ಲಿದೆ. ಕೋರ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕ್‌ನಂತಹ ಉತ್ಕೃಷ್ಟ ಬ್ಯಾಂಕಿಂಗ್ ವ್ಯವಸ್ಥೆಯ ಜೊತೆಗೆ ಇದೀಗ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಮೂಲಕ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯವನ್ನು ಸಹಕಾರಿ ಬ್ಯಾಂಕಿಂಗ್ ನಲ್ಲಿ ಅಳವಡಿಸಿರುವ ಎಸ್‌ಸಿಡಿಸಿಸಿ ಬ್ಯಾಂಕ್, ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರ ಸಮರ್ಥ ಅಧ್ಯಕ್ಷತೆಯಲ್ಲಿ ಗಣನೀಯ ಪ್ರಗತಿಯನ್ನು ಕಂಡು ದೇಶಕ್ಕೆ ಮಾದರಿ ಯಾಗಿದೆ ಎಂದು ನಬಾರ್ಡ್ ಸಿಜಿಎಂ. ಡಾ. ಸುರೇಂದ್ರ ಬಾಬು ಹೇಳಿದ್ದಾರೆ.

ಶನಿವಾರ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಭೇಟಿ ನೀಡಿದ ಅವರು ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಬ್ಯಾಂಕಿನ ಅಧಿಕಾರಿಗಳ ಜೊತೆಗೆ ಬ್ಯಾಂಕಿನ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಮಾತನಾಡಿದರು. ಎಸ್‌ಸಿಡಿಸಿಸಿ ಬ್ಯಾಂಕ್ ದೇಶದ ಡಿಸಿಸಿ ಬ್ಯಾಂಕ್‌ಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಅಗ್ರಮಾನ್ಯ ಬ್ಯಾಂಕ್ ಆಗಿದೆ ಎಂದರು.

ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ರಾಜೇಂದ್ರ ಕುಮಾರ್ ಅವರು ನಬಾರ್ಡ್ ಸಿಜಿಎಂ ಡಾ. ಸುರೇಂದ್ರ ಬಾಬು ಅವರನ್ನು ಸ್ವಾಗತಿಸಿ , ಬ್ಯಾಂಕ್ ನಡೆದು ಬಂದ ಪ್ರಗತಿಯ ಪರಿಚಯ ಮಾಡಿಕೊಟ್ಟರು. ಸ್ವಸಹಾಯ ಸಂಘಗಳ ಕಾರ್ಯನಿರ್ವಹಣೆಯಲ್ಲೂ ಬ್ಯಾಂಕ್ ಸಮರ್ಪಕವಾಗಿ ಕಾರ್ಯನಿರ್ವಹಿಸಿದೆ ಎಂದು ವಿವರಿಸಿದರು. ಬ್ಯಾಂಕಿಗೆ ಆಗಮಿಸಿದ ನಬಾರ್ಡ್ ಸಿಜಿಎಂ ಡಾ. ಸುರೇಂದ್ರ ಬಾಬು ಅವರನ್ನು ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ವಿನಯಕುಮಾರ್ ಸೂರಿಂಜೆ, ನಬಾರ್ಡ್ ಡಿಡಿಎಂ ಸಂಗೀತಾ ಕರ್ತ , ನಬಾರ್ಡ್ ಡಿಜಿಎಂ ಜಗದೀಶ್ , ನಿರ್ದೇಶಕರುಗಳಾದ ಎಂ. ವಾದಿರಾಜ ಶೆಟ್ಟಿ, ಭಾಸ್ಕರ್ ಎಸ್.ಕೋಟ್ಯಾನ್, ಶಶಿಕುಮಾರ್ ರೈ ಬಾಲ್ಯೊಟ್ಟು, ಎಸ್.ಬಿ. ಜಯರಾಮ ರೈ, ಜೈರಾಜ್ ಬಿ.ರೈ, ಮಹೇಶ್ ಹೆಗ್ಡೆ, ಮೋನಪ್ಪ ಶೆಟ್ಟಿ ಎಕ್ಕಾರು, ಅಶೋಕ್ ಕುಮಾರ್ ಶೆಟ್ಟಿ, ಸದಾಶಿವ ಉಳ್ಳಾಲ್, ರಾಜೇಶ್ ರಾವ್, ಎಸ್.ಎನ್.ಮನ್ಮಥ , ಕುಶಲಪ್ಪ ಗೌಡ ,ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ. ಹಾಗೂ ಬ್ಯಾಂಕ್ ಅಧಿಕಾರಿಗಳು ಉಪಸ್ಥಿತರಿದ್ದರು.

ಬ್ಯಾಂಕಿನ ಬಗೆ ಮೆಚ್ಚುಗೆ

ಸಂಪೂರ್ಣ ಗಣಕೀಕೃತವಾಗಿರುವ ತನ್ನ 113 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಕೃಷಿ ಸಾಲ ವಿತರಣೆ ಹಾಗೂ ಮರುಪಾವತಿ ಯಲ್ಲಿ ಸಹಕಾರಿ ವ್ಯವಸ್ಥೆಗೆ ಮಾದರಿಯಾಗಿದ್ದು ಮಾತ್ರವಲ್ಲ ನಬಾರ್ಡ್ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲೂ ಎಸ್‌ಸಿಡಿಸಿಸಿ ಬ್ಯಾಂಕ್ ಮುಂಚೂಣಿ ಯಲ್ಲಿರುವ ಬಗ್ಗೆ ಡಾ. ಸುರೇಂದ್ರ ಬಾಬು ಮೆಚ್ಚುಗೆ ವ್ಯಕ್ತಪಡಿಸಿದರು.

ತೃಕ್ಕರೀಪ್ಪೂರ ಸ್ಮಾರ್ಟ್ ವಿಲೇಜ್ ಕಚೇರಿ ಕಟ್ಟಡ ಲೋಕಾರ್ಪಣೆ



ಕಾಸರಗೋಡು: ಭೂ ಹಕ್ಕುಪತ್ರ ಮೇಳ ಅಥವಾ ಪಟ್ಟಾ ಮೇಳವು ಕೇರಳದ ಅಭಿವೃದ್ಧಿಗೆ ಕಂದಾಯ ಇಲಾಖೆಯ ಬಹುದೊಡ್ಡ ಕೊಡುಗೆ ಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯವನ್ನು ಸ್ಮಾರ್ಟ್ ಆಗಿಸುವ ಯೋಜನೆಗಳು ನಡೆಯುತ್ತಿವೆ ಎಂದು ಕಂದಾಯ ಮತ್ತು ವಸತಿ ಇಲಾಖೆ ಸಚಿವ ಕೆ.ರಾಜನ್ ಅಭಿಪ್ರಾಯ ವ್ಯಕ್ತಪಡಿಸಿದರು.

ಹೊಸದುರ್ಗ ತಾಲೂಕಿನ ದಕ್ಷಿಣ ತೃಕ್ಕರೀಪ್ಪೂರದಲ್ಲಿ ನೂತನವಾಗಿ ನಿರ್ಮಿಸಲಾದ ಸ್ಮಾರ್ಟ್ ವಿಲೇಜ್ ಕಚೇರಿ ಕಟ್ಟಡವನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪಟ್ಟಾ ಮೇಳಗಳ ಮುಖೇನ ಕಳೆದ 10 ವರ್ಷಗಳಲ್ಲಿ ರಾಜ್ಯದಲ್ಲಿ ನಾಲ್ಕೂವರೆ ಲಕ್ಷ ಭೂ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ಎಲ್ಲರಿಗೂ ಭೂಮಿ ಎಂಬ ಗುರಿಯತ್ತ ಸಾಗಲು ಸಾಧ್ಯವಾಗಿದೆ. ಉತ್ತಮ ಸೇವೆಗಳನ್ನು ಒಳಗೊಂಡಂತೆ ಡಿಜಿಟಲ್ ಆಗಿರುವ ಸ್ಮಾರ್ಟ್ ವಿಲೇಜ್ ಕಚೇರಿಗಳು ಬದಲಾಗುತ್ತಿರುವ ಕಂದಾಯ ಇಲಾಖೆಯ ಸಂಕೇತ ಎಂದರು. ಎಲ್ಲಾ ಸೇವೆಗಳನ್ನು ಡಿಜಿಟಲ್‌ಗೆ ಪರಿವರ್ತಿಸುವುದರೊಂದಿಗೆ ಪಾರದರ್ಶಕತೆ ಮತ್ತು ನಿಖರತೆಯನ್ನು ಖಚಿತಪಡಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ ಕೇರಳದಲ್ಲಿ 628 ಗ್ರಾಮ ಕಚೇರಿಗಳನ್ನು ತೆರೆಯಲಾಗಿದೆ ಮತ್ತು 400 ಗ್ರಾಮ ಕಚೇರಿಗಳನ್ನು ಸ್ಮಾರ್ಟ್ ಮಾಡಲಾಗಿದೆ. 250ಕ್ಕೂ ಹೆಚ್ಚು ಗ್ರಾಮ ಕಚೇರಿಗಳ ನಿರ್ಮಾಣ ಕಾರ್ಯಗಳು ಪ್ರಾರಂಭವಾಗಿವೆ ಅಥವಾ ಅಂತಿಮ ಹಂತದಲ್ಲಿವೆ ಎಂದು ವಿವರಿಸಿದರು.

ಜನರಿಗೆ ಪಾರದರ್ಶಕ ಮತ್ತು ತ್ವರಿತ ಸೇವೆಗಳನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕಂದಾಯ ಇಲಾಖೆಯ ಯೋಜನಾ ಹಂಚಿಕೆಯನ್ನು ಬಳಸಿಕೊಂಡು ಈ ಕಚೇರಿಯನ್ನು ನಿರ್ಮಿಸಲಾಗಿದೆ. 50 ಲಕ್ಷ ರೂ. ವೆಚ್ಚದ ಈ ಯೋಜನೆಯನ್ನು 36 ಲಕ್ಷ ರೂ. ಅನುದಾನದಲ್ಲಿ ಪೂರ್ಣಗೊಳಿಸಲಾಗಿದೆ. ತೃಕ್ಕರೀಪ್ಪೂರದ ಈ ಯೋಜನೆಯು ಕಾಸರಗೋಡು ಜಿಲ್ಲೆಯ 24 ಸ್ಮಾರ್ಟ್ ಕಂದಾಯ ಕಚೇರಿಯಾಗಿದೆ ಎಂದರು.

ತೃಕ್ಕರೀಪ್ಪೂರ ಶಾಸಕ ಎಂ. ರಾಜಗೋಪಾಲನ್ ಅಧ್ಯಕ್ಷತೆ ವಹಿಸಿದ್ದರು. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಸಜಿತ್ ವರದಿ ಮಂಡಿಸಿದರು. ತೃಕ್ಕರೀಪ್ಪೂರ ಗ್ರಾ.ಪಂ. ಅಧ್ಯಕ್ಷೆ ಸಜಿತಾ ಸಫರುಲ್ಲಾ, ಜಿ. ಪಂ. ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಮನು, ತೃಕ್ಕರೀಪ್ಪೂರ ಗ್ರಾ.ಪಂ. ಸದಸ್ಯೆ ಎಂ.ಸುಹಾರಾ, ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಂ.ವಿ. ಯೂಸುಫಲಿ, ಎಂ.ಪಿ. ಬಿಜೀಶ್, ಪಿ.ವಿ.ಪ್ರಸಾದ್, ವಿ.ವಿ. ಅಬ್ದುಲ್ಲ ಹಾಜಿ, ಟಿ.ವಿ.ಶಿಬಿನ್, ಸಿ. ಬಾಲನ್, ಎ.ವಿ. ವಿಜಯನ್ ಮಾತನಾಡಿದರು. ಕಾಞಂಗಾಡು ಆರ್ ಡಿಒ ಕೆ.ಬಾಲಗೋಪಾಲನ್ ಸ್ವಾಗತಿಸಿ, ಅಪರ ಜಿಲ್ಲಾಧಿಕಾರಿ ಲಿಬು ಎಸ್.ಲಾರೆನ್ಸ್ ವಂದಿಸಿದರು.

ಕೆಎಸ್ಸಾರ್ಟಿಸಿ ಕಾಞಂಗಾಡು ಡಿಪ್ಪೋದಿಂದ ಹೊಸ ಬಸ್ ಸೇವೆ

ಕರಾವಳಿ ಪ್ರಯಾಣಿಕರು ಖುಷ್!



ಕಾಸರಗೋಡು: ಕೆಎಸ್‌ಆರ್‌ಟಿಸಿ ಕಾಞಂಗಾಡು ಡಿಪ್ಪೋದಿಂದ ಏರ್ಪಡಿಸಲಾದ ಎರಡು ಹೊಸ ಬಸ್ ಸೇವೆಗಳ ಉದ್ಘಾಟನೆಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಾಞಂಗಾಡು ಶಾಸಕ ಇ.ಚಂದ್ರಶೇಖರನ್ ಚಾಲನೆ ನೀಡಿದರು.

ಕಾಞಂಗಾಡು - ಕೋಟ್ಟಾಯಂ ಸೂಪರ್ ಫಾಸ್ಟ್ ಸರ್ವಿಸ್ ಮತ್ತು ಕಾಞಂಗಾಡು - ಕಾಸರಗೋಡು ಫಾಸ್ಟ್ ಪ್ಯಾಸೆಂಜರ್ ಸರ್ವೀಸ್‌ಗಳನ್ನು ಉದ್ಘಾಟಿಸಲಾಯಿತು. ಇದರೊಂದಿಗೆ ಬಂದಡ್ಕ ಮತ್ತು ಪರಪ್ಪ ಮಾರ್ಗಗಳಲ್ಲಿ ಕಾಞಂಗಾಡು ಡಿಪ್ಪೋ ಎರಡು ಹೊಸ ಸರಕಾರಿ ಬಸ್ ಟ್ರಿಪ್‌ಗಳನ್ನು ಪ್ರಾರಂಭಿಸಲಾಯಿತು.

ಕಾಞಂಗಾಡು - ಕೋಟ್ಟಾಯಂ ಸೂಪರ್ ಫಾಸ್ಟ್ ಸರ್ವೀಸ್ ಕಾಞಂಗಾಡಿನಿಂದ ರಾತ್ರಿ 7 ಗಂಟೆಗೆ ಹೊರಡಲಿದ್ದು, ಕಣ್ಣೂರು, ಕೋಝಿಕ್ಕೋಡ್, ತೃಶೂರು, ಮುವಾಟ್ಟುಪುಳ, ತೊಡುಪುಳ ಮತ್ತು ಪಾಲಾ ಮೂಲಕ ಬೆಳಗ್ಗೆ 8.10ಕ್ಕೆ ಕೋಟ್ಟಾಯಂಗೆ ತಲುಪಲಿದೆ. ಕೋಟ್ಟಾಯಂನಿಂದ ಸಂಜೆ 5.30ಕ್ಕೆ ಹೊರಡುವ ಬಸ್ ಪಾಲಾ, ತೊಡುಪುಳ, ಮುವಾಟ್ಟುಪುಳ, ತೃಶೂರು, ಕೋಝಿಕ್ಕೋಡ್ ಮತ್ತು ಕಣ್ಣೂರು ಮೂಲಕ ಬೆಳಗ್ಗೆ 6.40ಕ್ಕೆ ಕಾಞಂಗಾಡು ತಲುಪುತ್ತದೆ. ಅಲ್ಲದೆ ಚಂದ್ರಗಿರಿ ಸೇತುವೆ ಮೂಲಕ ಫಾಸ್ಟ್ ಪ್ಯಾಸೆಂಜರ್ ಲಿಂಕ್ ಬಸ್ ಪ್ರಸ್ತುತ ಕಾಞಂಗಾಡು, ಪೂಚಕ್ಕಾಡು, ಬೇಕಲಕೋಟೆ, ಮೇಲ್ಪರಂಬ ಮತ್ತು ಕಾಸರಗೋಡಿನಲ್ಲಿ ನಿಲುಗಡೆಗಳನ್ನು ಹೊಂದಿದೆ. ಮಾತ್ರವಲ್ಲದೆ ಕಾಞಂಗಾಡಿನಿಂದ ಎರಡು ಹೊಸ ಟ್ರಿಪ್‌ಗಳನ್ನು ಪ್ರಾರಂಭಿಸಲಾಗಿದೆ. ಈ ಸೇವೆಯು ಪರಶುರಾಮ್ ಎಕ್ಸ್‌ಪ್ರೆಸ್‌ನೊಂದಿಗೆ ರಾತ್ರಿ 7.15ಕ್ಕೆ ಒಡೆಯಂಚ್ಚಾಲ್ ಮತ್ತು ಕೋಳಿಚ್ಚಾಲ್ ಮೂಲಕ ಬಂದಡ್ಕಕ್ಕೆ ಹಾಗೂ ಬೆಳಗ್ಗೆ 4.30ಕ್ಕೆ ಬಂದಡ್ಕದಿಂದ ಕುತ್ತಿಕೋಲ್ ಮತ್ತು ಚುಳ್ಳಿಕಾರ ಮೂಲಕ ಕಾಞಂಗಾಡಿಗೆ ಸಂಪರ್ಕ ಸಾಧಿಸುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ.

ಈ ಬಸ್ ಸೇವೆಯು ಬೆಳಗ್ಗೆ 11.45ಕ್ಕೆ ಕಾಞಂಗಾಡಿನಿಂದ ಜಿಲ್ಲಾಸ್ಪತ್ರೆ, ಕಾಂಞಿರಪೊಯಿಲ್, ಉಕ್ಕಂ ಮೂಲಕ ಪರಪ್ಪಕ್ಕೆ ಹೊರಟು ಮಧ್ಯಾಹ್ನ 1.20ಕ್ಕೆ ಪರಪ್ಪದಿಂದ ಬಿರಿಕುಳಂ, ನೆಲ್ಲಿಯಡ್ಕಂ, ನೀಲೇಶ್ವರ, ಚಂದ್ರಗಿರಿ ಪಾಲ ಮೂಲಕ ಕಾಸರಗೋಡಿಗೆ ಮರಳಲಿದೆ.

ಅಧ್ಯಕ್ಷತೆಯನ್ನು ಸಹಾಯಕ ಸಾರಿಗೆ ಅಧಿಕಾರಿ ಅಲ್ವಿನ್ ಟಿ.ಕ್ಸೇವಿಯರ್ ವಹಿಸಿದ್ದರು. ಸೂಪರಿಂಟೆಂಡೆಂಟ್ ಕೆ.ಸರಿತಾ ಉಪಸ್ಥಿತರಿದ್ದರು. ವಿ.ಎಚ್. ದಾಮೋದರನ್ ಸ್ವಾಗತಿಸಿದರು.

ಪೆರಿಯ ಕೇಂದ್ರೀಯ ವಿವಿಯಲ್ಲಿ ಅಂತಾರಾಷ್ಟ್ರೀಯ ಆಣ್ವಿಕ ಸಿಗ್ನಲಿಂಗ್ ಸಮ್ಮೇಳನ

ಜೀವಶಾಸ್ತ್ರ ಆಸಕ್ತಿ ಹುಟ್ಟಿಸುತ್ತದೆ: ಪ್ರೊ. ಬಲರಾಮ್



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಜೈವಿಕ ವಿಜ್ಞಾನ ಶಾಲೆ ಮತ್ತು ಆಣ್ವಿಕ ಸಿಗ್ನಲಿಂಗ್ ಸೊಸೈಟಿ ಇವುಗಳ ಜಂಟಿ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಆಣ್ವಿಕ ಸಿಗ್ನಲಿಂಗ್ ಸಮ್ಮೇಳನ (ಐಸಿಎಂಎಸ್ - 2026) ಹಮ್ಮಿಕೊಳ್ಳಲಾಯಿತು.

ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಪದ್ಮಭೂಷಣ ಪ್ರೊ.ಪದ್ಮನಾಭನ್ ಬಲರಾಮ್ ದೀಪಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಜೀವಶಾಸ್ತ್ರವು ಒಬ್ಬ ವ್ಯಕ್ತಿಯು ವಯಸ್ಸಾದಂತೆ ಸ್ವಾಭಾವಿಕವಾಗಿ ಯೋಚಿಸಲು ಪ್ರಾರಂಭಿಸುವ ವಿಷಯವಾಗಿದೆ ಎಂದು ಹೇಳಿದರು. ಓರ್ವ ವ್ಯಕ್ತಿಯು ಯಾವುದೇ ವಿಷಯದಲ್ಲಿ ಜ್ಞಾನ ಹೊಂದಿದ್ದರೂ, ಪ್ರತಿಯೊಬ್ಬರೂ ತನ್ನ ದೇಹದಲ್ಲಿನ ಜೀವನ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ಅನುಭವಿಸಿದಾಗ ಜೀವಶಾಸ್ತ್ರದ ಬಗ್ಗೆ ಕುತೂಹಲ ವ್ಯಕ್ತಪಡಿಸುತ್ತಾರೆ. ವಿಜ್ಞಾನವು ಪ್ರಕೃತಿ ಮತ್ತು ವಸ್ತುವನ್ನು ಅಧ್ಯಯನ ಮಾಡುವ ಶಾಖೆಯಾಗಿದೆ. ವಿಜ್ಞಾನದ ಎಲ್ಲಾ ಶಾಖೆಗಳು ವಸ್ತುವನ್ನು ಅಧ್ಯಯನ ಮಾಡುತ್ತವೆ. ಇದರಲ್ಲಿ ಯಾವುದೇ ವಿಜ್ಞಾನ ಶಾಖೆಯು ರಸಾಯನಶಾಸ್ತ್ರವನ್ನು ತಪ್ಪಿಸಲು ಸಾಧ್ಯವಿಲ್ಲ. ಏಕೆಂದರೆ ಪರಮಾಣುಗಳು ಮತ್ತು ಅಣುಗಳಂತಹ ರಸಾಯನಶಾಸ್ತ್ರದ ಅಧ್ಯಯನದ ಮೂಲಭೂತ ವಿಷಯಗಳು ಎಲ್ಲೆಡೆ ಇರುತ್ತವೆ. ಆದ್ದರಿಂದ ಜೀವ ರಸಾಯನಶಾಸ್ತ್ರ ಮತ್ತು ರಸಾಯನಶಾಸ್ತ್ರದ ಆಧಾರದ ಮೇಲೆ ಮಾತ್ರ ಜೀವಶಾಸ್ತ್ರವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಸಮಾರಂಭದಲ್ಲಿ ಕೇರಳ ಕೇಂದ್ರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿದ್ದು ಪಿ.ಅಲ್ಗೂರ್ ಅಧ್ಯಕ್ಷತೆ ವಹಿಸಿ, ಸಂಶೋಧನೆಯಲ್ಲಿ ಶ್ರೇಷ್ಠತೆ ಎನ್ನುವುದು ಪ್ರತ್ಯೇಕ ಪ್ರಯತ್ನಗಳ ಮೂಲಕ ಬರುವುದಿಲ್ಲ ಎಂದು ಗಮನ ಸೆಳೆದರು. ಇದಕ್ಕೆ ಸಹಯೋಗ, ಸಂಪನ್ಮೂಲಗಳ ಹಂಚಿಕೆ ಮತ್ತು ಅಂತರ ಮತ್ತು ಶಿಸ್ತಿನ ಕೆಲಸ ಅತ್ಯಗತ್ಯ. ಜಾಗತಿಕ ಸವಾಲುಗಳನ್ನು ಪರಿಹರಿಸುವಲ್ಲಿ ಜೀವಶಾಸ್ತ್ರದ ಪ್ರಸ್ತುತತೆಯನ್ನು ಎತ್ತಿ ತೋರಿಸುವುದು ಸಮ್ಮೇಳನದ ವಿಷಯವಾಗಿದೆ. ಸಮಾಜಕ್ಕೆ ಉಪಯುಕ್ತ ಪರಿಹಾರಗಳಾಗಿ ಪರಿವರ್ತಿಸಬಹುದಾದ ಮತ್ತು ಆತ್ಮನಿರ್ಭರ ಭಾರತವನ್ನು ಬಲಪಡಿಸಬಹುದಾದ ಚರ್ಚೆಗಳು ನಡೆಯುತ್ತಿವೆ ಎಂದು ನುಡಿದರು.

ಜೀನೋಮಿಕ್ ಸೈನ್ಸ್ ವಿಭಾಗದ ಮುಖ್ಯಸ್ಥ ಪ್ರೊ.ಎ.ಬಿ.ಸಮೀರ್ ಕುಮಾರ್, ಜೀವರಸಾಯನಶಾಸ್ತ್ರ ಮತ್ತು ಆಣ್ವಿಕ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಜಿ.ಗೋವಿಂದ ರಾವ್, ಸೊಸೈಟಿ ಫಾರ್ ಮಾಲಿಕ್ಯುಲರ್ ಸಿಗ್ನಲಿಂಗ್‌ನ ಅಧ್ಯಕ್ಷ ಪ್ರೊ.ಎ.ಎಸ್.ರಾಘವೇಂದ್ರ, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಇಂದ್ರಶಿಶ್ ಭಟ್ಟಾಚಾರ್ಯ ಮಾತನಾಡಿದರು. ಜೈವಿಕ ವಿಜ್ಞಾನ ಶಾಲೆಯ ಡೀನ್ ಪ್ರೊ.ಸುಧಾ ಕಪ್ಪಳ್ಳಿ ಸ್ವಾಗತಿಸಿ, ಡಾ.ಪಿ.ಎ.ಸಿನು ವಂದಿಸಿದರು.

ಪೆರಿಯದಲ್ಲಿ ಮೂರು ದಿನಗಳ ಸಮ್ಮೇಳನ

ಪೆರಿಯದಲ್ಲಿ ನಡೆಯುತ್ತಿರುವ ಮೂರು ದಿನಗಳ ಈ ಸಮ್ಮೇಳನದಲ್ಲಿ ಜೀವಕೋಶಗಳು ಮತ್ತು ಅಂಗಗಳ ನಡುವಿನ ಸಂವಹನ ಪ್ರಕ್ರಿಯೆಗೆ ಸಂಬಂಧಿಸಿದ ಅಧ್ಯಯನ ಮತ್ತು ಸಂಶೋಧನಾ ಕ್ಷೇತ್ರದ ಅನೇಕ ವಿಜ್ಞಾನಿಗಳು ಮತ್ತು ಸಂಶೋಧಕರು ಭಾಗವಹಿಸುತ್ತಿದ್ದಾರೆ. ಭಾರತವನ್ನು ಹೊರತುಪಡಿಸಿ ಕೆನಡಾ, ಅಮೆರಿಕ, ಜರ್ಮನಿ, ಜಪಾನ್ ಮುಂತಾದ ದೇಶಗಳ ತಜ್ಞರು ಇದ್ದಾರೆ. ಹತ್ತು ತಾಂತ್ರಿಕ ತರಗತಿಗಳು, 30 ಸಮಗ್ರ ಉಪನ್ಯಾಸಗಳು, 14 ಕಿರು ಉಪನ್ಯಾಸಗಳು, 12 ಮೌಖಿಕ ಪ್ರಸ್ತುತಿಗಳು ಮತ್ತು 29 ಪೋಸ್ಟರ್ ಪ್ರಸ್ತುತಿಗಳು ಇರುತ್ತವೆ. ಮುಂಬೈನ ರಾಷ್ಟ್ರೀಯ ಸಂತಾನೋತ್ಪತ್ತಿ ಆರೋಗ್ಯ ಸಂಶೋಧನಾ ಸಂಸ್ಥೆಯ ವಿಜ್ಞಾನಿ ಜಿ.ಡಾ.ಶ್ರಬಾನಿ ಮುಖರ್ಜಿ ಮತ್ತು ಕೆನಡಾದ ಕ್ಯಾಲ್ಗರಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಎಂ.ವಿಜಯನ್ ಅವರು ಉಪನ್ಯಾಸ ನೀಡಿದರು. ಮಾ.2ರಂದು ಸಂಜೆ ಜರಗಲಿರುವ ಸಮಾರೋಪ ಸಮ್ಮೇಳನದಲ್ಲಿ ಹೈದರಾಬಾದ್ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಪ್ರೊ.ಪಿ.ಅಪ್ಪಾ ರಾವ್ ಸಮಾರೋಪ ಭಾಷಣ ಮಾಡಲಿದ್ದಾರೆ.

ಬಾಲಕಿಯರ ಸುರಕ್ಷತೆಗೆ ಆದ್ಯತೆ

ಬೆಂಗಳೂರು: ದೇಶದಲ್ಲಿ ಬಾಲಕಿಯರ ಆರೋಗ್ಯ ಸುರಕ್ಷತೆಗೆ ಹೆಚ್ಚು ಒತ್ತು ನೀಡಲು ಮುಂದಾಗಿರುವ ಸರ್ಕಾರ ಈಗ ಗರ್ಭಕಂಠ ಕ್ಯಾನ್ಸರ್ ತಡೆಗೆ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್‌ಪಿವಿ) ಲಸಿಕೆ ನೀಡುವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಕೇಂದ್ರ ಸರ್ಕಾರದ ಆಶಯದಂತೆ ರಾಜ್ಯದಲ್ಲಿಯೂ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ರಾಜಸ್ಥಾನದ ಅಜ್ಮೀರ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದರು. ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ವೆಬ್‌ಕಾಸ್ಟ್ ಮೂಲಕ ಕಾರ್ಯಕ್ರಮ ವೀಕ್ಷಿಸಲಾಯಿತು. 14 ವರ್ಷ ಮೇಲ್ಪಟ್ಟ ವಯಸ್ಸಿನ ಸುಮಾರು 1.15 ಕೋಟಿ ಬಾಲಕಿಯರಿಗೆ ಸರ್ಕಾರಿ ಆರೋಗ್ಯ ಸೌಲಭ್ಯಗಳಲ್ಲಿ, ಆಯುಷ್ಮಾನ್ ಆರೋಗ್ಯ ಮಂದಿರಗಳು (ಪ್ರಾಥಮಿಕ ಆರೋಗ್ಯ ಕೇಂದ್ರಗಳು), ಸಮುದಾಯ ಆರೋಗ್ಯ ಕೇಂದ್ರಗಳು, ಉಪ-ಜಿಲ್ಲಾ ಮತ್ತು ಜಿಲ್ಲಾ ಆಸ್ಪತ್ರೆಗಳು ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳಲ್ಲಿ ಲಸಿಕೆಯನ್ನು ಹಾಕಲಾಗುತ್ತದೆ.

ಈ ಅಭಿಯಾನವು ಮೂರು ತಿಂಗಳ ಅವಧಿ ನಡೆಯಲಿದ್ದು, ಸಮರೋಪಾದಿಯಲ್ಲಿ ಕೈಗೊಂಡು ನಿಗದಿಪಡಿಸಿದ ಬಾಲಕಿಯರಿಗೆ ಲಸಿಕೆ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಅಭಿಯಾನವನ್ನು ಎಲ್ಲೆಡೆ ವಿಸ್ತರಿಸಲಾಗುವುದು ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ವೇಳೆ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕ ಡಾ. ಸುಜಾತಾ ರಾಥೋಡ್, ರಾಷ್ಟ್ರೀಯ ಆರೋಗ್ಯ ಮಿಷನ್ ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್, ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್, ಕಿದ್ವಾಯಿ ಆಸ್ಪತ್ರೆಯ ನಿರ್ದೇಶಕರು ಸೇರಿದಂತೆ ಇತರರು ಇದ್ದರು.

ರಾಮ ಬಾಣ



ಕನ್ನಡಿಗರ ಸುರಕ್ಷತೆಗಾಗಿ ಕೇಂದ್ರಕ್ಕೆ ಶಾಲಿನಿ ರಜನೀಶ್ ಪ್ರತ್ಯೇಕ ಪತ್ರ

ಬೆಂಗಳೂರು: ಮಧ್ಯಪ್ರಾಚ್ಯದಲ್ಲಿ ಹುಟ್ಟುತ್ತಿರುವ ಉದ್ವಿಗ್ನತೆಯ ನಡುವೆ ಕನ್ನಡಿಗರ ಸುರಕ್ಷತೆ ಮತ್ತು ಸಂಭವನೀಯ ವಾಪಸಾತಿಗಾಗಿ ತುರ್ತು ಸಮನ್ವಯ ಹಾಗೂ ಅಲ್ಲಿ ಸಿಲುಕಿರುವ ಪ್ರವಾಸಿಗರಿಗೆ ವಾಪಸ್ ಮರಳುವುದಕ್ಕೆ ಅಗತ್ಯ ವಿಮಾನಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಕೇಂದ್ರಕ್ಕೆ ಪ್ರತ್ಯೇಕ ಪತ್ರ ಬರೆದಿದ್ದಾರೆ.

ದುಬೈ ಮತ್ತು ಪಶ್ಚಿಮ ಏಷ್ಯಾದ ಇತರ ದೇಶಗಳಂತಹ ಪ್ರಮುಖ ಕೇಂದ್ರಗಳಲ್ಲಿ ಗಣನೀಯ ಸಂಖ್ಯೆಯ ಕನ್ನಡಿಗರು ಉದ್ಯೋಗ, ಉನ್ನತ ಶಿಕ್ಷಣ, ವ್ಯಾಪಾರ, ಪ್ರವಾಸೋದ್ಯಮ ಸಂಬಂಧಿಸಿ ನೆಲೆಸಿದ್ದಾರೆ. ಪರಿಸ್ಥಿತಿಯ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರವು, ಪೀಡಿತ ಪ್ರದೇಶಗಳಲ್ಲಿ ಪ್ರಸ್ತುತ ಕನ್ನಡಿಗರ ಸುರಕ್ಷತೆ ಮತ್ತು ಯೋಗಕ್ಷೇಮ ದೃಢಪಡಿಸಲು ಸಂಬಂಧಪಟ್ಟ ಭಾರತೀಯ ರಾಯಭಾರ ಕಚೇರಿಗಳು ಅಥವಾ ದೂತಾವಾಸಗಳ ಮೂಲಕ ಅಗತ್ಯವಿರುವ ಎಲ್ಲಾ ಸಹಾಯ ಒದಗಿಸಲು ವಿದೇಶಾಂಗ ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ವಿನಂತಿಸಿದೆ.

ನಾಗರಿಕ ವಿಮಾನಗಳ ವ್ಯವಸ್ಥೆಗೆ ಮನವಿ: ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪ್ರತ್ಯೇಕ ಪತ್ರ ಬರೆಯಲಾಗಿದೆ. ವಿವಿಧ ವಿಮಾನಯಾನ ಸಂಸ್ಥೆಗಳಲ್ಲಿ ರಿಟರ್ನ್ ಟಿಕೆಟ್‌ಗಳನ್ನು ಬುಕ್ ಮಾಡಿದ್ದ ಅನೇಕ ಪ್ರವಾಸಿಗರು, ವಿಮಾನಗಳ ವ್ಯತ್ಯಯ ಮತ್ತು ಪ್ರಸ್ತುತ ಪರಿಸ್ಥಿತಿಯಿಂದ ಉಂಟಾಗುವ ಅನಿಶ್ಚಿತತೆಯಿಂದಾಗಿ ತಮ್ಮ ಪ್ರಯಾಣವನ್ನು ನಿಗದಿತ ಸಮಯಕ್ಕೆ ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿಯಾಗಿದೆ. ರಿಟರ್ನ್ ಬುಕಿಂಗ್‌ಗಳನ್ನು ದೃಢಪಡಿಸುವುದು ನಿಯಂತ್ರಣ ಮೀರಿದ ಪರಿಸ್ಥಿತಿಯಿಂದಾಗಿ ವಿಳಂಬವಾಗುತ್ತಿರುವ ಪ್ರವಾಸ ಪ್ರಯಾಣಿಸಲು ಸಾಧ್ಯವಾಗದ ಸಿಲುಕಿರುವ ಪ್ರವಾಸಿಗರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಸೇರಿದಂತೆ ಅಗತ್ಯ ಸಹಾಯ ಒದಗಿಸಿ. ಟಿಕೆಟ್ ಮರುಹೊಂದಾಣಿಕೆ ಮತ್ತು ಹೆಚ್ಚುವರಿ ಶುಲ್ಕಗಳ ವಿನಾಯಿತಿಗಳನ್ನು ವಿಸ್ತರಿಸಿ. ಸಾಧ್ಯವಾದಷ್ಟು ಬೇಗ ಸಾಕಷ್ಟು ವಿಮಾನಗಳ ವ್ಯವಸ್ಥೆ ಮತ್ತು ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಿ ಎಂದು ಪತ್ರದಲ್ಲಿ ವಿನಂತಿಸಲಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆರೇಜಿ

ಸರಕಾರವು ಗಾಂಧೀಜಿಯವರಿಗೆ ಗೌರವ ಕೊಡುವುದಾಗಿದ್ದರೆ ಮದ್ಯಪಾನ ಮಾಡಬೇಡಿ ಎಂಬ ಜಾಹೀರಾತು ಕೊಡಬೇಕಿತ್ತು
- ಆರ್.ಅಶೋಕ್

- **ಮದ್ಯಪಾನ ಮಾಡಬೇಡಿ ಎಂದು ಜಾಹೀರಾತು ಕೊಟ್ಟವರಿಗೆ ಮತದಾನ ಮಾಡಬೇಡಿ ಎನ್ನುವ ಚಳುವಳಿ ಆರಂಭವಾದೀತೆಂಬ ಭಯವಿರಬಹುದು!**

ದಿನ ಭವಿಷ್ಯ

ಮೇಷ ನಿಮ್ಮ ಪಾಲಿಗೆ ಶುಭ ಸಂಕೇತ ತೋರಿ ಬರಲಿದೆ. ಸದ್ಯದಲ್ಲಿ ಚಿಂತೆಯೊಂದು ಪರಿಹಾರ ಕಾಣಲಿದೆ. ವೃತ್ತಿಯಲ್ಲಿ ಉನ್ನತಿಗೆ ಪೂರಕ ಸನ್ನಿವೇಶ ಸೃಷ್ಟಿ.

ವೃಷಭ ಸಂಬಂಧ ಕೆಲಯನ್ನು ಸಂಯಾಗಿ ಬಳಸಿ. ಆ ಮೂಲಕ ಭಿನ್ನಮತ ನಿವಾರಿಸಿ. ಪರಿಸ್ಥಿತಿ ನಿಭಾಯಿಸಲು ಶಕ್ತರಾಗುವಿರಿ.

ಮಿಥುನ ಸಣ್ಣದೆಂದು ಭಾವಿಸಿದ ಸಮಸ್ಯೆ ದೊಡ್ಡದಾಗಿ ಕಾಡೀತು. ಅದಕ್ಕೆ ಅವಕಾಶ ಕೊಡದಿರಿ. ಆತ್ಮೀಯರ ವಿರೋಧ ಕಟ್ಟಿಕೊಳ್ಳದಿರಿ.

ಕಟಕ ವೃತ್ತಿಯಲ್ಲಿ ಕೆಲವು ಅನುಚಿತ ಬೆಳವಣಿಗೆ ಸಂಭವ. ಆರೋಗ್ಯದ ಬಗ್ಗೆ ಗಮನ ಕೊಡಿ. ಅತಿಯಾಗಿ ಎಣ್ಣೆ ತಿನಿಸು ಸೇವಿಸದಿರಿ.

ಸಿಂಹ ನಿಮ್ಮ ಬದುಕಿನ ಮೇಲೆ ತಕ್ಷಣ ಪರಿಣಾಮ ಬೀರಬಲ್ಲ ವಿಷಯದತ್ತ ಹೆಚ್ಚು ಗಮನ ಹರಿಸಿ. ಅನ್ಯರ ಟೀಕೆ ಕೇಳುವಿರಿ. ಕೌಟುಂಬಿಕ ಸಾಮರಸ್ಯ.

ಕನ್ಯಾ ವೃತ್ತಿಯಲ್ಲಿ ಎಲ್ಲ ಸುಸೂತ್ರ. ಮೇಲಿನವರ ಪ್ರಶಂಸೆ. ಕೆಲ ವಿಷಯದಲ್ಲಿ ಅತೃಪ್ತಿ ಇದ್ದರೂ ಇಂದು ಖುಷಿಯಿಂದ ಕಳೆಯಿರಿ. ದೂರದ ಬಂಧು ಭೇಟಿ.

ತುಲಾ ಬಯಸಿದ ಕಾರ್ಯ ಕೈಗೂಡದೆ ಹೋದೀತು. ನಿರಾಶೆ ಪಡದಿರಿ. ಅಶಾವಾದ ಇಟ್ಟುಕೊಳ್ಳಿ. ಸಂಬಂಧದಲ್ಲಿ ಖಾಸಾತ್ಮಕ ಚಿಂತನೆ ನುಸುಳಬಹುದು.

ವೃಶ್ಚಿಕ ವಿವಾದದಿಂದ ದೂರವಿರಿ. ನೀವು ಬಯಸದಿದ್ದರೂ ಕೆಲವರು ತಮ್ಮ ಬಿಕ್ಕಟ್ಟಿನಲ್ಲಿ ನಿಮ್ಮನ್ನು ಎಳೆಯಬಹುದು. ಮಾನಸಿಕ ಒತ್ತಡ ಅಧಿಕ.

ಧನು ನೀವು ಉದ್ದೇಶಿಸಿದ ಕಾರ್ಯ ಇಂದು ಸಾಧ್ಯ ಆಗದಿರಬಹುದು. ಹತಾಶೆ ಬೇಡ, ನಾಳೆಯೆಂಬುದು ಇದ್ದೇ ಇದೆ. ಮರಳಿ ಪ್ರಯತ್ನವ ಮಾಡಿರಿ.

ಮಕರ ಯಾವುದೋ ವಿಚಾರ ಬೇಸರ ಸೃಷ್ಟಿಸಲಿದೆ. ಅದನ್ನು ನಿವಾರಿಸಲು ಯತ್ನಿಸಿ. ನಿಮ್ಮನ್ನು ಪೂರ್ಣವಾಗಿ ಅರಿತವರ ನೆರವು ಪಡೆಯಿರಿ. ಧನವ್ಯಯ.

ಕುಂಭ ಯಾವುದೇ ಕೊರತೆ ಇಂದು ಬಾಧಿಸದು. ನೀವು ಇಚ್ಛಿಸಿದಂತೆ ಆಗಲಿದೆ. ಆದರೂ ನಿಮ್ಮಲ್ಲಿ ಅಸಂತೃಪ್ತಿ. ಹೇಳಲಾಗದ ಬೇಸರ ಕಾಡುವುದು.

ಮೀನ ಅಸೂಯೆ ನೆಮ್ಮದಿ ಕೆಡಿಸಬಲ್ಲುದು. ಅನ್ಯರ ಏಳಿಗೆಗೆ ಮತ್ಸರ ಪಡಬೇಡಿ. ಮನಸ್ಸು ಕೆಡಿಸುವ ಯೋಚನೆ ಮಾಡಲು ಹೋಗಬೇಡಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ 9,4,0,5

ಅಣುಶಕ್ತಿ ಇಲಾಖೆ ಕಾರ್ಯದರ್ಶಿ ಅಜಿತಕುಮಾರ ಮೊಹಂತಿ ಭರವಸೆ
ಕೈಗಾದಲ್ಲಿ 5, 6ನೇ ಘಟಕದ ನಿರ್ಮಾಣ ಕಾರ್ಯ ಪೂರ್ಣ

ಕಾರವಾರ: ಉತ್ತರಕನ್ನಡ ಜಿಲ್ಲೆಯ ಕೈಗಾದಲ್ಲಿ 2030 ನೇ ಸಾಲಿಗೆ 5 ಮತ್ತು 6 ನೇ ಘಟಕವು ತನ್ನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ವಿಶ್ವಾಸ ಹೊಂದಲಾಗಿದೆ ಎಂದು ಕೇಂದ್ರ ಅಣುಶಕ್ತಿ ಇಲಾಖೆಯ ಕಾರ್ಯದರ್ಶಿ ಡಾ.ಅಜಿತಕುಮಾರ ಮೊಹಂತಿ ಹಾಗೂ ಎನ್.ಪಿ.ಸಿ.ಐ.ಎಲ್ ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಭುವನಚಂದ್ರ ಪಾಠಕ್ ಹೇಳಿದರು.

ಕೈಗಾ 5 ಮತ್ತು 6 ನೇ ಘಟಕಕ್ಕೆ ಎಲ್ಲ ಹಂತದ ಅನುಮತಿಯನ್ನು ಪಡೆದು 2025 ರಲ್ಲಿ ಪ್ರಾರಂಭಿಕ ಹಂತದ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಇಂದು ಉಳಿದ ವಿದ್ಯುತ್ ಗಳಿಗೆ ಹೋಲಿಕೆ ಮಾಡಿದಲ್ಲಿ ಅಣುವಿದ್ಯುತ್ ಅತಿ ಕಡಿಮೆ ವೆಚ್ಚದಲ್ಲಿ ದೇಶದ ವಿದ್ಯುತ್ ಕೊರತೆಯನ್ನು ನೀಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ ಎಂದರು. ಈ ಘಟಕವು ಮುಂದೆ ಕಾರ್ಯಾರಂಭವಾದಲ್ಲಿ ಸಾವಿರ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಸ್ಥಳೀಯರಿಗೂ ದೊರೆಯಲಿದೆ ಎಂದರು. ಎನ್‌ಪಿಸಿಐಎಲ್ ಮುಖ್ಯ ವ್ಯವಸ್ಥಾಪಕರ ನಿರ್ದೇಶಕ ಭುವನಚಂದ್ರ ಪಾಠಕ್ ಮಾತನಾಡಿ, ನ್ಯೂಕ್ಲಿಯರ್ ದಿಂದ ಉತ್ಪಾದನೆಯಾಗುವ ವಿದ್ಯುತ್ ದಿಂದ ಕರ್ನಾಟಕ ರಾಜ್ಯಕ್ಕೆ ಶೇ.25 ರಷ್ಟು ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ಭಾರಜಲದ ವಿದ್ಯುತ್ ಘಟಕಗಳು ದೇಶದ ವಿದ್ಯುತ್ ಪೂರೈಕೆಯನ್ನು ನೀಗಿಸುವಲ್ಲಿ ನಮ್ಮ ಘಟಕಗಳು ಪೂರಕವಾಗಿದೆ. ನಮ್ಮ ಕೈಗಾದಲ್ಲಿ ಒಂದರಿಂದ ನಾಲ್ಕು ಘಟಕಗಳಿಂದ 220 ಮೆಗಾವ್ಯಾಟರಂತೆ ಒಟ್ಟು 880 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದರು.



3 ಸಾವಿರ ಅರ್ಜಿಗಳು

ಗ್ರುಪ್ ಬಿ ಮತ್ತು ಗ್ರುಪ್ ಸಿ ವರ್ಗಕ್ಕೆ ಸಿಬ್ಬಂದಿಗಳ ನೇಮಕಾತಿಗಾಗಿ ನಾವು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರವಾರ ,ಅಂಕೋಲಾ, ಹೊನ್ನಾವರ ತಾಲೂಕುಗಳಲ್ಲಿ ಕೋಚಿಂಗ್ ಸೆಂಟರ್ ಗಳನ್ನು ತೆರೆಯಲಾಗಿದೆ. ಈ ತರಬೇತಿ ಕೇಂದ್ರಗಳಲ್ಲಿ ಕೋಚಿಂಗ್ ಗೆ 3 ಸಾವಿರ ಅರ್ಜಿಗಳು ಬಂದಿದೆ. ಇಂತಹ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆಯಲು ಸ್ಥಳೀಯರಲ್ಲಿ ಆಸಕ್ತಿ ಕೊರತೆ ಇರುವದು ಕಂಡು ಬಂದಿದೆ. ಅಲ್ಲದೆ ಪರೀಕ್ಷೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಬೋನಸ್ ಅಂಕಗಳನ್ನು ನಾವು ನೀಡುತ್ತಿದ್ದೇವೆ ಎಂದು ಪಾಠಕ ಹೇಳಿದರು.

ಸ್ಥಳೀಯರಿಗೆ ಉದ್ಯೋಗಾವಕಾಶದ ಬಗ್ಗೆ ಕೇಳಲಾದ ಪ್ರಶ್ನೆಗೆ ಎನ್.ಪಿ.ಸಿ.ಐ. ಎಲ್ ದಲ್ಲಿ ಸೇರ್ಪಡೆ ಗೊಳಲು ನಮ್ಮಲ್ಲಿ ಮೂರು ರೀತಿಯ ವರ್ಗೀಕರಣಗಳಿವೆ ಎ ಗ್ರುಪ್ ಅಧಿಕಾರಿ ವೃಂದ ಇದಕ್ಕೆ ಉನ್ನತ ಶಿಕ್ಷಣ ಪಡೆದವರು, ಗ್ರುಪ್ ಬಿ ದಲ್ಲಿ ತಾಂತ್ರಿಕ ನೈಪುಣ್ಯತೆಯನ್ನು ಹೊಂದಿರುವ ಡಿಪ್ಲೊಮ ಮತ್ತು ಬಿ.ಇ ಇನ್ನು ಗ್ರುಪ್ ಸಿ ದಲ್ಲಿ ಘಟಕದಲ್ಲಿ ಕಾರ್ಯನಿರ್ವಹಿಸಲು ಸಹಾಯಕ ತಾಂತ್ರಿಕರು ಮತ್ತು ತಳಹಂತದಲ್ಲಿ ಸಿಬ್ಬಂದಿಗಳೆಂದು ವರ್ಗೀಕರಿಸಲಾಗಿದೆ.

ಸೈಟ್ ಡೈರೆಕ್ಟರ್ ವಿನೋದ ಕುಮಾರ ಮಾತನಾಡಿ, ನಮ್ಮಲ್ಲಿ 1350 ರೆಗ್ಯುಲರ್ ಸಿಬ್ಬಂದಿ ಇದ್ದಾರೆ. ದರಲ್ಲಿ ಕರ್ನಾಟಕ ರಾಜ್ಯದವರು 805, ಉತ್ತರ ಕನ್ನಡ ಜಿಲ್ಲೆಯವರು 470 ನೌಕರರು ಇದ್ದಾರೆ. ಸಿ.ಎಸ್.ಆರ್ ಅನುದಾನದಡಿ ಸ್ಥಳೀಯ ಶಾಲೆ, ಅಂಗನವಾಡಿಗಳಿಗೆ ಮೂಲಭೂತ ಸೌಕರ್ಯ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಭವನಗಳು, ಶೌಚಾಲಯಗಳನ್ನು ರಸ್ತೆಗಳನ್ನು ನಿರ್ಮಿಸಿಕೊಟ್ಟಿದ್ದೇವೆ. ಶಾಲೆಗಳಿಗೆ ಅನುಕೂಲವಾಗಲು ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸಲು 100 ಅಭ್ಯರ್ಥಿಗಳು ನಮ್ಮಲ್ಲಿದ್ದು, ಅವರು ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಮಗೆ ಪ್ರತಿ ವರ್ಷ 12 ಕೋ.ರೂ. ಸಿ.ಎಸ್.ಆರ್ ಅನುದಾನ ಬರುತ್ತಿದೆ. ಆದರಿಂದ ನಾವು 30 ಶಾಲೆಗಳ ಕಟ್ಟಡಗಳು, 15 ಕಡೆಯಲ್ಲಿ ಸಮುದಾಯ ಭವನ, 3 ಪ್ರಾಥಮಿಕ ಆರೋಗ್ಯ ಕೇಂದ್ರ ಆಸ್ಪತ್ರೆಯನ್ನು ನಾವು ನಿರ್ಮಿಸಿಕೊಡಲಾಗಿದೆ ಎಂದು ವಿನೋದ ಕುಮಾರ ಹೇಳಿದರು.

ಭಾರತೀಯರ ರಕ್ಷಣೆ ಕುರಿತು ಮೋದಿ ಚರ್ಚೆ

ಪುಟ 1➜ಇರಾನ್‌ನ ಸರ್ವೋಚ್ಚ ನಾಯಕ ಅಲಿ ಖಮೇನಿ ಹತ್ಯೆಯ ನಂತರ ಮಧ್ಯ ಪ್ರಾಚ್ಯದಲ್ಲಿ ಬದಲಾಗಿರುವ ರಾಜಕೀಯ ಹಾಗೂ ಭದ್ರತಾ ಪರಿಸ್ಥಿತಿಯ ಕುರಿತು ಸವಿಸ್ತಾರ ಚರ್ಚೆ ನಡೆಯಿತು.

ಪ್ರಸ್ತುತ ಪರಿಸ್ಥಿತಿಯು ಭಾರತಕ್ಕೆ ಉಂಟುಮಾಡಬಹುದಾದ ಪರಿಣಾಮಗಳ ಬಗ್ಗೆ ಅಧಿಕಾರಿಗಳು ಪ್ರಧಾನಿಗೆ ಮಾಹಿತಿ ನೀಡಿದರು. ಯುದ್ಧ ಭೀತಿಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗುವ ಸಾಧ್ಯತೆಗಳ ಕುರಿತು ಹಣಕಾಸು ಮತ್ತು ಪೆಟ್ರೋಲಿಯಂ ಸಚಿವಾಲಯಗಳೊಂದಿಗೆ ಚರ್ಚೆ ನಡೆಯಿತು. ಇದರ ಪರಿಣಾಮವಾಗಿ ದೇಶೀಯ ಆರ್ಥಿಕತೆಯ ಮೇಲೆ ಬರುವ ಒತ್ತಡವನ್ನು ಸಮರ್ಥವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಗಲ್ಫ್ ವಲಯದಲ್ಲಿ ವಾಯುಪ್ರದೇಶ ಮುಚ್ಚಿರುವ ಹಿನ್ನೆಲೆ ಅಂತರಾಷ್ಟ್ರೀಯ ವಿಮಾನಯಾನ ಸೇವೆಗಳು ಅಸ್ತವ್ಯಸ್ತಗೊಂಡಿರುವ ಬಗ್ಗೆ ಸಭೆಯಲ್ಲಿ ಪರಿಶೀಲನೆ ನಡೆಯಿತು. ಭಾರತೀಯ ನಾಗರಿಕರ ಪ್ರಯಾಣದ ಸೌಲಭ್ಯ ಹಾಗೂ ಸುರಕ್ಷತೆ ದೃಷ್ಟಿಯಿಂದ ಅಗತ್ಯ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್. ಜೈಶಂಕರ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಉಪಸ್ಥಿತರಿದ್ದರು.

ದಾಳಿಗೆ ಶಿವಕುಮಾರ್ ಖಂಡನೆ

ಬೆಂಗಳೂರು: ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಈಗ ನಡೆಯುತ್ತಿರುವ ಯುದ್ಧ ಸರಿಯಲ್ಲ. ವೈಮಾನಿಕ ದಾಳಿಯಲ್ಲಿ ಮಕ್ಕಳು ಸತ್ತಿದ್ದಾರೆ. ಏನೂ ಮಾಡದ ಮಕ್ಕಳ ಶಾಲೆ ಮೇಲೆ ಏಕೆ ದಾಳಿ ಮಾಡಬೇಕು. ಇದು ಖಂಡನೀಯ. ದುಬೈ ಸೇರಿದಂತೆ ಕೊಲ್ಲಿ ದೇಶಗಳಲ್ಲಿ ಸಿಲುಕಿರುವ ಭಾರತೀಯ ನಾಗರಿಕರನ್ನ ರಕ್ಷಣೆ ಮಾಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರವನ್ನು ಆಗ್ರಹಿಸಿದ್ದಾರೆ.

ಭಾನುವಾರ ಸದಾಶಿವನಗರದ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಕರ್ನಾಟಕ, ಕೇರಳ ಸೇರಿದಂತೆ ಭಾರತೀಯ ನಾಗರಿಕರನ್ನ ರಕ್ಷಣೆ ಮಾಡಬೇಕು ಎಂದು ಕೇಂದ್ರ ಸರ್ಕಾರದ ಬಳಿ ಮನವಿ ಮಾಡುತ್ತೇನೆ. ನಾಗರಿಕರ ರಕ್ಷಣೆಗೆ ಏನೂ ಒತ್ತಡ ಹೇರಬೇಕೋ ಆ ಕೆಲಸವನ್ನು ನಾವು ಮಾಡುತ್ತೇವೆ. ಭಾರತೀಯರು, ಕನ್ನಡಿಗರಿಗೆ ಧೈರ್ಯ ತುಂಬುವ ಕೆಲಸ ನಾವು ಮಾಡುತ್ತೇವೆ. ಪ್ರಪಂಚದ ಯಾವ ಮನುಷ್ಯರು ಹೀಗೆ ಸಾಯುವುದನ್ನ ನಾನು ಖಂಡಿಸುತ್ತೇನೆ ಎಂದರು. ದುಬೈನಲ್ಲಿ ನಮ್ಮ ಶಾಸಕರಾದ ಎ.ಸಿ. ಶ್ರೀನಿವಾಸ್, ಭರತ್ ರೆಡ್ಡಿ ಅವರ ಕುಟುಂಬ, ಎಂಎಲ್‌ಸಿ ಭೋಜೇಗೌಡ ಅವರು ಸಿಲುಕಿಕೊಂಡಿದ್ದಾರೆ. ಜೊತೆಗೆ ಅನೇಕ ನಾಗರಿಕರು ಸಿಲುಕಿಕೊಂಡಿದ್ದಾರೆ.

ಕನ್ನಡಿಗರ ರಕ್ಷಣೆಗೆ ತ್ವರಿತ ಕ್ರಮ

ಪುಟ 1➜ಎಂಎಲ್‌ಸಿ ಭೋಜೇಗೌಡರು ಕೂಡ ದುಬೈನಲ್ಲಿ ಸಿಲುಕಿಕೊಂಡಿದ್ದಾರೆ. ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ವಿಮಾನ ನಿಲ್ದಾಣಗಳನ್ನು ಬಂದ್ ಮಾಡಿರುವುದರಿಂದ ಸ್ವದೇಶಕ್ಕೆ ಬರಲು ಸಾಧ್ಯವಾಗುತ್ತಿಲ್ಲ ಎಂಬ ಮಾಹಿತಿ ಇದೆ. ಭಾರತ ಸರ್ಕಾರದ ವಿದೇಶಾಂಗ ಇಲಾಖೆ ಸುರಕ್ಷಿತವಾಗಿ ಕರೆತರಲು ಕ್ರಮಕೈಗೊಳ್ಳಲಿದೆ ಎಂದರು.

ಟ್ರಂಪ್ ದ್ವಂದ್ವ ನಿಲುವು: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದು ಕಡೆ ಶಾಂತಿ ಮಂತ್ರ ಜಪಿಸುತ್ತಿದ್ದಾರೆ. ಇನ್ನೊಂದು ಕಡೆ ಯುದ್ಧಕ್ಕೆ ಪ್ರಚೋದನೆ ನೀಡುತ್ತಿದ್ದಾರೆ. ತದ್ವಿರುದ್ಧವಾದ ನಿಲುವು ಅವರದ್ದಾಗಿದೆ. ಇರಾನ್ ಅಧ್ಯಕ್ಷ ಖಮೇನಿ ಹತ್ಯೆ ಯಾ ಗಿದೆ ಎಂಬುದನ್ನು ಅಮೆರಿಕ ಹೇಳಿದೆ. ಹತ್ಯೆಯಾದ ಖಮೇನಿ ಆತ್ಮಕ್ಕೆ ಶಾಂತಿ ಕೋರುವುದಾಗಿ ಹೇಳಿದರು.

ವಿದ್ಯುತ್ ದರ ಏರಿಕೆ ಸರ್ಕಾರದ ಮುಂದಿಲ್ಲ: ಬಜೆಟ್ ಅದರ ಪಾಡಿಗೆ ಅದು ಆಗಲಿದೆ. ಮಂಡನೆಯಾದ ಮೇಲೆ ನೋಡಿ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ವಿದ್ಯುತ್ ದರ ಏರಿಕೆ ಸರ್ಕಾರದ ಮುಂದಿಲ್ಲ ಎಂದರು.

ಪರಿಹಾರದ ಚೆಕ್ ವಿತರಣೆ: ಮುಸ್ಲಿಮರಿಂದ ಹತ್ಯೆಗೀಡಾದ ಊರುಗಡೂರಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್ ಪೋಷಕರಿಗೆ ಸರ್ಕಾರದ ವತಿಯಿಂದ ಸಿಎಂ ಸಿದ್ದರಾಮಯ್ಯ ಭಾನುವಾರ 15 ಲಕ್ಷ ರೂ. ಚೆಕ್ ವಿತರಿಸಿದರು. ತರೀಕೆರೆಗೆ ಮದುವೆಗೆ ಹೋಗುವ ಸಲುವಾಗಿ ನಗರದ ವಿಮಾನ ನಿಲ್ದಾಣಕ್ಕೆ ಬಂದಿದ್ದ ಅವರು, ಚೆಕ್ ವಿತರಿಸಿ ಪೋಷಕರಿಗೆ ಸಾಂತ್ವನ ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಎಸ್ಪಿ ನಿಖಿಲ್ ಮೊದಲಾದವರು ಇದ್ದರು.

ಸಿಎಂ ವಿಡಿಯೋ ಕರೆ

ದುಬೈ ಕನ್ನಡಿಗರೊಂದಿಗೆ ವಿಡಿಯೋ ಕರೆಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ಎಲ್ಲಾ ವ್ಯವಸ್ಥೆ ಮಾಡಲಾಗಿದೆ, ಯಾರು ಆತಂಕ ಪಡುವಂತಿಲ್ಲ ಎಂದು ಅಭಯ ನೀಡಿದ್ದಾರೆ.

ಮಧುರೈನಲ್ಲಿ 4,400 ಕೋಟಿ ರೂ. ಯೋಜನೆಗಳಿಗೆ ಮೋದಿ ಚಾಲನೆ
ತ.ನಾಡು ಅಭಿವೃದ್ಧಿಗೆ ಕೇಂದ್ರ ಆದ್ಯತೆ

ಮಧುರೆ: ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಅಭಿವೃದ್ಧಿ ಹೊಂದಿದ ತಮಿಳುನಾಡು ಎಂಬುದು ಕೇಂದ್ರ ಸರ್ಕಾರದ ಧ್ಯೇಯ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿಳಿಸಿದ್ದಾರೆ. ಇಲ್ಲಿ ಸುಮಾರು 4,400 ಕೋಟಿ ರೂ. ಮೊತ್ತದ ವಿವಿಧ ಮೂಲ ಸೌಕರ್ಯ ಯೋಜನೆಗಳನ್ನು ಉದ್ಘಾಟಿಸಿದ ಅವರು, ರಾಜ್ಯದ ಸರ್ವತೋಮುಖ ಪ್ರಗತಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ಮರಕ್ಕಾನಂ– ಪುದುಚೇರಿ ಸೇರಿದಂತೆ ಪ್ರಮುಖ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಪ್ರಧಾನಿ ಅಡಿಗಲ್ಲು ಹಾಕಿದರು. ಎಂಟು ಪುನರಾಭಿವೃದ್ಧಿ ಹೊಂದಿದ ರೈಲ್ವೆ ನಿಲ್ದಾಣಗಳು ಮತ್ತು ಚೆನ್ನೈ ಬೀಚ್–ಎಗ್ಮೋರ್ ನಡುವಿನ 4ನೇ ರೈಲು ಮಾರ್ಗವನ್ನು ದೇಶಕ್ಕೆ ಸಮರ್ಪಿಸಲಾಯಿತು. 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರ ವನ್ನಾಗಿ ಮಾಡುವಲ್ಲಿ ತಮಿಳುನಾಡು ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಮೋದಿ ಹೇಳಿದ್ದಾರೆ.

ಡಿಜಿಟಲೀಕರಣದ ವಿಸ್ತರಣೆ: ಕುಂಭಕೋಣಂ, ಯೇರ್ಕಾಡ್ ಮತ್ತು ವೆಲ್ಲೂರುಗಳಲ್ಲಿ ಮೂರು ಹೊಸ ಆಕಾಶವಾಣಿ ಎಫ್‌ಎಂ ರಿಲೇ ಟ್ರಾನ್ಸ್ ಮಿಟರ್‌ಗಳನ್ನು ಪ್ರಧಾನಿ ಉದ್ಘಾಟಿಸಿದರು. ಪ್ರಾದೇಶಿಕ ಪ್ರಸಾರ ಸೇವೆಯನ್ನು ಬಲಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಆದಿಚ್ಚನಲ್ಲೂರು ನಂತಹ ಐತಿಹಾಸಿಕ ತಾಣಗಳನ್ನು ಜಾಗತಿಕ ಪರಂಪರೆಯ ತಾಣಗಳನ್ನಾಗಿ ಅಭಿವೃದ್ಧಿಪಡಿಸುವುದಾಗಿ ಅವರು ಆಶ್ವಾಸನೆ ನೀಡಿದ್ದಾರೆ.



ಕುಟುಂಬವೊಂದರ ಎಟಿಎಂ ಆಗಿತ್ತು ಪುದುಚೇರಿ: ಪಿಎಂ

ಪುದುಚೇರಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಹಿಂದಿನ ಕಾಂಗ್ರೆಸ್ ಆಡಳಿತದಲ್ಲಿ ಪುದುಚೇರಿ ದಿಲ್ಲಿಯ ಒಂದು ಕುಟುಂಬದ ಎಟಿಎಂ ಆಗಿತ್ತು. ಭ್ರಷ್ಟಾಚಾರ ಮತ್ತು ರಾಜಕೀಯ ಅಸ್ಥಿರತೆಯಿಂದಾ ಗಿ ಇಲ್ಲಿನ ಅಭಿವೃದ್ಧಿ ಕುಂಠಿತವಾಗಿತ್ತುಎಂದಿದ್ದಾರೆ. 2,700 ಕೋಟಿ ರೂ. ಮೊತ್ತದ ಯೋಜನೆಗಳನ್ನು ಅನಾವರಣಗೊಳಿಸಿದ ಅವರು, ಡಿಎಂಕೆ–ಕಾಂಗ್ರೆಸ್ ಮೈತ್ರಿ, ಅಭಿವೃದ್ಧಿಗೆ ಸ್ಪೀಡ್ ಬ್ರೇಕರ್ ಇದ್ದಂತೆ ಎಂದರು. ಪುದುಚೇರಿಯನ್ನು ವೈದ್ಯಕೀಯ ಪ್ರವಾಸೋದ್ಯಮದ ಹಬ್ ಆಗಿ ಮಾಡುವ ಗುರಿಯನ್ನು ಈಗಿನ ಡಬಲ್ ಇಂಜಿನ್ ಸರ್ಕಾರ ಹೊಂದಿದೆ ಎಂದು ಅವರು ಹೇಳಿದ್ದಾರೆ.

ಕಾಡಾನೆ ದಾಳಿಗೆ ವಿದ್ಯಾರ್ಥಿನಿ ಬಲಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾಡುಪ್ರಾಣಿಗಳಿಗೆ ಮನುಷ್ಯರು ಬಲಿಯಾಗುತ್ತಿರುವ ಘಟನೆಗಳು ನಿರಂತರವಾಗುತ್ತಿದೆ. ಕಾಲೇಜು ವಿದ್ಯಾರ್ಥಿನಿಯೊಬ್ಬಳು ಕಾಡಾನೆ ದಾಳಿಗೆ ಅಸು ನೀಗಿದ ಮನಕಲಕುವ ಘಟನೆ ಇಲ್ಲಿಗೆ ಸಮೀಪದ ಬೆಟ್ಟತ್ತೂರು ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದೆ. ಕಾಲೇಜ್ ಬಿಟ್ಟು ಮನೆಗೆ ಮರಳುತ್ತಿದ್ದ, ಬೆಟ್ಟತ್ತೂರು ಗ್ರಾಮದ ಗಿರೀಶ್ ಎಂಬವರ ಪುತ್ರಿ, ಮಡಿಕೇರಿಯ ಸಂತ ಜೋಸೆಫರ ಶಾಲೆಯ



ಪ್ರಥಮ ಪಿಯುಸಿ ವಿದ್ಯಾರ್ಥಿನಿ ಪೂಜಾ (16) ಎಂಬಾಕೆಯೇ ಸಾವಿಗೀಡಾದ ಬಾಲಕಿ. ಶನಿವಾರ ಸಂಜೆ 5.30ರ ವೇಳೆಗೆ ಬಸ್‌ನಿಂದಿಳಿದು ಬೆಟ್ಟತ್ತೂರಿನ ತನ್ನ ಮನೆಗೆ ನಡೆದುಕೊಂಡು ಹೋಗುವ ವೇಳೆ ಏಕಾಏಕಿ ಕಾಡಾನೆ ದಾಳಿ ನಡೆಸಿದೆ. ದಾಳಿಯಿಂದ ತೀವ್ರವಾಗಿ ಗಾಯಗೊಂಡ ಪೂಜಾ ಸ್ಥಳದಲ್ಲೇ ಸಾವಿಗೀಡಾಗಿದ್ದಾಳೆ. ಘಟನೆಯ ಮಾಹಿತಿ ತಿಳಿದು ಸ್ಥಳೀಯರು ಹಾಗೂ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮಡಿಕೇರಿಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಯಿತು.

ಸುಪ್ರೀಂ ಲೀಡರ್ ಖಮೇನಿ ಖತಂ

ಪುಟ 1➜ ಈ ಮಧ್ಯೆ ಖಮೇನಿ ಸಾವು ಖಚಿತವಾಗುತ್ತಿದ್ದಂತೆ, ಇರಾನ್‌ನ ಕೆಲವೆಡೆ ಗಳಲ್ಲಿ ಜನ ಸಂತೋಷದಿಂದ ಕುಣಿದಾಡುತ್ತಿದ್ದರು. ಕಳೆದ ಕೆಲವು ತಿಂಗಳುಗಳಿಂದ ಭಾರೀ ಪ್ರತಿಭಟನೆಗಳಿಗೆ ಕಾರಣವಾಗಿದ್ದ ಇರಾನ್‌ನಲ್ಲಿ ಹಿಂಸಾಚಾರವೂ ಆಗಿತ್ತು. ಜನ ಖಮೇನಿ ವಿರುದ್ಧವೇ ತಿರುಗಿಬಿದ್ದಿದ್ದರು. ಇದರಿಂದಾಗಿ ಸಂಭ್ರಮಾಚರಣೆ ಮಾಡಿದ್ದಾರೆ ಎಂದು ಕೆಲವು ಸುದ್ದಿಸಂಸ್ಥೆಗಳು ವರದಿ ಮಾಡಿವೆ. ಜತೆಗೆ ಮಗಳು, ಅಳಿಯ, ಸೊಸೆ ಮತ್ತು ಮೊಮ್ಮಗ ಸೇರಿದಂತೆ ಖಮೇನಿಯ ಹಲವಾರು ಸಂಬಂಧಿಕರು ಸಹ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ದುಬೈ, ರಿಯಾದ್ ಮೇಲೆ ದಾಳಿ

ಅತ್ತ ತನ್ನ ಸರ್ವೋಚ್ಚನಾಯಕ ಖಮೇನಿ ಮೃತಪಟ್ಟಿದ್ದರೂ, ಇರಾನ್ ಕಡೆಯಿಂದ ದಾಳಿ ಮಾತ್ರ ನಿಂತಿಲ್ಲ. ಭಾನುವಾರ ಮಧ್ಯಾಹ್ನದ ಬಳಿಕ ಇಸ್ರೇಲ್ ರಾಜಧಾನಿ ಟೆಲ್ ಅವಿವ್ ಜತೆಗೆ, ದುಬೈ, ದೋಹಾ, ರಿಯಾದ್, ಅಬುದಾಬಿ ನಗರಗಳ ಮೇಲೆ ಇರಾನ್ ದಾಳಿ ಮುಂದುವರಿಸಿದೆ. ಖಮೇನಿ ಸಾವಿನ ಬಳಿಕ ಇರಾನ್‌ನ ರೆವೊಲ್ಯೂಷನರಿ ಗಾರ್ಡ್ ಪ್ರತೀಕಾರ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಿತ್ತು. ಇದರ ಬೆನ್ನಲ್ಲೇ ಭಾರೀ ಪ್ರಮಾಣದ ದಾಳಿ ನಡೆಸಿದೆ. ಇಸ್ರೇಲ್‌ನಲ್ಲಿ ಐದು ಮಂದಿ, ದುಬೈನಲ್ಲಿ ಪಾಕ್, ನೇಪಾಳ ಮತ್ತು ಬಾಂಗ್ಲಾದ ತಲಾ ಒಬ್ಬರು ಸತ್ತಿದ್ದಾರೆ. ದುಬೈ ಕಡೆಗೆ 165 ಕ್ಷಿಪಣಿಗಳು ಬಂದಿದ್ದು ಇದರಲ್ಲಿ 152 ಅನ್ನು ಧ್ವಂಸಗೊಳಿಸಲಾಗಿದೆ. ಹಾಗೆಯೇ, 541 ಡ್ರೋನ್‌ಗಳು ಬಂದಿದ್ದು, ಇವುಗಳಲ್ಲಿ 506 ಅನ್ನು ಗುರುತಿಸಿ ನಾಶ ಮಾಡಲಾಗಿದೆ.

ಇರಾನ್ ಪ್ರತೀಕಾರದ ಎಚ್ಚರಿಕೆ

ಪುಟ 1➜ಈ ಮಧ್ಯೆ, ಇರಾನ್‌ನಲ್ಲೂ ಅಮೆರಿಕ ಮತ್ತು ಇಸ್ರೇಲ್ ದಾಳಿಯಿಂದಾಗಿ 200ಕ್ಕೂ ಹೆಚ್ಚು ಮಂದಿ ಮೃತರಾಗಿದ್ದಾರೆ ಮತ್ತು ಸಾವಿರಾರು ಮಂದಿ ಗಾಯಗೊಂಡಿದ್ದಾರೆ ಎಂದು ಇರಾನ್‌ನ ರಾಜತಾಂತ್ರಿಕರು ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ಮಾಹಿತಿ ನೀಡಿದ್ದಾರೆ. ಉತ್ತರ ಟೆಹ್ರಾನ್‌ನ ಗುಪ್ತಚರ ಸಚಿವಾಲಯದ ಕಟ್ಟಡದ ಬಳಿ ಶನಿವಾರ ಸಂಜೆ ಕನಿಷ್ಠ ಮೂರು ಸ್ಫೋಟಗಳು ಕೇಳಿಬಂದಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮಧ್ಯ ಇರಾನ್‌ನಲ್ಲಿ ಕ್ಷಿಪಣಿ ಲಾಂಚರ್‌ಗಳು ಮತ್ತು ವೈಮಾನಿಕ ರಕ್ಷಣಾ ವ್ಯವಸ್ಥೆಗಳ ವಿರುದ್ಧ ಹೊಸ ದಾಳಿಗಳನ್ನು ಪ್ರಾರಂಭಿಸಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ದಕ್ಷಿಣ ಇರಾನ್ ನಲ್ಲಿ, ಬಾಲಕಿಯರ ಶಾಲೆ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 115 ಜನರು ಮೃತಪಟ್ಟಿದ್ದಾರೆ.ಖಮೇನಿ ಅವರ ಸಾವಿನ ನೆನಪಿಗಾಗಿ ಇರಾನ್ ಸರ್ಕಾರ 40 ದಿನಗಳ ಸಾರ್ವಜನಿಕ ಶೋಕಾಚರಣೆ ಮತ್ತು ಏಳು ದಿನಗಳ ರಾಷ್ಟ್ರವ್ಯಾಪಿ ಸಾರ್ವಜನಿಕ ರಜಾದಿನವನ್ನು ಘೋಷಿಸಿದೆ.

ನನ್ನ ಧರ್ಮ ಸರಿ, ನಿನ್ನ ಧರ್ಮ ತಪ್ಪು ಎನ್ನುವ ಕಲ್ಪನೆ ಇಲ್ಲ

ಚಿಕ್ಕಮಗಳೂರು: ಧರ್ಮ, ಪೂಜೆ, ಭಕ್ತಿ ಇವು ಪ್ರದರ್ಶನಕ್ಕೆ ಇರುವಂತಹ ಸಂಗತಿಗಳಲ್ಲ. ಇವು ಮನುಷ್ಯನ ಆತ್ಮವಿಶ್ವಾಸವನ್ನು ಹೆಚ್ಚಿಸಲು ಇರುವ ಸಾಧನಗಳು. ನನ್ನ ಧರ್ಮ ಸರಿ, ನಿನ್ನ ಧರ್ಮ ತಪ್ಪು ಎನ್ನುವ ಕಲ್ಪನೆ ಎಲ್ಲಿಯೂ ಇಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಭಿಪ್ರಾಯಪಟ್ಟರು.

ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರಿನಲ್ಲಿ ಜಗದ್ಗುರು ರಂಭಾಪುರಿ ಪೀಠದ ಆವರಣದಲ್ಲಿ 51 ಅಡಿ ಎತ್ತರದ ಜಗದ್ಗುರು ಶ್ರೀ ರೇಣುಕಾಚಾರ್ಯರ ಪ್ರತಿಮೆ ಪ್ರತಿಷ್ಠಾಪನೆ ಶಿಲಾನ್ಯಾಸ ಕಾರ್ಯಕ್ರಮ ಹಾಗೂ ಮೇಲ್ಸಾರ್ ರಸ್ತೆಯ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಮ್ ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ. ಅಂದರೆ ಎಷ್ಟೇ ದೇವರಿಗೆ ನಮಸ್ಕಾರ ಮಾಡಿದರೂ ಸಹ ಅದು ಒಂದೇ ದೇವರಿಗೆ ತಲುಪುತ್ತದೆ, ಎಷ್ಟೇ ನದಿಗಳಿದ್ದರೂ ಅವು ಸೇರುವುದು ಒಂದೇ ಸಾಗರಕ್ಕೆ. ಶಿವನ ಲಿಂಗಕ್ಕೆ ಇದೇ ಆಕಾರ ಎಂಬುದು ಇಲ್ಲ. ಇಲ್ಲಿ ಇರುವುದು ನಮ್ಮ ಭಕ್ತಿ ಎಂದು ಹೇಳಿದರು. ಒಕ್ಕಲಿಗನಾಗಿ ಗಂಗಾಧರ ಅಜ್ಜಯ್ಯ ಅವರ ಹೆಸರಿನಲ್ಲಿ ನೀನು ಏಕೆ ಪ್ರಮಾಣ ವಚನ ಸ್ವೀಕಾರ ಮಾಡಿದೆ ಎಂದು ಕೇಳಿದರು. ಆದಕ್ಕೆ ನಾನು ಇದು ನನ್ನ ನಂಬಿಕೆ ಎಂದು ಹೇಳಿದೆ. ಅವರು ನನಗೆ ಆತ್ಮಬಲವನ್ನು ತುಂಬಿದ್ದಾರೆ. ರಂಭಾಪುರಿ ಶ್ರೀಗಳು ನನಗೆ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ ಎಂದರು. ಅಜ್ಜಯ್ಯ ಅವರು ನನಗೆ ನೀಡಿದ ಸಾಕ್ಷಾತ್ಕಾರವನ್ನ



ಬಹಿರಂಗ ಮಾಡಲು ಆಗುವುದಿಲ್ಲ. ಸಮಯ ಬಂದಾಗ ಪುಸ್ತಕ ರೂಪದಲ್ಲಿ ಹೊರತರುತ್ತೇನೆ ಎಂದರು. ಎನ್ನ ಪರಮಗುರು ನೀವೇ, ಎನ್ನ ಗತಿ ಮತಿ ನೀವೇ, ಎನ್ನ ಅರಿವಿನ ಜ್ಯೋತಿ ನೀವೇ, ಎನ್ನ ಅಂತರಂಗ ಬಹಿರಂಗ ನೀವೇ ಕೂಡಲಸಂಗಮದೇವಾ ಎಂದು ಬಸವಣ್ಣ ಹೇಳುತ್ತಾರೆ. ಅಂದರೆ ಗುರುವಿಲ್ಲದೇ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದರು.

ರಂಭಾಪುರಿ ಮಠದ ಭವನಕ್ಕೆ 5 ಕೋಟಿ ರೂಪಾಯಿ: ರಂಭಾಪುರಿ ಶ್ರೀಗಳು ನಿಂತು ಹೋಗಿದ್ದ ಭವನಕ್ಕೆ ನೀವು ಸಹಾಯ ಮಾಡಬೇಕು ಎಂದು ಹೇಳಿದ್ದರು. ನಾನು ಈ ಹಿಂದೆ ಸ್ವಲ್ಪ ಅಡಚಣೆಗಳಿವೆ ಎಂದು ತಡೆಯಲು ಹೇಳಿದ್ದೆ. ಈಗ ಸಮಯ ಒದಗಿ ಬಂದಿದೆ. 5 ಕೋಟಿ ರೂಪಾಯಿಗಳನ್ನು ನೀಡಲಾಗುವುದು. ನಾನೇ ಖುದ್ದಾಗಿ ಬಂದು ಅದನ್ನು ಉದ್ಘಾಟನೆ ಮಾಡುತ್ತೇನೆ ಎಂದು ಹೇಳಿದರು.

ದುಷ್ಟ ಶಕ್ತಿಗಳ ವಿರುದ್ಧ ಸಮಾಜ ಒಂದಾಗಬೇಕು : ವಿಜಯೇಂದ್ರ

ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವೀರಶೈವ ಲಿಂಗಾಯತ ಸಮಾಜ ಜಾಗೃತಿಯಾಗಬೇಕಾದ ಅಗತ್ಯವಿದೆ, ಕೆಲವು ದುಷ್ಟ ಶಕ್ತಿಗಳು ಸಮಾಜವನ್ನು ಒಡೆದು ಆಳುವ ನೀತಿಯನ್ನ ಅನುಸರಿಸುತ್ತಿವೆ. ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳಪಂಗಡಗಳು ವ್ಯತ್ಯಾಸಗಳನ್ನು ಮರೆತು ಒಟ್ಟಾಗಿ, ಒಂದಾಗಿ ಒಟ್ಟುಗೂಡಿ ಕಾರ್ಯ ನಿರ್ವಹಿಸಬೇಕಾದ ಅನಿವಾರ್ಯವಿದೆ. ಎಲ್ಲಾ ಸಮಾಜಗಳಿಗೆ ನೆರಳು ಹಾಗೂ ಆಶ್ರಯ ನೀಡುವ ಶಕ್ತಿ ವೀರಶೈವ ಲಿಂಗಾಯತ ಸಮಾಜಕ್ಕಿದೆ ಎಂದರು. ಬಿ.ಎಸ್ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ವೀರಶೈವ ಲಿಂಗಾಯತ ಮಠಗಳಲ್ಲದೆ ರಾಜ್ಯದಲ್ಲಿರುವ ಎಲ್ಲಾ ಸಮಾಜದ ಮಠಮಾನ್ಯಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡಿದರು, ಕಾರಣ ಎಲ್ಲಾ ಮಠಮಾನ್ಯಗಳು ಸಮಾಜದ ಮಕ್ಕಳಿಗೆ ಅಕ್ಷರದಾಸೋಹ, ಅನ್ನದಾಸೋಹ ಹಾಗು ಜ್ಞಾನ ದಾಸೋಹ ನೀಡುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡುತ್ತಿವೆ ಎಂದು ಶ್ಲಾಘಿಸಿದರು.

ಸಂಸ್ಕೃತದಿಂದ ಧಾರ್ಮಿಕ ಅಲ್ಗಾರಿದಮ್: ಮುಕುಂದ

• ಬೆಂಗಳೂರು: ಯುಗಧರ್ಮ ಅಥವಾ ಯುಗಾನುಕೂಲ ಪರಿವರ್ತನೆಗೆ ಆಚಾರ್ಯ ರಾಮಚಂದ್ರ ಭಟ್ಟ ಕೋಟೆಮನೆ ಅವರು ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ. ಮುಂದಿನ ಪೀಳಿಗೆಗೆ ಅನೇಕ ಕೊಡುಗೆಗಳನ್ನು ಕೊಟ್ಟಿದ್ದಾರೆ ಎಂದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಸಹಸರಕಾರ್ಯವಾಹ ಮುಕುಂದ ಸಿ.ಆರ್. ಅಭಿಪ್ರಾಯಪಟ್ಟಿದ್ದಾರೆ.

ಚನ್ನೇನಹಳ್ಳಿಯ ಜನಸೇವಾ ಟ್ರಸ್ಟ್‌ನ ವೇದ ವಿಜ್ಞಾನ ಗುರುಕುಲಮ್ ಆವರಣದಲ್ಲಿ ವೇದ ವಿಜ್ಞಾನ ಶೋಧ ಸಂಸ್ಥಾನಮ್ ಟ್ರಸ್ಟ್, ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ ತ್ರಿವಾತ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದಿನಚರ್ಯ, ಅಧ್ಯಾಪನ, ನಡವಳಿಕೆ, ಮೌಲ್ಯಗಳು ಎಲ್ಲವನ್ನು ಅವರು ಸ್ವಂತ ಪರಿಶ್ರಮದಿಂದ ನಿರ್ಮಾಣ ಮಾಡಿದ್ದಾರೆ. ಪ್ರಾಚೀನ ಗುರುಕುಲ ಪದ್ಧತಿ ಈಗಿನ ಆಧುನಿಕ ಕಾಲಕ್ಕೆ ಹೇಗಿರಬೇಕೆಂದು ರೂಪಿಸಿದ್ದಾರೆ. ಗುರುಶಿಷ್ಯ ಪರಂಪರೆಯನ್ನು ಕೇವಲ ಗುರುಕುಲದಲ್ಲಿ ಸ್ಥಾಪಿಸಿರುವುದಲ್ಲ. ಇದನ್ನು ಎಲ್ಲಿ ಬೇಕಾದರೂ ತೆಗೆದುಕೊಂಡು ಹೋಗಬಹುದಾದ ಮಾದರಿಯಲ್ಲಿ ರೂಪಿಸಲಾಗಿದೆ ಎಂದು ವಿವರಿಸಿದರು.

ಕೃತಕ ಬುದ್ಧಿಮತ್ತೆ (ಎಐ)ಯಲ್ಲಿ ಬಹಳಷ್ಟು ಪ್ರಗತಿಯಾಗುತ್ತಿದೆ. ಸಂಸ್ಕೃತ ಮತ್ತು ಜರ್ಮನಿ ಈ ಎರಡು ಭಾಷೆಗಳ ವ್ಯಾಕರಣದಲ್ಲಿ ತುಂಬಾ ಸಾಮ್ಯವಿದೆ. ಆದ್ದರಿಂದ ಈ ಎರಡು ಭಾಷೆಗಳಲ್ಲಿ ಅಲ್ಗಾರಿದಮ್ (ಕ್ರಮಾವಳಿ) ಬರೆಯುವುದು ಮತ್ತು ಈ ಎರಡು ಭಾಷೆಗಳನ್ನು ಗೊತ್ತಿಲ್ಲದೇ ಇರುವವರು ಕ್ರಮಾವಳಿ ಬರೆಯುವುದು. ಎರಡರ ತೌಲನಿಕ ಅಧ್ಯಯನ ನಡೆಸಲಾಗುತ್ತಿದೆ. ಬೇರೆ ಭಾಷೆಯ ಮನಸ್ಥಿತಿಯ ಆಧಾರದಲ್ಲಿ ಅಲ್ಗಾರಿದಮ್ ಬರೆದರೆ ಧಾರ್ಮಿಕ ಪ್ರಜ್ಞೆ ಇರುವುದಿಲ್ಲ. ಸಂಸ್ಕೃತದಲ್ಲಿ ರಚಿಸುವ ಕ್ರಮಾವಳಿಗೆ ಧಾರ್ಮಿಕ ಮುಖವಿದೆ. ಇದನ್ನು ಧಾರ್ಮಿಕ ಅಲ್ಗಾರಿದಮ್ ಎಂದು ಕರೆಯಲಾಗುತ್ತಿದೆ. ಎಂದು ಮುಕುಂದ ಅವರು ವಿವರಿಸಿದರು. ಇವತ್ತಿನ ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಎಲ್ಲವೂ ಬೆಳೆಯುತ್ತಿದ್ದಂತೆ ಧಾರ್ಮಿಕ ಪ್ರಜ್ಞೆಯ ಅವಶ್ಯಕತೆ ಹೆಚ್ಚು ಇದೆ. ಆಧುನಿಕ ತಂತ್ರಜ್ಞಾನ ಬೇಕು. ಅದರೊಳಗೆ ಧಾರ್ಮಿಕತೆಯ ದೃಷ್ಟಿ ಇರಬೇಕು. ಇಂತಹ ಯುಗಧರ್ಮದ ವಿಶಿಷ್ಟತೆ ಭಾರತೀಯ ದೃಷ್ಟಿಯಿಂದ ಜಗತ್ತಿಗೆ ಕೊಡಬಹುದಾದ ಕೊಡುಗೆಯನ್ನು ರಾಮಚಂದ್ರ ಭಟ್ಟ ಅವರು ಉಳಿಸಿ ಬೆಳೆಸಿದ್ದಾರೆ ಎಂದು ಹೇಳಿದರು.

ಈಗ ಘೋಷಣೆಯಾಗಿರುವ ಅಮೃತಕಾಲದಲ್ಲಿ ನಾವು ವಿಕಾಸ ಮಾರ್ಗದಲ್ಲಿ ಸಾಗಬೇಕು. ಅದರಲ್ಲಿ ಗುರುಕುಲ ಶಿಕ್ಷಣ ಬಹಳ ಮಹತ್ವವನ್ನು ಪಡೆಯುತ್ತದೆ. ಭಾರತೀಯ ಪರಂಪರೆ, ಸಂಸ್ಕೃತ ಪರಂಪರೆ, ಶಾಸ್ತ್ರ ಪರಂಪರೆಯು ಮಹತ್ವಪೂರ್ಣವಾಗಿದೆ. ಸಂಸ್ಕೃತ ಎಂದರೆ ಕೇವಲ ಭಾಷೆಯಲ್ಲ, ವೇದದ ಮಂತ್ರ ಉಚ್ಚಾರಣೆಯಿಂದ ಅಂತರಿಕ್ಷದಲ್ಲಿ ಏನು ಪ್ರಭಾವವಾಗುತ್ತದೆ ಎನ್ನುವ ಅಧ್ಯಯನ ಮಾಡಲಾಗುತ್ತಿದೆ. ಸಂಸ್ಕೃತವು ವಿಶ್ವ ಕಲ್ಯಾಣಕ್ಕೆ, ಮಾನವನ ಸ್ವಾಸ್ಥ್ಯಕ್ಕೆ, ಬ್ರಹ್ಮಾಂಡ ಮತ್ತು ಪಿಂಡಾಂಡಗಳ ಶುದ್ಧೀಕರಣಕ್ಕೆ ಸಾಧನವಾಗುತ್ತಿದೆ ಎಂಬುದನ್ನು ಅತ್ಯಾಧುನಿಕ ತಂತ್ರಜ್ಞಾನ ಇಂದು ಸಿದ್ಧಪಡಿಸುತ್ತಿದೆ ಎಂದು ವಿವರಿಸಿದರು.

ಇದೇ ವೇಳೆ ಆಚಾರ್ಯ ಡಾ. ರಾಮಚಂದ್ರ ಭಟ್ಟ ಕೋಟೆಮನೆ ಅವರ ರಚಿಸಿದ 11 ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಸ್ವಾಮಿ ಆತ್ಮಪ್ರಿಯಾನಂದ, ಆರ್‌ಎಸ್‌ಎಸ್ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಸುರೇಶ್ ಸೋನಿ, ಡಾ. ಎಚ್.ಆರ್. ನಾಗೇಂದ್ರ, ಯಜ್ಞೇಶ್ವರ ಶಾಸ್ತ್ರೀ, ಕುಟುಂಬ ಶಾಸ್ತ್ರೀ ಮಾತನಾಡಿದರು. ಜನಸೇವಾ ಟ್ರಸ್ಟ್ ಗೌರವ ಕಾರ್ಯದರ್ಶಿ ಆ.ಸಾ. ನಿರ್ಮಲಕುಮಾರ್ ವೇದಿಕೆಯಲ್ಲಿದ್ದರು.

ಸವಾಲಿನ ಪ್ರಯೋಗ

ಅಭಿವಾದನವನ್ನು ಸ್ವೀಕರಿಸಿದ ಆಚಾರ್ಯ ರಾಮಚಂದ್ರ ಭಟ್ಟ ಕೋಟೆಮನೆ ಮಾತನಾಡಿ, ಗುರುಕುಲದಲ್ಲಿ ಪ್ರಯೋಗ, ಪರಿಶೀಲನಾ ಮತ್ತು ಪರಿಷ್ಕಾರ ಎಂಬ ಸೂತ್ರ ಇಟ್ಟುಕೊಂಡಿದ್ದೇವೆ. ಈಗಿನ ಕಾಲದಲ್ಲಿ ಗುರುಕುಲ ಎಂಬುದು ಬಹಳ ಸವಾಲಿನ ಪ್ರಯೋಗವಾಗಿದೆ. ದಿನದ 24 ತಾಸು ವಿದ್ಯಾರ್ಥಿಗಳೊಂದಿಗೆ ಗುರುಕುಲದಲ್ಲಿ ಸಹವಾಸದಲ್ಲಿರುತ್ತೇವೆ. ಕೋವಿಡ್ ಬಂದಾಗಲೇ ಯುವ ಮಾನಸದಲ್ಲಿ ಪ್ರತ್ಯಕ್ಷ ಶಿಕ್ಷಣದ ಬಗ್ಗೆ ಗೌರವ ಉಳಿದಿಲ್ಲ. ಈಗ ಎಐ ಬರುತ್ತಿದೆ. ಹೀಗಿರುವಾಗ ಸಹವಾಸದಲ್ಲಿ ಯುವ ಮಾನಸವನ್ನು ತಿದ್ದುವ, ಅದನ್ನು ಉದಾರೀಕರಿಸುವ ಬಹುದೊಡ್ಡ ಸವಾಲು ಗುರುಕುಲದ್ದಾಗಿದೆ ಎಂದು ಹೇಳಿದರು.

ಮ್ಯಾರಥಾನ್ ಓಟ



ಮೈಸೂರು ಅರಮನೆ ಆವರಣದಲ್ಲಿ ಭಾನುವಾರ ನಡೆದ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಮ್ಯಾರಥಾನ್ ಓಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹಾದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಶ್ರೀವತ್ಸ ಹಾಗೂ ನಟ ವಿನಯ್ ರಾಜಕುಮಾರ್ ಭಾಗವಹಿಸಿದ್ದರು.

ಕಿರುಸುದ್ದಿ

ಪ್ರಾಚಾರ್ಯರಿಗೆ ಡಿಡಿಪಿಯು ನೋಟಿಸ್

• ಚಿತ್ರದುರ್ಗ: ದ್ವಿತೀಯ ಪಿಯುಸಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳಿಗೆ ಶುಭ ಹಾರೈಸಲು ಕಾಲೇಜಿನ ಬಳಿ ಸಂಸದ ಕಾರಜೋಳ ಭೇಟಿ ನೀಡಿದ ಕಾರಣ, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ನೋಟಿಸ್ ಜಾರಿ ಮಾಡಿದ್ದಾರೆ. ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ಪಿಯುಸಿ ಪರೀಕ್ಷೆ ಸಂಬಂಧ ಮಕ್ಕಳಿಗೆ ಧೈರ್ಯ ತುಂಬಿ ಶುಭಕೋರಲು ಸಂಸದ ಗೋವಿಂದ ಕಾರಜೋಳ ಅವರು ಅಲ್ಲಿಗೆ ಭೇಟಿ ನೀಡಿದ್ದರು. ಈ ಸಂಬಂಧ ಕಾಲೇಜಿನ ಪ್ರಾಚಾರ್ಯ ಎನ್.ದೊಡ್ಡಪ್ಪ ಅವರಿಗೆ ನೋಟೀಸ್ ನೀಡಲಾಗಿದೆ. ಸಂಸದ ಗೋವಿಂದ ಕಾರಜೋಳ ಮತ್ತವರ ಬೆಂಬಲಿಗರು ಹಾಗೂ ಮಾಧ್ಯಮದವರು ಕಾಲೇಜು ಆವರಣಕ್ಕೆ ಆಗಮಿಸಿದ್ದು, ಪರೀಕ್ಷಾ ನಿಯಮಾವಳಿಗಳ ಉಲ್ಲಂಘನೆಯಾಗಿದೆ. ಇದರಿಂದ ಇಲಾಖೆಗೆ ಮುಜುಗರ ಉಂಟಾಗಿದೆ. ಹಾಗಾಗಿ ಪ್ರಾಚಾರ್ಯರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತು ಕಾರಣ ಕೇಳಿ ನೋಟೀಸ್ ನೀಡಲಾಗಿದೆ. ಪರೀಕ್ಷಾ ಕೇಂದ್ರದ ಬಳಿ ನಿಷೇಧಾಜ್ಞೆ ಇದ್ದಾಗ್ಯೂ ಅನಧಿಕೃತ ಪ್ರವೇಶ ಮಾಡಲಾಗಿದೆ ಎಂಬ ಕಾರಣ ಇಟ್ಟುಕೊಂಡು ಪ್ರಾಂಶುಪಾಲರಿಗೆ ನೋಟೀಸ್ ನೀಡಲಾಗಿದೆ. ಈ ಕುರಿತು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆ ಕೇಳಿಬಂದಿದೆ. ಜನಪ್ರತಿನಿಧಿಗಳು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಬಾರದೆ? ಪರೀಕ್ಷೆ ಬರೆಯುವ ಮಕ್ಕಳಿಗೆ ಧೈರ್ಯ ತುಂಬುವ ನಿಟ್ಟಿನಲ್ಲಿ ಭೇಟಿ ನೀಡಿದ್ದರಲ್ಲಿ ತಪ್ಪೇನಿದೆ? ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿವೆ.

ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಬದ್ಧ: ಎಂಬಿ ಪಾಟೀಲ



ವಿಜಯಪುರ (ಆಲಮಟ್ಟಿ): ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಯೋಜನೆ ಅನುಷ್ಠಾನಕ್ಕೆ ನಮ್ಮ ಸರಕಾರ ಬದ್ಧವಾಗಿದ್ದು, ಯಾವುದೇ ಕಾರಣಕ್ಕೂ ಈ ಯೋಜನೆ ಅನುಷ್ಠಾನ ಮುಂದೂಡದೇ ಬರುವ ಎರಡ್ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಬೃಹತ್, ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಡಾ.ಎಂ.ಬಿ. ಪಾಟೀಲ ಹೇಳಿದರು. ಜಲಸಂಪನ್ಮೂಲ ಇಲಾಖೆ, ಕೃಷ್ಣಾ ಭಾಗ್ಯ ಜಲ ನಿಗಮದ ಸಹಯೋಗದಲ್ಲಿ ಭಾನುವಾರ ಆಲಮಟ್ಟಿಯಲ್ಲಿ ನಿರ್ಮಾಣವಾದ ಜಲ ಮನೋರಂಜನಾ ಉದ್ಯಾನವನ ಉದ್ಘಾಟಿಸಿ ಅವರು ಮಾತನಾಡಿದರು. ಆಲಮಟ್ಟಿ ಅಣೆಕಟ್ಟನ್ನು 524 ಮೀಟರ್‌ವರೆಗೆ ಎತ್ತರಿಸಲು ಸರ್ಕಾರ ಬದ್ಧವಾಗಿದೆ. ಜಲಾಶಯವನ್ನು ಎತ್ತರಿಸುವುದರಿಂದ 75 ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆ. 20 ಹಳ್ಳಿಗಳು ಸ್ಥಳಾಂತರಗೊಳ್ಳುತ್ತವೆ. ಈ ಬೃಹತ್ ಯೋಜನೆ ಅನುಷ್ಠಾನಕ್ಕೆ ದೊಡ್ಡ ಪ್ರಮಾಣದ ಅನುದಾನ ಬೇಕಾಗುತ್ತದೆ ಇದನ್ನು ಅವಳಿ ಜಿಲ್ಲೆಯ ಜನಪ್ರತಿನಿಧಿಗಳೆಲ್ಲ ಸೇರಿ, ಸಚಿವ ಸಂಪುಟದಲ್ಲಿ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಯಾವುದೇ ಕಾರಣಕ್ಕೂ ಈ ಯೋಜನೆ ಮುಂದೂಡಲಿಕ್ಕಾಗಲ್ಲ ಎಂಬ ಬೇಡಿಕೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾಗಿ ಸಚಿವರು ತಿಳಿಸಿದರು.

ಇರಾನ್ ಮೇಲೆ ಅಮೆರಿಕ–ಇಸ್ರೇಲ್ ದಾಳಿ | ವಿಮಾನ ಸಂಚಾರದಲ್ಲಿ ವ್ಯತ್ಯಯ

ಕನ್ನಡಿಗರಿಗೂ ತಟ್ಟಿದ ಯುದ್ಧದ ಬಿಸಿ



• ಬೆಂಗಳೂರು: ಇರಾನ್ ಮತ್ತು ಇಸ್ರೇಲ್ ನಡುವಿನ ಉದ್ವಿಗ್ನತೆಯಿಂದ ಮಧ್ಯಪ್ರಾಚ್ಯದ ಹಲವು ದೇಶಗಳಿಗೆ ವ್ಯಾಪಿಸಿದ್ದು, ಭದ್ರತಾ ಆತಂಕ ಹೆಚ್ಚಿಸಿದೆ. ವಿಮಾನ ಸಂಚಾರದಲ್ಲಿ ವ್ಯತ್ಯಯದ ಪರಿಣಾಮವಾಗಿ ದುಬೈ, ಬಹ್ರೇನ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇರಾನ್–ಇಸ್ರೇಲ್ ಯುದ್ಧದ ಪರಿಣಾಮವಾಗಿ ಮಧ್ಯಪ್ರಾಚ್ಯದ ಹಲವು ರಾಷ್ಟ್ರಗಳಲ್ಲಿ ಭಯ ಮತ್ತು ಆತಂಕದ ವಾತಾವರಣ ನಿರ್ಮಾಣವಾಗಿದೆ. ವಿಶೇಷವಾಗಿ ಬಹ್ರೇನ್ ಮತ್ತು ದುಬೈ ನಗರಗಳು ಭದ್ರತಾ ಕ್ರಮಗಳು ಕಠಿಣಗೊಂಡಿದ್ದು, ವಿಮಾನ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಈ ಬೆಳವಣಿಗೆಯಿಂದಾಗಿ ವಿದೇಶ ಪ್ರವಾಸದಲ್ಲಿದ್ದ ಮತ್ತು ಉದ್ಯೋಗ ನಿಮಿತ್ತ ತೆರಳಿದ್ದ ಅನೇಕ ಕನ್ನಡಿಗರು ಅಲ್ಲಿ ಸಿಲುಕಿಕೊಂಡಿದ್ದಾರೆ.

ಬಹ್ರೇನ್ ರಾಜಧಾನಿ ಮನಾಮಾ ನಗರದಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಅಂಗಡಿಹಳ್ಳಿ ಗ್ರಾಮದ ಪಂಜು, ಜಮುನ, ಸುರೇಂದ್ರ ಪ್ರಸಾದ್, ರತೀಶ್ ಹಾಗೂ ಮೈಸೂರು ಮೂಲದ ನೇತ್ರಾವತಿ ಸೇರಿದಂತೆ ಒಟ್ಟು ಆರು ಮಂದಿ ಕನ್ನಡಿಗರು ಸಿಲುಕಿದ್ದಾರೆ. ತಾವು ವಾಸಿಸುತ್ತಿರುವ ಕಟ್ಟಡದ ಪಕ್ಕದಲ್ಲೇ ಬಾಂಬ್ ಸ್ಫೋಟವಾಗುತ್ತಿರುವುದಾಗಿ ಅವರು ತಿಳಿಸಿದ್ದು, ಅವರ ಕುಟುಂಬಸ್ಥರು ತೀವ್ರ ಆತಂಕದಲ್ಲಿದ್ದಾರೆ. ತಮ್ಮವರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅವರು ಮನವಿ ಮಾಡಿದ್ದಾರೆ.

ಶಾಸಕ ನಾರಾ ಭರತ್ ರೆಡ್ಡಿ ಪರದಾಟ!

ದುಬೈನಲ್ಲಿ ಕೂಡ ಪರಿಸ್ಥಿತಿ ಉದ್ವಿಗ್ನವಾಗಿದ್ದು, ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಪ್ರವಾಸದ ವೇಳೆ ಅಲ್ಲೇ ಸಿಲುಕಿಕೊಂಡಿದ್ದಾರೆ. ಅವರು ಉಳಿದಿದ್ದ ಹೋಟೆಲ್ ಸಮೀಪ ಮಿಸೈಲ್ ದಾಳಿ ನಡೆದಿದ್ದು, ಅವರು ಸುರಕ್ಷಿತವಾಗಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ಶಾಸಕ ಬಿ. ನಾಗೇಂದ್ರ ಅವರು ಮುಖ್ಯಮಂತ್ರಿ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರೊಂದಿಗೆ ಮಾತನಾಡಿ ದುಬೈನಲ್ಲಿ ಸಿಲುಕಿರುವ ಜನರ ಕುರಿತು ಮಾಹಿತಿ ನೀಡಿದ್ದಾರೆ. ಮಾರ್ಚ್ 2ರವರೆಗೆ ವಿಮಾನ ಹಾರಾಟ ಇರುವುದಿಲ್ಲವೆಂದು ತಿಳಿಸಲಾಗಿದೆ. ಬಳ್ಳಾರಿಯಿಂದ ಫೆಬ್ರವರಿ 24ರಂದು ದುಬೈ ಪ್ರವಾಸಕ್ಕೆ ತೆರಳಿದ್ದ 35 ಮಂದಿ ಪ್ರವಾಸಿಗರು ವಾಪಸ್ಸಾಗಬೇಕಿದ್ದ ವೇಳೆಯಲ್ಲಿ ಯುದ್ಧ ಭೀತಿ ಹಿನ್ನೆಲೆಯಲ್ಲಿ ಅಲ್ಲೇ ಉಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದೇ ರೀತಿ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ಒಟ್ಟು 50 ಮಂದಿ ಪ್ರವಾಸಿಗರು ವಿಮಾನ ರದ್ದಾದ ಪರಿಣಾಮ ಸಂಕಷ್ಟ ಅನುಭವಿಸುತ್ತಿದ್ದಾರೆ.

ದುಬೈನಲ್ಲಿ ಸಿಲುಕಿದ ಕೋಲಾರದ ದಂಪತಿ



ಕೋಲಾರ ನಗರದ ವಿಜಯ ಮೆಡಿಕಲ್ಸ್‌ನ ಮಾಲೀಕ ಮೋಹನ್–ರಮಣಿ ದಂಪತಿಯೇ ದುಬೈನಲ್ಲಿ ಸಿಲುಕಿಕೊಂಡವರಾಗಿದ್ದು, ಇವರು ದುಬೈ ಪ್ರವಾಸಕ್ಕೆ ತೆರಳಿದ್ದು, ದಂಪತಿ 6 ದಿನಗಳ ಪ್ರವಾಸಕ್ಕೆಂದು ಸಾಯಿ ಟ್ರಾವೆಲ್ಸ್‌ನ ಪ್ಯಾಕೇಜ್ ಟ್ರಿಪ್‌ನಲ್ಲಿ ತೆರಳಿದ್ದರು ಎನ್ನಲಾಗಿದೆ.

ಬಾಗಲಕೋಟೆ ವಿದ್ಯಾರ್ಥಿಗಳು ಸುರಕ್ಷಿತ





ಬಾಗಲಕೋಟೆ (ಬೀಳಗಿ): ಇರಾನ್–ಅಮರಿಕಾ–ಇಸ್ರೇಲ್–ದುಬೈ ಯುದ್ಧದ ಕರಿನೆರಳಿನಲ್ಲಿ ಇಬ್ಬರು ಬಾಗಲಕೋಟೆ ಜಿಲ್ಲೆಯರ ಯಾವುದೇ ಭಯ ಇಲ್ಲದೆ ಸುರಕ್ಷಿತರಾಗಿದ್ದಾರೆ. ಜಿಲ್ಲೆಯ ಬೀಳಗಿ ಪಟ್ಟಣದ ನಿವಾಸಿಯಾಗಿರುವ ಗಿರೀಶ ಕೆರೂರ. ಸಾಫ್ಟವೇರ್ ಉದ್ಯೋಗಿಯಾಗಿರುವ ಇವರು ಬೆಂಗಳೂರಿಂದ ದುಬೈ ಮಾರ್ಗವಾಗಿ ಪ್ಯಾರಿಸ್‌ಗೆ ಹೊರಟಿದ್ದರು. ವಿಮಾನ ಹಾರಾಟ ರದ್ದುಗೊಂಡ ಪರಿಣಾಮ ಪ್ಯಾರಿಸ್‌ಗೆ ತೆರಳು ಸಾಧ್ಯವಾಗದೇ ದುಬೈನ ಅಬುದಾಬಿಯಲ್ಲಿ ಸಿಲುಕಿದ್ದಾರೆ. ಬಾಗಲಕೋಟೆ ನಗರ ಮೂಲದ ಮತ್ತೊಬ್ಬ ಧ್ರುವ ಹೊಕ್ರಾಣಿ ಎಂಬಿಎ ವಿದ್ಯಾರ್ಥಿ ದುಬೈನ ಮಿಡಲೇಸ್ಕ್ಸ ಯೂನಿವರ್ಸಿಟಿಯಲ್ಲಿ ಓದುತ್ತಿದ್ದಾರೆ. ಬಾಗಲಕೋಟೆ ವಿದ್ಯಾರ್ಥಿ ವಿಡಿಯೊ ಕರೆ ಮೂಲಕ ಪೋಷಕರ ಜೊತೆ ಮಾತಾಡಿದ ಧ್ರುವ ಹೊಕ್ರಾಣಿ, ಇಲ್ಲಿ ಯಾವುದೇ ತೊಂದರೆಯಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಸುಮ್ನೆ ಹೈಪ್ ಆಗಿದೆ. ಆದರೆ ಯಾವುದೇ ಆತಂಕ ಪಡುವ ಅಗತ್ಯ ಇಲ್ಲ ಅಂತ ತಿಳಿಸಿದ್ದಾರೆ.

ದುಬೈನಲ್ಲಿ ಸಿಲುಕಿದ ಮನ್ ಮುಲ್ ನಿರ್ದೇಶಕ ಕೆ.ರವಿ

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಮನ್ ಮುಲ್ ನಿರ್ದೇಶಕ ಕೆ.ರವಿ(ಡಾಲು ರವಿ) ದುಬೈನಲ್ಲಿ ಸಿಲುಕಿದ್ದಾರೆ.ಕಳೆದ ವಾರ ದುಬೈನಲ್ಲಿ ಸಂಗಟನೆಯೊಂದು ಆಯೋಜಿಸಿದ್ದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಡಾಲು ರವಿ ದುಬೈಗೆ ತೆರಳಿದ್ದರು. ಕಾರ್ಯಕ್ರಮ ಮುಗಿಸಿ ಅವರು ಸ್ವದೇಶಕ್ಕೆ ಹಿಂತಿರಬೇಕಾಗಿತ್ತು. ದುಬೈನಿಂದ ತಮ್ಮ ಕುಟುಂಬಸ್ಥರಿಗೆ ಕರೆ ಮಾಡಿರುವ ಡಾಲು ರವಿ ತಾವು ದುಬೈನ ಖಾಸಗಿ ಹೋಟೆಲ್ ಒಂದರಲ್ಲಿದ್ದು ಕ್ಷೇಮವಾಗಿದ್ದೇನೆ. ನಾನಿರುವ ಜಾಗದಲ್ಲಿ ಸಧ್ಯಕ್ಕೆ ಯಾವುದೇ ಸಮಸ್ಯೆಯಿಲ್ಲ. ನನ್ನಂತೆಯೇ ಹಲವಾರು ಭಾರತೀಯರು ಇಲ್ಲಿ ಸಿಲುಕಿಕೊಂಡಿದ್ದಾರೆ. ನಾವು ಈಗಾಗಲೇ ಭಾರತೀಯ ರಾಯಭಾರಿ ಕಚೇರಿಯನ್ನು ಸಂಪರ್ಕಿಸಿದ್ದು ನನ್ನ ಕುಟುಂಬಸ್ಥರು ಸೇರಿದಂತೆ ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ. ದುಬೈನಿಂದ ವಿಮಾನಗಳ ಹಾರಾಟ ಅಥವಾ ಭಾರತ ಸರ್ಕಾರದ ಸಹಾಯ ದೊರಕಿದ ಕೂಡಲೇ ನಾನು ಕೆ.ಆರ್.ಪೇಟೆಗೆ ಹಿಂತಿರುಗುವುದಾಗಿ ಡಾಲು ರವಿ ತಮ್ಮ ಕುಟುಂಬಸ್ಥರಿಗೆ ತಿಳಿಸಿದ್ದಾರೆ.





19 ವಿಮಾನಗಳು ರದ್ದು

ಇಸ್ರೇಲ್–ಇರಾನ್ ಯುದ್ಧ ಹಿನ್ನೆಲೆಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 19ಕ್ಕೂ ಹೆಚ್ಚಿನ ಅಂತಾರಾಷ್ಟ್ರೀಯ ವಿಮಾನಗಳ ಹಾರಾಟ ರದ್ದುಗೊಂಡಿದೆ. ಇದರಿಂದ ಪ್ರಯಾಣಿಕರು ಪರದಾಡುವಂತಾಯಿತು. ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭವಾಗಿರುವ ಕಾರಣ ಅನೇಕ ಮಧ್ಯಪ್ರಾಚ್ಯ ದೇಶಗಳಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ ಮತ್ತು ಕೆಲ ದೇಶಗಳ ವಾಯು ಪ್ರದೇಶದಲ್ಲಿ ವಿಮಾನಗಳ ಹಾರಾಟ ನಿಷೇಧಿಸಲಾಗಿದೆ. ಹೀಗಾಗಿ ಶನಿವಾರ ಮತ್ತು ಭಾನುವಾರ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸೇವೆ ನೀಡುತ್ತಿದ್ದ 19 ಅಂತಾರಾಷ್ಟ್ರೀಯ ವಿಮಾನಗಳು ರದ್ದಾಗಿವೆ. ಅವುಗಳಲ್ಲಿ 9 ಆಗಮನ ಮತ್ತು 10 ನಿರ್ಗಮನ ವಿಮಾನಗಳಾಗಿವೆ. ಪ್ರಮುಖವಾಗಿ ಅಬುದಾಬಿ, ರಿಯಾದ್, ಜೆಡ್ಡಾ, ದಮ್ಮಮ್, ದುಬೈ ಮತ್ತು ದೋಹಾ ನಗರಗಳಿಗೆ ಸೇವೆ ನೀಡುವ ವಿಮಾನಗಳಾಗಿವೆ.

ಖಮೇನಿ ಹತ್ಯೆ ಖಂಡಿಸಿ ಅಲೀಪುರ ಗ್ರಾಮಸ್ಥರ ಧರಣಿ

• ಗೌರಿಬಿದನೂರು: ತಾಲೂಕಿನ ಅಲ್ಲಿಪುರ ಗ್ರಾಮದ ಶಿಯಾ ಮುಸ್ಲಿಂ ಜನರು ಇರಾನ್ ನಾಯಕ ಖಮೇನಿ ಹತ್ಯೆ ಖಂಡಿಸಿ ಗ್ರಾಮದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಕಪ್ಪು ಬಟ್ಟೆ ಧರಿಸಿ ಕಪ್ಪು ಬಾವುಟ ಹಿಡಿದು ಮೃತ ಖಮೇನಿ ಫೋಟೋದೊಂದಿಗೆ ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆ ಕೂಗುತ್ತಾ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಖಮೇನಿ ಹತ್ಯೆಯ ಹಿನ್ನೆಲೆಯಲ್ಲಿ ಅಲ್ಲೀಪುರ ಗ್ರಾಮದಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಿ ಮೂರು ದಿನಗಳ ಕಾಲ ಶೋಕಾಚರಣೆ ನಡೆಯಲಿದೆ. ಮತ್ತು ಗ್ರಾಮದಲ್ಲಿ ಯಾವುದೇ ರೀತಿಯ ವ್ಯಾಪಾರ ವಹಿವಾಟುಗಳು ನಡೆಯುವುದಿಲ್ಲ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಪ್ರಸ್ತುತ ಇರಾನ್ ದೇಶದಲ್ಲಿ ಅಲ್ಲಿಪುರ ಗ್ರಾಮದ ಸುಮಾರು ಇನ್ನೂರು ಮಂದಿ ಇದ್ದು,ಸದ್ಯ ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಅಲೀಪುರ ಗ್ರಾಮಸ್ಥರಲ್ಲಿ ದುಗುಡ ಹೆಚ್ಚಾಗುತ್ತಿದೆ. ಅಲ್ಲಿರುವ ತಮ್ಮವರ ಸುರಕ್ಷತೆಗೆ ಪ್ರಾರ್ಥನೆ ನಡೆಸುತ್ತಿದ್ದಾರೆ. ತಮ್ಮವರ ಸುರಕ್ಷತೆ ಬಗ್ಗೆ ಕಳವಳಗೊಂಡಿದ್ದಾರೆ. ವೈದ್ಯಕೀಯ ಶಿಕ್ಷಣ, ಧಾರ್ಮಿಕ ಶಿಕ್ಷಣದ ಕಾರಣಕ್ಕೆ ಅಲೀಪುರದ ಶಿಯಾ ಮುಸ್ಲಿಮರಿಗೆ ಇರಾನ್ ಅಚ್ಚುಮೆಚ್ಚಿನ ತಾಣ. ಎಂಟು ಸಾವಿರ ಜನಸಂಖ್ಯೆಯ ಅಲೀಪುರದಲ್ಲಿ ಶಿಯಾ ಮುಸ್ಲಿಮರದ್ದೇ ಪ್ರಾಬಲ್ಯ. ಇರಾನ್ ತಮ್ಮ ಪವಿತ್ರ ಧಾರ್ಮಿಕ ಭೂಮಿ ಎನ್ನುವ ಪೂಜ್ಯ ಭಾವನೆ ಇಲ್ಲಿನ ಜನರದ್ದು. ಆಯಾತೊಲ್ಲಾ ಖಮೇನಿ ಧಾರ್ಮಿಕ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುವ ದೊಡ್ಡ ವರ್ಗವೇ ಇಲ್ಲಿದೆ.



ಅಲೀಪುರಕ್ಕೆ ಬಂದಿದ್ದ ಖಮೇನಿ!: ಅಲಿಪುರದ ಬಡವರ ಮತ್ತು ಸಾರ್ವಜನಿಕರಿಗೆ ಅನುಕೂಲಕ್ಕಾಗಿ 1986 ರಲ್ಲಿ ಆಯತುಲ್ಲಾ ಖಮೇನಿ ಅಲ್ಲಿಪುರ ಗ್ರಾಮಕ್ಕೆ ಬೇಟಿ ನೀಡಿ ಆಸ್ಪತ್ರೆಯನ್ನು ಪ್ರಾರಂಭಿಸಿ ಉದ್ಘಾಟಿಸಿದರು. ಇದು ಇರಾನ್ ಮತ್ತು ಅಲೀಪುರದ ಬಾಂಧವ್ಯಕ್ಕೆ ಸಾಕ್ಷಿ. ಖಮೇನಿ ಗುರು ಇರಾನ್ ಧಾರ್ಮಿಕ ನಾಯಕ ಆಯಾತೊಲ್ಲಾ ಇಮಾಮ್ ಖಮೇನಿ ಹೆಸರಲ್ಲಿ ಅಲೀಪುರದಲ್ಲಿ ಆಸ್ಪತ್ರೆ ಇದೆ. ಇದರ ಉದ್ಘಾಟನೆಗಾಗಿಯೇ ಖಮೇನಿ ಗ್ರಾಮಕ್ಕೆ ಬಂದಿದ್ದರು.

ಐ ಕೆ ಆಸ್ಪತ್ರೆಯ ಆಡಳಿತ ಮಂಡಳಿ ವ್ಯವಸ್ಥಾಪಕರಾದ ನದೀಮ್, ಸಕಿಯ ಅಕ್ತರ್, ಅಬ್ಬಾಸ್ ರಜಾ,ಮೀರ್ ಸಕಲೇನ್ ಅಬ್ಬಾಸ್ ಮತ್ತಿತರರು ಆಸ್ಪತ್ರೆಯಲ್ಲಿ ಭಾವಚಿತ್ರವನ್ನು ಇಟ್ಟು ಶೋಕಾಚರಣೆ ನಡೆಸಿದರು.

ಕನ್ನಡಿಗರ ರಕ್ಷಣೆಗೆ ಸಹಾಯವಾಣಿ

• ಬೆಂಗಳೂರು: ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಪರಿಣಾಮ ಕೊಲ್ಲಿ ದೇಶಗಳಲ್ಲಿ ವೈಮಾನಿಕ ದಾಳಿಗಳು ಭೀಕರವಾಗಿದ್ದು, ಈ ರಾಷ್ಟ್ರಗಳಲ್ಲಿ ಸಿಲುಕಿರುವ ಕನ್ನಡಿಗರ ಸಹಾಯಕ್ಕೆ ರಾಜ್ಯ ಸರ್ಕಾರ ಸಹಾಯವಾಣಿ ಸ್ಥಾಪಿಸಿದೆ. ಕೊಲ್ಲಿ ದೇಶಗಳಲ್ಲಿ ಉದ್ಯೋಗ ಅರಸಿ ಮತ್ತು ಪ್ರವಾಸಕ್ಕೆ ತರಳಿರುವ ಕನ್ನಡಿಗರಿಗೆ ಯುದ್ಧದ ಪರಿಸ್ಥಿತಿಯಿಂದ ಆತಂಕ ಎದುರಾಗಿದ್ದು, ಸೂಕ್ತ ಭದ್ರತೆ ಮತ್ತು ವಾಪಸ್ ದೇಶಕ್ಕೆ ಮರಳು ವಿಮಾನದ ಸೌಕರ್ಯ ಸೇರಿದಂತೆ ಇನ್ನಿತರೆ ಸೇವೆಗಾಗಿ ರಾಜ್ಯ ಸರ್ಕಾರ ಸಹಾಯವಾಣಿ ಆರಂಭಿಸಿದೆ. ಕತಾರ್: 00974–55647502, ಬಹ್ರೇನ್: 00973–39418071, ಜೋರ್ಡಾನ್: 00962–770 422 276, ಓಮನ್: 8007 1234 । ವಾಟ್ಸಾಪ್ ಸಂಖ್ಯೆ: +968 9828 2270, ಇರಾಕ್: +964 771 651 1185 (ಇಂಗ್ಲಿಷ್ ಮತ್ತು ಹಿಂದಿ), +964 770 444 4899 (ಅರೇಬಿಕ್), ಕುವೈತ್: +965 65501946, ಪ್ಯಾಲೆಸ್ತೀನ್: +970 592916418 ಇಸ್ರೇಲ್ +972–54–7520711, ಇರಾನ್ +98 912 810 9115, ಸೌದಿ ಅರೇಬಿಯಾ: ರಿಯಾದ್ 00–966–11–4884697, 00–966–542126748 ವಾಟ್ಸಾಪ್ ಸಂಖ್ಯೆ, 800 247 1234 ಸಹಾಯ ಸಂಖ್ಯೆ, 2614093 ಮೊಬೈಲ್ +966 5561 22301/ ಸಹಾಯ ಸಂಖ್ಯೆ 800 244 0003, ಯುಎಇ: ಸಹಾಯವಾಣಿ 800–46342, ವಾಟ್ಸಾಪ್ ಸಂಖ್ಯೆ +971 5430 90571

ಮೂರು ವರ್ಷದಲ್ಲಿ 16,29,86,260 ರೂ.ಮೌಲ್ಯದ 1,940.839 ಕೆಜಿ ಮಾದಕದ್ರವ್ಯ ವಶ

ನೈರುತ್ಯ ರೈಲ್ವೆಯ ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿ ಆಪರೇಷನ್

ಅನುಷಾ ಕೆ.

• ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ವಿಮಾನ, ಬಸ್, ರೈಲಿನಲ್ಲಿ ಡ್ರಗ್ ಪೆಡ್ಲರ್‌ಗಳು ಮಾದಕ ವಸ್ತುಗಳನ್ನು ಕಳ್ಳಸಾಗಾಣಿಕೆ ಮಾಡುವವರ ಸಂಖ್ಯೆ ಅಧಿಕವಾಗುತ್ತಿದೆ. ಹೀಗಿರುವಾಗ ನೈರುತ್ಯ ರೈಲ್ವೆಯ ಆರ್‌ಪಿಎಫ್ ಸಿಬ್ಬಂದಿ ರೈಲಿನಲ್ಲಿ ಮಾದಕ ವಸ್ತುಗಳ ಕಳ್ಳ ಸಾಗಣೆ ಮಾಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಮೂಲಕ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಕಳ್ಳಸಾಗಾಣಿಕೆ ತಡೆಯಲು ನೈರುತ್ಯ ರೈಲ್ವೆಯ ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿ ಆಪರೇಷನ್‌ನಾರ್ಕೋ ಎನ್ನುವ ಕಾರ್ಯಾಚರಣೆ ಕೈಗೊಂಡು, ರೈಲುಗಳ ಮೂಲಕ ನಡೆಯುವ ಮಾದಕವಸ್ತು ಕಳ್ಳಸಾಗಣೆಯನ್ನು ತಡೆಯುವ ಕಾರ್ಯವನ್ನು ಮಾಡುತ್ತಿದ್ದಾರೆ. ನೈರುತ್ಯ ರೈಲ್ವೆಯ ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರು ವಿಭಾಗದಲ್ಲಿ 2023 ರಿಂದ 2025ರವರೆಗೆ ಒಟ್ಟು 137 ಡ್ರಗ್ ಪೆಡ್ಲರ್‌ಗಳಿಂದ ಸುಮಾರು 16,29,86,260 ರೂ.ಮೌಲ್ಯದ 1,940.839 ಕೆಜಿ ಗಾಂಜಾವನ್ನು ವಶಪಡಿಸಿಕೊಳ್ಳುವಲ್ಲಿ ಆರ್‌ಪಿಎಫ್ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ. ರೈಲ್ವೆ ಇಲಾಖೆಯ ನಿಯಮದ ಅನುಸಾರ ಪ್ರಯಾಣಿಕರು ರೈಲಿನಲ್ಲಿ ಪ್ರಯಾಣ ಮಾಡುವ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು ಕೊಂಡೊಯ್ಯುವಂತಿಲ್ಲ. ಆದರಲ್ಲೂ ಪ್ರಮುಖವಾಗಿ ಮೀನು, ಗ್ಯಾಸ್ ಸಿಲಿಂಡರ್, ಪಟಾಕಿ, ಧೂಮಪಾನ, ಮದ್ಯ, ಅಮಲು ಪದಾರ್ಥಗಳನ್ನು ಒಯ್ಯುವಂತಿಲ್ಲ.

ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿಗಳು ಮಾದಕ ವಸ್ತುಗಳ ಕಳ್ಳ ಸಾಗಣೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಜೊತೆಗೆ, ಅಕ್ರಮ ಚಟುವಟಿಕೆಗಳನ್ನು ತಡೆಯಲು ನಿರಂತರ ತಪಾಸಣೆಗಳನ್ನು ನಡೆಸುತ್ತಿದ್ದಾರೆ. ಆ ಮೂಲಕ ಪ್ರಯಾಣಿಕರಿಗೆ ಸುರಕ್ಷಿತ, ಭದ್ರ ಹಾಗೂ ಸುಗಮ ಪ್ರಯಾಣದ ಅನುಭವ ಒದಗಿಸುವುದು ನಮ್ಮ ಪ್ರಾಥಮಿಕ ಗುರಿಯಾಗಿದೆ ಎಂದು ನೈಋತ್ಯ ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ಆಪರೇಷನ್ ನಾರ್ಕೋ ಎಂದರೇನು

ಆರ್‌ಪಿಎಫ್ ಸಿಬ್ಬಂದಿ ಆಪರೇಷನ್ ನಾರ್ಕೋ ಎನ್ನುವ ಕಾರ್ಯಾಚರಣೆ ಕೈಗೊಂಡು, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ (ಎನ್‌ಸಿಬಿ) ಸಹಯೋಗದೊಂದಿಗೆ ರೈಲ್ವೆ ನಿಲ್ದಾಣ ಮತ್ತು ರೈಲುಗಳಲ್ಲಿ ತಪಾಸಣೆ ನಡೆಸುತ್ತಾರೆ. ಆ ವೇಳೆ ಮಾದಕ ವಸ್ತುವನ್ನು ಪತ್ತೆಹಚ್ಚಿ, ಡ್ರಗ್ ಪೆಡ್ಲರ್‌ಗಳಿಂದ ಮಾದಕ ವಸ್ತುಗಳನ್ನು ವಶಪಡಿಸಿ, ಅಪರಾಧಿಗಳನ್ನು ಬಂಧಿಸಿ ಅವರನ್ನು ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸುತ್ತಾರೆ.

ಆಪರೇಷನ್ ನಾರ್ಕೋ ಅಡಿಯಲ್ಲಿ ವಶಪಡಿಸಲಾದ ಗಾಂಜಾ ಹಾಗೂ ಮೌಲ್ಯದ ವಿವರ

	2024			2025		
ನೈರುತ್ಯಯ ವಿಭಾಗ	ಗಾಂಜಾ	ಮೌಲ್ಯ	ಬಂಧಿತರು	ಗಾಂಜಾ	ಮೌಲ್ಯ	ಬಂಧಿತರು
ಮೈಸೂರು	33.668	33,63,000	1	53.144	30,57,750	05
ಬೆಂಗಳೂರು	183.596	1,69,51,620	16	671.264	4,92,77,580	49
ಹುಬ್ಬಳ್ಳಿ	32.155	32,23,500	1	194.947	1,51,78,200	03
ಒಟ್ಟು ಪ್ರಕರಣ/ಮೊತ್ತ	249.419	2,35,38,120	18	919.355	6,75,13,530	57

ಆ್ಯನಿಮೇಷನ್‌ನಿಂದ ಉದ್ಯೋಗ

• ಬೆಂಗಳೂರು: ಆ್ಯನಿಮೇಷನ್, ವಿಷುಯಲ್ ಎಫೆಕ್ಟ್, ಗೇಮಿಂಗ್ ಕ್ಷೇತ್ರಗಳು ಈಗ ಕೇವಲ ಮನರಂಜನೆಯ ಉದ್ಯಮವಾಗಿ ಉಳಿಯದೆ, ಡಿಜಿಟಲ್, ಸೃಜನಶೀಲತೆ ಹಾಗೂ ಕೃತಕ ಬುದ್ಧಿಮತ್ತೆಯ ಆರ್ಥಿಕತೆಯನ್ನು ಮರು ರೂಪಿಸುತ್ತಿವೆ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಬಣ್ಣಿಸಿದ್ದಾರೆ.



ನಗರದ ಖಾಸಗಿ ಹೋಟೆಲ್‌ನಲ್ಲಿ ಮೂರು ದಿನಗಳಿಂದ ನಡೆದ ಬೆಂಗಳೂರು ಜಿಎವಿಎಫ್‌ಎಕ್ಸ್–7ನೆ ಆವೃತ್ತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸೃಜನಶೀಲತೆಯ ಈ ವಲಯಗಳು ಬೌದ್ಧಿಕ ಆಸ್ತಿ, ನಾವೀನ್ಯತೆಯ ಹೊಸ ಆರೇಂಜ್ ಎಕಾನಾಮಿ ಸಾಧಿಸಲು ಮಹತ್ವದ ಕೊಡುಗೆ ನೀಡುತ್ತಿವೆ. ಈ ಆರ್ಥಿಕತೆಯು ಭಾರಿ ಬದಲಾವಣೆ ತರುತ್ತಿದೆ. ಹೊಸ ಉದ್ಯೋಗ ಅವಕಾಶ ಸೃಷ್ಟಿಸುವ, ಸೃಜನಶೀಲತೆಯ ಹೊಸ ಸಂಸ್ಕೃತಿ ಬೆಳೆಯಲು ನೆರವಾಗುತ್ತಿದೆ ಎಂದರು. ತಮ್ಮ ಭಾಷಣದಲ್ಲಿ ಕಾಂತಾರ–ಚಾಪ್ಟರ್ 1 ಚಿತ್ರದ ಅಭೂತಪೂರ್ವ ಯಶಸ್ಸನ್ನು ಪ್ರಸ್ತಾಪಿಸಿದ ಖರ್ಗೆ ಅವರು, ತಂತ್ರಜ್ಞಾನದ ಸಂಗಮದ ಫಲವಾಗಿ ಸ್ಥಳೀಯ ಕತೆಯು ಜಾಗತಿಕ ಮನ್ನಣೆಗೆ ಪಾತ್ರವಾಗಿದೆ ಎಂದರು. ಇಡೀ ದೇಶದಲ್ಲಿ ಮೊದಲ ಬಾರಿಗೆ ಎವಿಜಿಸಿ ನೀತಿ ರೂಪಿಸಿದ ಹೆಗ್ಗಳಿಗೆ ಕರ್ನಾಟಕದ್ದು ಆಗಿದೆ.

ಸದ್ಯಕ್ಕೆ ಕೃತಕ ಬುದ್ಧಿಮತ್ತೆಯನ್ನು (ಎಐ) ಪ್ರತಿಯೊಬ್ಬರೂ ಅತ್ಯಂತ ಸುಲಭವಾಗಿ ಅಳವಡಿಸಿಕೊಳ್ಳಬಹುದಾಗಿದೆ. ಮಾಹಿತಿ, ವಿಷಯ ಸೃಷ್ಟಿಸಲು ಎಐಯನ್ನು ಬೆಂಗಳೂರಿನ ಆಚೆಗೂ ಹಿಂದುಳಿದ ಪ್ರದೇಶಗಳಲ್ಲಿಯೂ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಇದರಿಂದ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿವೆ. ದೇಶದಲ್ಲಿಯೇ ಮೊದಲ ಬಾರಿಗೆ ಎವಿಜಿಸಿಯ ಶ್ರೇಷ್ಠತಾ ಕೇಂದ್ರವನ್ನು ರಾಜ್ಯದಲ್ಲಿ ಸ್ಥಾಪಿಸಲಾಗಿದೆ. ಆಕ್ಸೆಂಚರ್ ಸೇರಿದಂತೆ ವಿವಿಧ ಕಂಪನಿಗಳ ಸಹಯೋಗದಲ್ಲಿ ತಂತ್ರಜ್ಞಾನ ಕೌಶಲ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಸಂಪಾದಕೀಯ

ಜರಾಸಂಧನಂತೆ ಖಮೇನಿಯ ವಧೆ ಅನಿವಾರ್ಯ

ಮಧ್ಯಪ್ರಾಚ್ಯದಲ್ಲಿ ಮತ್ತೆ ಕಿಚ್ಚು ಹತ್ತಿದೆ. ಹಾಗೆ ನೋಡಿದರೆ ಮಧ್ಯಪ್ರಾಚ್ಯದಲ್ಲಿ ಯಾವಾಗ ನೆಮ್ಮದಿ ನೆಲೆಸಿತ್ತು ಎಂಬ ಪ್ರಶ್ನೆಯೇ ಉದ್ಭವವಾಗದು! ಜಗತ್ತಿನ ಹುಣ್ಣು ಅಥವಾ ಜಗತ್ತಿನ ಸಕಲ ಅಶಾಂತಿಗೆ ಕಾರಣ ಎಂಬ ಜಾಗತಿಕ ನಾಣ್ನುಡಿ ಅತಿಶಯೋಕ್ತಿಯೇ ಇರಬಹುದು. ಆದರೆ ಅದನ್ನು ಸಂಪೂರ್ಣ ತಳ್ಳಿಹಾಕಲಂತೂ ಸಾಧ್ಯವಿಲ್ಲ. ಜಗತ್ತಿನ ಎಲ್ಲಾ ಸಂಗತಿಗಳು ಸುಸೂತ್ರವಾಗಿ ಸಾಗುತ್ತಿರುವಾಗ, ಜಗತ್ತಿನಲ್ಲಿ ಹೊಸ ಹೊಸ ವಿಚಾರಧಾರೆಗಳು ಹುಟ್ಟುತ್ತಿರುವಾಗ ಮಧ್ಯಪ್ರಾಚ್ಯ ಮಾತ್ರ ತಾವರೆಯ ಎಲೆಯ ಮೇಲಿನ ನೀರಿನಂತೆ ಅಂಟಿಕೊಳ್ಳದೆ ಇರುತ್ತಿತ್ತು. ತೈಲದ ಶ್ರೀಮಂತಿಕೆಯಿಂದ ಮಧ್ಯಪ್ರಾಚ್ಯ ನೆಮ್ಮದಿಯ ಜೀವನವನ್ನು ನಡೆಸಬಹುದಾಗಿತ್ತಾದರೂ ತಮ್ಮ ಮತೀಯ ಅಸಹನೆಯ ಕಾರಣಕ್ಕೆ ಮತ್ತು ಆಧುನಿಕ ಸಿದ್ಧಾಂತಗಳಿಗೆ ಒಗ್ಗಿಕೊಳ್ಳದ ಜಿಗುಟುತನಕ್ಕೆ ಸದಾ ಹಿಂಸೆಯ ತಾಣವಾಗಿದೆ.

ಮಧ್ಯಪ್ರಾಚ್ಯಕ್ಕಿಂತ ಅಪಾಯಕಾರಿಯಾದ ಅನೇಕ ದೇಶಗಳು ಜಗತ್ತಿನಲ್ಲಿವೆ. ಆದರೆ ಅಲ್ಲೆಲ್ಲಾ ಇಲ್ಲದ ವಿಕ್ಷಿಪ್ತಗಳು ಮಧ್ಯಪ್ರಾಚ್ಯದಲ್ಲಿ ಕಂಡುಬರುತ್ತವೆ. ಇದಕ್ಕೇನು ಕಾರಣ ಎಂದು ಹುಡುಕಿದರೆ ಇಡೀ ಮಧ್ಯಪ್ರಾಚ್ಯದ್ದೇ ಒಂದು ರಾಷ್ಟ್ರೀಯತೆ ಎಂಬ ಒಂದು ಸಾಲಿನ ಉತ್ತರಸಿಗುತ್ತದೆ. ಮಧ್ಯಪ್ರಾಚ್ಯದ ದೇಶಗಳೆಲ್ಲವೂ ಹಿಂದಿನಿಂದಲೂ ಒಂದೇ ರೀತಿ ಬೆಳೆದಿವೆ. ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೂ ಅವು ಒಂದೇ ರೀತಿ ಯೋಚಿಸಿವೆ. ಕಟ್ಟರ್ ಸಂಪ್ರದಾಯಸ್ಥ ದೇಶಗಳಾಗಿದ್ದರೂ ಆಧುನಿಕತೆಯನ್ನು ಅವು ಎಡಗಾಲಲ್ಲಿ ಒದ್ದಿಲ್ಲ. ಪ್ರಮುಖ ಜಾಗತಿಕ ಪರಿಸ್ಥಿತಿಗಳಲ್ಲಿ ಮಧ್ಯಪ್ರಾಚ್ಯದ ರಾಷ್ಟ್ರಗಳು ಅತ್ಯಂತ ಪ್ರಮುಖ, ಅನಿವಾರ್ಯ ಎಂದಿಲ್ಲದಿದ್ದರೂ ಜಗತ್ತಿನ ಪ್ರಮುಖ ರಾಜಕೀಯ ಬೆಳವಣಿಗೆಗಳಲ್ಲಿ ಅವುಗಳು ಗಮನಾರ್ಹ ಪಾತ್ರ ವಹಿಸಿವೆ.

ಪ್ರಸ್ತುತ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿರುವ ದಾಳಿಯ ಹಿನ್ನೆಲೆ ಕೂಡ ಅದುವೆ. ಇರಾನ್ ಹಿಂದಿನಿಂದಲೂ ಇಸ್ರೇಲನ್ನು ನಖಶಿಖಾಂತ ದ್ವೇಷಿಸುತ್ತಾ ಬಂದಿದೆ. ಇಸ್ರೇಲ್ ಹುಟ್ಟನ್ನೇ ವಿರೋಧಿಸುವ ಇರಾನಿಗೆ ಇಸ್ರೇಲಿನೊಂದಿಗೆ ಆರ್ಥಿಕ ದ್ವೇಷವಲ್ಲ. ಅದಕ್ಕೂ ಮಿಗಿಲಾದ ಅಸ್ತಿತ್ವದ ದ್ವೇಷ ಇದೆ. ಸದಾ ಪ್ಯಾಲೆಸ್ಟೀನ್‌ಗೆ ಬೆಂಬಲವನ್ನು ನೀಡುತ್ತಾ ಬಂದ ಇರಾನಿಗೆ ಇಸ್ರೇಲಿನೊಡನೆ ಇರುವ ಶತ್ರುತ್ವಕ್ಕೆ ಕಾರಣ ಮತ. ಮಧ್ಯಪ್ರಾಚ್ಯದ ಇಸ್ಲಾಮಿಕ್ ದೇಶಗಳಿಗೆ ಇಸ್ರೇಲ್ ಮತ್ತು ಯಹೂದ್ಯ ದ್ವೇಷ ಮಾಮೂಲಾದರೂ ಇರಾನಿನಷ್ಟು ಶತ್ರುತ್ವವನ್ನು ಕಾಪಿಟ್ಟುಕೊಂಡ ದೇಶ ಬೇರಿಲ್ಲ. ಇಸ್ರೇಲ್ ವಿರುದ್ಧ ಅರಬ್ ಒಕ್ಕೂಟವನ್ನು ಕಟ್ಟಿದ್ದಲ್ಲಿಂದ ಹಿಡಿದು ಆರುದಿನಗಳ ಯುದ್ಧ, ಇತ್ತೀಚಿನ ಗಾಜಾ ದಾಳಿಯವರೆಗೂ ಇರಾನ್ ಇಸ್ರೇಲ್ ಆಕ್ರಮಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇನ್ನೊಂದೆಡೆ ಅಮೆರಿಕಾಕ್ಕೆ ಇರಾನ್ ಮೇಲೇಕೆ ದ್ವೇಷ ಎನ್ನುವುದಕ್ಕೆ ನಾನಾ ಕಾರಣಗಳನ್ನೇನೋ ನೀಡಬಹುದು. ಆದರೆ ಈ ದಾಳಿಯಲ್ಲಿ ಸೆಳೆಯುತ್ತಿರುವುದು ಇಸ್ರೇಲ್. ಭಾರತದಂತೆ ಇಸ್ರೇಲ್ ಮತ್ತೊಬ್ಬರ ಮೇಲೆ ಆಕ್ರಮಣ ಮಾಡುವ ಮನಸ್ಥಿತಿಯ ದೇಶವಲ್ಲ. ಅಲ್ಲದೆ ಇರಾನಿನಲ್ಲಿರುವವನು ಇಡೀ ಜಗತ್ತಿನ ಇಸ್ಲಾಮ್ ಮತಾಂಧತೆಯ ಕಟ್ಟರ್ ಅನುಯಾಯಿ ಎಂಬ ಕುಖ್ಯಾತಿಗೆ ಪಾತ್ರನಾದ ಖಮೇನಿ. ಖಮೇನಿಯ ನಾಶ ಜರಾಸಂಧನ ನಾಶದಂತೆ ಜಗತ್ತಿಗೆ ಅನಿವಾರ್ಯ. ಜರಾಸಂಧನ ವಧೆಗೆ ಕೃಷ್ಣ-ಭೀಮರ ಜಂಟಿ ಶಕ್ತಿ ಒಗ್ಗೂಡಬೇಕಾಯಿತು. ಈಗ ಖಮೇನಿಯ ವಧೆಗೆ ಎರಡು ಶಕ್ತಿಗಳು ಜೊತೆಯಾಗಿವೆ. ಇದು ಜಗತ್ತಿನ ಶಾಂತಿಗಾಗಿ ನಡೆಯುತ್ತಿರುವ ಯುದ್ಧವೇ ಹೊರತು, ಹಿಂಸೆಯಲ್ಲ.

ಭಕ್ತಿಮಾರ್ಗದ ಹೊಂಬೆಳಕು: ಶ್ರೀ ಚೈತನ್ಯ ಮಹಾಪ್ರಭು

ಚೈತನ್ಯರು ಆಧ್ಯಾತ್ಮಿಕ ಒರತೆಯನ್ನು ಚಿಮ್ಮಿಸಿದ ಶ್ರೇಷ್ಠ ದಾರ್ಶನಿಕರು. ಮಾರ್ಚ್ 3 ಚೈತನ್ಯ ಪ್ರಭುಗಳ ಜಯಂತಿ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಜಗತ್ತಿನಲ್ಲಿ ಮನುಷ್ಯನ ಸ್ವಾರ್ಥಲಾಲಸೆಯಿಂದಾಗಿ ಶಾಂತಿ, ನೆಮ್ಮದಿಯ ಸಮೀಕರಣ ಬದಲಾಗಿದೆ. ಸಾಮ್ರಾಜ್ಯ ವಿಸ್ತರಣದಾಹ, ಇತರರನ್ನು ನೆಮ್ಮದಿಯಿಂದ ಬದುಕಲು ಬಿಡಕೂಡದೆಂಬ ಹಠ, ಎಲ್ಲದಕ್ಕೂ ಮಿಗಿಲಾಗಿ ದುರಹಂಕಾರ, ಸ್ವಾರ್ಥಲಾಲಸೆಗಳು ಇಂತಹ ಸನ್ನಿವೇಶವನ್ನು ಅನಿವಾರ್ಯವಾಗಿ ಸೃಷ್ಟಿಸುತ್ತವೆಂಬುದು ಎಲ್ಲ ಕಾಲಕ್ಕೂ ಸತ್ಯ.


ಪರಕೀಯರ ಆಕ್ರಮಣ, ರಾಜಕೀಯ ಮತ್ತು ಸಾಮಾಜಿಕ ದೌರ್ಜನ್ಯ ಮತ್ತು ಸಂಘರ್ಷ ಭಾರತಕ್ಕೂ ಹೊಸತೇನಲ್ಲ. ಇಂದಿನ ಭಯೋತ್ಪಾದನೆ, ಆಂತರಿಕ ಮತ್ತು ಬಾಹ್ಯ ಬೆದರಿಕೆಗಳು ಹಿಂದೆಯೂ ಇದ್ದಿದ್ದುವೆಂದಲ್ಲ. ಕಾಲಕಾಲಕ್ಕೆ ಅವುಗಳ ಸ್ವರೂಪ, ಅವುಗಳನ್ನೆದುರಿಸಿದ ರೀತಿ ಮಾತ್ರ ಭಿನ್ನವಾಗಿತ್ತು, ಅಷ್ಟೆ. ಆದರೆ ಭಾರತಭೂಮಿ ಅವುಗಳನ್ನೆಲ್ಲ ಎದುರಿಸಿ ಅಜೇಯವಾಗಿ ಮುನ್ನಡೆದಿರುವುದಕ್ಕೆ ಈ ನೆಲದ ಸತ್ವ, ಸತ್ವ, ಮತ್ತು ಸ್ವಾಭಿಮಾನಗಳೇ ಕಾರಣ.

ಹದಿನೈದನೇ ಶತಮಾನದಲ್ಲೂ ಪರಕೀಯರ ಆಕ್ರಮಣ, ರಾಜಕೀಯ ಮತ್ತು ಸಾಮಾಜಿಕ ದೌರ್ಜನ್ಯ, ದಬ್ಬಾಳಿಕೆ ಭಾರತೀಯ ಸಮಾಜವನ್ನು ನಲುಗಿಸಿಬಿಟ್ಟಿತ್ತು. ಭಾರತದಲ್ಲಿ ಧರ್ಮಗ್ಲಾನಿಯಾದಾಗಲೆಲ್ಲ ನಾನು ಅದರ ಉದ್ಧಾರಕ್ಕಾಗಿ ಅವತರಿಸುವೆ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಸಾರಿರುವುದು ಸುಳ್ಳಾಗಲಿಲ್ಲ. ಇಡೀ ದೇಶ ಸರ್ವನಾಶದ ಅಂಚಿಗೆ ತಲುಪಿತೆನ್ನುವಾಗ ಆಯಾ ಕಾಲಘಟ್ಟದಲ್ಲಿ ಒಬ್ಬರಲ್ಲ ಒಬ್ಬರು ವೀರಪುರುಷರು, ಸಂತರು, ಮಹಾನುಭಾವರು ಮೇಲೆದ್ದು ಬಂದು ಭಾರತದ ಗೌರವವನ್ನು, ಸನಾತನ ಧರ್ಮಸಂಸ್ಕೃತಿಯನ್ನು ಪೊರೆದ ನಿದರ್ಶನಗಳು ಸಾಕಷ್ಟು ಇವೆ.

ಚೈತನ್ಯ ಮಹಾಪ್ರಭುಗಳ ಅವತಾರ ನಿಜಕ್ಕೂ ಭಗವಂತನ ಉದ್ದೇಶಿತ ಕಾರ್ಯವಾಗಿತ್ತು. ಏಕೆಂದರೆ ಕೃಷ್ಣಭಕ್ತಿಯ ಸಂಕೀರ್ತನೆಯ ಮೂಲಕ ಅವರು ಭಯದಿಂದ ಕಂಗಾಲಾಗಿದ್ದ ಜನಮಾನಸದಲ್ಲಿ ಭರವಸೆಯ ಬೆಳಕನ್ನು ಚೆಲ್ಲಿದರು. ಚೈತನ್ಯರು ಆಧ್ಯಾತ್ಮಿಕ ಒರತೆಯನ್ನು ಚಿಮ್ಮಿಸಿದ ಶ್ರೇಷ್ಠದಾರ್ಶನಿಕರು. ಮಧ್ಯಕಾಲೀನ ಭಾರತದಲ್ಲಿ ಭಕ್ತಿಮಾರ್ಗವನ್ನು ಸಮರ್ಥವಾಗಿ ಮುನ್ನಡೆಸಿದ ಹಿರಿಮೆಯೂ ಚೈತನ್ಯ ಮಹಾಪ್ರಭುಗಳದ್ದೇ. ಹಾಗೆಂದೇ ಅವರನ್ನು ಶ್ರೀಕೃಷ್ಣನ ಅವತಾರವೆಂದು ಆಗಿನ ಕಾಲದಲ್ಲಿ ಅವರ ಅನುಯಾಯಿಗಳು ತಿಳಿದಿದ್ದರು.

ಚೈತನ್ಯ ಮಹಾಪ್ರಭುಗಳು (1486–1534) ಜನಿಸಿದ್ದು ಬಂಗಾಳದ ನವದ್ವೀಪದಲ್ಲಿ. ಜಗನ್ನಾಥ ಮಿಶ್ರಾ ಮತ್ತು ಶಚೀದೇವಿ ದಂಪತಿಯ ಮಗನಾಗಿ ಅವರು ಕಹಿಬೇವಿನ ಮರದ ಬುಡದಲ್ಲಿ ಜನಿಸಿದ್ದರಿಂದ ಅವರನ್ನು ಪ್ರೀತಿಯಿಂದ "ನಿಮಾಯಿ" ಎಂದೂ ಕರೆಯಲಾಗುತ್ತಿತ್ತು. ಫಾಲ್ಗುಣ ಪೌರ್ಣಿಮೆಯಂದು ಜನಿಸಿದ್ದರಿಂದ ಹಾಗೂ ಬೆಳ್ಳಗೆ ಸುಂದರ ಶರೀರದವರಾಗಿದ್ದುದರಿಂದ ಅವರನ್ನು "ಗೌರಾಂಗ" ಎಂದೂ ಕರೆಯಲಾಗುತ್ತಿತ್ತು. ತಂದೆಯಾಗಿ ಹಠಾತ್ತನೆ ಮಗನಾದ ವಿಶ್ವಂಭರ ಮುಂದೆ ನಿಮಾಯಿ ಪಂಡಿತನಾಗಿ, ಸಂನ್ಯಾಸಾಶ್ರಮ ಸ್ವೀಕರಿಸಿದ ಬಳಿಕ ಭಗವಾನ್ ಶ್ರೀಕೃಷ್ಣ ಚೈತನ್ಯ ಮಹಾಪ್ರಭುವಾಗಿ ವಿಖ್ಯಾತರಾದದ್ದು ಒಂದು ರೋಚಕ ಕಥೆ.

48 ವರ್ಷಗಳ ತಮ್ಮ ಅಲ್ಪ ಜೀವಿತಾವಧಿಯಲ್ಲಿ ಚೈತನ್ಯ ಮಹಾಪ್ರಭುಗಳು ಕಂಡ ಏರಿಳಿತಗಳು ಬರೆದು ಮುಗಿಸುವಂತಹವು. ತಮ್ಮ ಜೀವನದ 24 ವರ್ಷಗಳವರೆಗೆ ವಿದ್ಯಾರ್ಥಿಯಾಗಿ ಮತ್ತು ಗೃಹಸ್ಥರಾಗಿ ಚೈತನ್ಯರು ವಾಸವಾಗಿ ದ್ದಿದ್ದು ನವದ್ವೀಪದಲ್ಲಿ. ಮೊದಲ ಪತ್ನಿ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಾಗ ತಾಯಿಯ ಅಪೇಕ್ಷೆಯಂತೆ ಎರಡನೇ ವಿವಾಹವಾದರು. ಆದರೆ ಎರಡನೇ ಪತ್ನಿಗೆ ಇನ್ನೂ ಹದಿನಾರರ ಪ್ರಾಯವಿದ್ದಾಗಲೇ ಚೈತನ್ಯರು ಸಂನ್ಯಾಸಾಶ್ರಮ ಸ್ವೀಕರಿಸಿದರು. ಅದಾದ ಬಳಿಕ ಅವರ ಕಾರ್ಯಕ್ಷೇತ್ರದ ಕೇಂದ್ರ ಒಡಿಸ್ಸಾದ ಜಗನ್ನಾಥಪುರಿಗೆ ಸ್ಥಳಾಂತರಗೊಂಡಿತು. ಈ ಅವಧಿಯಲ್ಲಿ ಆರು ವರ್ಷಗಳ ಕಾಲ ಸತತವಾಗಿ ಶ್ರೀಮದ್ಭಾಗವತವನ್ನು ಬೋಧಿಸುತ್ತಾ ಭಾರತದಾದ್ಯಂತ – ವಿಶೇಷವಾಗಿ ದಕ್ಷಿಣ ಭಾರತದಲ್ಲಿ – ಸಂಚರಿಸಿದ್ದರು. ದಕ್ಷಿಣ ಭಾರತದಲ್ಲಿ ತಮಿಳುನಾಡಿನ ಶ್ರೀರಂಗ, ಕರ್ನಾಟಕದ ಉಡುಪಿ ಮತ್ತು ಕನ್ಯಾಕುಮಾರಿಯ ವರೆಗೂ ಪಯಣಿಸಿ ಕೃಷ್ಣಪ್ರಜ್ಞೆಯ ಬೋಧನೆಯನ್ನು ಮಾಡಿದರು.



ಚೈತನ್ಯ ಪ್ರಭುಗಳು ಯಾವುದೇ ಜಾತಿ, ಮತ, ಧರ್ಮಗಳ ಚೌಕಟ್ಟಿಗೆ ಅಂಟಿಕೊಂಡಿರಲಿಲ್ಲ. ಅವರು ನೋಡುತ್ತಿದ್ದುದು–ವ್ಯಕ್ತಿಯ ಅಂತರಂಗದಲ್ಲಿ ದೇವರ ಬಗೆಗಿರುವ ಗಾಢವಾದ ತುಡಿತ ಮತ್ತು ಭಕ್ತಿಯನ್ನು ಮಾತ್ರ. ಹಾಗಾಗಿ ಆಗಿನ ಕಾಲಘಟ್ಟದಲ್ಲಿ ಇದೊಂದು ಸಾಮಾಜಿಕ ಸಮಾನತೆ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ರಾಂತಿಯಾಗಿತ್ತೆಂದರೆ ಉತ್ಪ್ರೇಕ್ಷೆಯಲ್ಲ. ಅನ್ಯಧರ್ಮದ ಅನೇಕ ಭಕ್ತರು ಇವರ ಅನುಯಾಯಿಗಳಾಗಿದ್ದರು. ಮಹಮ್ಮದೀಯ ಕುಟುಂಬದಿಂದ ಬಂದ ಹರಿದಾಸ–ಠಾಕುರ್ ಅವರು ಪ್ರಭುಗಳ ಭಕ್ತಿಮಾರ್ಗದ ಸಾಂಗತ್ಯದಿಂದ "ನಾಮಾಚಾರ್ಯ" ಎಂಬ ಹೆಸರಿನಿಂದ ಜನಪ್ರಿಯರಾಗಿದ್ದರು.

ಚೈತನ್ಯರು ವೃಂದಾವನವನ್ನು ಸಂದರ್ಶಿಸಿ, ಪ್ರಯಾಗಕ್ಕೆ ಬಂದ ಸಂದರ್ಭದಲ್ಲಿ ಧರ್ಮಾಂಧ ಮುಸ್ಲಿಂ ಸೈನಿಕರು ಎದುರಾದಾಗ ಅವರು ಧೃತಿಗೆಡಲಿಲ್ಲ. ಅವರಿಗೆಲ್ಲ ಇಸ್ಲಾಂ ಧರ್ಮಗ್ರಂಥ ಕುರ್‌ಆನ್ ಬಗ್ಗೆ ಪ್ರವಚನ ನೀಡಿ, ಅದರಲ್ಲಿನ ನ್ಯೂನತೆಗಳನ್ನು ಎತ್ತಿಹಿಡಿದು ಅಪಾರ ಸಂಖ್ಯೆಯ ಧರ್ಮಾಂಧ ಮುಸ್ಲಿಮರನ್ನು ವೈಷ್ಣವ ಪಂಥಕ್ಕೆ ಬರಮಾಡಿಕೊಂಡರು. ಇಂದಿಗೂ ಅವರ ವಂಶಸ್ಥರು ತಮ್ಮನ್ನು "ಪಠಾಣ ವೈಷ್ಣವರು" ಎಂದು ಗುರುತಿಸಿಕೊಳ್ಳುತ್ತಾರೆ.

ಭಗವಂತನ ಪುಣ್ಯ ನಾಮಸ್ಮರಣೆಯನ್ನು ಎಂತಹ ಮನಃಸ್ಥಿತಿಯಲ್ಲಿ ಮಾಡಲು ಸಾಧ್ಯ? ಚೈತನ್ಯರೇ ರಚಿಸಿರುವ ಶಿಕ್ಷಾಷ್ಟಕ ಶ್ಲೋಕವೊಂದರಲ್ಲಿ ಸುಂದರವಾಗಿ ಇದನ್ನು ವ್ಯಾಖ್ಯಾನಿಸಲಾಗಿದೆ. "ತೃಣಾದಪಿ ಸುನೀಚೇನ ತರೋರಪಿ ಸಹಿಷ್ಣುನಾ। ಅಮಾನಿನಾ ಮಾನದೇನ ಕೀರ್ತನೀಯಃ ಸದಾ ಹರಿಃ।।" (ಪ್ರತಿಯೊಬ್ಬನೂ ತಾನು ಬೀದಿಯಲ್ಲಿನ ಒಂದು ಹುಲ್ಲುಕಡ್ಡಿಗಿಂತಲೂ ಕನಿಷ್ಠನೆಂಬ ಭಾವನೆಯಿಂದ, ವಿನಯಶೀಲನಾಗಿ ಭಗವಂತನ ಪವಿತ್ರನಾಮವನ್ನು ಪಠಿಸಬೇಕು. ಎಲ್ಲ ಸುಳ್ಳು ಪ್ರತಿಷ್ಠೆಗಳನ್ನು ಬದಿಗಿಟ್ಟು ಮರಕ್ಕಿಂತಲೂ ಹೆಚ್ಚು ಸಹನಾಶೀಲನಾಗಬೇಕು. ಇಂತಹ ಮನಃಸ್ಥಿತಿಯಲ್ಲಿ ಭಗವಂತನ ಪುಣ್ಯ ನಾಮಸ್ಮರಣೆಯನ್ನು ಸತತವಾಗಿ ಮಾಡಲು ಸಾಧ್ಯ). ಶಿಕ್ಷಾಷ್ಟಕದ ಇನ್ನೊಂದು ಶ್ಲೋಕದಲ್ಲಿ "ನ ಧನಂ ನ ಜನಂ ನ ಸುಂದರೀಮ್ " ನನಗೆ ಸಂಪತ್ತನ್ನು ಸಂಗ್ರಹಿಸುವ ಲಾಲಸೆಯಿಲ್ಲ. ಚೆಲುವೆಯರ ಬಯಕೆಯಿಲ್ಲ. ಅಥವಾ ಅನೇಕ ಮಂದಿ ಶಿಷ್ಯರೂ ಬೇಕಾಗಿಲ್ಲ. ನನಗೆ ಬೇಕಾಗಿರುವುದು–ಜನ್ಮ ಜನ್ಮಗಳಲ್ಲೂ ನಿನ್ನ ನಿಷ್ಕಾರಣ ಭಕ್ತಿಸೇವೆ ಮಾತ್ರ ಎಂದು ಚೈತನ್ಯರು ವ್ಯಾಖ್ಯಾನಿಸಿದ್ದಾರೆ.

ಮೋಕ್ಷ ಸಂಪಾದನೆಗೆ ಜ್ಞಾನ ಮಾರ್ಗ, ಭಕ್ತಿಮಾರ್ಗ ಮತ್ತು ಕರ್ಮ ಮಾರ್ಗ– ಹೀಗೆ ಮೂರು ಮಾರ್ಗಗಳನ್ನು ಭಾರತೀಯ ದಾರ್ಶನಿಕರು ಸೂಚಿಸಿದ್ದಾರೆ. ಆದಿಶಂಕರರು ಜ್ಞಾನ ಮಾರ್ಗ, ಬಸವಣ್ಣನವರು ಕರ್ಮ ಮಾರ್ಗಕ್ಕೆ ಸಂಕೇತವಾಗಿದ್ದರೆ ಚೈತನ್ಯರು ಭಕ್ತಿ ಮಾರ್ಗದ ಹರಿಕಾರರಾಗಿ ಗುರುತಿಸಲ್ಪಡುತ್ತಾರೆ. ಹೊಡೆದಾಟ, ಜಗಳ, ಅಂತಃಕಲಹ, ಕಟಿಪಿಟಿ, ಕಿರಿಕಿರಿ, ಸಣ್ಣಪುಟ್ಟ ವಿಚಾರಗಳಿಗೂ ಕಾಲುಕೆರೆದು ಜಗಳ ತೆಗೆವ ಈ ಕಲಿಯುಗದಲ್ಲಿ ಅಂತಹ ಉಪದ್ವ್ಯಾಪಗಳಿಂದ ಜನರನ್ನು ವಿಮುಖರನ್ನಾಗಿಸಿ ದೈವೀಚಿಂತನೆಯಲ್ಲಿ ಮನಸ್ಸು ಕೇಂದ್ರೀಕರಿಸುವಂತಾಗಬೇಕಾದರೆ ಭಜನೆ, ಸಂಕೀರ್ತನೆ ಮಾತ್ರ ವಿಹಿತವಾದ ಹಾದಿ ಎನಿಸುತ್ತದೆ. ಇದನ್ನರಿತೇ ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘಟನೆಯ (ಇಸ್ಕಾನ್) ಸಂಸ್ಥಾಪಕರಾದ ಶ್ರೀಲ ಪ್ರಭುಪಾದರು ಚೈತನ್ಯರ ತತ್ವಾದರ್ಶಗಳಿಂದ ಪ್ರಭಾವಿತರಾಗಿ, ಪ್ರೇರಣೆ ಪಡೆದು ಭಕ್ತಿಮಾರ್ಗದ ಮೂಲಕ ಪ್ರಾಪಂಚಿಕರ ಹೃದಯ ಕಲ್ಮಷ ತೊಳೆಯುವ ಮಹತ್ತರ ಕಾರ್ಯಕ್ಕೆ ನಾಂದಿ ಹಾಡಿದ್ದು. ಅದೇ ಈಗ ಇಸ್ಕಾನ್ ಸಂಸ್ಥೆಯ ಮೂಲಕ ಜಗತ್ತಿನಾದ್ಯಂತ ಒಂದು ಮಹಾನ್ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನವಾಗಿ ಜನರನ್ನಾಕರ್ಷಿಸುತ್ತಿದೆ.

ಐನೂರು ವರ್ಷಗಳ ಹಿಂದೆ ಚೈತನ್ಯರು ಬಿತ್ತಿದ ಬೀಜ ಗಿಡವಾಗಿ, ಮರವಾಗಿ ಈಗ ಫಲಭರಿತವಾಗಿದೆ.

ಪ್ರತಿಯೊಬ್ಬನ ಮನದಲ್ಲಡಗಿರುವ ದುಷ್ಟತನದ ನಾನಾರೂಪಗಳನ್ನು ಕ್ರಮಶಃ ಮನಸ್ಸಿನಿಂದ ಹೊರಹಾಕಲು ಭಕ್ತಿಯೊಂದೇ ಸಾಧನ ಎಂಬ ಸಂದೇಶವನ್ನು ಚೈತನ್ಯರು ತಮ್ಮ ಶ್ರೇಷ್ಠ ಬದುಕಿನ ಮೂಲಕ ರವಾನಿಸಿದ್ದಾರೆ. ಚೈತನ್ಯರು ಅಂತಹ ಮಹಾನ್ ವ್ಯಕ್ತಿ ಆಗಿದ್ದರೆಂದೇ ಕುವೆಂಪು ರಚಿಸಿದ ನಾಡಗೀತೆಯಲ್ಲೂ ಚೈತನ್ಯರ ಹೆಸರು ಪ್ರಸ್ತಾಪಿಸಲ್ಪಟ್ಟಿದೆ. ಖ್ಯಾತ ಸಾಹಿತಿ ಡಾ.ನಾ.ಮೊಗಸಾಲೆ ಅವರು 'ವಿಶ್ವಂಭರ' ಎಂಬ 640 ಪುಟಗಳ ಬೃಹತ್ ಕಾದಂಬರಿಯನ್ನೇ ರಚಿಸಿದ್ದಾರೆ. ಬೆಂಗಳೂರಿನ ಟಚ್ ಸ್ಟೋನ್ ಫೌಂಡೇಷನ್ ಅದನ್ನು ಪ್ರಕಟಿಸಿದೆ.

ಚೈತನ್ಯರ ಭಕ್ತಿ ಪ್ರವಾಹದ ಆಂದೋಲನಕ್ಕೆ ಜಾತಿ ಮತಗಳ ಅಂತರವಿಲ್ಲ. ಬಡವ–ಬಲ್ಲಿದರೆಂಬ ಚೌಕಟ್ಟಿಲ್ಲ. ಸಮಸ್ತರನ್ನೂ ಈ ಚಳವಳಿ ತನ್ನ ತೆಕ್ಕೆಗೆ ತೆಗೆದುಕೊಂಡಿರುವುದರಿಂದ ಅದು ಗಡಿದಾಟಿ ಜಾಗತಿಕವಾಗಿ ವ್ಯಾಪಕವಾಗುತ್ತಿದೆ. ಚೈತನ್ಯರ ಬದುಕು–ಬೋಧನೆ ದೊಡ್ಡ ದೊಡ್ಡ ಸಾಫ್ಟ್‌ವೇರ್ ಕಂಪನಿಗಳ ಕೈತುಂಬ ವೇತನ ಪಡೆಯುವ ಟೆಕ್ಕಿಗಳನ್ನೂ ಪ್ರೇರೇಪಿಸಿದೆ. ಎಲ್ಲರ ಮನಸ್ಸುಗಳ ಮೇಲೆ ಅಲೌಕಿಕ ಬೆಳಕು ಬೀರಿದೆ. ಸಂಘರ್ಷವಿಲ್ಲದೆ ಸಾಮಾಜಿಕ ಸಾಮರಸ್ಯ ಸಾಧಿಸುವ ತಂತ್ರಗಾರಿಕೆಯನ್ನು ತೆರೆದಿಟ್ಟಿದೆ. ಯುದ್ಧವಿಲ್ಲದ, ಸ್ನೇಹದ ಬದ್ಧತೆ ಸಾರುವ ಸಂದೇಶ ರವಾನಿಸಿದೆ. "ಬಂಗಾಳ ಇಂದು ಯೋಚಿಸಿದ್ದನ್ನು ಭಾರತ ನಾಳೆ ಯೋಚಿಸಲಿದೆ" ಎಂದು ಹಿಂದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೇಳಲಾಗುತ್ತಿತ್ತು. ಬಂಗಾಳದ ಚೈತನ್ಯರು ಹದಿನೈದನೇ ಶತಮಾನದಲ್ಲಿ ಯೋಚಿಸಿದ್ದನ್ನು ಇಡೀ ಜಗತ್ತು ಇಪ್ಪತ್ತೊಂದನೇ ಶತಮಾನದಲ್ಲಿ ಕೃತಿರೂಪಕ್ಕಿಳಿಸುತ್ತಿದೆ ಎಂದರೆ ಚೈತನ್ಯರ ವಿಚಾರಧಾರೆಯ ತಾಕತ್ತು ಎಂತಹುದು ಎಂಬುದು 'ಯಾರಿಗಾದರೂ' ವೇದ್ಯವಾಗಬಹುದು.

ಭಕ್ತಿ ಚಳವಳಿಯ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಇಂದಿನ ಯುವಪೀಳಿಗೆಯ ಹೊಣೆಗಾರಿಕೆಯಾಗಿದೆ.

ತಾರುಣ್ಯದ ತಲ್ಲಣಗಳು–1

ಹರೆಯದಲ್ಲಿ ಜರುಗುವ ಬದಲಾವಣೆಗಳು, ಗಂಡು ಮಕ್ಕಳಲ್ಲಿ ಐದು ಹಂತಗಳಲ್ಲಿ ಮತ್ತು ಹೆಣ್ಣು ಮಕ್ಕಳಲ್ಲಿ ನಾಲ್ಕು ಹಂತಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಪೋಷಕರಿಗೆ ಮಕ್ಕಳ ಬದಲಾವಣೆ ತುಲನೆ ಮಾಡಲು ಮಾರ್ಗದರ್ಶಿಯಾಗುತ್ತವೆ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಮನುಷ್ಯನ ಜೀವಿತಾವಧಿಯನ್ನು ಬಾಲ್ಯ, ಹರೆಯ, ಯೌವ್ವನ, ಪ್ರೌಢತ್ವ, ವೃದ್ಧಾಪ್ಯ ಎಂದು ಐದು ಹಂತಗಳಾಗಿ ವಿಂಗಡಿಸಬಹುದು. ಜನಿಸಿದಾಗಿನಿಂದ ಹನ್ನೆರಡು ವರ್ಷ ವಯಸ್ಸಿನ ಅವಧಿಗೆ ಬಾಲ್ಯ ಎಂದು ಕರೆಯುತ್ತಾರೆ. ಹದಿಮೂರನೇ ವಯಸ್ಸಿನಿಂದ ಹತ್ತೊಂಭತ್ತನೇ ವಯಸ್ಸಿನ ಅವಧಿಗೆ ತಾರುಣ್ಯ ಅಥವಾ ಹರೆಯ ಎನ್ನುತ್ತಾರೆ. ಇದಕ್ಕೆ ಹದಿವಯಸ್ಸು ಎಂದೂ ಕರೆಯುತ್ತಾರೆ. ಇಪ್ಪತ್ತನೇ ವಯಸ್ಸಿನಿಂದ ಮೂವತ್ತರವರೆಗೆ ಯೌವ್ವನ ಎಂದೂ, ಮೂವತ್ತರಿಂದ ಅರುವತ್ತು ವಯಸ್ಸಿನ ವರೆಗೆ ಪ್ರೌಢತ್ವ ಎಂದು ಕರೆಯುತ್ತಾರೆ. ಅರುವತ್ತು ದಾಟಿದ ನಂತರ ವೃದ್ಧಾಪ್ಯ ಎನ್ನುವುದು ವಾಡಿಕೆ. ವೃದ್ಧಾಪ್ಯ ತಲುಪಿದ್ದಾರೆಂದರೆ ಅದು ಒಂದು ವಿಧದಲ್ಲಿ, ಆ ವ್ಯಕ್ತಿಯಲ್ಲಿ ಋಣಾತ್ಮಕ ಭಾವನೆ ಉಂಟಾಗಬಹುದೆಂದು ಭಾವಿಸಿ, ಅವರನ್ನು ಗೌರವಯುತವಾಗಿ 'ಹಿರಿಯ ನಾಗರಿಕರು' ಎಂದು ಕರೆಯುತ್ತಾರೆ. ಇದನ್ನು ಬೇರೆ ವಿಧಗಳಲ್ಲಿ ವಿಂಗಡಿಸುವ ಪರಿಪಾಠವಿದೆ. ಆದರೆ, ಓದುಗರಿಗೆ ಸರಳವಾಗಿ ಅರ್ಥವಾಗಬಹುದೆಂಬ ಭಾವನೆಯಿಂದ ಈ ವಿಧವಾಗಿ ವಿಂಗಡಿಸಿದ್ದೇನೆ.

ಮೇಲೆ ತಿಳಿಸಿದ ಆಯಾಯ ಹಂತಗಳನ್ನಾಧರಿಸಿ, ಹರೆಯದಲ್ಲಿ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ ಹಲವಾರು ಬದಲಾವಣೆಗಳು ಉಂಟಾಗುತ್ತವೆ. ಶರವೇಗದಲ್ಲಿ ಜರುಗುವ ಈ ಬದಲಾವಣೆಗಳು ಹರೆಯದವರನ್ನು ಇನ್ನಿಲ್ಲದ



ಒತ್ತಡಕ್ಕೀಡು ಮಾಡಿ, ಅದರ ಸುಳಿಯಲ್ಲಿ ಅವರ ಮನಸ್ಸು ಅಲ್ಲೋಲ ಕಲ್ಲೋಲಗೊಳ್ಳಬಹುದು. ಇದರೊಂದಿಗೆ, ಈ ಬದಲಾವಣೆ ಗಳು ಹರೆಯದವರಿಗೆ ಹಲವಾರು ಸವಾಲುಗಳನ್ನು ತಂದೊಡ್ಡುತ್ತವೆ. ಇದಕ್ಕೆ ಕಾರಣ ಹರೆಯವು ಪರಾವಲಂಬಿತನದ ಬಾಲ್ಯವನ್ನು ತೊರೆದು ಸ್ವತಂತ್ರತೆಯನ್ನು ಸಾಧಿಸದೇ ಇರುವ ಸಂಕ್ರಮಣದ ಅವಧಿ. ಹರೆಯದ ಬದಲಾವಣೆಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಯೋಣ.

ಹರೆಯ ತಲುಪಿದ್ದಂತೆ ಗಂಡು ಮಕ್ಕಳಲ್ಲಿ ದೇಹದ ಎತ್ತರ ಹೆಚ್ಚಾಗುತ್ತದೆ. ಭುಜಗಳು ಅಗಲವಾಗುತ್ತವೆ. ಶರೀರದ ಗಾತ್ರ ಹಿಗ್ಗುತ್ತದೆ. ದೇಹದ ಸ್ನಾಯುಗಳು ಗಡಸಾಗುತ್ತವೆ. ಗಂಟಲಿ ನಲ್ಲಿ ಧ್ವನಿ ಗಡಸಾಗುತ್ತದೆ. ಸ್ನಾಯುಗಳ ಸಾಂದ್ರತೆ ಹೆಚ್ಚುತ್ತದೆ. ಮೂಳೆಗಳ ಗಾತ್ರ ಹೆಚ್ಚುತ್ತದೆ. ಹೃದಯ ಮತ್ತು ಶ್ವಾಸಕೋಶಗಳ ಗಾತ್ರ ದೊಡ್ಡದಾಗುತ್ತದೆ. ಶಿಶ್ನುವಿನ ಮೇಲ್ಭಾಗ, ಕಂಕುಳಲ್ಲಿ ಕೂದಲುಗಳು ಕಾಣಿಸಿಕೊಳ್ಳುತ್ತವೆ. ಹರೆಯದಲ್ಲಿ ಪ್ರಾರಂಭವಾಗುವ ರಸದೂತಗಳ (Hormones) ಸುರಿತದಿಂದ ಚರ್ಮದಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುತ್ತದೆ. ಹರೆಯದ ಹಂತದಲ್ಲಿ ಗೊನಾಡೋಟ್ರೋಫಿನ್ (Gonadotropin) ಬಿಡುಗಡೆಯ ರಸದೂತ ಹೈಪೋಥಾಲಮಸ್ (Hypothalamus) ಎಂಬ ಗ್ರಂಥಿಯು ಮಿದುಳಿನಲ್ಲಿರುವ ಪಿಟ್ಯುಟರಿ (Pituitary) ಎಂಬ ಗ್ರಂಥಿಗೆ ಸುರಿಸಲು ನಿರ್ದೇಶನ ನೀಡುತ್ತದೆ. ಈ ನಿರ್ದೇಶನದನುಸಾರ ಪಿಟ್ಯುಟರಿ ಗ್ರಂಥಿಯು ಗೊನಾಡೋಟ್ರೋಫಿನ್ (Gonadotropin) ಎಂಬ ರಸದೂತವನ್ನು ಸುರಿಸುತ್ತದೆ. ಗಂಡು ಮಕ್ಕಳಲ್ಲಿ ಶಿಶ್ನು ಮತ್ತು ವೃಷಣಗಳು ವೃದ್ಧಿಯಾಗಿ ಗಾತ್ರವು ಹೆಚ್ಚುತ್ತದೆ. ಸುಮಾರು ಹದಿಮೂರನೇ ಅಥವಾ ಹದಿನಾಲ್ಕನೇ ವಯಸ್ಸಿಗೆ ವೃಷಣಗಳಿಂದ ವೀರ್ಯೋತ್ಪತ್ತಿಯು ಪ್ರಾರಂಭವಾಗುತ್ತದೆ. ವೀರ್ಯೋತ್ಪತ್ತಿಗೆ ಟೆಸ್ಟೋಸ್ಟಿರಾನ್ (Testostirone) ಎಂಬ ರಸದೂತವು ಅವಶ್ಯ. ಟೆಸ್ಟೋಸ್ಟಿರಾನ್ ಸ್ರವಿಸುವಿಕೆಯು ಪ್ರಾರಂಭವಾಗುವುದು ಹರೆಯದ ಈ ಅವಧಿಯಲ್ಲಿ.

ಹೆಣ್ಣು ಮಕ್ಕಳಲ್ಲಿ ದೈಹಿಕವಾಗಿ ಪೃಷ್ಠಗಳು (Hips) ಅಗಲ ವಾಗುತ್ತವೆ. ತೊಡೆ ಮತ್ತು ಪೃಷ್ಠಗಳು ತುಂಬಿಕೊಂಡು ಶರೀರದ ಉಬ್ಬು ತಗ್ಗುಗಳು ರೂಪುಗೊಳ್ಳುತ್ತವೆ. ದೇಹದ ಬೊಜ್ಜು ತುಂಬಿಕೊಳ್ಳುತ್ತದೆ. ಪ್ರೊಜೆಸ್ಟೆರೋನ್ (Progestoron) ಮತ್ತು ಗೊನಾಡೋಟ್ರೋಫಿನ್ ಎಂಬ ರಸದೂತಗಳ ಸ್ರವಿಸುವಿಕೆಯಿಂದ ಸ್ತನಗಳು ದಪ್ಪವಾಗಿ ಜನನಾಂಗದ ಮೇಲ್ಭಾಗ ಮತ್ತು ಕಂಕುಳು ಗಳಲ್ಲಿ ರೋಮಗಳು ಕಾಣಿಸಿಕೊಳ್ಳುತ್ತವೆ. ಹೆಣ್ಣುಮಕ್ಕಳಲ್ಲಿ ಮುಖ್ಯವಾದ ಮತ್ತೊಂದು ಪ್ರಕ್ರಿಯೆ ಋತುವಾಗುವಿಕೆ (Menarche). ಈಸ್ಟ್ರೋಜನ್ (Estrogen) ಎಂಬ ರಸದೂತದ ಸ್ರವಿಸುವಿಕೆಯಿಂದ ಋತುಸ್ರಾವ ಉಂಟಾಗುತ್ತದೆ.

ಮೇಲೆ ತಿಳಿಸಿದ ಬದಲಾವಣೆಗಳು ಎಲ್ಲರಲ್ಲಿಯೂ ಏಕಕಾಲಕ್ಕೆ ಆಗಬೇಕೆಂದೇನೂ ಇಲ್ಲ. ಗಂಡು ಮಕ್ಕಳಾಗಲೀ, ಹೆಣ್ಣು ಮಕ್ಕಳಾಗಲೀ ಇವು ಕೆಲವರಿಗೆ ಒಂದೆರಡು ವರ್ಷಗಳು ಅಂದರೆ ಹನ್ನೊಂದನೇ ವಯಸ್ಸಿನಿಂದ ಹನ್ನೆರಡು ಅಥವಾ ಹದಿಮೂರನೇ ವಯಸ್ಸಿನಲ್ಲಿ ಜರುಗಬಹುದು. ಕೆಲವರಲ್ಲಿ ಒಂದೆರಡು ವರ್ಷಗಳು ತಡವಾಗಿಯಾದರೂ ಆಗಬಹುದು.

ಟ್ಯಾನರ್ (Tanner) ಎಂಬ ಮನೋಶಾಸ್ತ್ರಜ್ಞ ಹರೆಯ ವನ್ನು ಕೆಲವು ಹಂತಗಳಾಗಿ ವಿಂಗಡಿಸಿ, ಪ್ರತಿ ಹಂತದಲ್ಲೂ ಜರುಗುವ ಬದಲಾವಣೆಗಳನ್ನು ವಿವರಿಸಿದ್ದಾರೆ. ಟ್ಯಾನರ್ ಪ್ರಕಾರ ಹರೆಯದಲ್ಲಿ ಜರುಗುವ ಬದಲಾವಣೆಗಳು, ಗಂಡು ಮಕ್ಕಳಲ್ಲಿ ಐದು ಹಂತಗಳಲ್ಲಿ ಮತ್ತು ಹೆಣ್ಣು ಮಕ್ಕಳಲ್ಲಿ ನಾಲ್ಕು ಹಂತಗಳಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ವಿವರಿಸುತ್ತಾರೆ. ಈ ಹಂತಗಳು ಒಂದು ವಿಧದಲ್ಲಿ ಪೋಷಕರು ತಮ್ಮ ಮಗುವಿನ ಹರೆಯದ ಬದಲಾವಣೆಗಳನ್ನು ತುಲನೆ ಮಾಡುವ ಮಾರ್ಗದರ್ಶಿಯಾಗುತ್ತದೆ ಎಂಬುದು ಟ್ಯಾನರ್ ಅವರ ಅಭಿಪ್ರಾಯ.

ಗಂಡು ಮಕ್ಕಳಲ್ಲಿ ಮೊದಲ ಹಂತದಲ್ಲಿ ಅಡ್ರೀನಲ್ ಗ್ರಂಥಿಗಳು ಬೆಳೆಯುವುದನ್ನುಳಿದು ಬೇರೆ ಏನೂ ಬದಲಾವಣೆಗಳು ಕಾಣಿಸಿಕೊಳ್ಳುವುದಿಲ್ಲ. ಇದಕ್ಕೆ ಹರೆಯದ ಮುನ್ನಾ ಹಂತ ಅಥವಾ (Prepubertal stage) ಎಂದು ಕರೆಯುತ್ತಾರೆ. ಎರಡನೇ ಹಂತದಲ್ಲಿ ಮೊದಲೇ ತಿಳಿಸಿದ ದೈಹಿಕ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಹನ್ನೆರಡರಿಂದ ಹದಿನಾರನೆಯ ವಯಸ್ಸಿನ ಅವಧಿಯನ್ನು ಮೂರನೇ ಹಂತ ಎಂದು ಕರೆದರು. ಮೊದಲೇ ತಿಳಿಸಿದಂತೆ ಈ ಹಂತದಲ್ಲಿ ಜರುಗುವ ಬದಲಾವಣೆಗಳೊಂದಿಗೆ ಧ್ವನಿ ಗಡಸಾಗುತ್ತದೆ. ಮೈಯಲ್ಲಿ ಬೆವರು ಕಾಣಿಸಿಕೊಂಡು, ಬೆವರಿನ ವಾಸನೆ ಬರಬಹುದು. ನಾಲ್ಕನೇ ಹಂತದಲ್ಲಿ ಮೇಲೆ ತಿಳಿಸಿದ ಬದಲಾವಣೆಗಳು ಇನ್ನೂ ಹೆಚ್ಚಿನ ಶೀಘ್ರ ಗತಿಯಲ್ಲಿ ಸಾಗುತ್ತವೆ. ಈ ಹಂತವು ಹದಿಮೂರರಿಂದ ಸುಮಾರು ಹದಿನೆಂಟು ವರ್ಷದವರೆಗೆ ವಿಸ್ತರಿಸುತ್ತದೆ. ಈ ಹಂತದಲ್ಲಿ ಮುಖದ ಮೇಲೆ ಮೊಡವೆಗಳು ಕಾಣಿಸಿಕೊಳ್ಳಬಹುದು. ಐದನೇ ಹಂತದಲ್ಲಿ ಹರೆಯದ ಬದಲಾವಣೆಗಳು ಪೂರ್ಣಗೊಳ್ಳುತ್ತವೆ ಎಂದು ಟ್ಯಾನರ್ ತಿಳಿಸುತ್ತಾರೆ.

ಹರೆಯದ ಹೆಣ್ಣು ಮಕ್ಕಳಲ್ಲಿ ಐದು ಹಂತಗಳಲ್ಲಿ ಜರುಗುವ ದೈಹಿಕ ಬದಲಾವಣೆಗಳು ಪೋಷಕರಿಗೆ ತಮ್ಮ ಮಕ್ಕಳಲ್ಲಿ ಜರುಗುವ ಬದಲಾವಣೆಗಳನ್ನು ಗುರುತಿಸಿ, ತುಲನೆ ಮಾಡಿ ಅದಕ್ಕೆ ತಕ್ಕಂತೆ ಕ್ರಮ ತೆಗೆದುಕೊಳ್ಳಲು ಮಾರ್ಗದರ್ಶಿಯಾಗುತ್ತದೆ ಎಂಬುದು ಟ್ಯಾನರ್ ಅವರ ಅಭಿಪ್ರಾಯ. ಒಂಭತ್ತು ವರ್ಷದ ಒಳಗೆ ಮುನ್ನಾ ಹರೆಯ ಎಂದು ಕರೆದ ಟ್ಯಾನರ್ ಅಡ್ರೀನಲ್ ಗ್ರಂಥಿಗಳು ಮತ್ತು ಗರ್ಭಕೋಶವು ದೊಡ್ಡದಾಗುತ್ತವೆ ಎನ್ನುತ್ತಾರೆ. ಇದನ್ನುಳಿದು ಬೇರೆ ಅಂಗಾಂಗಗಳಲ್ಲಿ ಯಾವ ಬದಲಾವಣೆಗಳೂ ಕಾಣಿಸಿಕೊಳ್ಳುವುದಿಲ್ಲ. ಒಂಭತ್ತನೇ ವಯಸ್ಸಿನಿಂದ ಹದಿಮೂರು ವಯಸ್ಸಿನ ಅವಧಿಯನ್ನು ಎರಡನೇ ಹಂತ ಎಂದು ಟ್ಯಾನರ್ ಕರೆದರು.

ಈ ಹಂತದಲ್ಲಿ ಮೊದಲೇ ತಿಳಿಸಿದ ದೈಹಿಕ ಬದಲಾವಣೆಗಳೊಂದಿಗೆ, ಸ್ತನದ ಮೊಲೆ ತೊಟ್ಟಿನ ಸುತ್ತ ಕಪ್ಪು ಬಣ್ಣದ ವರ್ಣ ದ್ರವ್ಯ (Pigment)ದ ವೃತ್ತಾಕಾರದ ಚರ್ಮ ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಬೆವರಿನಿಂದ ಒಂದು ವಿಧದ ವಾಸನೆ ಬರಲು ಪ್ರಾರಂಭವಾಗುತ್ತದೆ. ಮುಖದ ಮೇಲೆ ಮೊಡವೆಗಳು ಕಾಣಿಸಿಕೊಳ್ಳಬಹುದು. ನಾಲ್ಕನೇ ಹಂತದಲ್ಲಿ ಋತುಸ್ರಾವ ಪ್ರಾರಂಭವಾಗುತ್ತದೆ. ಈ ಅವಧಿಯಲ್ಲಿ ಹೆಣ್ಣುಮಕ್ಕಳಲ್ಲಿ ಗರ್ಭಕೋಶಕ್ಕೆ ಅಂಟಿಕೊಂಡಂತೆ ಅಂಡಾಶಯಗಳು (Overies) ವೃದ್ಧಿಗೊಂಡು ಅಂಡಾಣುಗಳ (Ovum) ಉತ್ಪತ್ತಿ ಪ್ರಾರಂಭವಾಗುತ್ತದೆ.

ಹೀಗೆ ಸುಮಾರು ಇಪ್ಪತ್ತು ವರ್ಷಕ್ಕೆ ಐದನೇ ಹಂತವು ಪೂರ್ಣಗೊಂಡು, ಒಂದು ವಿಧದಲ್ಲಿ ಹರೆಯದಲ್ಲಾಗುವ ದೈಹಿಕ ಬದಲಾವಣೆಗಳು ಪೂರ್ಣಗೊಳ್ಳುತ್ತವೆ ಎಂಬುದು ಟ್ಯಾನರ್‌ರವರ ಅಭಿಪ್ರಾಯ.

(ಮುಂದುವರಿಯುವುದು)

ಪ್ರಶಸ್ತಿ ಪ್ರದಾನ ಪ್ರಸಂಗ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಬರುವ ವಾರ ನಮ್ಮದೊಂದು ಕಾರ್ಯಕ್ರಮ ನಡೆಯಲಿಕ್ಕಿದೆ. ನೀವು ಚೆನ್ನಾಗಿ ಮಾತಾಡ್ತೀರಿ ಅಂತೆ. ಎಲ್ಲರೂ ಹೇಳ್ತಿದ್ರು. ನೀವೊಂದು ಅದರ ನಿರೂಪಣೆ ನಡೆಸಿಕೊಡಬೇಕು' ಎಂಬ ಆಹ್ವಾನವೊಂದು ಪರಿಚಿತರ ಮೂಲಕ ಪರಮೇಶಿಗೆ ಬಂದಿತ್ತು. ಇಂಥ ಅವಕಾಶಗಳಿಗಾಗಿ ಕಾಯುತ್ತಿದ್ದ ಪರಮೇಶಿ ಹೆಚ್ಚೇನೂ ಆಲೋಚಿಸದೇ ಒಪ್ಪಿಗೆಯ ಹಸಿರು ನಿಶಾನೆ ತೋರಿಸಿದ್ದ. ಪೂರ್ವಸಿದ್ಧತೆಗೆ ಅನುಕೂಲ ಆಗಲೆಂದು ಏನು ಕಾರ್ಯಕ್ರಮ, ಯಾವಾಗ, ಎಲ್ಲಿ, ಎಷ್ಟೊತ್ತಿಗೆ ಎಂದೆಲ್ಲ ವಿವರಗಳನ್ನು ಆಹ್ವಾನವಿತ್ತವರಲ್ಲಿ ಕೇಳಿ ತಿಳಿದುಕೊಂಡ ಪರಮೇಶಿಗೆ ಅದೊಂದು ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮ ಎನ್ನುವುದು ತಿಳಿಯಿತು. ಜೊತೆಗೇ ಕೆಲವು ಜನರಿಗೆ ಗೌರವ ಸಮರ್ಪಣೆಯೂ ಇದೆಯಂತೆ.

ನಿರೂಪಣೆ ಎಂದರೆ ಚೂರು ಹೆಚ್ಚೇ ಉಮೇದಿನ ಪರಮೇಶಿ, ಸಿದ್ಧತೆಗಳನ್ನು ಮಾಡಿಕೊಳ್ಳಲಾರಂಭಿಸಿದ. ಕಾರ್ಯಕ್ರಮದ ಪಟ್ಟಿ, ಅದಕ್ಕೆ ತಕ್ಕಂತೆ ಆಡಬೇಕಾದ ಮಾತುಗಳ ತಾಲೀಮು ಒಂದೇ ಸಮನೆ ನಡೆಯುತ್ತಲಿತ್ತು. ವಿಶೇಷ ಸಂದರ್ಭಗಳಲ್ಲಿ ಬಳಸಲೆಂದು ಒಳಗೆ ಎತ್ತಿಟ್ಟಿದ್ದ ಜುಬ್ಬಾ, ಕೋಟು ಆದಕ್ಕೆ ಹೊಂದುವ ಬೂಟು ಎಲ್ಲವನ್ನೂ ಹೊರತೆಗೆದು ಜೋಡಿಸಿಟ್ಟುಕೊಂಡ. ತಡರಾತ್ರಿಯವರೆಗೂ ನಿರೂಪಣಾ ಸಾಹಿತ್ಯವನ್ನು ಹೊಸೆಯುತ್ತಾ ಕುಳಿತಿರುತ್ತಿದ್ದ. ಯಾವುದೋ ಕವಿತೆಯ ಸಾಲು, ಮತ್ತಾವುದೋ ವಿವರಣೆ, ಮತ್ತಾರದೋ ಕೋಟ್, ಇನ್ನಾವುದೋ ಹೋಲಿಕೆಗಳನ್ನೆಲ್ಲಾ ಟೇಬಲ್ ಮೇಲೆ ಹರವಿಕೊಂಡು ಒಂದಕ್ಕೊಂದು ಬೆಸೆಯುವ ಕಾಯಕದಲ್ಲಿ ತೊಡಗಿದ್ದ. ಈ ನಿರೂಪಣೆಯ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂಬ ಉತ್ಸಾಹ ಆತನಲ್ಲಿ ಒಂದೇ ಸಮನೆ ಪುಟಿದೇಳುತ್ತಲೇ ಇತ್ತು.

ಅಂತೂ ಇಂತೂ ಕಾರ್ಯಕ್ರಮದ ದಿನವೇ ಬಂತು, ಮೊದಲೇ ನಿರ್ಧರಿಸಿಟ್ಟುಕೊಂಡ ಉಡುಗೆ–ತೊಡುಗೆ, ಕೈಯ್ಯಲ್ಲೊಂದು ಪ್ಯಾಡ್, ಕಿಸೆಯಲ್ಲಿ ಒಂದೆರಡು ಪೆನ್, ಹೆಗಲಿಗೊಂದು ಬ್ಯಾಗ್ ಎಲ್ಲಾ ಹಾಕಿಕೊಂಡು ಸಜ್ಜಾಗಿ, ಕಾರ್ಯಕ್ರಮ ನಡೆಯುವ ದಿನದಂದು ಸ್ಥಳಕ್ಕೆ ಹೋದ. ಆತನೊಳಗಿನ ನಿರೂಪಕ ಎದ್ದೆದ್ದು ಹೆಜ್ಜೆ ಎತ್ತಿಟ್ಟಂತೆ ಆತನಿಗೆ ಭಾಸವಾಗುತ್ತಿತ್ತು. ನೋಡಲು ಅದೊಂದು ಭಾರೀ ಭರ್ಜರಿ ವೇದಿಕೆ. ಹೂವು–ಹಣ್ಣಿನ ಅಲಂಕಾರ, ಸಾಕಷ್ಟು ಜನ ಕುಳಿತುಕೊಳ್ಳಬಹುದಾದ ತುಂಬಾ ದೊಡ್ಡದೇ ಎನ್ನಬಹುದಾದ ಸಭಾಂಗಣ. ಆದರೆ... ಅದರ ಮೂಲೆಯಲ್ಲೆಲ್ಲೋ, ಅಲ್ಲೋ ಇಲ್ಲೋ ಎಂಬಂತೆ ಸ್ವಲ್ಪವೇ ಸ್ವಲ್ಪ ಜನ ಸಣ್ಣ ಸಣ್ಣ ಗುಂಪುಗಳಂತೆ ನೆರೆದು ಕುಳಿತು ತಮ್ಮದೇ ಲೋಕಾಭಿರಾಮದ ಮಾತುಕತೆ, ಹರಟೆಗಳಲ್ಲಿ ಮುಳುಗಿ ಹೋಗಿದ್ದರು. ಪರಮೇಶಿಯ ಉತ್ಸಾಹ, ಹುರುಪುಗಳೆಲ್ಲವೂ ಸಣ್ಣಗೆ ಕಂಪಿಸಿದವು.



ವೇದಿಕೆಯ ಮೇಲಿನ ದೊಡ್ಡದಾದ ಝಗಮಗಿಸುವ ಬ್ಯಾನರ್ ನೋಡಿದ. ಅದರಲ್ಲಿ ಬೇರೆ ಏನೇನೋ ವಿವರಗಳಿದ್ದವು. ಅವುಗಳಲ್ಲಿ ಈತ ಹುಡುಕುತ್ತಿದ್ದ ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮ ಎಂದು ಎಲ್ಲೋ ಸಣ್ಣಗೆ ಬರೆದಿದ್ದು ಕಾಣಿಸಿತು. ಮತ್ತೆ ಆ ಬ್ಯಾನರ್‌ನಲ್ಲಿ ದೊಡ್ಡದಾಗಿ ಏನು ಬರೆದಿದ್ರು ಅಂತ ಕೇಳ್ತಿದೀರಾ? ಮತ್ತೇನೂ ಅಲ್ಲ, 'ಪ್ರಶಸ್ತಿ ಪ್ರದಾನ' ಎಂದು. ಈ ಬಗ್ಗೆ ಏನೂ ಹೇಳಿರಲಿಲ್ಲವಲ್ಲ ಎಂಬ ಯೋಚನೆಯಲ್ಲಿ ಮುಳುಗಿಹೋದ. ಆಯೋಜಕರು ಬಂದು ಪರಮೇಶಿಯನ್ನು ಅಲ್ಲಿಂದ ಮೇಲೆತ್ತಿ, 'ಸರ್ ಬನ್ನಿ ಕಾರ್ಯಕ್ರಮ ಇನ್ನೇನು ಆರಂಭಿಸಿಯೇ ಬಿಡೋಣ' ಅಂತ ಗ್ರೀನ್ ರೂಮ್‌ಗೇ ಕರೆದುಕೊಂಡು ಹೋಗಲು ಅನುವಾದರು.

ಆ ರೂಮ್‌ಗೆ ಹೋಗೋಣ ಎಂದರೆ ಅಲ್ಲಿ ಕಾಲಿರಿಸಲೂ ಜಾಗವಿಲ್ಲ. ಹೋ ಏನು..? ಕಾರ್ಯಕ್ರಮದ ಆಯೋಜಕ ವರ್ಗದವರು, ಕಲಾವಿದರು, ಸ್ವಯಂಸೇವಕರೆಲ್ಲ ಅಲ್ಲಿ ತುಂಬಿಕೊಂಡಿದ್ದೇ ಅದಕ್ಕೆ ಕಾರಣ ಎಂದುಕೊಂಡಿರಾ? ಇಲ್ಲ.. ಇಲ್ಲ.. ಆ ರೂಮು ಶಾಲು, ಹಾರ, ಸ್ಮರಣಿಕೆ, ಬುಟ್ಟಿ, ಚೆಟ್ಟಿ ಇನ್ನೂ ಏನೇನೋ ವಸ್ತುಗಳಿಂದ ತುಂಬಿ ತುಳುಕುತ್ತಿತ್ತು. ಯಾರಿಗೇ ಆದರೂ ಅದರ ಒಳಹೊಕ್ಕು ಕುಳಿತುಕೊಳ್ಳುವುದು ಕಷ್ಟವೇ ಇತ್ತು. ಆಯೋಜಕರು ಅಸಹಾಯಕತೆಯ ನೋಟ ಬೀರಿದರು. ಪರಮೇಶಿ ಅದನ್ನು ಅರ್ಥೈಸಿಕೊಂಡಂತೆ ವೇದಿಕೆ ಹಾಗೂ ರೂಮಿನ ನಡುವೆ ಇರುವ ಮಂದ ಬೆಳಕಿನ ಸಣ್ಣದಾದ ಸಂಧಿಯಲ್ಲೇ ಒಂದು ಕುರ್ಚಿ ಎಳೆದುಕೊಂಡು ಕುಳಿತುಕೊಂಡ. ಎಲ್ಲವನ್ನೂ ಕೊಂಚ ತಹಬಂಧಿಗೆ ತರಲು ಯತ್ನಿಸುತ್ತಾ ದೀರ್ಘ ಉಸಿರೆಳೆದುಕೊಂಡ, ಧೂಳಿನ ಘಾಟು ಮೂಗಿಗೆ ಬಡಿಯಿತು. ತಕ್ಷಣ ಏನೋ ಹೊಳೆದವನಂತೆ, ಎದ್ದು ಹೋಗಿ ವೇದಿಕೆ ಹಿಂದೆ ಅಳವಡಿಸಿದ್ದ ಬ್ಯಾನರ್‌ನ್ನು ಗಮನಿಸಿದ. ಪ್ರಶಸ್ತಿ ಪ್ರದಾನ ಅಂತೆಲ್ಲ ಏನೇನೋ ಬರೆದಿತ್ತಲ್ಲ ಅದನ್ನೇ ದಿಟ್ಟಿಸುತ್ತಾ, ಇಲ್ಲಿನ ಪರಿಸ್ಥಿತಿ ನೋಡಿದರೆ, ಅಲ್ಲಿ ಪ್ರಶಸ್ತಿ 'ಪ್ರಧಾನ' ಎಂದೇ ಬರೆದಿದ್ದರೆ ಒಳ್ಳೆಯದಿತ್ತು ಅಂದುಕೊಂಡ. ಇಲ್ಲಿ 'ಪ್ರಶಸ್ತಿಯೇ ಪ್ರಧಾನ' ಎಂದು ಯಾರಿಗಾದರೂ ಗೊತ್ತಾಗುತ್ತಿತ್ತು. ಆದರೂ ಆ ಬಗ್ಗೆ ಆ ಕ್ಷಣಕ್ಕೆ ಏನೂ ಹೇಳುವುದು ಔಚಿತ್ಯವಲ್ಲವೆನಿಸಿ, ಒಪ್ಪಿಕೊಂಡ ತಪ್ಪಿಗೆ ನಿರೂಪಣೆಗೆ ಸಿದ್ಧನಾದ.

ನೋಡಿದರೆ ಆ ಪುಣ್ಯಾತ್ಮ ಆಯೋಜಕ, ಬಂದವರಿಗೆಲ್ಲ ಪ್ರಶಸ್ತಿ ಪ್ರದಾನ ಮಾಡುವ ಭಾರೀ ಹುಮ್ಮಸ್ಸಿನಲ್ಲಿದ್ದ. ಆದರೆ ಅಲ್ಲಿರುವ ಪ್ರಶಸ್ತಿ ಸಂಬಂಧದ ಸಲಕರಣೆಗಳ ಒಟ್ಟು ಸಂಖ್ಯೆಗೂ ಹಾಗೂ ಅಲ್ಲಿ ನೆರೆದ ಸಭಿಕರ ಸಂಖ್ಯೆಗೂ ಬಹಳ ವ್ಯತ್ಯಾಸವಿತ್ತು. ಅಲ್ಲಿ ಜನರಿಗಿಂತಲೂ ಅವುಗಳೇ ಹೆಚ್ಚಿದ್ದವು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಎಂದುಕೊಳ್ಳುತ್ತೇನೆ. ಮತ್ತೆ ಗೊತ್ತಾಯಿತು, ಬಂದವರು ಬಂದ ಬಂದಂತೆ ಅದನ್ನು ಖರೀದಿಸಿ ಅಲ್ಲಲ್ಲ ಸ್ವೀಕರಿಸಿ ಅಲ್ಲಿಂದ ಕಾಲ್ಕೀಳುವ ವ್ಯವಸ್ಥೆಯೂ ಇತ್ತು. ಅಷ್ಟರಲ್ಲಿ ಆಯೋಜಕರು ಬಂದು ಉದ್ದನೆಯ ಪಟ್ಟಿಯಂಥ ಹಾಳೆಯನ್ನು ಕೈಗಿತ್ತು, ನಿಮ್ಮ ನಿರೂಪಣೆಯಲ್ಲಿ ಇದನ್ನೂ ಸ್ವಲ್ಪ ಸೇರಿಸಿಕೊಳ್ಳಬೇಕು ಎಂದು ಮನವಿಯ ದನಿಯಲ್ಲಿ ಹೇಳಿ, ಅದೃಶ್ಯರಾದರು. ಆ ಪಟ್ಟಿ ತೆರೆದು ನೋಡಿದ ಪರಮೇಶಿಗೋ ಬವಳಿ ಬರುವುದೊಂದು ಬಾಕಿಯಿತ್ತಷ್ಟೇ! ಅದರಲ್ಲಿ ಅಷ್ಟೊಂದು ವಿವಿಧ ಪ್ರಶಸ್ತಿಗಳು ಹಾಗೂ ಅವುಗಳ ಮುಂದೆ ದಂಡಿಯಾಗಿ ಪುರಸ್ಕೃತರ ಹೆಸರುಗಳೂ ಬರೆಯಲ್ಪಟ್ಟಿದ್ದವು. 'ಕರ್ನಾಟಕ ರತ್ನ'ವೇನೋ ಎಂದೆನಿಸುವಂತೆ 'ಕರ್ನಾಟಕ ರತ್ನಮಣಿ' ಪ್ರಶಸ್ತಿ, ಇದು ಪದ್ಮಭೂಷಣ ಅಲ್ಲವೇ ಎನಿಸುವಂಥ 'ಪದ್ಯಭೂಷಣ', ಜ್ಞಾನಪೀಠವಾ ಅಂದರೆ ಅಲ್ಲ 'ಸುಜ್ಞಾನ ಪೀಠ', ವಿದ್ಯಾವಾರಿಧಿ, ವಾಚಸ್ಪತಿ, ಪೇಚಸ್ಪತಿ ಇಂಥ ಏನೇನೋ ವಿಲಕ್ಷಣ, ವಿರೋಧಾಭಾಸ ಎನಿಸುವ ಹೆಸರಿನ ಪ್ರಶಸ್ತಿಗಳೆಲ್ಲವೂ ಆ ಪಟ್ಟಿಯಲ್ಲಿದ್ದವು. ಪರಮೇಶಿಗಂತೂ ತಾನು ಯಾವುದೋ ಪ್ರಶಸ್ತಿ ಮಾರಾಟದ ಕೇಂದ್ರೀಯ ಮಾರುಕಟ್ಟೆಯಲ್ಲೋ, ವ್ಯಾಪಾರ ಮಳಿಗೆಯಲ್ಲೋ ಇದ್ದಂತೆ ಅನಿಸಲಾರಂಭಿಸಿತು. ಅತ್ತಲಿಂದ ದೇಣಿಗೆ ದಾನಿಗಳ ಹೆಸರನ್ನು ಬರೆಸಿಕೊಳ್ಳಲು ಸಜ್ಜಾಗಿ ಖಾಲಿ ರಸೀದಿಗಳು ಫ್ಯಾನ್‌ನ ಗಾಳಿಗೆ ಪಟಪಟಿಸಿ ಕುಣಿದಾಡುತ್ತಿದ್ದವು.

ಅಂತೂ ಇಂತೂ ಕಾರ್ಯಕ್ರಮ ಶುರುವಿಟ್ಟುಕೊಂಡಿತು. ಇನ್ನೂ ಅತಿಥಿಗಳಿಗೆ ಸ್ವಾಗತವನ್ನೇ ಕೋರಿರಲಿಲ್ಲ, ಆಗಲೇ ಯಾರಿಗೋ ಅರ್ಜೆಂಟ್ ಆಗಿ ಹೊರಡಬೇಕಿತ್ತು ಎಂಬ ಕಾರಣದಿಂದ, ಅವರಿಗೊಂದು ಪ್ರಶಸ್ತಿಯನ್ನು ಕೊಟ್ಟು ಕಳುಹಿಸಿಕೊಡಲಾಯಿತು. ಹೀಗೆ ವೇದಿಕೆ ಮೇಲೆಲ್ಲಾ ಈ ಪ್ರಶಸ್ತಿ ಪುರಸ್ಕೃತರು, ಅವರ ಬಂಧು–ಬಾಂಧವರು ಓಡಾಡಿಕೊಂಡಿದ್ದರೆ, ಸಂಗೀತ ಕಲಾವಿದರ ದಂಡು, ವೇದಿಕೆಯ ಒಂದು ಮೂಲೆಗೆ ತಳ್ಳಲ್ಪಟ್ಟಿದ್ದರು. ಅವರು ಆಗಾಗ ಒಂದೊಂದು ಹಾಡನ್ನು ಹಾಡುತ್ತಾ ತಮ್ಮ ಅಸ್ತಿತ್ವವನ್ನು ಎಲ್ಲರ ಮುಂದೆ ತೋರಿಸಲು ಹವಣಿಸುತ್ತಿದ್ದರು. ಕೆಲವೊಮ್ಮೆ ಆರಂಭಿಸಿದ ಒಂದು ಹಾಡು ಮುಗಿಯುವ ಮುನ್ನವೇ, ಆಯೋಜಕರಲ್ಲಿ ಪ್ರಶಸ್ತಿ ಪ್ರದಾನದ ಉನ್ಮಾದ ಕೇಕೇ ಹಾಕಲಾರಂಭಿಸುತ್ತಿತ್ತು. ಒಟ್ಟಾರೆ ಸಂಗೀತ ಕಾರ್ಯಕ್ರಮದೊಳಗೆ ಪ್ರಶಸ್ತಿ ಪ್ರದಾನವೋ ಅಥವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದೊಳಗೆ ಸಂಗೀತ ಕಾರ್ಯಕ್ರಮವೋ ಒಂದೂ ತಿಳಿಯದೇ ನಿರೂಪಕ ಪರಮೇಶಿ ಬೇಸ್ತು ಬಿದ್ದವನಂತೆ ಕುಳಿತಿದ್ದ. ಮೇಲಾಗಿ ಹೆಚ್ಚು ಹಣದ ದೇಣಿಗೆ ಕೊಟ್ಟವರೂ ಇದ್ದಾರೆನಿಸುತ್ತೆ, ಆಯೋಜಕರು ನಿರೂಪಣೆಯಲ್ಲಿ ಅವರ ಬಗ್ಗೆ ಇನ್ನೂ ಹೆಚ್ಚಿನ, ತೂಕದ ವಿಶೇಷಣ ಸೇರಿಸುವಂತೆ ಆಗಾಗ ಬಂದು ಪರಮೇಶಿಯ ಕಿವಿಯಲ್ಲಿ ಪಿಸುಗುಡುವ ಮೂಲಕ ಆತನ ಮೇಲೆ ಒತ್ತಡ ಹೇರುತ್ತಲೇ ಇದ್ದರು.

ಕಾರ್ಯಕ್ರಮ ಆರಂಭವಾಗಿ ಎರಡು ಮೂರು ಗಂಟೆ ಕಳೆದರೂ ಕೇವಲ ಅರ್ಧದಷ್ಟು ಫಲಕಗಳು ಖಾಲಿಯಾಗಿವೆ ಅಷ್ಟೇ! ಹಾಡುಗಾರಿಕೆ ನಡೆಯುತ್ತಲೇ ಇತ್ತು ನಡು ನಡುವೆ, ಸನ್ಮಾನ ಉರುಫ್ ಪ್ರಶಸ್ತಿ ಪ್ರದಾನ ಉರುಫ್ ಗೌರವ ಸಲ್ಲಿಕೆಯೂ ಮುಂದುವರಿದಿತ್ತು. ಪರಮೇಶಿಗೆ ಮತ್ತೆ ತಡೆಯಲಾಗಲಿಲ್ಲ. ಏನೋ ನೆಪ ಹೇಳಿ, ಅರ್ಜೆಂಟ್ ಹೊರಡಬೇಕೆಂದು ಅಲ್ಲಿಂದ ಕಾಲ್ಕೀಳಲು ತಾನು ಅನುವಾದ. ಆತನಿಗೂ ಒಂದು ಫಲಕ ಕೊಟ್ಟು, ಸ್ವಾ ಶಾಲು ಹೊದೆಸಿ, ಕುತ್ತಿಗೆಗೊಂದು ಮಾಲೆ ಹಾಕಿ ಕಳಿಸಿದರು. ಜನರು ಇನ್ನೂ ಬರುತ್ತಲೇ ಇದ್ದರು, ಜೊತೆಗೆ ಆ ಕೊಠಡಿಯಿಂದ ಶಾಲು, ಹಾರಗಳೂ! ಆಯೋಜಕರೇ ಭಾರೀ ಪದ ಪ್ರಯೋಗಕ್ಕೆ ಮುಂದಾಗಿ ನಿರೂಪಕ ಸ್ಥಾನಕ್ಕೆ ಬಡ್ತಿ ಪಡೆದುಕೊಂಡರೆ, ಪರಮೇಶಿ ಅಲ್ಲಿಂದ ಎದ್ದೋ ಬಿದ್ದೋ ಎಂದು ಹೊರಬಿದ್ದ. ಸದ್ಯ ತನಗೂ ಒಂದು 'ನಿರೂಪಣಾ ರತ್ನ' ಪ್ರಶಸ್ತಿ ಕೊಡಲಿಲ್ಲ ಬಚಾವ್ ಎಂದುಕೊಳ್ಳುತ್ತಾ ಮನೆಕಡೆ ದೌಡಾಯಿಸಿದ!

ಓವರ್‌ಡೋಸ್: 'ಓಹ್ ಪ್ರಶಸ್ತಿ ಬಂತಾ?!' ಎಂದು ಮುಂಚೆಲ್ಲ ಆಚ್ಚರಿಯಿಂದ ಕೇಳುತ್ತಿದ್ದರು, ಈಗಲೂ ಹಾಗೇ ಕೇಳುತ್ತಾರೆ ಆದರೆ ಗುಮಾನಿಯಿಂದ!

ಕಿರುಸುದ್ದಿ

ಕುಮಾರಸ್ವಾಮಿ ವಿದ್ಯಾಲಯದಲ್ಲಿ ವಿಜ್ಞಾನ ಮಾದರಿ ಪ್ರದರ್ಶನ



ಸುಬ್ರಮಣ್ಯ: ಅನುಗ್ರಹ ಎಜುಕೇಶನ್ ಟ್ರಸ್ಟ್ ಆಡಳಿತದ ಸುಬ್ರಹ್ಮಣ್ಯದ ಕುಮಾರಸ್ವಾಮಿ ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನವಾದ ಶನಿವಾರ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ತಯಾರಿಸಿದಂತಹ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಲಾಯಿತು. ಸುಮಾರು ಹತ್ತಕ್ಕೂ ಅಧಿಕ ವಿಜ್ಞಾನ ಮಾದರಿಗಳನ್ನು ವಿದ್ಯಾರ್ಥಿಗಳು ತಯಾರಿಸಿದ್ದರು. ಅವುಗಳ ಬಗ್ಗೆ ವೀಕ್ಷಿಸಿದ ಸಂಸ್ಥೆಯ ವಿದ್ಯಾರ್ಥಿಗಳಿಗೆ ವಿವರಣೆ ನೀಡಿದರು. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಸಂಸ್ಥೆಯ ಅಧ್ಯಾಪಕರು ಸಹಕರಿಸಿದರು. ಈ ಸಂದರ್ಭ ಸಂಸ್ಥೆಯ ಸಂಚಾಲಕ ಚಂದ್ರಶೇಖರ್ ನಾಯರ್, ಪ್ರೌಢ ಶಾಲಾ ವಿಭಾಗದ ಮುಖ್ಯ ಶಿಕ್ಷಕಿ ವಿದ್ಯಾರತ್ನ ಎಚ್., ಶಿಕ್ಷಕ ಯೋಗನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮಾ.5: ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಸಾಮೂಹಿಕ ಚಂಡಿಕಾಯಾಗ

ಮಂಗಳೂರು: ನಗರದ ರಥಬೀದಿ ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಶ್ರೀ ಕಾಳಿಕಾಂಬಾ ಹಾಗೂ ಶ್ರೀ ವಿನಾಯಕ ದೇವರ ಶಿಲಾಮಯ ಗರ್ಭಗುಡಿಗಳು ನವೀಕೃತಗೊಂಡು ಪುನರ್ ಪ್ರತಿಷ್ಠಾ ರಜತ ಮಹೋತ್ಸವದ ಅಂಗವಾಗಿ ಮಾ. 5ರಂದು ಶ್ರೀ ಕ್ಷೇತ್ರದಲ್ಲಿ ಸಾಮೂಹಿಕ ಚಂಡಿಕಾಯಾಗ ಮತ್ತು ಸಾಮೂಹಿಕ ಕುಂಕುಮಾರ್ಚನೆ ನಡೆಯಲಿದೆ. ಬೆಳಿಗ್ಗೆ 8.30ಕ್ಕೆ ಸಾಮೂಹಿಕ ಚಂಡಿಕಾ ಯಾಗ ಆರಂಭ. 9.30ಕ್ಕೆ ವಿಶ್ವಬ್ರಾಹ್ಮಣ ಮಹಿಳಾ ಸಮಿತಿ ವತಿಯಿಂದ ಸಾಮೂಹಿಕ ಕುಂಕುಮಾರ್ಚನೆ, ಲಲಿತಾ ಸಹಸ್ರನಾಮ ಪಾರಾಯಣ, ಬೆಳಿಗ್ಗೆ 11.30ಕ್ಕೆ ಚಂಡಿಕಾ ಯಾಗ ಪೂರ್ಣಾಹುತಿ, ಮಧ್ಯಾಹ್ನ 12.30ಕ್ಕೆ ಮಹಾ ಪೂಜೆ, ಸಂತರ್ಪಣೆ ನಡೆಯಲಿದೆ. ನಂತರ ಧಾರ್ಮಿಕ ಸಭೆಯಲ್ಲಿ ಜಗದ್ಗುರು ಅನಂತ ಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಮಹಾಸ್ವಾಮೀಜಿ ಹಾಗೂ ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ ಅವರಿಂದ ಆಶೀರ್ವಚನ ನೆರವೇರಲಿದೆ. ಮಧ್ಯಾಹ್ನ ಗಂಟೆ 1.30ಕ್ಕೆ ಕ್ಷೇತ್ರದ ಕಲಾ ರಂಗ ಮಂಟಪದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಡಾ. ಸಾಂಘವಿ ಎಸ್. ಆಚಾರ್ಯ ಮಂಗಳೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಾಮೂಹಿಕ ಚಂಡಿಕಾ ಹೋಮ ಸೇವೆ, ಕುಂಕುಮಾರ್ಚನೆ ಸೇವೆ ಮಾಡಲಿಚ್ಚಿಸುವವರು ಕ್ಷೇತ್ರದ ಕೌಂಟರ್‌ನಲ್ಲಿ ಮುಂಚಿತವಾಗಿ ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ದೂ. 0824-2423304 ಸಂಪರ್ಕಿಸಬಹುದು ಎಂದು ಕ್ಷೇತ್ರದ ಆಡಳಿತಾಧಿಕಾರಿ ಕೆ. ಉಮೇಶ್ ಆಚಾರ್ಯ ಪಾಂಡೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಉರುಡಾಯಿ ಶ್ರೀ ಮುಖ್ಯಪ್ರಾಣ ದೇವಸ್ಥಾನ, ಕೊಡಂಬೆಟ್ಟು ವಯಾ ವಾಮದಪದವು, ಬಂಟ್ವಾಳ (ತಾ).
2. ಶ್ರೀನಿಧಿ, 'ಸ್ವಾಮಿಕೃಪಾ', ಚಂದ್ರಮಜಲು, ಮುತ್ತೂರು, ಕುಳವೂರು.
3. ಮುಳ್ಯ ಅಟ್ಲೂರು ಹತ್ತು ಸಮಸ್ತರು, ಗಣೇಶ ನಗರ, ಸುಳ್ಯ (ತಾ).
4. ಜ್ಯೋತಿ ಶೇಖರ ಪೂಜಾರಿ, ಜಮಾನಿ ಮನೆ, ಹರೇಗೋಡು, ಕಟ್ಟೆ ಬೆಲ್ತೂರು, ಕುಂದಾಪುರ (ತಾ).
5. ಕೆ.ಸಿ. ಆಳ್ವ, ನೆತ್ತಿಲಬಾಳಿಕೆ, ಎಕ್ಕರಾಡಿ, ಕಾವೂರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
6. ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂದಿರ, ಹೊಳ್ಳರಬೈಲು, ಅಮ್ಟಾಡಿ, ಬಂಟ್ವಾಳ (ತಾ).
7. ಕರಿಂಜೆ ದಿ| ವಿಶ್ವನಾಥ ಶೆಟ್ರ ಸ್ಮರಣಾರ್ಥ ಪತ್ನಿ, ಮಗಳು ಮತ್ತು ಅಳಿಯ, ಕಾಮತ್ ತೋಟ, ಕಾಪು

ಶ್ರೀ ಧರ್ಮಸ್ಥಳ ಮೇಳ
ಸಚ್ಚರಿಪೇಟೆಯಲ್ಲಿ
ಶ್ರೀಮತಿ ನಾಗೇಂದ್ರ ಗಣೇಶ್ ಮತ್ತು ಮನೆಯವರು, ಜನನಿ

ಶ್ರೀ ಸಾಲಿಗ್ರಾಮ ಮೇಳ
ಭಟ್ಕಳ-ಮಾರುಕೇರಿಯಲ್ಲಿ: ಸ್ವಪ್ನಮಂಟಪ

ಶ್ರೀ ಪೆರ್ಡೂರು ಮೇಳ
ಕಕ್ಕುಂಜೆ-ನೆಲ್ಕಕ್ಕಿಯಲ್ಲಿ: ಚದುರಂಗ

ಶ್ರೀ ಹನುಮಗಿರಿ ಮೇಳ
ಬೆಳ್ಮಣ್ಣುವಿನಲ್ಲಿ

ಶ್ರೀ ಪಾವಂಜೆ ಮೇಳ
ಉಪ್ಪಿನಂಗಡಿಯಲ್ಲಿ: ಶ್ರೀ ತುಳಸಿ



ಮುಲ್ಕಿ ನಡಿಕುದ್ರು ಧರ್ಮದೈವ ಶ್ರೀ ಜಾರಂದಾಯ ದೈವಸ್ಥಾನದಲ್ಲಿ ಶ್ರೀ ಧರ್ಮದೈವದ ನೇಮೋತ್ಸವವು ವಿವಿಧ ಸಂಪ್ರದಾಯ, ಆಚರಣೆಗಳೊಂದಿಗೆ ಶನಿವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು. ಇದೇ ಸಂದರ್ಭ ವಿದ್ಯಾರ್ಥಿ ವೇತನ ವಿತರಣೆ ಹಾಗೂ ಸಾಧಕರಿಗೆ ಗೌರವಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಾ.11: ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ 'ಬೃಹತ್ ಬೆಂಗಳೂರು ಚಲೋ'

ಮಡಿಕೇರಿ: ರಾಜ್ಯದ 2026-27ರ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿರಿಸಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವತಿಯಿಂದ ಮಾ.11ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 'ಬೃಹತ್ ಬೆಂಗಳೂರು ಚಲೋ' ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಜಿಲ್ಲಾ ಸಂಚಾಲಕಿ ಗಾಯತ್ರಿ ನರಸಿಂಹ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ಚಲೋ ಪ್ರತಿಭಟನೆಯ ಭಿತ್ತಿಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ಪ್ರತಿಭಟನೆಯಲ್ಲಿ ಕೊಡಗು ಜಿಲ್ಲೆಯ ನೂರಾರು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿಗೆ ಶೇ.24.1ರಷ್ಟು ಅನುದಾನ ಮೀಸಲಿರಿಸಬೇಕು, ಹಣ ದುರ್ಬಳಕೆ ತಡೆಯಲು ಕಾಯ್ದೆಯ ಸೆಕ್ಷನ್ 7 (ಸಿ) ರದ್ದುಪಡಿಸಬೇಕು, ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿದ ರೂ.25 ಸಾವಿರ ಕೋಟಿಯನ್ನು ಮರಳಿ ನೀಡಬೇಕು, ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಪ್ರೊ.ಬಿ. ಕೃಷ್ಣಪ್ಪ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಬೇಕು, ಅವರ ಜನ್ಮದಿನ ಜೂ.9 ಅನ್ನು ರಜಾರಹಿತ ದಿನವನ್ನಾಗಿ ಆಚರಣೆ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಪ್ರತಿಭಟನೆಯ ಸಂದರ್ಭ ಮಂಡಿಸಲಾಗುವುದು ಎಂದರು.

ಕೊಡಗು ಜಿಲ್ಲೆಯಲ್ಲಿರುವ ಆದಿವಾಸಿಗಳು ಹೀನಾಯ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದು, ಇವರಿಗೆ ನಿವೇಶನ ಮತ್ತು ವಸತಿ ಸೌಲಭ್ಯ ನೀಡಿ ಸ್ವತಂತ್ರವಾಗಿ ಬದುಕು ಸಾಗಿಸಲು ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಭೋಜ ಪಿ., ಮಡಿಕೇರಿ ತಾಲ್ಲೂಕು ಮಹಿಳಾ ಸಂಚಾಲಕಿ ಗೌರಮ್ಮ ಹೆಚ್.ಹೆಚ್, ಪೊನ್ನಂಪೇಟೆ ತಾಲ್ಲೂಕು ಸಂಚಾಲಕ ಗಣೇಶ ಪಿ.ಜಿ, ಸದಸ್ಯರುಗಳಾದ ನಿತಿನ್ ಪಿ.ಪಿ ಹಾಗೂ ಕಾವೇರಿ ಪಿ.ಕೆ. ಉಪಸ್ಥಿತರಿದ್ದರು.

ಮಂಗಳೂರಿನಲ್ಲಿ ಎಸ್‌ಸಿ-ಎಸ್‌ಟಿ ಯುವ ಉದ್ಯಮಶೀಲತಾ ಸಮಾವೇಶ

ಸ್ಥಿರತೆ ಇಂದಿನ ಅಗತ್ಯ: ಕ್ಯಾ. ಚೌಟ

ಮಂಗಳೂರು: ಕೇಂದ್ರ ಸರ್ಕಾರ ಇನ್‌ಕ್ಯುಬೇಷನ್ ಸೆಂಟರ್‌ಗಳನ್ನು ಆರಂಭಿಸುವ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವ ಉದ್ದಿಮೆದಾರರಿಗೆ ವಿಶೇಷ ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದ್ದಾರೆ.



ಮಂಗಳೂರಿನ ಎಸ್‌ಡಿಎಂ ಕಾಲೇಜಿನಲ್ಲಿ ಶನಿವಾರ ಎಸ್‌ಸಿ ಎಸ್‌ಟಿ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್ ಹಾಗೂ ಬೊಲ್ಪು ಮಂಗಳೂರು ಸಹಭಾಗಿತ್ವದಲ್ಲಿ ಆಯೋಜಿಸಿದ್ದ 'ಪ್ರೇರಣಾ-2026' ಎಸ್‌ಸಿ-ಎಸ್‌ಟಿ(ಪರಿಶಿಷ್ಟಜಾತಿ- ಪರಿಶಿಷ್ಟಪಂಗಡ) ಯುವ ಉದ್ಯಮಶೀಲತಾ ಸಮಾವೇಶದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೇಂದ್ರದ ಯೋಜನೆಗಳಿಂದಾಗಿ ಯಶಸ್ವಿ ಉದ್ಯಮಿಗಳು ಹೊರಬರುವಂತಾಗಿದೆ ಎಂದರು.

ಉದ್ಯಮದಲ್ಲಿ ಸ್ಥಿರತೆ ಕಾಪಾಡಿಕೊಂಡರೆ ಮಾತ್ರ ಉದ್ಯಮದಲ್ಲಿ ಯಶಸ್ಸಿ ಗಳಿಸಲು ಸಾಧ್ಯವಿದೆ. ಎಸ್‌ಸಿ ಎಸ್‌ಟಿ ಯುವ ಜನತೆ ಸಮಾಜದ ಮುಖ್ಯವಾಹಿನಿಗೆ ಬಂದರೆ, ಸಮರ್ಥ ರಾಷ್ಟ್ರನಿರ್ಮಾಣ ಸಾಧ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಸಮಾವೇಶ ಹಮ್ಮಿಕೊಳ್ಳಲು ಶಿಕ್ಷಣ ಸಂಸ್ಥೆಗಳು ಮುಂದೆ ಬರಬೇಕು. ಈ ಮೂಲಕ ದ.ಕ. ಜಿಲ್ಲೆ ದೇಶಕ್ಕೆ ಮಾದರಿಯಾಗುವ ರೀತಿಯಲ್ಲಿ ಎಸ್‌ಸಿ ಎಸ್‌ಟಿ ಉದ್ಯಮ ಹಬ್ ನಿರ್ಮಾಣಕ್ಕೆ ಕಾರಣವಾಗಬೇಕು ಎಂದರು.

ಸಮಾವೇಶ ಉದ್ಘಾಟಿಸಿದ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಮಾತನಾಡಿ, ಸ್ವಂತ ಉದ್ದಿಮೆ ಸ್ಥಾಪಿಸುವ ಮೂಲಕ ಎಸ್‌ಸಿ ಎಸ್‌ಟಿ ಸಮುದಾಯ ಸಮಾಜದ ಮುಖ್ಯವಾಹಿನಿಗೆ ಬರುತ್ತಿರುವುದು ಸಾಮಾಜಿಕ ಕ್ರಾಂತಿಯ ದ್ಯೋತಕ ಎಂದರು.

ಎಸ್‌ಸಿ ಎಸ್‌ಟಿ ಶಿಕ್ಷಿತರಾದರೆ ಸಮಾಜದಲ್ಲಿ ಆರ್ಥಿಕ ಸಬಲರಾಗಲು ಸಾಧ್ಯವಿದೆ. ಮುಂದಿನ 10 ವರ್ಷಗಳ ಬಳಿಕ ಆದ್ಯತೆಗಳು ಬದಲಾಗಿ ಸರ್ಕಾರಿ ನೇಮಕಾತಿ ವಿರಳವಾಗುವ ಸಂದರ್ಭಗಳು ಬಂದರೆ ಅದನ್ನು ಸಮರ್ಥವಾಗಿ ಎದುರಿಸಲು ಆರ್ಥಿಕ ಸ್ವಾವಲಂಬನೆ ಅತ್ಯಗತ್ಯವಾಗಿದೆ ಎಂದರು.

ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ್ ಕಾಮತ್ ಮಾತನಾಡಿ, ಕೇಂದ್ರ ಸರ್ಕಾರ ಉದ್ದಿಮೆ ಆಸಕ್ತರಿಗೆ ಮುದ್ರಾ ಸಾಲ, ಸ್ಟಾರ್ಟ್ ಅಪ್ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಇವುಗಳ ಸದುಪಯೋಗ ಪಡೆದುಕೊಳ್ಳಲು ಯುವ ಜನತೆ ಮುಂದೆ ಬರಬೇಕು. 2026ರಲ್ಲಿ ಎಲ್ಲರಿಗೆ ಸೂರು ಭಾಗ್ಯವನ್ನು ಕೇಂದ್ರ ಸರ್ಕಾರ ಘೋಷಿಸಿದ್ದು, ಎಸ್‌ಸಿ ಎಸ್‌ಟಿ ಸಮುದಾಯಕ್ಕೆ 5 ಲಕ್ಷ ರೂ.ವರೆಗೆ ಮನೆ ನಿರ್ಮಾಣಕ್ಕೆ ನೆರವು ನೀಡಲಿದೆ ಎಂದರು.

ಉಜಿರೆ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಸಿಇಒ ಪೂರಣ್ ವರ್ಮಾ, ಮಾತನಾಡಿ, 1982ರಲ್ಲಿ ರುಡ್‌ಸೆಟ್ ಸ್ಥಾಪನೆಯಾಗಿ ಸ್ವಉದ್ಯೋಗಕ್ಕೆ ತರಬೇತಿ ನೀಡುತ್ತಿದೆ. ಸ್ವಉದ್ಯೋಗ ಸ್ಥಾಪನೆಗೆ ನೆರವಾಗಲು ಬ್ಯಾಂಕ್‌ಗಳ ಜೊತೆ ಒಪ್ಪಂದ ಮಾಡಿಕೊಂಡಿದೆ. ಈವರೆಗೆ 6.18 ಲಕ್ಷ ಮಂದಿಗೆ ತರಬೇತಿ ನೀಡಲಾಗಿದ್ದು, 4.50 ಲಕ್ಷ ಮಂದಿ ಅಂದರೆ ಶೇ.70ರಷ್ಟು ಸ್ವಉದ್ಯೋಗ ಮಾಡುತ್ತಿದ್ದಾರೆ. ಹೊಸ ಆಲೋಚನೆ ಮೂಲಕ ಉದ್ಯಮ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದರು.

ಇದೇ ಸಂದರ್ಭ ಮಂಗಳೂರಿನ ಎಸ್‌ಸಿ ಎಸ್‌ಟಿ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಮೋಹನಾಂಗಯ್ಯ ಸ್ವಾಮಿ ಹೊರತಂದ 'ಉದ್ಯಮಶೀಲತೆ' ಸಾಧಕರ ಯಶೋಗಾಥೆಯ ಪುಸ್ತಿಕೆಯನ್ನು ಬಿಡುಗಡೆಗೊಳಿಸಲಾಯಿತು. ಸಾಮರಸ್ಯ ಬೆಂಗಳೂರಿನ ವಾದಿರಾಜ್, ಬೆಂಗಳೂರು ದಲಿತ ಉದ್ದಿಮೆದಾರರ ಸಂಘ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಶಿವಪ್ರಸಾದ್ ಕೊಕ್ಕಡ ಸ್ವಾಗತಿಸಿದರು. ಭರತ್ ಕುಮಾರ್ ವಂದಿಸಿದರು. ದಿಶಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

- ಕೇಂದ್ರದ ಯೋಜನೆಗಳಿಂದಾಗಿ ಯಶಸ್ವಿ ಉದ್ಯಮಿಗಳು ಹೊರಬರುವಂತಾಗಿದೆ
- ಉದ್ಯಮದಲ್ಲಿ ಸ್ಥಿರತೆ ಕಾಪಾಡಿಕೊಂಡರೆ ಮಾತ್ರ ಉದ್ಯಮದಲ್ಲಿ ಯಶಸ್ಸಿ ಗಳಿಸಲು ಸಾಧ್ಯ

ಮುದನೀಡಿತು ಯಕ್ಷಗಾನ ತಾಳಮದ್ದಳೆ, ಬಯಲಾಟ



ಮಂಗಳೂರು: ಪುತ್ತೂರು ತಾಲೂಕು ಬೆಟ್ಟಂಪಾಡಿ ಗುತ್ತು, ಧರ್ಮ ಚಾವಡಿ ಪ್ರವೇಶೋತ್ಸವ ಮತ್ತು ಶ್ರೀ ಜಠಾಧಾರಿ ದೈವ, ಧರ್ಮದೈವ ಶ್ರೀ ವ್ಯಾಘ್ರ ಚಾಮುಂಡಿ, ಸಪರಿವಾರ ದೈವಗಳ ಪುನ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮತ್ತು ಶ್ರೀ ದೈವಗಳ ನೇಮೋತ್ಸವ ಇತ್ತೀಚೆಗೆ ಜರಗಿತು. ಈ ಸಂದರ್ಭದಲ್ಲಿ ಬೆಟ್ಟಂಪಾಡಿ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕಲಾಸಂಘದ ವತಿಯಿಂದ 'ಶಿವಭಕ್ತ ವೀರಮಣಿ' ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮ ಪ್ರೇಕ್ಷಕರಿಗೆ ಮುದನೀಡಿತು.

ಬೆಟ್ಟಂಪಾಡಿ ಗುತ್ತು ಕುಟುಂಬಿಕರಿಂದ ಗೌರವ

ಅರ್ಥಧಾರಿಗಳಾದ ಭಾಸ್ಕರ ರೈ ಕುಕ್ಕುವಳ್ಳಿ, ರಾಧಾಕೃಷ್ಣ ಕಲ್ಚಾರ್ ಮತ್ತು ಭಾಸ್ಕರ ಶೆಟ್ಟಿ ಸಾಲ್ಮರ ಅತಿಥಿ ಕಲಾವಿದರಾಗಿ ಭಾಗವಹಿಸಿದ್ದರು. ಸಂಘದ ಅಧ್ಯಕ್ಷ ಐ. ಗೋಪಾಲಕೃಷ್ಣ ರಾವ್ ಕಲಾವಿದರನ್ನು ಪರಿಚಯಿಸಿದರು. ಬೆಟ್ಟಂಪಾಡಿ ಗುತ್ತು ಕುಟುಂಬಿಕರು ಕಲಾವಿದರನ್ನು ಗೌರವಿಸಿದರು.

ಬ್ರಹ್ಮ ಕಲಶೋತ್ಸವ ಸಮಿತಿ ಅಧ್ಯಕ್ಷ ಡಾ.ಮೋಹನ್ ದಾಸ್ ರೈ ಎ. ಸ್ವಾಗತಿಸಿದರು. ಸಂಚಾಲಕ ದಯಾನಂದ ರೈ ಕೋರ್ಮಂಡ ವಂದಿಸಿದರು. ಬಳಿಕ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕಲಾಸಂಘದ ಸದಸ್ಯರಿಂದ 'ಜಾಂಬವತಿ ಕಲ್ಯಾಣ' ಯಕ್ಷಗಾನ ಬಯಲಾಟ ಜರಗಿತು.

ವಿಕಲಚೇತನರಿಗೆ ತ್ವರಿತ ಸೌಲಭ್ಯ: ತೆಕ್ಕಿಲ್

ಮಂಗಳೂರು: ವಿಕಲಚೇತನರು ಸಮಾಜದಲ್ಲಿ ಸಮಾನವಾಗಿ ಪ್ರಗತಿ ಸಾಧಿಸಲು ಅವರಿಗೆ ಅರ್ಹವಾಗಿ ದೊರಕಬೇಕಾದ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಾಹೀದ್‌ತೆಕ್ಕಿಲ್ ಹೇಳಿದರು.



ಅವರು ಪದವಿನಂಗಡಿ ದೇವಿನಗರದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಸಾರಿಗೆ ಇಲಾಖೆ ಇವರ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷಚೇತನರಿಗೆ ವಿವಿಧ ಉದ್ಯೋಗದಾತರ ಪ್ರಾಯೋಜಿತ ಯಾಂತ್ರಿಕ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಕಲಚೇತನರು ಸಮಾಜದಲ್ಲಿ ಯಾವುದೇ ಕೊರತೆಯಾಗದಂತೆ ಪ್ರಗತಿ ಸಾಧಿಸಬೇಕು. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ವಿಕಲಚೇತನರ ಸೌಲಭ್ಯಗಳನ್ನು ವಿಳಂಬವಿಲ್ಲದೆ ನೀಡಬೇಕು. ಇತರರಂತೆ ಅವರು ದುಡಿಯಲು ಹಾಗೂ ಸೇವೆಗೈಯಲು ಈ ಸೌಲಭ್ಯಗಳು ಪೂರಕವಾಗಬೇಕು ಎಂದು ಅವರು ಹೇಳಿದರು. ಕಾರ್ಮಿಕರ ಜೀವನ ಉನ್ನತವಾಗಿರಲು ಅವರಿಗೆ ಕನಿಷ್ಠ ವೇತನ ಒದಗಿಸಲು ರಾಜ್ಯ ಸರಕಾರ ಬದ್ಧವಾಗಿದೆ ಎಂದರು.

ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಅಧ್ಯಕ್ಷೆ ಶಾಲೆಟ್ ಲವೀನಾ ಪಿಂಟೋ ಮಾತನಾಡಿ, ವಿಕಲಚೇತನರು ಸಮಾಜದಲ್ಲಿ ಮುಕ್ತವಾಗಿ ಸಂಚರಿಸಲು ಅವರಿಗೆ ತ್ರಿಚಕ್ರ ವಾಹನ ನೀಡುತ್ತಿರುವುದು ಶ್ಲಾಘನೀಯ. ಈ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆಯೊಂದಿಗೆ ಕೈಜೋಡಿಸಿದ ವಿವಿಧ ಉದ್ಯಮ, ಕೈಗಾರಿಕೆಗಳನ್ನು ಅಭಿನಂದಿಸುವುದಾಗಿ ಅವರು ತಿಳಿಸಿದರು.

ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾಗಟ್ಟಿ ಮಾತನಾಡಿ, ಹೊರಗುತ್ತಿಗೆಯಲ್ಲಿರುವ ಮಹಿಳಾ ನೌಕರರಿಗೆ ಹೊರಗುತ್ತಿಗೆ ಸಂಸ್ಥೆಗಳು ಮಾತೃತ್ವ ರಜೆ ಹಾಗೂ ಋತುಮತಿ ರಜೆಯನ್ನು ನೀಡಲು ನಿರಾಕರಿಸುತ್ತಿರುವ ಪ್ರಕರಣಗಳು ಕಂಡುಬಂದಿದ್ದು, ಅಂತಹ ಏಜೆನ್ಸಿಗಳ ವಿರುದ್ಧ ಕಾರ್ಮಿಕ ಇಲಾಖೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದರು.

ಕೊಂಕಣಿ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನ್ಲಿ ಅಲ್ವಾರಿಸ್, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸದಾಶಿವ ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ, ಕಾರ್ಖಾನೆಗಳ ಉಪನಿರ್ದೇಶಕ ರಾಜೇಶ್ ಮಿಶ್ರಿಕೋಟಿ, ಎಂಆರ್‌ಪಿಎಲ್ ಆಡಳಿತ ಸಿಜಿಎಂ ಪ್ರಶಾಂತ್ ಬಾಳಿಗ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಮಿಕ ಅಧಿಕಾರಿ ಕುಮಾರ್ ಸ್ವಾಗತಿಸಿದರು, ವಿಲ್ಮಾ ಎಲಿಜಬೆತ್ ವಂದಿಸಿದರು.

ಸಮಾರಂಭದಲ್ಲಿ ಸುಮಾರು 90 ತ್ರಿಚಕ್ರ ಸ್ಕೂಟರ್ ವಿತರಿಸಲಾಯಿತು. ಎಂಆರ್‌ಪಿಎಲ್-50, ಎಂಸಿಎಫ್-27, ಬಿಎಸ್‌ಎಫ್-5, ಯೆನೆಪೋಯ ವಿಶ್ವವಿದ್ಯಾಲಯ-3, ಅರವಿಂದ್, ಮಾಂಡೋವಿ, ಕ್ಯಾಂಪ್ಕೋ, ಇನ್ವೆಂಜರ್ ಟೆಕ್ನಾಲಜಿ ಸಂಸ್ಥೆಗಳು ತಲಾ ಒಂದು ತ್ರಿಚಕ್ರ ವಾಹನಗಳನ್ನು ಪ್ರಾಯೋಜಿಸಿದ್ದವು.

ಬೊಳ್ಳೂರು ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶ | ಸುಬ್ರಹ್ಮಣ್ಯ ಶ್ರೀ ಆಶೀರ್ವಚನ

ಧರ್ಮ ಬದುಕಿನ ಅವಿಭಾಜ್ಯ ಅಂಗ

ಕಡಬ: ಮೀನು ಜೀವಿಸಲು ನೀರು ಎಷ್ಟು ಅಗತ್ಯವೋ ಹಾಗೆಯೇ ಮನುಷ್ಯನ ಬದುಕಿಗೆ ಧರ್ಮದ ಆಚರಣೆ ಅಷ್ಟೇ ಮುಖ್ಯ. ಧರ್ಮದ ಆಚರಣೆ ನಮ್ಮ ಬದುಕಿನ ಅವಿಭಾಜ್ಯ ಅಂಗ ಎಂದು ಸುಬ್ರಹ್ಮಣ್ಯದ ಶ್ರೀ ಮಧ್ವಾಚಾರ್ಯ ಮಹಾ ಸಂಸ್ಥಾನಂ ಶ್ರೀ ಸುಬ್ರಹ್ಮಣ್ಯ ಮಠದ ಪೀಠಾಧಿಪತಿ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.



ಅವರು ಕಡಬ ತಾಲೂಕಿನ 102ನೇ ನೆಕ್ಕಿಲಾಡಿ ಗ್ರಾಮದ ಬೊಳ್ಳೂರು ಶ್ರೀ ಷಣ್ಮುಖ ಸುಬ್ರಾಯ ಸ್ವಾಮಿ ದೇವಸ್ಥಾನದ ನವೀಕರಣ ಪುನರ್‌ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಲುವಾಗಿ ಆಯೋಜಿಸಲಾಗಿದ್ದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು. ನಾವು ಧರ್ಮದ ಉಳಿವಿಗಾಗಿ ಕೆಲಸ ಮಾಡಿದರೆ ಧರ್ಮ ನಮ್ಮನ್ನು ಉಳಿಸುತ್ತದೆ. ಮುಖ್ಯವಾಗಿ ನಮ್ಮ ಧಾರ್ಮಿಕ ಆಚರಣೆಗಳು ಮತ್ತು ಸಂಪ್ರದಾಯಗಳಲ್ಲಿ ವೈಜ್ಞಾನಿಕ ಹಾಗೂ ಶಾಸ್ತ್ರೀಯ ಹಿನ್ನೆಲೆಗಳ ಕುರಿತು ನಮ್ಮ ಮುಂದಿನ ಪೀಳಿಗೆಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಧರ್ಮದ ಕುರಿತು ಅರಿತುಕೊಂಡರೆ ಮಾತ್ರ ನಮ್ಮ ಮಕ್ಕಳು ಧರ್ಮದ ಆಧಾರದಲ್ಲಿ ಜೀವಿಸಲು ಸಾಧ್ಯ. ಇಲ್ಲದಿದ್ದಲ್ಲಿ ನಮ್ಮದಲ್ಲದ ಪಾಶ್ಚಾತ್ಯ ಸಂಸ್ಕೃತಿ ಅವರಿಗೆ ಆಕರ್ಷಣೀಯವಾಗಿ ಸೆಳೆಯುತ್ತದೆ. ಆ ನಿಟ್ಟಿನಲ್ಲಿ ಮಾತೆಯವರು ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ಬೊಳ್ಳೂರು ದೇವಸ್ಥಾನದ ಪುನರುಜ್ಜೀವನಕ್ಕೆ ಕಲ್ಪುರೆ ನಾರಾಯಣ ಭಟ್ ಮತ್ತು ಕುಟುಂಬದವರ ನೆರವಿನೊಂದಿಗೆ ಗ್ರಾಮಸ್ಥರು ಪಟ್ಟಿರುವ ಶ್ರಮ ಶ್ಲಾಘನೀಯವಾದುದು ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಧಾರ್ಮಿಕ ಉಪನ್ಯಾಸ ನೀಡಿದ ಸುರತ್ಕಲ್ ಗೋವಿಂದದಾಸ್ ಕಾಲೇಜಿನ ಉಪನ್ಯಾಸಕಿ ಅಕ್ಷತಾ ಶೆಟ್ಟಿ, ಒಂದು ಗ್ರಾಮದ ಜನರ ಬಗ್ಗೆ ತಿಳಿಯಬೇಕಾದರೆ ಅಲ್ಲಿನ ದೇವಸ್ಥಾನವನ್ನು ನೋಡಿದರೆ ಸಾಕು ಎನ್ನುವುದು ಹಿರಿಯರ ಮಾತು. ಬೊಳ್ಳೂರು ದೇವಸ್ಥಾನವನ್ನು ನೋಡಿದಾಗ ಇಲ್ಲಿನ ಜನರ ಶ್ರದ್ಧೆ ಮತ್ತು ಭಕ್ತಿಯ ಪರಿಚಯವಾಗುತ್ತದೆ. ಧರ್ಮದ ಚೌಕಟ್ಟಿನಲ್ಲಿ ನಾವು ಜೀವಿಸಿದಾಗ ನಮ್ಮ ಗ್ರಾಮ ಸುಭಿಕ್ಷೆಯಿಂದ ಇರಲು ಸಾಧ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ಬಾಬು ನಾಯ್ಕ ಎ., ಧಾರ್ಮಿಕ ಸಭೆಯಲ್ಲಿ ಸಿಗುವ ಮಾರ್ಗದರ್ಶನ ನಮ್ಮ ಜೀವನದಲ್ಲಿ ಅಳವಡಿಕೆಯಾಗಬೇಕು. ಹಾಗಾದಾಗ ಮಾತ್ರ ಅಲ್ಲಿನ ಉಪನ್ಯಾಸಗಳಿಗೆ ಬೆಲೆ ಬರುತ್ತದೆ ಎಂದರು.

ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿ ಮುಖ್ಯ ಅತಿಥಿಯಾಗಿದ್ದರು. ಬ್ರಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷ ಜನಾರ್ದನ ಗೌಡ ಪುತ್ತಿಲ ಉಪಸ್ಥಿತರಿದ್ದರು. ದೇವಸ್ಥಾನದ ಅಭಿವೃದ್ಧಿಗಾಗಿ ಶ್ರಮಿಸಿದ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಕಲ್ಪುರೆ ನಾರಾಯಣ ಭಟ್ ಕುಟುಂಬಸ್ಥರನ್ನು ಗೌರವಿಸಲಾಯಿತು.

ಉಪಾಧ್ಯಕ್ಷ ವಿಜಯ ಕುಮಾರ್ ರೈ ಕರ್ಮಾಯಿ ಸಮ್ಮಾನ ಪತ್ರ ವಾಚಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ರಮೇಶ್ ಕಲ್ಪುರೆ ಸ್ವಾಗತಿಸಿ, ಉಪನ್ಯಾಸಕಿ ಸೌಮ್ಯಾ ಶರತ್ ವಂದಿಸಿದರು. ಆರ್.ಜೆ. ಪ್ರಸನ್ನ ಕಾರ್ಯಕ್ರಮ ನಿರ್ವಹಿಸಿದರು.

ಕಿನ್ಯ ಕೇಶವ ಶಿಶು ಮಂದಿರ ನೇತೃತ್ವದಲ್ಲಿ 'ಮನೆ-ಮನೆ' ಭಜನೆ ಆಯೋಜನೆ

'ಪಂಚ ಪರಿವರ್ತನೆ'ಯಿಂದ ಸಂಸ್ಕಾರ ವೃದ್ಧಿ

ಉಳ್ಳಾಲ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶಯವಾದ ಪಂಚ ಪರಿವರ್ತನೆ ಸಂಸ್ಕಾರ ವೃದ್ಧಿಗೆ ಪೂರಕವಾಗಿದ್ದು, ಮನೆ ಮಂದಿ ಒಟ್ಟಿಗೆ ಸೇರಿ ಪ್ರಾರ್ಥನೆ, ಧ್ಯಾನ, ಭಜನೆ ಮಾಡುವುದರಿಂದ ಕುಟುಂಬ ಸಾಮರಸ್ಯ, ಮಕ್ಕಳಲ್ಲಿ ಸಂಸ್ಕಾರ ಬೆಳೆಯುತ್ತದೆ ಎಂದು ಆರೆಸ್ಸೆಸ್ ಮಂಗಳೂರು ವಿಭಾಗದ ಪರ್ಯಾವರಣದ ಪ್ರಮುಖರಾದ ಪುಷ್ಪರಾಜ್ ಕುಂಪಲ ಅಭಿಪ್ರಾಯಪಟ್ಟರು.



ಕಿನ್ಯ ಕೇಶವ ಶಿಶುಮಂದಿರದ ವತಿಯಿಂದ ಸಂಘ ಶತಾಬ್ದಿಯ ಹಿನ್ನಲೆಯಲ್ಲಿ ಹಮ್ಮಿ ಕೊಳ್ಳಲಾದ ಮನೆ-ಮನೆ ಭಜನೆಯ ಪ್ರಯುಕ್ತ ಶಿಶುಮಂದಿರದ ನಿಕಟಪೂರ್ವ ಅಧ್ಯಕ್ಷರಾದ ವಾಸುದೇವ ಮಿತ್ತಡ ಅವರ ಮನೆಯಲ್ಲಿ ನಡೆದ 48ನೇ ಮನೆ ಭಜನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಿನದಲ್ಲಿ ಒಂದು ಹೊತ್ತು ಮನೆ ಮಂದಿಯೆಲ್ಲ ಒಟ್ಟಾಗಿ ಭೋಜನ ಹಾಗೂ ಸಾಮರಸ್ಯದ ನೆಲೆಯಲ್ಲಿ ಎಲ್ಲಾ ಹಿಂದೂಗಳನ್ನು ಮುಕ್ತವಾಗಿ ಮನೆಗೆ ಬರ ಮಾಡಿಕೊಳ್ಳುವುದರಿಂದ ನಮ್ಮ ಮಕ್ಕಳು ಕೂಡ ಉತ್ತಮ ಸಂಸ್ಕಾರ ಮೈಗೂಡಿಸಿಕೊಳ್ಳಲು ಸಹಕಾರಿ ಎಂದರು. ಈ ಸಂದರ್ಭದಲ್ಲಿ ತಲಪಾಡಿ ದೇವಿನಗರದ ಶ್ರೀ ಅವಿನಾಶಿ ಮಹಾದೇವ ಭಜನಾ ಮಂದಿರದ ಹಿರಿಯರಾದ ಐತ್ತಪ್ಪ ದೇವಾಡಿಗರನ್ನು ಅಭಿನಂದಿಸಲಾಯಿತು. ಕಿನ್ಯ ಕೇಶವ ಶಿಶು ಮಂದಿರದ ಗೌರವಾಧ್ಯಕ್ಷರು-ಗಡಿಕಾರರು ಆದ ಶಿವರಾಮ ಶೆಟ್ಟಿ ಸಾಂತ್ಯಗುತ್ತು, ಸೂರಜ್ ಕೊಲ್ಯ, ಸುನಂದ ವಾಸುದೇವ ಉಪಸ್ಥಿತರಿದ್ದರು. ಭಜನಾ ಕಾರ್ಯಕ್ರಮದಲ್ಲಿ ರವಿ ಕಿನ್ಯ, ದಾಮೋದರ, ನಾರಾಯಣ ಕಜೆ, ಪುರುಷೋತ್ತಮ, ವಿಶ್ವನಾಥ ಮಾಧವಪುರ, ಶೋಭಾ ಕಜೆ, ರಾಜೇಶ್ವರಿ ಪಿಲಿಕೂರು, ಜಯಂತಿ ಪಿಲಿಕೂರು, ಜಯಮಾಲಾ, ಬಬಿತಾ, ಪೂರ್ಣಿಮಾ, ಭಾರತಿ ಭಾಗವಹಿಸಿದ್ದರು.

ಮೂಡುಬಿದಿರೆಯ ಆಳ್ವಾಸ್ ಆಯುರ್ವೇದ ಕಾಲೇಜಿನಲ್ಲಿ ವಿಚಾರ ಸಂಕಿರಣ

ವಿಭಿನ್ನ ಯೋಚನೆ ಸಾಧನೆಗೆ ರಹದಾರಿ: ಮಾಳ

ಮೂಡುಬಿದಿರೆ: ಅತಿಯಾದ ಭಾವನಾತ್ಮಕತೆ ಅಥವಾ ಅತಿಯಾದ ಪ್ರಾಯೋಗಿಕ ಮನೋಭಾವ ಇವೆರಡೂ ಸಾಧನೆಗೆ ಅಡ್ಡಿಯಾಗಬಹುದು. ಭಾವನೆ ಮತ್ತು ಪ್ರಾಯೋಗಿಕತೆಯನ್ನು ಸಮತೋಲನದಲ್ಲಿ ಅಳವಡಿಸಿಕೊಂಡು, ವಿಭಿನ್ನವಾಗಿ ಹಾಗೂ ಸೃಜನಾತ್ಮಕವಾಗಿ ಯೋಚಿಸುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ನಿಜವಾದ ಸಾಧನೆ ಸಾಧ್ಯ ಎಂದು ಮಂಗಳೂರು ಶಾಖೆಯ ಎಮ್‌ಎಸ್‌ಎಮ್‌ಇ ಅಭಿವೃದ್ಧಿ ಘಟಕದ ಸಹಾಯಕ ನಿರ್ದೇಶಕ ಸುಂದರ್ ಎಸ್. ಮಾಳ ನುಡಿದರು.



ಆಳ್ವಾಸ್ ಆಯುರ್ವೇದ ಕಾಲೇಜಿನ ಆತ್ರ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಒಂದು ದಿನದ ವಿಚಾರ ಸಂಕಿರಣವನ್ನು ಕಾಲೇಜಿನ ವಿಎಸ್ ಆಚಾರ್ಯ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಕೇರಳ ರಾಜ್ಯದ ಇಡುಕ್ಕಿಯ ನಾಗಾರ್ಜುನ ಹರ್ಬಲ್ ಕನ್ಸಂಟ್ರೇಟ್ಸ್ ಲಿಮಿಟೆಡ್ ಸಂಸ್ಥೆಯ ಉತ್ಪನ್ನ ವಿಭಾಗದ ಸಹಾಯಕ ವ್ಯವಸ್ಥಾಪಕ ಡಾ. ಅಶ್ವಿನ್‌ಎ.ಎಸ್. ಮಾತನಾಡಿ, ಸಂಶೋಧನಾ ಕ್ಷೇತ್ರದಲ್ಲಿ ಗುಣಮಟ್ಟದ ಮಹತ್ವವನ್ನು ಒತ್ತಿಹೇಳಿದ ಅವರು, ಔಷಧ ಉತ್ಪನ್ನಗಳಲ್ಲಿ ರೋಗಿಗಳ ಸುರಕ್ಷತೆ, ಉನ್ನತ ಗುಣಮಟ್ಟ ಹಾಗೂ ವಿಶ್ವಾಸಾರ್ಹತೆ ಅತ್ಯಂತ ಪ್ರಮುಖ ಅಂಶಗಳಾಗಿವೆ ಎಂದು ತಿಳಿಸಿದರು.

ಮಾರ್ಕೆಟಿಂಗ್ ಕ್ಷೇತ್ರದಲ್ಲಿ ಆಧುನಿಕ ಚಿಂತನೆ ಮತ್ತು ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕ. ಇದಲ್ಲದೆ, ಉತ್ಪನ್ನದ ಸಂಸ್ಕರಣೆ ಮತ್ತು ಪ್ಯಾಕಿಂಗ್ ಕ್ರಮಗಳು ಕೂಡ ಗುಣಮಟ್ಟ ಕಾಪಾಡುವಲ್ಲಿ ಹಾಗೂ ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಸುಶೀಲ್ ಶೆಟ್ಟಿ, ವೈದ್ಯಕೀಯ ಆಯುರ್ವೇದ ಕಾಲೇಜಿನ ಅಧೀಕ್ಷಕರಾದ ಡಾ. ಸುರೇಖಾ ಪೈ, ಸ್ನಾತಕೋತ್ತರ ವೈದ್ಯಕೀಯ ಆಯುರ್ವೇದ ಕಾಲೇಜಿನ ಡೀನ್ ಡಾ. ಮಂಜುನಾಥ ಭಟ್, ಆಯುರ್ವೇದ ಪದವಿ ಕಾಲೇಜಿನ ಡೀನ್ ಡಾ. ಸ್ವಪ್ನ ಕುಮಾರಿ, ಆತ್ರ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಸುಬ್ರಹ್ಮಣ್ಯ ಪದ್ಯಾಣ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಡಾ. ಗೀತಾ ಬಿ. ಮಾರ್ಕಂಡೆ ನಿರೂಪಿಸಿ, ಡಾ. ಸುಬ್ರಹ್ಮಣ್ಯ ಪದ್ಯಾಣ ಸ್ವಾಗತಿಸಿ, ಡಾ. ಎಂ. ಎಸ್. ಕೃಷ್ಣಮೂರ್ತಿ ವಂದಿಸಿದರು

ಸುಳ್ಯ ಪಟ್ಟಣದ ತ್ಯಾಜ್ಯದಿಂದ ತುಂಬಿ ತುಳುಕುತ್ತಿದೆ ಕಲ್ಚರ್ಪೆ ಬರ್ನಿಂಗ್, ಪಂಚಾಯತ್ ಶೆಡ್

ಶ್ಶೀಶ್ಶೀ ಇದೆಂಥದ್ದು ಮಾರ್ರೆ, ಕಸದ ರಾಶಿ?

▸ ಮಿಥುನ್ ಕರ್ಲಪ್ಪಾಡಿ.



◆**ಸುಳ್ಯ:** ಸುಳ್ಯ ಪಟ್ಟಣದಲ್ಲಿ ಕಸದ ಸಮಸ್ಯೆ ನಿರಂತರವಾಗಿ ತಾಂಡವವಾಡುತ್ತಿದ್ದು ತ್ಯಾಜ್ಯ ವಿಲೇವಾರಿ ನಡೆಸಲು ಪಟ್ಟಣ ಪಂಚಾಯತ್ ಹೆಣಗಾಡುವ ಪರಿಸ್ಥಿತಿ ನಿರ್ಮಾಣವಾಗಿ ಶೆಡ್ ಹಾಗೂ ಬರ್ನಿಂಗ್ ಕೇಂದ್ರ ಸ್ಥಗಿತಗೊಂಡು ಇದೀಗ ಎಲ್ಲೆಡೆ ತ್ಯಾಜ್ಯ ಸಂಪೂರ್ಣ ಭರ್ತಿಯಾಗಿದೆ.

ಇದೀಗ ನಗರದಲ್ಲಿ ಕಸ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಇಲ್ಲದೇ ನಗರದ ಕಸದ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಜೊತೆಗೆ ನಗರದ ಕಸದ ಬರ್ನಿಂಗ್ ಘಟಕ ಹೊಂದಿರುವ ಕಲ್ಚರ್ಪೆ ಪರಿಸರವೂ ಅಸಮರ್ಪಕ ತ್ಯಾಜ್ಯದಿಂದ ಸಂಪೂರ್ಣ ತುಂಬಿಕೊಂಡಿದೆ.

ಸುಳ್ಯ ನಗರದ ಕಸವನ್ನು ವಿಲೇವಾರಿ ಮಾಡುವ ನಿಟ್ಟಿನಲ್ಲಿ ಕಲ್ಚರ್ಪೆಯಲ್ಲಿ ಬರ್ನಿಂಗ್ ಘಟಕ ಮಾಡಲಾಗಿ ಉತ್ತಮ ರೀತಿಯಲ್ಲಿ ಕಸವನ್ನು ಇಲ್ಲಿ ವಿಲೇವಾರಿ ಮಾಡಿ ಉರಿಸಲಾಗುತ್ತಿತ್ತು. ಆದರೆ ಕಳೆದ ಒಂದು ವರ್ಷಗಳಿಂದ ಇಲ್ಲಿನ ಕಸವನ್ನು ಸಮರ್ಪಕವಾಗಿ ಉರಿಸದೇ ಘಟಕದಲ್ಲಿ ಕಸ ತುಂಬಿದ್ದು, ಜೊತೆಗೆ ಈ ಪ್ರದೇಶದಲ್ಲಿ ಈ ಹಿಂದೆ ತಂದು ಹಾಕಲಾಗಿದ್ದ ತ್ಯಾಜ್ಯವೂ ಇಲ್ಲಿನ ಸೌಂದರ್ಯ ಜೊತೆಗೆ ಆರೋಗ್ಯವನ್ನು ಕೆಡಿಸಿ ಭೂಮಿಯನ್ನು ಮಲಿನ ಮಾಡಿದೆ.

ಕಲ್ಚರ್ಪೆಯಲ್ಲಿ ತುಂಬಿ ತ್ಯಾಜ್ಯ ರಾಶಿ

ಕಲ್ಚರ್ಪೆಯಲ್ಲಿ ತ್ಯಾಜ್ಯ ವಿಲೇವಾರಿಗೆ ಸ್ಥಳವನ್ನು ಪ.ಪಂ. ಹೊಂದಿದ್ದು, ಅಲ್ಲಿ ಕಸವನ್ನು ಉರಿಸುತ್ತಿದೆ. ಇದೀಗ ಇಲ್ಲಿನ ಯಂತ್ರ ಕೆಟ್ಟಿರುವ ಹಿನ್ನಲೆಯಲ್ಲಿ ಕಸವನ್ನು ಉರಿಸುವುದನ್ನು ನಿಲ್ಲಿಸಲಾಗಿದೆ ಎನ್ನಲಾಗಿದೆ. ಪರಿಣಾಮ ಕಸವನ್ನು ನ.ಪಂ.ಶೆಡ್‌ನಲ್ಲಿ ರಾಶಿ ಹಾಕಲಾಗಿತ್ತದೆ. ಜೊತೆಗೆ ಇಲ್ಲಿನ ಘಟಕದಲ್ಲೂ ಕಸ ರಾಶಿ ಹಾಕಲಾಗಿದ್ದು, ಘಟಕವೂ ತ್ಯಾಜ್ಯದಿಂದ ಭರ್ತಿಯಾಗಿದೆ. ಇದಲ್ಲದೇ ಘಟಕದ ಬಳಿ ನಿರ್ಮಾಣಗೊಂಡಿರುವ ಹೊಸ ಶೆಡ್‌ನಲ್ಲೂ ಕಸ ರಾಶಿ ಹಾಕಲಾಗುತ್ತದೆ ಎನ್ನಲಾಗಿದೆ. ಜೊತೆಗೆ ಇಲ್ಲಿನ ಹಳೆದ ಕಸದ ಶೆಡ್‌ನಲ್ಲೂ ಕಸ ಹಾಕಿ ಭರ್ತಿ ಮಾಡಲಾಗಿದೆ. ಇಲ್ಲಿ ಬರ್ನಿಂಗ್ ಘಟಕ ನಿರ್ಮಾಣಕ್ಕೂ ಮೊದಲೇ ಇಲ್ಲಿ ತ್ಯಾಜ್ಯವನ್ನು ಅಸಮರ್ಪಕ ರೀತಿಯಲ್ಲಿ ಎಕರೆಗಟ್ಟಲೇ ಸ್ಥಳದಲ್ಲಿ ಹಾಕಿದ್ದು, ಅದು ತೆರವಾಗದೇ ಇಂದಿಗೂ ತ್ಯಾಜ್ಯ ಗುಡ್ಡದಂತೆ ಬೆಳೆದಿದೆ. ತ್ಯಾಜ್ಯದ ಗುಡ್ಡೆ ಮಳೆಗಾಲದಲ್ಲಿ ಮಳೆ ನೀರಿಗೆ ಕೊಚ್ಚಿಕೊಂಡು ಹೋಗಿ ತೋಡಿನ ಮೂಲಕ ಹರಿದು ಪಯಸ್ವಿನಿಯನ್ನು ಸೇರಿ ನದಿ ಮಲಿನ ಮಾಡುತ್ತಿದೆ. ಇಲ್ಲಿನ ಪರಿಸರವನ್ನೂ ಮಲಿನಗೊಳಿಸುತ್ತಿದೆ. ಇಲ್ಲಿನ ತ್ಯಾಜ್ಯ ರಾಶಿಯ ಗುಡ್ಡ ಇಲ್ಲಿನ ಪರಿಸ್ಥಿತಿ, ಆಡಳಿತ ವ್ಯವಸ್ಥೆಯ ಅಸಮರ್ಪಕತೆಯನ್ನು ಪ್ರದರ್ಶಿಸುತ್ತದೆ. ಇಲ್ಲಿನ ಅಸಮರ್ಪಕ, ಅವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ವಿಲೇವಾರಿ, ಸುರಿದಿರುವುದನ್ನು ಇಲ್ಲಿನ ಜನರು ನಿರಂತರವಾಗಿ ವಿರೋಧಿಸುತ್ತಲೇ ಇದ್ದರೂ ಆಡಳಿತ ಕ್ಯಾರೇ ಅನ್ನುತ್ತಿಲ್ಲ.

ಕಲ್ಚರ್ಪೆಯಲ್ಲಿ ಕಸದ ರಾಶಿಯನ್ನು ಗಮನಿಸಿದಾಗಲೇ ಇದರ ನಿರ್ವಹಣೆ, ತೆರವು ಕಾರ್ಯಕ್ಕೆ ದೊಡ್ಡ ಯೋಜನೆ ಅಗತ್ಯವಾಗಿದ್ದು, ಇಲ್ಲವೇ ಇದು ಇಲ್ಲಿನ ಪರಿಸರ, ನೀರಿನ ಮೂಲಕ್ಕೆ? ದೊಡ್ಡ ಅಪಾಯವೇ ತಂದೊಡ್ಡಲಿದೆ.ಇಲ್ಲಿನ ತ್ಯಾಜ್ಯ ರಾಶಿಯ ಸಮರ್ಪಕ ತೆರವು ಕಾರ್ಯ ನಡೆಸಲೇ ಬೇಕಾಗಿದೆ ಎಂದು ಇಲ್ಲಿನ ನಿವಾಸಿಗಳು ಆಗ್ರಹಿಸಿದ್ದಾರೆ.

ಇತ್ತ ಹೋರಾಟವು ಟುಸ್

ಸುಳ್ಯ ಪಟ್ಟಣ ಪಂಚಾಯತ್ ಶೆಡ್ ತ್ಯಾಜ್ಯ ಹಾಗೂ ಇತರೆ ಸಮಸ್ಯೆಗಳನ್ನು ಮುಂದಿರಿಸಿ ಒಂದು ತಿಂಗಳುಗಳ ಕಾಲ ಮಿತಿಯನ್ನು ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ನೀಡಿತ್ತು ಆದರೆ ಆ ಪ್ರತಿಭಟನೆಯ ಫಲವು ಶೂನ್ಯವಾಗಿದ್ದು ಇತ್ತ ಜಿಲ್ಲಾಧಿಕಾರಿಗಳಿಗೆ ಪ್ರಮುಖರು ಮನವಿ ಸಲ್ಲಿಸಿ ಖಾಸಗಿ ಜಮೀನು ಖರೀದಿಗೆ ಆಗ್ರಹಿಸಿದ್ದರು ಈಗ ಅದು ನೆನೆಗುದಿಗೆ ಬಿದ್ದಿದ್ದು ಸುಳ್ಯ ಪಟ್ಟಣದ ತ್ಯಾಜ್ಯ ಎಂದು ತೀರದ ಸಮಸ್ಯೆಯಾಗಿ ಪರಿಣಮಿಸಿದೆ.ಪಟ್ಟಣ ಪಂಚಾಯತ್ ನಿಂದ ತೀರ್ಮಾನಿಸಿ ಸರಕಾರಕ್ಕೆ ಕಳುಹಿಸಲು ಜಿಲ್ಲಾಧಿಕಾರಿ ಸೂಚಿಸಿದ್ದು ಇದರ ಪ್ರಕಾರ ಶೇ. 60 ಸರಕಾರ ಹಾಗೂ 40 ಶೇ. ಪಂಚಾಯತ್ ವ್ಯಯಿಸಬೇಕಾಗಿದ್ದು ಆ ಪ್ರಕಾರ ಸ್ಥಳ ಮತ್ತು ಖರೀದಿ ಮಾಡಬೇಕು ಎಂಬುವುದು ಸ್ಥಳೀಯರ ಆಗ್ರಹವಾಗಿದೆ.

ಘಟಕವೂ ಸ್ತಬ್ಧ-ಕಸದ ರಾಶಿ

ಕಲ್ಚರ್ಪೆಯಲ್ಲಿ ಸಮರ್ಪಕ ರೀತಿಯಲ್ಲಿ ಕಸ ಬರ್ನಿಂಗ್ ಮಾಡಿದರೇ ಸುಳ್ಯಕ್ಕೆ ಯಾವುದೇ ಸಮಸ್ಯೆ ಆಗುತ್ತಿರಲಿಲ್ಲ. ಆದರೆ ಇಲ್ಲಿ ಅದು ನಡೆದಿಲ್ಲ. ಆದ್ದರಿಂದ ಒಂದು ಉತ್ತಮ ಯೋಜನೆ ಆಗಿದ್ದರೂ ಪರಿಣಾಮ ಎದುರಿಸುವಂತಾಗಿದೆ. ಘಟಕದಲ್ಲಿ ತ್ಯಾಜ್ಯ ರಾಶಿ ತುಂಬಿದ್ದು,ಒಂದೆಡೆಯಲ್ಲಿ ಘಟಕದ ಮೇಲ್ಚಾವಣಿ ಶಿಥಿಲಗೊಂಡು ಹಾನಿಗೊಂಡಿದ್ದು ಪರಿಸರ ತ್ಯಾಜ್ಯದಿಂದ ಮಲಿನಗೊಳ್ಳುವ ಭೀತಿಯೂ ಎದುರಾಗಿದೆ ಆದರೆ ಇದೀಗ ಇಲ್ಲಿ ಲೋಡ್ ಗಟ್ಟಲೇ ತ್ಯಾಜ್ಯ ತುಂಬಿರುವುದರಿಂದ ಇಲ್ಲಿಂದ ಸಾಗಾಟ ಮಾಡುವುದು ಒಂದೇ ಇದೀಗ ಆಡಳಿತಕ್ಕೆ ಪರಿಹಾರವಾಗಿದೆ.

ರಾಷ್ಟ್ರೀಯ ಹೆದ್ದಾರಿ ಸಮೀಪ 8 ಎಕರೆ ಜಮೀನು ಖರೀದಿಗೆ ಆಗ್ರಹ

ಮಾಣಿ ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 6-8 ಕಿಲೋಮೀಟರ್ ದೂರದಲ್ಲಿದೆ ಖಾಸಗಿ ವ್ಯಕ್ತಿಯೋರ್ವರ ಸುಮಾರು 8 ಎಕರೆ ಜಮೀನು ನೀಡಲು ಸಿದ್ದರಿದ್ದು ಇದರಲ್ಲಿ ಸುಸಜ್ಜಿತವಾದ ತ್ಯಾಜ್ಯ ವಿಲೇವಾರಿ ಮತ್ತು ಕಟ್ಟಡ ಕಟ್ಟಿಸಿ ಪಟ್ಟಣದ ತ್ಯಾಜ್ಯ ಸಮಸ್ಯೆ ಪರಿಹಾರವಾಗಲಿ ಅನ್ನುವುದು ನಗರದ ಜನರ ಆಶಯವಾಗಿದೆ.

ಯೆನೆಪೋಯ ವಿವಿಯಲ್ಲಿ ರಾಷ್ಟ್ರೀಯ ಸಮ್ಮೇಳನ



◆**ಮಂಗಳೂರು:** ದೇರಳಕಟ್ಟೆಯ ಯೆನೆಪೋಯ ಪರಿಗಣಿತ ವಿ.ವಿ.ಯ ಯೆನೆಪೋಯ ನರ್ಸಿಂಗ್ ಕಾಲೇಜಿನ ನರ್ಸಿಂಗ್ ಶಿಕ್ಷಣ ವಿಭಾಗ ಮತ್ತು ಪ್ರಥಮ ವರ್ಷದ ಎಂ.ಎಸ್ಸಿ ನರ್ಸಿಂಗ್ ವಿಭಾಗದ ವತಿಯಿಂದ ಡಿಜಿಟಲ್ ಶಿಕ್ಷಣಶಾಸ್ತ್ರ ಬೋಧನ -ಕಲಿಕೆಯಲ್ಲಿ ಕಲೆ ವಿಷಯದ ಬಗ್ಗೆ ಸಂಸ್ಥೆಯ ಯೆಂಡೋರೆನ್ಸ್ ಸಭಾಂಗಣದಲ್ಲಿ ರಾಷ್ಟ್ರೀಯ ಸಮ್ಮೇಳನ ನಡೆಯಿತು.

ಸಮ್ಮೇಳನ ಉದ್ಘಾಟಿಸಿದ ಲಕ್ಷ್ಮೀ ಮೆಮೋರಿಯಲ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಲರಿಸ್ಸಾ ಮಾರ್ಥಾ ಸ್ಯಾಮ್ಸ್ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಬೋಧಕರು ಕೃತಕ ಬುದ್ಧಿಮತ್ತೆ ಸಾಧನಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳಬೇಕು. ಡಿಜಿಟಲ್ ನೈತಿಕತೆ ಮತ್ತು ಆಧುನಿಕ ಶಿಕ್ಷಣದಲ್ಲಿ ಲಭ್ಯವಿರುವ ತಾಂತ್ರಿಕ ಸೌಲಭ್ಯಗಳ ಬಗ್ಗೆ ಅರಿವು ಹೊಂದಿರುವುದು ಅತ್ಯಗತ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ಯೆನೆಪೋಯ ಪರಿಗಣಿತ ವಿಶ್ವವಿದ್ಯಾಲಯದ ಕುಲಸಚಿವ ಡಾ. ಅಶ್ವಿನಿದತ್ ಆರ್. ಅವರು ಪರಿವರ್ತನಾಶೀಲ ಶಿಕ್ಷಣದ ಮಹತ್ವದ ಬಗ್ಗೆ ಮಾತನಾಡಿದರು. ಯೆನೆಪೋಯ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಲೀನಾ ಕೆ.ಸಿ. ಅಧ್ಯಕ್ಷತೆ ವಹಿಸಿದ್ದರು. ವಿವಿಧ ರಾಜ್ಯಗಳ 350 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನದ ಅಧ್ಯಕ್ಷೆ ಡಾ. ಪ್ರಿಯಾ ರೇಷ್ಮಾ ಅರಾನ್ಹಾ ಸ್ವಾಗತಿಸಿ, ಕಾರ್ಯದರ್ಶಿ ನಿತ್ಯಶ್ರೀ ಬಿ.ವಿ.ವಂದಿಸಿದರು.

ಎಂಸಿಸಿ ಬ್ಯಾಂಕ್‌ನ ಬೆಳ್ಮಣ್ ಶಾಖೆಯ ಪ್ರಥಮ ವಾರ್ಷಿಕೋತ್ಸವ

◆**ಮಂಗಳೂರು:** ಎಂ.ಸಿ.ಸಿ. ಬ್ಯಾಂಕಿನ ಬೆಳ್ಮಣ್ ಶಾಖೆಯ ಪ್ರಥಮ ವಾರ್ಷಿಕೋತ್ಸವ ಹಾಗೂ ಒಂದೇ ವರ್ಷದಲ್ಲಿ ರೂ.10 ಕೋಟಿ ವ್ಯವಹಾರ ಗುರಿಯನ್ನು ಯಶಸ್ವಿಯಾಗಿ ದಾಟಿದ ಮಹತ್ವದ ಸಾಧನೆಯನ್ನು ಬೆಳ್ಮಣ್ ಶಾಖೆಯಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ಸಹಕಾರ ರತ್ನ ಅನಿಲ್ ಲೋಬೋ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ, ಪರಪ್ಪಾಡಿಯ ಅವರ್ ಲೇಡಿ ಆಫ್ ಪರ್ಪೆಚುಯಲ್‌ಸುಕುರ್ ಚರ್ಚ್‌ನ ಧರ್ಮಗುರುಗಳಾದ ವಂದನೀಯ ಫಾ। ಡೇನಿಸ್ ಡಿಸೋಜ ಹಾಗೂ ಬೆಳ್ಮಣ್‌ನ ಸಂತಜೋಸೆಫರ ಪ್ರೌಢ ಶಾಲೆಯ ಶಿಕ್ಷಕಿ ಲೈಲಾ ಬಬಿತಾ ನೊರೊನ್ಹಾ ಉಪಸ್ಥಿತರಿದ್ದರು. ಬ್ಯಾಂಕಿನ ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿಸಿಲ್ವಾ, ನಿರ್ದೇಶಕಿ ಡಾ. ಫ್ರೀಡಾಡಿಸೋಜ, ಮಹಾಪ್ರಬಂಧಕ ಸುನಿಲ್ ಮಿನೇಜಸ್ ಮತ್ತು ಬೆಳ್ಮಣ್ ಶಾಖಾ



ಪ್ರಬಂಧಕಿ ಶೈನಿ ಲಸ್ರಾದೊ ಹಾಜರಿದ್ದರು. ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದ ಜನೀಶ್ ಮೆನೆಜೆಸ್, ಪಿಷ್ಮಾಡಿಕ್ರೂಜ್, ರಿಯಾರಾಚೆಲ್‌ರೊಡ್ರಿಗಸ್ ಮತ್ತು ವಲ್ಮಾರಿಸಾಕಾರ್ಡೋಜಾ, ಪಿಯುಸಿಯಲ್ಲಿ ಸಾಧನೆಮಾಡಿದ ಜೋಶ್ವಾ ಹೆರಾಲ್ಡ್ ಫೆರ್ನಾಂಡಿಸ್, ರೋಲಿಶಾ ಪ್ರಿಯಾ ಡಿ'ಸಿಲ್ವಾ ಮತ್ತು ಜೋಸ್ವಿನ್ ಕ್ರಿಸ್ಟನ್ ಪೈಸ್, ತಮ್ಮ 25ನೇ, 50ನೇ, 60ನೇ, 75 ಹಾಗೂ 80ನೇ ಜನ್ಮ ದಿನವನ್ನು ಆಚರಿಸಿದ ಶಾಖೆಯ ಗ್ರಾಹಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ನಿರ್ದೇಶಕಿ ಡಾ. ಫ್ರೀಡಾ ಡಿಸೋಜಾ ಸ್ವಾಗತಿಸಿ, ಜೇಸನ್‌ಪಿರೇರಾ ಶಿರ್ತಾಡಿ ವಂದಿಸಿದರು.

ಹಿಂದೂ ಸಮಾಜದ ಅಸ್ತಿತ್ವದಿಂದಲೇ ದೇಶದಲ್ಲಿ ಜಾತ್ಯತೀತತೆ ಉಳಿದಿದೆ: ಐತಪ್ಪ ಆಳ್ವ ಸುಜೀರುಗುತ್ತು



◆**ಕೊಣಾಜೆ:** ಹಿಂದೂ ಸಮಾಜದ ಅಸ್ತಿತ್ವದಿಂದಲೇ ದೇಶದಲ್ಲಿ ಜಾತ್ಯತೀತತೆ ಉಳಿದಿದೆ. ರಾಜಕೀಯ ಪಕ್ಷಗಳು ಸಮಾಜವನ್ನು ಎಷ್ಟೇ ತುಂಡು ಮಾಡಲು ಪ್ರಯತ್ನಿಸಿದರೂ ಪಾಣೇಲದ ಯುವಕ ಮಂಡಲ ಒಗ್ಗಟ್ಟಿನಿಂದ ಮುನ್ನಡೆಯುತ್ತಿರುವುದು ಶ್ಲಾಘನೀಯ, ಎಷ್ಟೇ ಸಮಸ್ಯೆಗಳು ಎದುರಾದರೂ ಅವು ನಮ್ಮನ್ನು ಮತ್ತಷ್ಟು ಗಟ್ಟಿಗೊಳಿದೆ. ಸಂಸ್ಕೃತಿ, ಸಂಸ್ಕಾರದಂತಹ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯ ನಡೆಯಬೇಕು ಎಂದು ಉದ್ಯಮಿ ಐತಪ್ಪ ಆಳ್ವ ಸುಜೀರುಗುತ್ತು ಹೇಳಿದರು.

ಪಜೀರ್ ಗ್ರಾಮದ ಪಾಣೆಲ ಶಾಂತಿನಗರ ಓಂ ಶ್ರೀ ಗಣೇಶ ಯುವಕ ಮಂಡಲ, ಮಹಿಳಾ ಮಂಡಳಿ ಹಾಗೂ ಭಜನಾ ಮಂಡಳಿ ಇದರ ನೂತನ ಕಟ್ಟಡ ಉದ್ಘಾಟನಾ ಸಮಾರಂಭದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿಂದಿನ ದಿನಗಳಲ್ಲಿ ಶಾಲೆಗಳಲ್ಲೂ ಭಜನೆ ನಡೆಯುತ್ತಿದ್ದರೆ ಇತ್ತೀಚೆಗೆ ಅದಕ್ಕೆ ಅವಕಾಶ ಕಡಿಮೆಯಾಗಿದೆ. ನಮಗೆ ಮಹಾಭಾರತ, ರಾಮಾಯಣ ಇದ್ದರೂ ಅದರ ಶ್ಲೋಕಗಳೇ ಗೊತ್ತಿಲ್ಲ, ಈ ಹಿನ್ನೆಲೆಯಲ್ಲಿ ಯುವಜನತೆಗೆ ಪರಿಚಯಿಸುವ ಕೆಲಸ ಅಗತ್ಯವಿದೆ ಎಂದು ಹೇಳಿದರು.

ಬಂಟ್ವಾಳ ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಬದಿಗುಡ್ಡೆ, ಮನಪಾ ಅಧಿಕಾರಿ ರೇಖಾ ಜೆ.ಶೆಟ್ಟಿ, ದಾನಿ ವಿಧಿತ ಪಾಳ್ಯ, ಓಂ ಶ್ರೀ ಮಹಿಳಾ ಮಂಡಳಿ ಅಧ್ಯಕ್ಷೆ ಮಲ್ಲಿಕಾ ಪೂಂಜಾ, ಸ್ಥಳೀಯ ಮುಖಂಡ ಮಹಾಬಲ ಶೆಟ್ಟಿ, ಅಮ್ಮೆಂಬಳ ಸೇವಾ ಸಹಕಾರಿ ಸಂಘದ ಉಪಾಧ್ಯಕ್ಷ ಜಯರಾಮ ಶೆಟ್ಟಿ ಕಂಬಳಪದವು, ಮಂಗಳೂರು ಮಂಡಲ ಬಿಜೆಪಿ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್, ಮಾಜಿ ಅಧ್ಯಕ್ಷ ಚಂದ್ರಹಾಸ ಪಂಡಿತ್‌ಹೌಸ್, ಗ್ರಾಮಚಾವಡಿ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷ ವಿಜೇತ್ ಪಜೀರ್, ಬೋಳಿಯಾರ್ ನಾರಾಯಣ ಗುರು ಮಂದಿರದ ಅಧ್ಯಕ್ಷ ಗಣೇಶ್ ಸಾಲ್ಯಾನ್, ಮಂಗಳೂರು ಪ್ರಾವಿಡೆಂಟ್ ಫಂಡ್ ಅಧಿಕಾರಿ ಎಚ್.ಡಿ.ಗಂಗಾಧರ್, ಓಂ ಶ್ರೀ ಯುವಕ ಮಂಡಲದ ಅಧ್ಯಕ್ಷ ಜಗದೀಶ್ ಕೋಟ್ಯಾನ್ ಪಾಣೇಲ ಮೊದಲಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದ ಗಣ್ಯರನ್ನು, ಸ್ಥಳದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಟ್ಟಡ ನಿರ್ಮಾಣ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ರೈ ಬೋಳಿಯಾರ್ ಸ್ವಾಗತಿಸಿದರು. ಸಂದೀಪ್ ಕುಂಪಲ ಕಾರ್ಯಕ್ರಮ ನಿರೂಪಿಸಿದರು.

ನಾಪೋಕ್ಲುವಿಗೆ ಸಂಸದ ಭೇಟಿ

ಹಲ್ಲೆಕೋರರ ವಿರುದ್ಧ ಕ್ರಮಕ್ಕೆ ಸರಕಾರಕ್ಕೆ ಆಗ್ರಹ



◆**ನಾಪೋಕ್ಲು:** ಹಿಂದೂ ಸಂಗಮ ಕಾರ್ಯಕ್ರಮ ಆಯೋಜನ ವೇಳೆ ಅಹಿತಕರ ಘಟನೆ ನಡೆದಿದ್ದು ಕಿಡಿಗೇಡಿಗಳಿಗೆ ತಕ್ಷಣ ಶಿಕ್ಷೆ ಆಗಬೇಕು. ರಾಜ್ಯ ಸರ್ಕಾರ ಕಾನೂನು ವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಸದ ಯದುವೀರ್ ಒಡೆಯರ್ ಸರ್ಕಾರವನ್ನು ಒತ್ತಾಯಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸಂಸದರ ಭೇಟಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಭಾಗದಲ್ಲಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರಿಗೆ ಬದುಕಲು ಕಷ್ಟ ಆಗುತ್ತಿದೆ ಎಂಬುದು ಗಂಭೀರವಾದ ವಿಚಾರ. ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಕಾನೂನು ವ್ಯವಸ್ಥೆ ಕಾಪಾಡಬೇಕು ಎಂದರು. ಎಲ್ಲರಿಗೂ ಒಂದೇ ಕಾನೂನು ಪಾಲನೆ ಮಾಡುವಂತಗಬೇಕು. ತಕ್ಷಣ ಕೋಮುವಾದಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದು ಗಂಭೀರವಾದ ವಿಚಾರ ಎಲ್ಲರನ್ನು ಸಮಾನವಾಗಿ ಪರಿಗಣಿಸಿ ಎಂದು ಪೊಲೀಸ್ ಇಲಾಖೆಗೆ ಇಲ್ಲಿಯ ಪೊಲೀಸ್ ಠಾಣಾಧಿಕಾರಿ ರಾಘವೇಂದ್ರ, ಅವರ ಮೂಲಕ ಸೂಚಿಸಿದರು.

ಬಿಜೆಪಿ ಮುಖಂಡ ಮನು ಮುತ್ತಪ್ಪ ಮಾತನಾಡಿ, ಹಿಂದೂ ಬಾಂಧವರು ನಾಪೋಕ್ಲು ಪಟ್ಟಣಕ್ಕೆ ಬರಲು ಹಿಂದೇಟು ಹಾಕುವಂತಾಗಿದೆ. ಪೊಲೀಸ್ ಇಲಾಖೆ ನಿಷ್ಕ್ರಿಯವಾಗಿದೆ. ಹಿಂದು ಕಾರ್ಯಕರ್ತರ ಮೇಲೆ ಹತ್ತಾರು ಕಾನೂನುಗಳನ್ನು ಹೇರಲಾಗುತ್ತಿದೆ. ಒಂದು ಕೋಮಿನವರಿಗೆ ಒಂದು ಕಾನೂನು ಮತ್ತೊಂದು ಕೋಮಿನವರಿಗೊಂದು ಕಾನೂನು ಹೇರಿ ತಾರತಮ್ಯ ಮಾಡಲಾಗುತ್ತಿದೆ. ಬಂಟಿಂಗ್ ಇರಿಸಿಕೊಳ್ಳುವ ಮೂರು ದಿನ ಕಾಲಾವಕಾಶವನ್ನು ನೀಡುತ್ತಿಲ್ಲ ಎಂದು ಆರೋಪಿಸಿದರು.

ಮಾಜಿ ಶಾಸಕ ಅಪ್ಪಚ್ಚು ರಂಜನ್, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಬಳ್ಳಮ್ಮ ಪಟ್ಟಿ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಕರವಂಡ ಲವ ನಾಣಯ್ಯ , ವಿರಾಜಪೇಟೆ ಬಿಜೆಪಿ ಮಂಡಲ ಅಧ್ಯಕ್ಷ ಸುವಿನ್ ಗಣಪತಿ, ಮಡಿಕೇರಿ ನಗರ ಬಿಜೆಪಿ ಅಧ್ಯಕ್ಷ ಸುಬ್ರಮಣಿ, ಮಡಿಕೇರಿ ಗ್ರಾಮಾಂತರ ಮಂಡಲ ಬಿಜೆಪಿ ಕಾರ್ಯದರ್ಶಿ ಉಕ್ಕುಳಂಡ್ರ ಧನೋಜ್ , ಜಿಲ್ಲಾ ಬಿಜೆಪಿ ಸಾಮಾಜಿಕ ಜಾಲತಾಣದ ಸಹ ಸಂಚಾಲಕ ಕರವಂಡ ಅಪ್ಪಣ್ಣ ಸೇರಿದಂತೆ ಇತರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭ ಜಿಲ್ಲಾ ಬಿಜೆಪಿ ರೈತ ಮೋರ್ಚ ಕಾರ್ಯದರ್ಶಿ ಶಿವಚಾಳಿಯಂಡ ಜಗದೀಶ್, ಮಡಿಕೇರಿ ಗ್ರಾಮಾಂತರ ಬಿಜೆಪಿ ಮಂಡಲ ಉಪಧ್ಯಕ್ಷ ಅಮ್ಮಂಡ ಮನು ಮಹೇಶ್, ಮಡಿಕೇರಿ, ಬಿಜೆಪಿ ಮಂಡಲ ಗ್ರಾಮಾಂತರ ಓಬಿಸಿ ಅಧ್ಯಕ್ಷ ಬಿಎಂ ಪ್ರತೀಪ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿಎ ಹರೀಶ್,,ತಾಲೂಕು ಪಂಚಾಯತಿ ಮಾಜಿ ಸದಸ್ಯ ಉಮಾ ಪ್ರಭು, ಬಳ್ಳಮ್ಮಮಾಟ್ಟಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಹರೀಶ್, ಪಾರಾಣೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪಾಡೆಯಂಡ ಕಟ್ಟಿ ಕುಶಾಲಪ್ಪ, ಗ್ರಾಮ ಪಂಚಾಯತ್ ಮಾಜಿ ಸದಸ್ಯ ನೀಲಮ್ಮ. ಬಿಜೆಪಿ ಪಕ್ಷದ ಪದಾಧಿಕಾರಿಗಳು ಚುನಾಯಿತ ಪ್ರತಿನಿಧಿಗಳು ಹಾಗೂ ಮುಖಂಡರು, ಪಾಲ್ಗೊಂಡಿದ್ದರು.

ಬೆಟ್ಟದ ಶ್ರೀ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಪ್ರಧಾನಿ ಸಹೋದರ ಪ್ರಹ್ಲಾದ್ ಮೋದಿ ಭೇಟಿ



◆**ಪುತ್ತೂರು:** ಗಾಣಿಗ ಸಮಾಜದ ಜಿಲ್ಲಾ ಮಟ್ಟದ ಗಾಣಿಗ ಸಂಗಮ ಕಾರ್ಯಕ್ರಮಕ್ಕೆ ಆಗಮಿಸಿದ್ದ, ಭಾರತೀಯ ತೈಲಿಕ್ ಸಾಹು ರಾಥೋಡ್ ಮಹಾಸಭಾ ಮುಖ್ಯ ಸಲಹೆಗಾರ, ಪ್ರಧಾನಮಂತ್ರಿ ನರೇಂದ್ರ ಮೋದಿಯವರಸಹೋದರಪ್ರಹ್ಲಾದ್ ಮೋದಿಯವರು ಲಕ್ಷ್ಮೀದೇವಿ ಬೆಟ್ಟದ ಶ್ರೀ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಭೇಟಿ ನೀಡಿದರು.

ಬೆಳಗ್ಗೆ ಮಂಗಳೂರಿನಿಂದ ರಸ್ತೆ ಮಾರ್ಗದ ಮೂಲಕ ಪುತ್ತೂರಿಗೆ ಆಗಮಿಸಿದ ಅವರು ಪ್ರಾರಂಭದಲ್ಲಿ ರೈಲು ನಿಲ್ದಾಣದ ಬಳಿಯ ಲಕ್ಷ್ಮೀದೇವಿ ಬೆಟ್ಟದ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದರು. ಕ್ಷೇತ್ರದ ಧರ್ಮದರ್ಶಿ ಐತ್ತಪ್ಪ ಸಪಲ್ಯ ಅವರು ಪ್ರಹ್ಲಾದ್ ಮೋದಿಯವರಿಗೆ ದೇವಿಯ ಪ್ರಸಾದ ನೀಡಿ ಗೌರವಿಸಿದರು. ಕೃಷ್ಣಪ್ರಸಾದ್ ಬೆಟ್ಟ, ಜನಾರ್ದನ ಬೆಟ್ಟ, ಲಕ್ಷ್ಮೀ ಅರ್ಪಣ್ ಉಪಸ್ಥಿತರಿದ್ದರು. ಪುತ್ತೂರಿನ ವಾಣಿಯನ್/ಗಾಣಿಗ ಸಮುದಾಯ ಸೇವಾ ಸಂಘ, ಬಿಜೆಪಿ ನಗರ ಮಂಡಲಗಳಿಂದ ಪ್ರಹ್ಲಾದ್ ಮೋದಿಯವರನ್ನು ಗೌರವಿಸಿದರು.

ನಾನು ಒಬ್ಬ ಗಾಣಿಗ ಸಮಾಜದ ಸದಸ್ಯ. ಕರ್ನಾಟಕದಲ್ಲಿ ತನ್ನ ಸಮುದಾಯದ ಆಯೋಜಿಸಿರುವ ಕಾರ್ಯಕ್ರಮಕ್ಕೆ ಗುಜರಾತ್‌ನಿಂದ ಆಗಮಿಸಿದ್ದು ಮಹಾಲಕ್ಷ್ಮೀ ದೇವಸ್ಥಾನಕ್ಕೆ ಭೇಟಿ ನೀಡುವ ಸೌಭಾಗ್ಯ ದೊರೆತಿದೆ. ಹೀಗಾಗಿ ನಾನು ಕರ್ನಾಟಕದ ಗಾಣಿಗ ಸಮಾಜದರಿಗೆ ಬಹಳಷ್ಟು ಆಭಾರಿಯಾಗಿದ್ದೇನೆ. ಮಹಾಲಕ್ಷ್ಮೀ ಕ್ಷೇತ್ರಕ್ಕೆ ಭೇಟಿ ನೀಡಿ ದೇವಿ ದರ್ಶನ ಪಡೆದು ನನ್ನ ಮನಸ್ಸಿಗೆ ಬಹಳಷ್ಟು ಆನಂದವಾಗಿದೆ. ಇಂತಹ ಅಪೂರ್ವ ಅವಕಾಶವನ್ನು ನನ್ನ ಮನ ಮನದಲ್ಲಿ ಮರೆಯಲು ಸಾಧ್ಯವಿಲ್ಲ. ಬಹಳಷ್ಟು ಪುರಾತನ ಮಂದಿರವಾಗಿದ್ದು ಇದನ್ನು ಗಾಣಿಗ ಸಮಾಜದವರೇ ನಡೆಸುತ್ತಿದ್ದಾರೆ. ಕ್ಷೇತ್ರದ ಜೀರ್ಣೋದ್ಧಾರದ ಕಾಮಗಾರಿಗಳು ನಡೆಯುತ್ತಿರುವುದವು ನನ್ನ ಗಮನಕ್ಕೆ ಬಂದಿದೆ. ಸಮಾಜದ ದೊಡ್ಡ ವ್ಯಕ್ತಿಗಳು ಜೀರ್ಣೋದ್ಧಾರದಲ್ಲಿ ಕೈ ಜೊಡಿಸಿದ್ದು ಗುಜರಾತ್‌ನ ಗಾಣಿಗ ಸಮಾಜ ಹಾಗೂ ಪ್ರಧಾನಿ ನರೇಂದ್ರ ಮೋದಿ ಕುಟುಂಬದ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ಸನಾತನ ಧರ್ಮದ ಎಲ್ಲಾ ಸಮಾಜದವರ ಮೂಲಕ ಈ ಕ್ಷೇತ್ರವು ಪುನರ್ ನಿರ್ಮಾಣಗೊಳ್ಳಲಿ ಹಾರೈಸಿದರು.

ಅಖಿಲ ಕರ್ನಾಟಕ ಗಾಣಿಗ ಸಂಘದ ಅಧ್ಯಕ್ಷ ರಾಜಶೇಖರ್ ಮಾತನಾಡಿ, ಲಕ್ಷ್ಮೀದೇವಿ ಬೆಟ್ಟದ ಮಹಾಲಕ್ಷ್ಮೀ ಕ್ಷೇತ್ರವು ಹಿಂದೂಗಳ ದ್ಯೋತಕವಾಗಿದೆ. ಈ ದೇವಸ್ಥಾನದ ಜೀರ್ಣೋದ್ಧಾರ ಪ್ರಾರಂಭಗೊಂಡಿದ್ದು ಪ್ರತಿಯೊಬ್ಬರೂ ತನು ಮನ ಧನದ ಸಹಕಾರ ನೀಡುವ ಮೂಲಕ ಭವ್ಯ ಮಂದಿರ ನಿರ್ಮಾಣಗೊಳ್ಳಲು ಸಹಕಾರ ನೀಡುವಂತೆ ವಿನಂತಿಸಿದರು.

ನಂತರ ಇತಿಹಾಸ ಪ್ರಸಿದ್ಧ ಶ್ರೀಮಹಾಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ಮಧ್ಯಾಹ್ನ ಗಾಣಿಗ ಸಂಗಮ ಕಾರ್ಯಕ್ರಮ ಮುಗಿದ ಬಳಿಕ ಮತ್ತೆ ಲಕ್ಷ್ಮೀದೇವಿ ಬೆಟ್ಟದ ಮಹಾಲಕ್ಷ್ಮೀ ದೇವಸ್ಥಾನಕ್ಕೆ ತೆರಳಿ ಮಧ್ಯಾಹ್ನದ ಭೋಜನ ಸವಿದರು. ಇದಾದ ಬಳಿಕ ನೆರೆದಿದ್ದ ಪ್ರಮುಖರೊಂದಿಗೆ ಸಂವಾದ ನಡೆಸಿದರು.

ಹಿರಿಯರಾದ ಡಾ.ಎಂ.ಕೆ. ಪ್ರಸಾದ್, ಡಾ.ಕೆ. ಸುರೇಶ್ ಪುತ್ತೂರಾಯ, ವಿಧಾನ ಪರಿಷತ್ ಸದಸ್ಯ ಕಿಶೋರ್ ಪುತ್ತೂರು, ಅಚ್ಯುತ ನಾಯಕ್, ವಿಶ್ವಹಿಂದು ಪರಿಷತ್ ಜಿಲ್ಲಾಧ್ಯಕ್ಷ ಡಾ. ಕೃಷ್ಣಪ್ರಸನ್ನ, ಮರಾಟಿ ಸಂಘದ ಅಧ್ಯಕ್ಷ ಕರುಣಾಕರ ಪಾಂಗಳಾಯಿ, ಸತೀಶ್ ನಾಯಕ್, ಬಿಜೆಪಿ ನಗರ ಮಂಡಲದ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಯುವರಾಜ್ ಪೆರಿಯತ್ತೋಡಿ, ಮಣಿಕಂಠ, ನಗರ ಸಭಾ ಮಾಜಿ ಸದಸ್ಯ ರಾಜೇಶ್ ಬನ್ನೂರು, ಮನೋಹರ್ ಕಲ್ಲಾರೆ, ಶ್ರೀಧರ ತೆಂಕಿಲ, ನಾಗೇಶ್ ಟಿ.ಎಸ್., ಸಂತೋಷ್ ಬೋನಂತಾಯ, ಶಿವಶಂಕರ ಭಟ್, ಶ್ರೀಧರ ಆಚಾರ್ಯ, ಅಶೋಕ್ ಕುಂಬ್ಳೆ, ತಾ.ಪಂ. ಮಾಜಿ ಸದಸ್ಯ ಲಕ್ಷ್ಮಣ ಗೌಡ ಬೆಳ್ಳಿಪ್ಪಾಡಿ, ಪುರಸಭಾ ಮಾಜಿ ಅಧ್ಯಕ್ಷ ಯು.ಲೋಕೇಶ್ ಹೆಗ್ಡೆ, ಇಂದುಶೇಖರ್, ಪ್ರಭಾ, ದಾಮೋದರ ಪಾಟಾಳಿ ಸೇರಿದಂತೆ ಹಲವು ಮಂದಿ ಪ್ರಮುಖರು ಭಾಗವಹಿಸಿದ್ದರು.

ಸರ್ಕಲ್‌ನಿಂದ ಅಪಾಯ ಭೀತಿ

◆**ಸುರತ್ಕಲ್:** ಸುರತ್ಕಲ್ ಫ್ಲೈ ಓವರ್ ತಳ ಭಾಗದಲ್ಲಿ ಕಾಂಕ್ರೀಟ್ ಕಾಮಗಾರಿ ಮಾಡುವ ಸಂದರ್ಭ ತೆಗೆದು ಹಾಕಲಾದ ಸರ್ಕಲ್ ದುರಸ್ತಿ ಮಾಡದೆ ಹಾಗೆಯೇ ಬಿಡಲಾಗಿದ್ದು , ದ್ವಿಚಕ್ರ ಸವಾರರು ಅಪಾಯಕ್ಕೆ ಒಳಗಾಗುವ ಭೀತಿ ಇದೆ.

ಎರಡು ಅಡಿ ಆಳವಾದ ಹೊಂಡ ಇದ್ದು, 20 ಅಡಿ ಉದ್ದವಿದೆ. ಮಂಗಳೂರಿನಿಂದ ಉಡುಪಿ ಕಡೆ ಸಾಗುವ ಈ ರಸ್ತೆಯಲ್ಲಿ ಕೃಷ್ಣಾಪುರ ಕಡೆ ತಿರುವು ಹಾಗೂ ಹೆದ್ದಾರಿಯಲ್ಲಿ ವಿರುದ್ಧ ದಿಕ್ಕಿನಲ್ಲಿ ಗುಡ್ಡೆ ಕೊಪ್ಲ ಕಡೆ ವಾಹನಗಳು ಸಾಗುತ್ತಿದ್ದು ಸ್ವಲ್ಪ ಎಚ್ಚರ ತಪ್ಪಿದರೂ ಕೊಂಡಕ್ಕೆ ಬೀಳಬೇಕಾಗುತ್ತದೆ. ರಾತ್ರಿಯ ವೇಳೆ ಅತಿ ವೇಗದಲ್ಲಿ ಸಾಗುವ ವಾಹನಗಳು ಜಂಕ್ಷನ್ ಭಾಗದಲ್ಲಿ ಹೊಂಡ ಇರುವುದು ತಿಳಿಯದೆ ಅಪಾಯಕ್ಕಿಡಾಗುವ ಸಾಧ್ಯತೆ ಇದೆ. ಒಂದು ಭಾಗದಲ್ಲಿ ಹೊಂಡ ಮುಚ್ಚಿ ಕಾಮಗಾರಿ ಕೈಗೊಂಡಿದ್ದರು. ಮನವಿ ಬಂದ ಮೇರೆಗೆ ಇದೀಗ ತಾಂತ್ರಿಕ ಅನುಮೋದನೆ ಲಭಿಸದ ಕಾರಣ ಹಾಗೆಯೇ ಬಿಡಲಾಗಿದೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಈ ಭಾಗದ ಸರ್ಕಲನ್ನು ಸಮರ್ಪಕವಾಗಿ ಪೂರ್ಣಗೊಳಿಸಬೇಕು ಎಂದು ವಾಹನ ಸವಾರರು ಹೆದ್ದಾರಿ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-44) ಡ್ರಾ ಮಾರ್ಚ್ 01ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MS 587789 (ERNAKULAM)

Consolation Prize Rs.5,000/-
MN 587789 MO 587789 MP 587789 MR 587789
MT 587789 MU 587789 MV 587789 MW 587789
MX 587789 MY 587789 MZ 587789

2nd Prize Rs.25,00,000/- [25 Lakhs]
MU 815258 (PATHANAMTHITTA)

3rd Prize Rs.5,00,000/- [5 Lakhs]
MO 539805 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0191 1011 1347 1474 1704 1719 2717 3113 3523 4718
5118 5523 6428 7026 7711 7890 9100 9378 9697

5th Prize Rs.2,000/-
0462 1369 2412 4137 4701 8015

6th Prize Rs.1,000/-
0917 1261 1506 1591 1623 1813 2066 3004 3437 3530
3773 4192 4309 7023 7920 8021 8227 8288 8362 8518
8620 8628 9080 9297 9905

7th Prize Rs.500/-
0131 0248 0451 0499 0515 0517 0758 0998 1134 1299
1311 1533 1619 1748 2150 2347 2395 2491 2876 2958
3145 3222 3230 3257 3258 3312 3314 3332 3538 3865
4135 4522 4553 4586 4997 5391 5478 5559 5663 5664
5898 5987 6280 6306 6417 6433 6473 6641 6788 6912
7090 7145 7318 7338 7367 7371 7518 7532 7546 7669
7792 7844 7963 8037 8295 8398 8492 8662 8800 9131
9300 9619 9684 9760 9853 9948

8th Prize Rs.200/-
0168 0190 0294 0307 0309 0349 0368 0397 0566 0586
0687 0829 0897 1003 1029 1143 1154 1159 1257 1457
1566 1929 1963 1978 2079 2093 2265 2344 2771 2813
3272 3433 3559 3583 3635 3809 3953 4062 4134 4205
4264 4315 4399 4414 4528 4576 4585 4664 4715 4732
4768 5073 5120 5340 5795 5964 6063 6115 6145 6222
6340 6362 6544 6793 6800 6840 7033 7236 7285 7450
7470 7495 7564 7588 7703 7709 7827 7888 8092 8181
8216 8254 8630 8682 8713 8760 9236 9396 9485 9529
9811 9912

9th Prize Rs.100/-
0017 0346 0373 0395 0605 0763 0793 0890 1025 1135
1199 1251 1385 1513 1526 1588 1598 1682 1749 1750
1791 1808 1935 2387 2406 2417 2480 2569 2598 2610
2630 2648 2689 2740 2852 2874 2981 3088 3168 3263
3288 3396 3398 3502 3517 3545 3592 3593 3648 3681
3716 3770 3779 3830 3908 3960 3994 3998 4018 4196
4242 4272 4308 4313 4499 4500 4506 4558 4621 4623
4663 4704 4712 4792 4876 4916 4932 5006 5008 5014
5039 5074 5103 5134 5623 5629 5852 5880 5915 6079
6099 6132 6204 6232 6361 6372 6380 6557 6669 6902
6984 7113 7126 7128 7132 7147 7212 7220 7396 7590
7598 7611 7652 7654 7780 7829 7898 7906 7921 7973
8053 8103 8122 8331 8368 8374 8411 8465 8550 8808
8826 8841 8853 8862 8879 8897 8920 9239 9267 9369
9442 9641 9665 9828 9832 9848 9852 9939 9976 9986

768 ಕಸದ ಬ್ಲ್ಯಾಕ್‌ಸ್ಪಾಟ್ ಗುರುತು | ಸ್ವಚ್ಛ ಸರ್ವೇಕ್ಷಣಾ–2026 ಸಮೀಕ್ಷೆಗೆ ಕ್ಷಣಗಣನೆ

ಕಸಮುಕ್ತ ನಗರಕ್ಕಾಗಿ ಗ್ರೇಟರ್ ಬೆಂಗಳೂರು ಪಣ

• **ಬೆಂಗಳೂರು:** ಪ್ರತಿಷ್ಠಿತ ಸ್ವಚ್ಛ ಸರ್ವೇಕ್ಷಣಾ–2026 ಸಮೀಕ್ಷೆ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿರುವ ಬೆನ್ನಲ್ಲೇ, ನಗರದಲ್ಲಿ ಕಸಮುಕ್ತಗೊಳಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ನಗರ ಪಾಲಿಕೆಗಳು ಮತ್ತು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್ (ಬಿಎಸ್‌ಡಬ್ಲ್ಯುಎಂಎಲ್) ಸಮರೋಪಾದಿಯಲ್ಲಿ ಕಾರ್ಯಾಚರಣೆಗಿಳಿದಿವೆ. ನಗರದಾದ್ಯಂತ ಒಟ್ಟು 768 ಕಸದ ಬ್ಲ್ಯಾಕ್‌ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ಇವುಗಳ ನಿರ್ಮೂಲನೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ.

2025ರ ಸ್ವಚ್ಛತಾ ಶ್ರೇಯಾಂಕದಲ್ಲಿ ಬೆಂಗಳೂರು 36ನೇ ಸ್ಥಾನಕ್ಕೆ ಕುಸಿದಿತ್ತು. ಈ ಬಾರಿ ಅಗ್ರ ಸ್ಥಾನಕ್ಕೇರಲು ಜಿಬಿಎ ಪಣ ತೊಟ್ಟಿದ್ದು, ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದೆ.

ನಗರದಲ್ಲಿ 768 ಕಡೆಯಲ್ಲಿ ಸಾರ್ವಜನಿಕರು ಹಗಲು–ರಾತ್ರಿ ಕಸ ಸುರಿಯುತ್ತಿರುವುದು ಪತ್ತೆಯಾಗಿದೆ.ಗುರುತಿಸಲಾದ 768 ಸ್ಥಳಗಳ ಪೈಕಿ 757 ಕಡೆಗಳಲ್ಲಿ ಪೌರಕಾರ್ಮಿಕರು ಪ್ರತಿದಿನ ಕಸ ತೆರವು ಮಾಡುತ್ತಿದ್ದರೂ, ಮರುದಿನವೇ ಅಲ್ಲಿ ಮತ್ತೆ ಕಸದ ರಾಶಿ ಬೀಳುತ್ತಿದ್ದು, ಬ್ಲ್ಯಾಕ್‌ಸ್ಪಾಟ್ ಮುಕ್ತಗೊಳಿಸಲು ಕ್ರಮತೆಗೆದುಕೊಳ್ಳಲಾಗುತ್ತಿದೆ. ಕಸ ಸುರಿಯುವವರ ಮೇಲೆ ನಿಗಾ ಇಡಲು ಮತ್ತು ಸ್ವಚ್ಛತೆ ಕಾಪಾಡಲು ಪಾಲಿಕೆ ಈ ಬಾರಿ ಹೈಟೆಕ್ ಮೊರೆ ಹೋಗಿದ್ದು, ಪ್ರಮುಖ ಬ್ಲ್ಯಾಕ್‌ಸ್ಪಾಟ್‌ಗಳಲ್ಲಿ ಸಿಸಿಟಿವಿ ಅಳವಡಿಸಿ ಕಸ ಸುರಿಯುವವರನ್ನು ಪತ್ತೆ ಹಚ್ಚಲಾಗುತ್ತಿದೆ.



ಬೆಂಗಳೂರು ಉತ್ತರ ವಲಯದಲ್ಲಿ ಪ್ರಾಯೋಗಿಕವಾಗಿ ವ್ಯಾಕ್ಯೂಮ್ ಆಧಾರಿತ ಕಸ ಎತ್ತುವ ಯಂತ್ರವನ್ನು ಪರಿಚಯಿಸಲಾಗಿದೆ. ಇದು ಒಣ ಎಲೆ ಮತ್ತು ದ್ರವ ತ್ಯಾಜ್ಯವನ್ನು ಕ್ಷಣಾರ್ಧದಲ್ಲಿ ಹೀರಿಕೊಳ್ಳಲಿದ್ದು, ಪೌರಕಾರ್ಮಿಕರ ಕೆಲಸವನ್ನು ಸುಲಭಗೊಳಿಸಲಿದೆ. ಕಸ ಮುಕ್ತಗೊಳಿಸಿದ ಜಾಗಗಳಲ್ಲಿ ರಂಗೋಲಿ ಬಿಡಿಸುವುದು, ಕುಂಡಗಳನ್ನು ಇಡುವುದು ಮತ್ತು ಪರದೆಗಳನ್ನು ಅಳವಡಿಸುವ ಮೂಲಕ ಜನರು ಮತ್ತೆ ಅಲ್ಲಿ ಕಸ ಹಾಕದಂತೆ ನೋಡಿಕೊಳ್ಳಲಾಗುತ್ತಿದೆ.ಅಕ್ರಮವಾಗಿ ರಸ್ತೆಗೆ ಕಸ ಎಸೆಯುವವರ ಮೂಲವನ್ನು ಪತ್ತೆ ಹಚ್ಚುತ್ತಿರುವ ಅಧಿಕಾರಿಗಳು, ಅಂತಹ ತ್ಯಾಜ್ಯವನ್ನು ಮರಳಿ ಅವರ ಮನೆ ಬಾಗಿಲಿಗೇ ತಲುಪಿಸುವ ಮೂಲಕ ವಿನೂತನವಾಗಿ ಬಿಸಿ ಮುಟ್ಟಿಸುತ್ತಿದ್ದಾರೆ.

ಸಾಮೂಹಿಕ ಮಹಾ ಸ್ವಚ್ಛತಾ ಅಭಿಯಾನ

ಸ್ವಚ್ಛ ಸರ್ವೇಕ್ಷಣ–2026 ರ ಅಂಗವಾಗಿ ಸಾಮೂಹಿಕ ಮಹಾ ಸ್ವಚ್ಛತಾ ಅಭಿಯಾನವನ್ನು ಬೆಂಗಳೂರು ಉತ್ತರ ನಗರ ಪಾಲಿಕೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.ಭಾನುವಾರ ನಡೆದ ಸಾಮೂಹಿಕ ಮಹಾ ಸ್ವಚ್ಛತಾ ಅಭಿಯಾನದಲ್ಲಿ 7 ವಿಭಾಗಗಳಲ್ಲಿ ನಡೆದಿದ್ದು, 1823 ಮಂದಿ ಸಹಯೋಗದೊಂದಿಗೆ 42 ಪ್ಲಾಗಿಂಗ್ ಕಾರ್ಯಕ್ರಮಗಳ ಮೂಲಕ ಒಟ್ಟು 35.65 ಟನ್ ತ್ಯಾಜ್ಯ ತೆರವು ಗೊಳಿಸಲಾಗಿದೆ. 81 ಖಾಲಿ ನಿವೇಶನಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ಚಾಲನೆ



ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಹಯೋಗದಲ್ಲಿ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಘೋಷವಾಕ್ಯದಲ್ಲಿ ಆಯೋಜಿಸಿದ್ದ 3ನೇ ವರ್ಷದ ಪೊಲೀಸ್ ಓಟ (ಕರ್ನಾಟಕ ಪೊಲೀಸ್ ರನ್) ಸ್ಪರ್ಧೆಗೆ ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ವಿಧಾನಸೌಧದ ಬೃಹತ್ ಮೆಟ್ಟಿಲುಗಳ ಮುಂಭಾಗದಲ್ಲಿ ಚಾಲನೆ ನೀಡಿದರು. ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ, ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್ ಇದ್ದರು.

ಕಿರುಸುದ್ದಿ

ಸಂಗೀತದಿಂದ ಮುಕ್ತಿ ಸುಲಭ



• **ಬೆಂಗಳೂರು:** ಪವಿತ್ರ ನದಿಗಳಾದ ಗಂಗೆ ಮತ್ತು ಸರಸ್ವತಿ ನೀಡುವ ಮುಕ್ತಿಯನ್ನು ಸಂಗೀತ ಅತ್ಯಂತ ಸುಲಭವಾಗಿ ನೀಡಬಲ್ಲದು ಎಂದು ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ್ ತಿಳಿಸಿದರು. ಗಾಯನಾಚಾರ್ಯ ಗುರುರಾವ್ ದೇಶಪಾಂಡೆ – ಪಂಡಿತ್ ಭೀಮಸೇನ್ ಜೋಶಿ ಸ್ಮರಣಾರ್ಥ ಶನಿವಾರ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ 41ನೇ ಅಹೋರಾತ್ರಿ ಸಂಗೀತ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿ, ನಾದದ ಆರಾಧನೆಯು ನಮ್ಮನ್ನು ನೇರವಾಗಿ ದೇವರ ಸನ್ನಿಧಿಗೆ ತಲುಪಿಸುವ ಶಕ್ತಿ ಹೊಂದಿದೆ ಎಂದರು. ಕಾರ್ಯಕ್ರಮದಲ್ಲಿ ತಬಲಾ ವಾದಕರಾದ ಪಂಡಿತ್ ಯೋಗೇಶ್ ಸಂಸಿ ಅವರಿಗೆ ಗುರುಗಂಧರ್ವ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಡಾ.ದತ್ತಾತ್ರೇಯ ಎಲ್.ವೇಲಣಕರ್, ಪಂಡಿತ್ ಇಂದ್ರಾಯುಧ ಮಜುಂದಾರ್ ಮುಂತಾದವರಿದ್ದರು.

ಮತ್ತೆ ಮೂವರ ಸೆರೆ: ತನಿಖೆ ಚುರುಕು

• **ಬೆಂಗಳೂರು:** ಮಾದಕ ಮಾತ್ರೆ ನೀಡಿ ಕಾಲೇಜು ಯುವತಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಪ್ರಕರಣ ತನಿಖೆ ಚುರುಕುಗೊಳಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ಮತ್ತೆ ಮೂವರು ಯುವಕರನ್ನು ಬಂಧಿಸಿದ್ದಾರೆ. 19 ವರ್ಷದ ಯುವತಿ ನೀಡಿದ್ದ ದೂರಿನ ಮೇಲೆ ತನಿಖೆ ಕೈಗೊಂಡಿದ್ದ ಪೊಲೀಸರು ಕೃತ್ಯಕ್ಕೆ ಸಹಕರಿಸಿದ ಆರೋಪದ ಅಡಿಯಲ್ಲಿ ಶಿವಮೊಗ್ಗದ ಶ್ರವಣ್ (21), ದಾವಣಗೆರೆಯ ಅನಿರುದ್ಧ್ (33) ಹಾಗೂ ಗುಜರಾತ್‌ನ ಮೋಹಿತ್ ಜೈನ್ (23) ಎಂಬುವವರನ್ನು ಬಂಧಿಸಿದ್ದಾರೆ. ಈಗಾಗಲೇ ಪಶ್ಚಿಮ ಬಂಗಾಳದ ಡಿಕ್ಸನ್ ಸ್ಯಾಂತ್ರಾ (21), ಸಕಲೇಶಪುರದ ನಿಖಿಲ್‌ನನ್ನು (34) ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಏಳು ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದ್ದು, ಕೃತ್ಯಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಕಾರಣ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು. ತಮಿಳುನಾಡಿನ ಯುವತಿ ಬೆಂಗಳೂರಿನ ಖಾಸಗಿ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು, ಈವರಿಗೆ ಇನ್‌ಸ್ಟಾಗ್ರಾಂ ಮೂಲಕ ಪಶ್ಚಿಮ ಬಂಗಾಳದ ಡಿಕ್ಸನ್ ಎಂಬುವವನ ಪರಿಚಯವಾಗಿತ್ತು. ಸಂತ್ರಸ್ತೆ ದೂರಿನಲ್ಲಿ, ಪ್ರೀತಿಸುತ್ತಿರುವುದಾಗಿ ಹೇಳಿದ್ದ ಡಿಕ್ಸನ್, ಫೆ. 14ರಂದು ಆಕೆಯನ್ನು ಜಕ್ಕೂರಿನಲ್ಲಿರುವ ವಿಲ್ಲಾವೊಂದಕ್ಕೆ ಆಹ್ವಾನಿಸಿದ್ದ. ಈ ವಿಲ್ಲಾದಲ್ಲಿ ನಡೆದ ಪಾರ್ಟಿಯಲ್ಲಿ ಅನಿರುದ್ಧ್ ಕೂಡ ಭಾಗಿಯಾಗಿದ್ದ. ಈತ ಕೆಲವು ಪ್ರಭಾವಿಗಳೊಂದಿಗೆ ನಂಟು ಹೊಂದಿದ್ದು, ಆರೋಪಿ ನಿಖಿಲ್‌ಗೂ ಸ್ನೇಹಿತ. ಪಾರ್ಟಿಯಲ್ಲಿ ಏನೇನು ನಡೆಯಿತು, ಪಾರ್ಟಿಯ ಉದ್ದೇಶ ಏನಾಗಿತ್ತು ಎಂಬುದರ ಕುರಿತು ಆರೋಪಿಗಳನ್ನು ವಿಚಾರಣೆಗೆ ನಡೆಸಲಾಗಿದೆ . ಪಾರ್ಟಿಯಲ್ಲಿ ಭಾಗಿಯಾಗಿದ್ದ ನಿಖಿಲ್, ಡಿಕ್ಸನ್ ಸಾಂತ್ರಾ, ಸಂತ್ರಸ್ತೆ ಸೇರಿ ಕೆಲವು ಯುವತಿಯರು ಮಾದಕ ವಸ್ತು ಸೇವನೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಮಾದಕ ಮಾತ್ರೆ ನೀಡಿ ಅತ್ಯಾಚಾರ ಪ್ರಕರಣ

ಎಲ್ಲೆಂದರಲ್ಲಿ ಕಸ ಸುರಿದವರ ವಿರುದ್ಧ ಕಾರ್ಯಾಚರಣೆ | ದಂಡದ ಜತೆ ಸ್ವಚ್ಛತೆ ಬಗ್ಗೆ ಸಾರ್ವಜನಿಕರಿಗೆ ತಿಳಿವಳಿಕೆ

82,493 ಪ್ರಕರಣ: ₹3.6 ಕೋಟಿ ದಂಡ ವಸೂಲಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಮೂಲಕ ನಗರದಲ್ಲಿ ಕಸ ನಿರ್ವಹಣೆಗೆ ಮಾಡಲು ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತಿದೆ.

ಇದರ ಪರಿಣಾಮ ಕಳೆದ ಆರು ತಿಂಗಳಿಂದ ಸಾರ್ವಜನಿಕ ಸ್ಥಳದಲ್ಲಿ ಅಡ್ಡಾದಿಡ್ಡಿ ಕಸ ಸುರಿಯುವವರ ಮೇಲೆ ನಡೆಸುತ್ತಿರುವ ಶೂನ್ಯ ಸಹನೆ (ಜಿರೋ ಟಾಲರೆನ್ಸ್) ಕಾರ್ಯಾಚರಣೆಯಲ್ಲಿ ಬರೋಬ್ಬರಿ 82,493 ಪ್ರಕರಣವನ್ನು ದಾಖಲಿಸಲಾಗಿದೆ. 3.6 ಕೋಟಿ ದಂಡ ವಸೂಲಿ ಮಾಡಲಾಗಿದೆ.

ಬೆಂಗಳೂರಿನಲ್ಲಿ ಕಸ ಎಸೆಯುವವರ ವಿರುದ್ಧ ಅಧಿಕಾರಿಗಳು ಕಣ್ಣಿಟ್ಟಿದ್ದಾರೆ. ದಂಡ ಹಾಕುವ ಜತೆಗೆ ಸ್ವಚ್ಛತೆಯ ಪಾಠವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಇನ್ನು ಸಾರ್ವಜನಿಕ ಸ್ಥಳದಲ್ಲಿ ಮೂತ್ರ ವಿಸರ್ಜನೆ ಮಾಡುವುದು ಹಾಗೂ ಉಗುಳುವುದು ಸೇರಿದಂತೆ ವಿವಿಧ ಪ್ರಕರಣಗಳಿಗೆ ದಂಡ ವಿಧಿಸಲಾಗುತ್ತಿದೆ.

ಸಿಸಿ ಕ್ಯಾಮೆರಾ ಕಣ್ಗಾವಲು: ನಗರದ ಪ್ರಮುಖ ಸ್ಥಳಗಳಲ್ಲಿ ಅಳವಡಿಸಲಾಗಿರುವ ಸಿಸಿಕ್ಯಾಮೆರಾಗಳ ಮೂಲಕ ಜಿಬಿಎ ಮಾರ್ಷಲ್‌ಗಳು ಕಣ್ಗಾವಲು ಇರಿಸಿದ್ದಾರೆ. ಕತ್ತಲಾದ ಮೇಲೆ ಅಥವಾ ಜನರಿಲ್ಲದ ವೇಳೆ ರಸ್ತೆಬದಿ ಕಸ ಎಸೆದು ಹೋಗುವವರನ್ನು ಗುರುತಿಸಿ ದಂಡ ವಿಧಿಸಲಾಗುತ್ತಿದೆ.

ಕೇವಲ ಎಚ್ಚರಿಕೆ ನೀಡುವುದಷ್ಟೇ ಅಲ್ಲದೆ, ಸ್ಥಳದಲ್ಲೇ ದಂಡ ವಸೂಲಿ ಮಾಡುವ ಮೂಲಕ ಕಠಿಣ ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೆ ಜಿಬಿಎ ಮಾರ್ಷಲ್‌ಗಳು ಪ್ರತಿದಿನ ಅನಿರೀಕ್ಷಿತ ತಪಾಸಣೆ ನಡೆಸುತ್ತಿದ್ದಾರೆ. ಬ್ಲ್ಯಾಕ್ ಸ್ಪಾಟ್‌ಗಳನ್ನು (ಕಸ ಸುರಿಯುವ ಜಾಗ) ಗುರುತಿಸಿ ಅಲ್ಲಿ ಪಹರೆ ಹಾಕಲಾಗುತ್ತಿದೆ. ಪದೇ ಪದೇ ತಪ್ಪು ಮಾಡುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಎಚ್ಚರಿಕೆಯನ್ನೂ ಅಧಿಕಾರಿಗಳು ನೀಡಿದ್ದಾರೆ.



ಎಷ್ಟು ದಂಡ ವಿಧಿಸಲಾಗುತ್ತದೆ?

ಕಟ್ಟುನಿಟ್ಟಿನ ನಿರ್ವಹಣೆ ಪರಿಣಾಮ ಜಿಬಿಎ ನಗರದಲ್ಲಿ ಕಳೆದ ಆರು ತಿಂಗಳಲ್ಲಿ ಅಂದರೆ 2025 ಆಗಸ್ಟ್ ರಿಂದ 2026 ಜನವರಿ ವರೆಗೆ ಒಟ್ಟು ಒಟ್ಟು 82,493 ಪ್ರಕರಣಗಳನ್ನು ದಾಖಲಿಸಿ 3.6 ಕೋಟಿ ರೂ.ಗಳನ್ನು ವಸೂಲಿ ಮಾಡಿದೆ. ರಸ್ತೆ ಬದಿ ಕಸ ಹಾಕಿ ಹೋಗುವವರಿಗೆ ಇದೀಗ 2 ಸಾವಿರ ರೂ. ದಂಡ ವಿಧಿಸಲಾಗುತ್ತಿದೆ. ಈ ದುಬಾರಿ ದಂಡ ದಿಂದಾಗಿ ಸಾಕಷ್ಟು ಜನರು ಎಚ್ಚೆತ್ತುಕೊಂಡಿದ್ದಾರೆ. ಇನ್ನು ಮೂತ್ರ ವಿಸರ್ಜನೆ ಕುರಿತು 308 ಪ್ರಕರಣ, ರಸ್ತೆ ಬದಿ ಉಗಿದ 183 ಪ್ರಕರಣಗಳಿಂದ ಒಟ್ಟಾರೆ 45,100 ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಆರು ತಿಂಗಳಲ್ಲಿ ದಾಖಲಿಸಲಾದ ಪ್ರಕರಣಗಳ ವಿವರ

ತಿಂಗಳು	ಪ್ರಕರಣಗಳ ಸಂಖ್ಯೆ	ವಸೂಲಾದ ದಂಡ (ಲಕ್ಷ ರೂ.ಗಳಲ್ಲಿ)
2025–ಆಗಸ್ಟ್	6,168	25.1
2025–ಸೆಪ್ಟೆಂಬರ್	21,257	98.0
2025–ಅಕ್ಟೋಬರ್	12,625	56.0
2025–ನವೆಂಬರ್	14,337	61.8
2025–ಡಿಸೆಂಬರ್	13,095	56.5
2026–ಜನವರಿ	15,011	66.0
ಒಟ್ಟು	82,493	3.6 ಕೋಟಿ ರೂ.



ಸ್ಥಳೀಯ ಉತ್ಪನ್ನದಿಂದ ದೇಶ ಸ್ಥಿರ

• **ಬೆಂಗಳೂರು:** ಸೋಹಂ ಟ್ರಸ್ಟ್ ಕೃತಕ ಬುದ್ಧಿಮತ್ತೆಯನ್ನು ಉತ್ತಮವಾಗಿ ಬಳಸಿಕೊಳ್ಳಬೇಕು. ನಮ್ಮ ರಾಷ್ಟ್ರವನ್ನು ಸ್ಥಿರಗೊಳಿಸಲು ಹೊಸ ಸ್ಥಳೀಯ ಉತ್ಪನ್ನವನ್ನು ತರಬೇಕು ಎಂದು ಲೇಖಕಿ ಸಹನಾ ವಿಜಯಕುಮಾರ್ ಹೇಳಿದರು.

ಬಸವನಗುಡಿಯ ಶ್ರೀಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾದ ಸೋಹಂ ಟ್ರಸ್ಟ್ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಸೋಹಂ ಟ್ರಸ್ಟ್ ಕೃತಕ ಬುದ್ಧಿಮತ್ತೆಯನ್ನು ಉತ್ತಮವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಪಶುಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ.ಜಯಪ್ರಕಾಶ್ ಮಾತನಾಡಿ,



ಸಮಾಜವು ಮುಂದೆ ಬಂದು ಸೋಹಂನಂತಹ ಟ್ರಸ್ಟ್‌ಗಳಿಗೆ ಬೆಂಬಲ ನೀಡಲು ಸಾಧ್ಯವಿರುವ ಎಲ್ಲಾ ರೀತಿಯಲ್ಲಿ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸೋಹಂ ಸಂಸ್ಥೆ ಅಧ್ಯಕ್ಷ ಅನುಪ್ ಕಿರಣ್ ವಿ.,ಉಪಾಧ್ಯಕ್ಷ ಡಿ.ಎಂ.ಜಯಕುಮಾರ್ ಮುಂತಾದವರು ಉಪಸ್ಥಿತರಿದ್ದರು.

10 ಕಿ.ಮೀ ದೂರ ಪಾದಚಾರಿ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ

ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಿ

• **ಬೆಂಗಳೂರು:** ಮಹದೇವಪುರ ವಲಯದಲ್ಲಿ ಮುಂದಿನ ಎರಡು ತಿಂಗಳೊಳಗಾಗಿ 50 ಕಿ.ಮೀ ಉದ್ದದ ಸುರಕ್ಷಿತ ಹಾಗೂ ಸುಗಮ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾದ 10 ಕಿ.ಮೀ ದೂರ ಪಾದಚಾರಿ ನಡಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಮೆಟ್ರೋ ಮಾರ್ಗ ಹೊಂದಿರುವ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಅಭಿವೃದ್ಧಿಗೆ ಆದ್ಯತೆ ನೀಡಿದರೆ ನಾಗರಿಕರಿಗೆ ಹೆಚ್ಚಿನ ಅನುಕೂಲವಾಗಲಿದೆಂದರು. ಪಾದಚಾರಿ ಮಾರ್ಗಗಳಲ್ಲಿನ ಅಡೆತಡೆಗಳು, ರಸ್ತೆ ವಿಸ್ತರಣೆ ಸಮಸ್ಯೆಗಳು ಹಾಗೂ ಇತರೆ



ಅಡಚಣೆಗಳನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸಿ ಜನರು ಸುರಕ್ಷಿತವಾಗಿ ಸಂಚರಿಸಲು ಅನುಕೂಲ ಕಲ್ಪಿಸುವಂತೆ ಸೂಚನೆ ನೀಡಿದರು. ಪಾದಚಾರಿ ಮಾರ್ಗ ಅಭಿವೃದ್ಧಿಗೆ ಅಗತ್ಯ ಅನುದಾನವನ್ನು ಒದಗಿಸಲಾಗುವುದು. ಅಗತ್ಯವಿದ್ದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಸಹಭಾಗಿತ್ವದ ಮೂಲಕ ಕೆಲಸವನ್ನು ವೇಗಗೊಳಿಸುವಂತೆ ನಿರ್ದೇಶನ ನೀಡಿದರು.

ಮೌಲ್ಯಮಾಪನ ವರದಿ ಸಲ್ಲಿಸಿ:ಮಹದೇವಪುರ ವಲಯದಲ್ಲಿ ಕೈಗೆತ್ತಿಕೊಳ್ಳುವ 50ಕಿ.ಮೀ. ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯನ್ನು ಹಂತ ಹಂತವಾಗಿ ಮೌಲ್ಯಮಾಪನ ಮಾಡಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಇದರಿಂದ ಕಾಮಗಾರಿಗಳ ಪ್ರಗತಿಯನ್ನು ಸಮಗ್ರವಾಗಿ ಪರಿಶೀಲಿಸಲು ಅನುಕೂಲವಾಗಲಿದೆ ಎಂದು ತಿಳಿಸಿದರು.

11ನೇ ಪಾದಚಾರಿ ನಡಿಗೆ ಪ್ರಾಜೆಕ್ಟ್ ವಾಕಲೂರಲ್ಲಿ ಪಾದಚಾರಿ ನಡಿಗೆ ಕಾರ್ಯಕ್ರಮವು ವಿವಿಧ ಪ್ರದೇಶಗಳಲ್ಲಿ ಈಗಾಗಲೇ ಒಟ್ಟು 88 ಕಿ.ಮೀ ಪಾದಚಾರಿ ಮಾರ್ಗಗಳನ್ನು ಪರಿಶೀಲಿಸಲಾಗಿದೆ. ಭಾನುವಾರದ ನಡೆದ ನಡಿಗೆ 11ನೇ ಕಾರ್ಯಕ್ರಮವಾಗಿದೆ. ಮುಂದಿನ ತಿಂಗಳಲ್ಲಿ ಒಟ್ಟು 100ಕಿ.ಮೀ ನಡಿಗೆ ನಡೆಸುವ ಗುರಿ ಹೊಂದಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಇಂಜನಿಯರ್‌ಗಳಿಗೆ ಉತ್ತಮ ಅವಕಾಶ

• **ಬೆಂಗಳೂರು:** ದೇಶ ಅಭಿವೃದ್ಧಿಯಲ್ಲಿ ಇಂಜನಿಯರ್‌ಗಳು ಮಹತ್ವಪೂರ್ಣ ಪಾತ್ರ ವಹಿಸುತ್ತಾರೆ. ಇಂಜನಿಯರಿಂಗ್ ಪದವಿ ಪಡೆದವರು ಸಂಖ್ಯೆ ಹೆಚ್ಚಾಗಬೇಕಿದೆ. ದೇಶದಲ್ಲಿ ಇಂಜನಿಯರ್‌ಗಳಿಗೆ ಉತ್ತಮ ಅವಕಾಶವಿದೆ ಎಂದು ಕರ್ನಾಟಕ ಸರ್ಕಾರದ ಬೆಂಗಳೂರು ಬಿಸಿನೆಸ್ ಕಾರಿಡಾರ್ ಲಿಮಿಟೆಡ್‌ನ ಅಧ್ಯಕ್ಷ ಎಲ್.ಕೆ.ಅತೀಕ್ ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ಗೆ ಸಂಯೋಜಿತವಾಗಿರುವ ಸ್ವಾಯತ್ತ ಸಂಸ್ಥೆಯಾದ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, 2025ರ ಸಾಲಿನ ಪದವಿ ದಿನ ಸಮಾರಂಭದಲ್ಲಿ ಮಾತನಾಡಿ, ಉತ್ತಮ ಮನುಷ್ಯರಾಗಲು ಕಠಿಣ ಪರಿಶ್ರಮ ಪಡಬೇಕು. ಸಾಧನೆ ಮಾಡಲು ಗುರಿ ಇರಬೇಕು ಮತ್ತು ಗುರುಗಳ ಮಾರ್ಗದರ್ಶನದಲ್ಲಿ ನಡೆಯಬೇಕು.



ಪದವಿ ಪಡೆದ ವಿದ್ಯಾರ್ಥಿಗಳಿಗೆ ನಿಮ್ಮ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭಕೋರುತ್ತೇನೆ ಎಂದು ಹೇಳಿದರು.

ಈ ವೇಳೆ ಪದವಿ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಜತೆಯಲ್ಲಿ ಪದವಿ ಪ್ರಧಾನ ಮಾಡಲಾಯಿತು. ಆಲ್ಫಾ ಡಿಸೈನ್ ಟೆಕ್ನಾಲಜೀಸ್ ಪ್ರೈವೇಟ್ ಲಿ. ಅಧ್ಯಕ್ಷ ನಿರ್ದೇಶಕ ಎಚ್.ಎಸ್. ಶಂಕರ್, ಪ್ರಾಂಶುಪಾಲ ಡಾ.ಭೀಮಶಾ ಆರ್ಯ ಮತ್ತು ಟ್ರಸ್ಟಿಗಳು, ಅಧ್ಯಾಪಕರು ಉಪಸ್ಥಿತರಿದ್ದರು.

ಪಂಚತಂತ್ರ ಕಥೆ ಆಧರಿಸಿ ಕಲಾಕೃತಿ ರಚನೆ

• **ಬೆಂಗಳೂರು:** ನಗರದಲ್ಲಿ ಒಂದು ತಿಂಗಳ ಕಾಲ ಆಯೋಜಿಸಲಾಗಿದ್ದ ರಾಷ್ಟ್ರೀಯ ಕಲಾ ಶಿಬಿರ ಯಶಸ್ವಿಯಾಗಿದೆ. 84 ಪಂಚತಂತ್ರ ಕಥೆಗಳು, 10 ಭಾರತೀಯ ಸಾಂಪ್ರದಾಯಿಕ ಕಲಾ ಪ್ರಕಾರಗಳು, 17 ರಾಜ್ಯದಿಂದ 300ಕ್ಕೂ ಹೆಚ್ಚು ಕಲಾವಿದರು ಭಾಗಿಯಾಗಿ 840ಕ್ಕೂ ಹೆಚ್ಚು ಕಲಾಕೃತಿಗಳ ರಚಿಸಿದ್ದಾರೆ ಎಂದು ಯುವಕ ಸಂಘ ತಿಳಿಸಿದೆ.

ಮಾಧ್ಯಮ ಪ್ರಕಟಣೆ ನೀಡಿರುವ ಯುವಕ ಸಂಘ, ಯುವಕ ಸಂಘದ ಆರ್ಟ್ ಮ್ಯಾಟರ್ಸ್ ಪ್ರಕಲ್ಪ, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಸಹಯೋಗದಲ್ಲಿ ವಿಭಾಗ ಹಾಗೂ ಚಾಣಕ್ಯ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ನಡೆದ ಜ.27 ರಿಂದ ಫೆ.27ರ ವರೆಗೆ ಭಾರತೀಯ ಕಲಾ ಪ್ರಕಾರದಲ್ಲಿ ಪಂಚತಂತ್ರ ಕಥೆಗಳ



▶▶ ರಾಷ್ಟ್ರೀಯ ಕಲಾ ಶಿಬಿರ: 300ಕ್ಕೂ ಹೆಚ್ಚು ಕಲಾವಿದರು ಭಾಗಿ

ವಿವರಣೆ ಎಂಬ ವಿಶಿಷ್ಟ ಪರಿಕಲ್ಪನೆಯ ರಾಷ್ಟ್ರೀಯ ಕಲಾ ಶಿಬಿರ ಚಾಣಕ್ಯ ವಿಶ್ವವಿದ್ಯಾಲಯದಲ್ಲಿ ನಡೆಸಲಾಯಿತು ಎಂದು ತಿಳಿಸಿದೆ. ಈ ಶಿಬಿರದಲ್ಲಿ ಪಂಚತಂತ್ರದ 84 ಕಥೆಗಳನ್ನು 10 ಭಾರತೀಯ ಸಾಂಪ್ರದಾಯಿಕ ಕಲಾ ಪ್ರಕಾರದಲ್ಲಿ ಅಂದರೆ ಮೈಸೂರು ಚಿತ್ರಕಲೆ, ಕಲಂಕಾರಿ, ತಂಜಾವೂರು ಭಿತ್ತಿಚಿತ್ರ, ಕೇರಳ ಭಿತ್ತಿಚಿತ್ರ, ಚಿತ್ರಕತ್ತಿ, ಪಟ್ಟಚಿತ್ರ, ಗೊಂಡ್ ಆರ್ಟ್, ಮಧುಬನಿ, ಫಾಡ್ ಮತ್ತು ಅಸ್ಸಾಂ ಸ್ಕ್ರಾಲ್ ಪೇಂಟಿಂಗ್ಗಳು ಸೇರಿದಂತೆ ಭಾರತದ ಜ್ಞಾನ ಪರಂಪರೆಯಲ್ಲಿ ನೆಲೆಗೊಂಡಿರುವ ಶ್ರೇಷ್ಠ ಶೈಲಿ ನಿಯಮಗಳು, ಪ್ರಾದೇಶಿಕ ಸೌಂದರ್ಯಶಾಸ್ತ್ರ, ಚಿಹ್ನಾತ್ಮಕ ನಿಖರತೆ ಹಾಗೂ ನೈತಿಕ ಕಥನ ಪರಂಪರೆಯನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿನೂತನ ಮತ್ತು ಆಕರ್ಷಕವಾಗಿ ಈ ಕಲಾಕೃತಿ ರೂಪಿಸಲಾಯಿತು. ವಿದ್ಯಾರ್ಥಿಗಳು ತಮ್ಮ ದೈನಂದಿನ ಕಲಿಕೆಯ ವಾತಾವರಣದ ಭಾಗವಾಗಿ ಸಾಂಪ್ರದಾಯಿಕ ದೃಶ್ಯ ನಿರೂಪಣೆಗಳ ಮೂಲಕ ಪಂಚತಂತ್ರದ ಕಥೆಗಳೊಂದಿಗೆ ತೊಡಗಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಯುವಕ ಸಂಘ ತಿಳಿಸಿದೆ.

ಮಕ್ಕಳ ರಕ್ಷಣೆಗಾಗಿ ರಾಜ್ಯಮಟ್ಟದ ನ್ಯಾಯಾಂಗ ಸಭೆ

ಕಾನೂನಿನಲ್ಲಿ ಮಕ್ಕಳ ರಕ್ಷಣೆಗೆ ಆದ್ಯತೆ

• **ಬೆಂಗಳೂರು:** ಮಕ್ಕಳ ರಕ್ಷಣೆ ಮತ್ತು ಅವರ ಹಕ್ಕುಗಳ ಬಗ್ಗೆ ಕರ್ನಾಟಕ ಸರ್ಕಾರ ಕೆಲಸ ಮಾಡುತ್ತಿದೆ. ಕಾನೂನಲ್ಲಿ ಮಕ್ಕಳಿಗೆ ರಕ್ಷಣೆ ನೀಡಲಾಗುತ್ತಿದೆ ಎಂದು ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ಅನು ಶಿವರಾಮನ್ ತಿಳಿಸಿದರು.

ನಗರದ ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾ ಟಕ ನ್ಯಾಯಾಂಕ ಅಕಾಡೆಮಿ, ಹೈಕೋರ್ಟ್‌ನ ಬಾಲ ನ್ಯಾಯ ಸಮಿತಿ ಮತ್ತು ಪೋಕ್ಸೋ ಸಮಿತಿ ಹಾಗೂ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣೆ ಹೊಸದಿಲ್ಲಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಮಕ್ಕಳ ರಕ್ಷಣೆಗಾಗಿ ರಾಜ್ಯ ಮಟ್ಟದ ನ್ಯಾಯಾಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನದಲ್ಲಿ ಮಕ್ಕಳ ಹಕ್ಕುಗಳನ್ನ ಮರೆತಿದ್ದೇವೆಂದರು.

ವರ್ಷದಿಂದ ವರ್ಷಕ್ಕೆ ಮಕ್ಕಳು ಕಾಣೆಯಾಗುತ್ತಿದ್ದಾರೆ. ಕಾಣೆಯಾಗಲು ಕಾರಣ ಏನು? ಎಂಬುದನ್ನು ಮೊದಲು ತಿಳಿಯಬೇಕಿದೆ. ಮಕ್ಕಳ ರಕ್ಷಣೆ ಮತ್ತು ಹಕ್ಕುಗಳ ಬಗ್ಗೆ ಕರ್ನಾಟಕ ಸರ್ಕಾರ ನಿರಂತರವಾಗಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.



ಜಸ್ಟ್ ರೈಟ್ ಚೈಲ್ಡ್ ಪ್ರೊಟೆಕ್ಷನ್ ರಾಷ್ಟ್ರೀಯ ಸಂಯೋಜಕ ರವಿಕಾಂತ್ ಮತನಾಡಿ, ಪ್ರಸ್ತುತ ಭಾರತದಲ್ಲಿ 250ಎನ್‌ಜಿಓಗಳು ಮಕ್ಕಳ ರಕ್ಷಣೆ ಬಗ್ಗೆ ಕೆಲಸ ಮಾಡುತ್ತಿವೆ. ಕಳೆದ ವರ್ಷದಲ್ಲಿ 5 ಲಕ್ಷ ಬಾಲ್ಯ ವಿವಾಹಗಳನ್ನು ತಡೆದಿದ್ದೇವೆ. ಬಾಲ್ಯವಿವಾಹದ ಬಗ್ಗೆ ರಾಜ್ಯಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನ ಆಯೋಜಿಸಿ ತಿಳಿವಳಿಕೆ ನೀಡಲಾಗಿದೆ. ಬಾಲ್ಯ ವಿವಾಹ ಮುಕ್ತ ಭಾರತ ಅಭಿಯಾನ ನಡೆಸಲಾಗುತ್ತಿದೆ. ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಉತ್ತೇಜನ ನೀಡಲಾಗುತ್ತಿದೆ. ಮಕ್ಕಳ ರಕ್ಷಣೆ ಬಹಳ ಮುಖ್ಯವಾಗಿದೆ ಎಂದರು.

ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಹಾಗೂ ಬಾಲ ನ್ಯಾಯ ಮತ್ತು ಪೋಕ್ಸೋ ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಸುನಿಲ್ ಯಾದವ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಧಾನಸಭಾ ಕ್ಷೇತ್ರದ ಅಧಿಕಾರಿಗಳಿಗೆ ಅಭಿನಂದನೆ

ಶೇ.95 ತ್ಯಾಜ್ಯ ವಿಂಗಡಣೆಯಲ್ಲಿ ಪ್ರಗತಿ

• **ಬೆಂಗಳೂರು:** ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸ್ತುತ ಶೇ.95 ರಷ್ಟು ತ್ಯಾಜ್ಯ ವಿಂಗಡಣೆ ಪ್ರಗತಿ ಸಾಧಿಸಿದೆ. ಮತ್ತಷ್ಟು ಪ್ರಗತಿ ಸಾಧಿಸುವ ಸಲುವಾಗಿ ಎಲ್ಲಾ ನಾಗರೀಕರು ಸಹಕರಿಸಬೇಕೆಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ಮನವಿ ಮಾಡಿದ್ದಾರೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ತ್ಯಾಜ್ಯ ವಿಂಗಡಣೆಯಲ್ಲಿ ಮಹತ್ತರ ಸಾಧನೆ ಮಾಡಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಅಭಿನಂದನೆ ತಿಳಿಸಿದ ಮಾತನಾಡಿದ ಅವರು, ಬಳಿಕ ಮಾತನಾಡಿದ ಕರೀಗೌಡ, ನಾಗರಿಕರ ಸಹಕಾರದಿಂದಲೇ ಶೇ. 95 ರಷ್ಟು ಸಾಧನೆ ಸಾಧ್ಯವಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಗತಿ ಸಾಧಿಸಲು ಸಾರ್ವಜನಿಕರು ಹಸಿ ಮತ್ತು ಒಣ ತ್ಯಾಜ್ಯವನ್ನು ಕಡ್ಡಾಯವಾಗಿ ಪ್ರತ್ಯೇಕಿಸಿ ನೀಡುವಂತೆ ಮನವಿ ಮಾಡಿದರು.

ರಾಜಾಜಿನಗರ ವ್ಯಾಪ್ತಿಯಲ್ಲಿ 7 ವಾರ್ಡ್‌ಗಳಿವೆ. ಪ್ರಾರಂಭದಲ್ಲಿ ಶೇ.61 ರಷ್ಟು ಮಾತ್ರ ತ್ಯಾಜ್ಯ ವಿಂಗಡಣೆ ಆಗುತ್ತಿತ್ತು. ಪ್ರಸ್ತುತ ತ್ಯಾಜ್ಯ ನಿರ್ವಹಣೆಗೆ 14 ಕಾಂಪ್ಯಾಕ್ಟರ್‌ಗಳು, 137 ಆಟೋ ಟಿಪ್ಪರ್‌ಗಳು, 274 ಚಾಲಕರು, ಸಹಾಯಕರು ಮತ್ತು 347 ಪೌರಕಾರ್ಮಿಕರು ನಿಯೋಜಿಸಲ್ಪಟ್ಟಿದ್ದಾರೆ ಎಂದು ಮಾಹಿತಿ ನೀಡಿದರು.

ತ್ಯಾಜ್ಯ ಸಂಗ್ರಹಣೆಯ ಕ್ರಮಬದ್ಧ ವ್ಯವಸ್ಥೆ: ಪೌರಕಾರ್ಮಿಕರು ಬೆಳಗ್ಗೆ 6.30ಕ್ಕೆ ಹಾಜರಾತಿ ದಾಖಲಿಸಿ ವಾರ್ಡ್ ರಸ್ತೆಗಳಲ್ಲಿ ಪ್ರತಿ 750 ಮೀಟರ್ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ಪ್ರಾರಂಭಿಸುತ್ತಾರೆ. 10.30 ನಂತರ ಪ್ರಮುಖ ರಸ್ತೆಗಳಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಗುತ್ತದೆ.

ಪ್ಲಾಸ್ಟಿಕ್ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. ಮನೆ–ಮನೆ ಸಂಗ್ರಹಣೆ ನಂತರ ಬ್ಲಾಕ್ ಸ್ಪಾಟ್‌ಗಳ ಮರುಪರಿಶೀಲನೆ ನಡೆಸಿ ಕಸ ಬಿಸಾಡಿದರೆ ತಕ್ಷಣ ತೆರವುಗೊಳಿಸಲಾಗುತ್ತದೆ. ಆಟೋ ಟಿಪ್ಪರ್‌ಗಳು ಬೆಳಗ್ಗೆ 5.30 ರಿಂದ 6.30ರವರೆಗೆ ಮಸ್ಟರಿಂಗ್ ಪಾಯಿಂಟ್‌ನಲ್ಲಿ ಆರ್‌ಎಫ್‌ಐಡಿ ಮೂಲಕ ಹಾಜರಾತಿ ದಾಖಲಿಸಿ, ಕೆಲಸ ಆರಂಭಿಸುತ್ತಾರೆ ಎಂದು ತಿಳಿಸಿದರು.

ಪೊಲೀಸ್ ರನ್ ಮ್ಯಾರಥಾನ್‌ಗೆ ಚಾಲನೆ

• **ಬೆಂಗಳೂರು:** ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಯೋಗದಲ್ಲಿ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಘೋಷ ವಾಕ್ಯದ ಅಡಿಯಲ್ಲಿ 3ನೇ ಆವೃತ್ತಿಯ ಪೊಲೀಸ್ ಓಟ ಕರ್ನಾಟಕ ಪೊಲೀಸ್ ರನ್ ಮ್ಯಾರಥಾನ್‌ಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ವಿಧಾನಸೌಧದ ಬೃಹತ್ ಮೆಟ್ಟಿಲುಗಳ ಮುಂಭಾಗ ಭಾನುವಾರ ಚಾಲನೆ ನೀಡಿದರು.



ಡ್ರಗ್ಸ್ ಮುಕ್ತ ಕರ್ನಾಟಕ, ಸೈಬರ್ ಅಪರಾಧ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಿದ್ದ 10 ಕಿ.ಮೀ. ಮತ್ತು 5 ಕಿ.ಮೀ. ಓಟದ ಮ್ಯಾರಥಾನ್‌ನಲ್ಲಿ ಭಾಗವಹಿಸಿದ ವಿಜೇತರಿಗೆ ಬಹುಮಾನ ವಿತರಿಸಿ ಸಚಿವರು ಶುಭ ಹಾರೈಸಿದರು. ಮ್ಯಾರಥಾನ್ ಓಟದಲ್ಲಿ ಮೂರು ಸಾವಿರಕ್ಕೂ ಅಧಿಕ ಪೊಲೀಸರು ಸೇರಿ ಸುಮಾರು 12 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು. ಈ ವೇಳೆ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ, ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಸೇರಿದಂತೆ ಇತರರಿದ್ದರು.

ನಿಯಂತ್ರಣ ತಪ್ಪಿದ ಬಸ್ ಅಪಘಾತ

• **ಸಾಪೋಕ್ಲು:** ಚಾಲಕನ ನಿಯಂತ್ರಣ ತಪ್ಪಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸೊಂದು ರಸ್ತೆ ಬದಿಯ ಚರಂಡಿಗೆ ಬಿದ್ದು ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ ಘಟನೆ ಕಾಟಕೇರಿ ಮಡಿಕೇರಿ ಮುಖ್ಯರಸ್ತೆಯಲ್ಲಿ ನಡೆದಿದೆ. ಭಾನುವಾರ ಮಧ್ಯಾಹ್ನ ಎಮ್ಮೆ ಮಾಡಿನಿಂದ ಮಡಿಕೇರಿ ಮುಖಾಂತರ ಮೈಸೂರಿಗೆ ತೆರಳುವ ಸರ್ಕಾರಿ ಬಸ್ಸು ಕಾಟಕೇರಿ ಬಳಿ ರಸ್ತೆ ತಿರುವಿನಲ್ಲಿ ಬ್ರೇಕ್ ವಿಫಲಗೊಂಡು ಚಾಲಕನ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಚಾಲಕನ ಸಮಯಪ್ರಜ್ಞೆಯಿಂದ ಬಾರಿ ಅನಾಹುತ ತಪ್ಪಿದೆ ಎಂದು ಪ್ರಯಾಣಿಕರು ಮಾಹಿತಿ ನೀಡಿದ್ದಾರೆ. ಅವಘಡದಿಂದ ಬಸ್ಸಿನಲ್ಲಿದ್ದ ಮಹಿಳೆಯೊಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅಪಾಯದಿಂದ ಪಾರಾಗಿದ್ದಾರೆ.

ಕಿರುಸುದ್ದಿ

ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನ: ಶತ ಕುಂಭಾಭಿಷೇಕ

• **ಕುಂದಾಪುರ:** ಪುರಾಣ ಪ್ರಸಿದ್ಧ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ದೇವರಿಗೆ ಶತ ಕುಂಭಾಭಿಷೇಕ ಕಾರ್ಯಕ್ರಮ ಭಾನುವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು. ಮಧ್ಯಾಹ್ನ ದೇವರಿಗೆ ಮಹಾಪೂಜೆ, ಮಹಾಸಮಾರಾಧನೆ, ಸಂಜೆ ಊರಿನಲ್ಲಿ ದೇವರ ಉತ್ಸವ ಸೇವೆ ಜರಗಿತು. ದೇವಸ್ಥಾನದ ಪ್ರಧಾನ ಅರ್ಚಕ ಎನ್.ವೆಂಕಟರಮಣ ಆಚಾರ್ಯ ಮತ್ತು ತಾಂತ್ರಿಕ ಜಿ.ವಸಂತ ಭಟ್ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು, ಪುರೋಹಿತರು, ಅರ್ಚಕರು, ಊರಿನ ಹತ್ತು ಸಮಸ್ತರು, ಸಮಾಜಬಾಂಧವರು ಉಪಸ್ಥಿತರಿದ್ದರು.

ಹಲ್ಲೆಕೋರರನ್ನು ಗಡಿಪಾರು ಮಾಡಿ: ಸುನಿಲ್ ಸುಬ್ರಮಣಿ

• **ಮಡಿಕೇರಿ:** ನಾಪೋಕ್ಲುವಿನಲ್ಲಿ ಹಿಂದೂ ಯುವಕನ ಮೇಲೆ ಅನ್ಯಕೋಮಿನ ಯುವಕರು ನಡೆಸಿರುವ ಹಲ್ಲೆ ಖಂಡನೀಯವಾಗಿದ್ದು, ಇಂತಹ ಪ್ರಕರಣಗಳು ಮರುಕಳಿಸಬಾರದು. ಈ ಹಿನ್ನೆಲೆಯಲ್ಲಿ ಹಿಂದೂ ಯುವಕನ ಮೇಲೆ ಹಲ್ಲೆ ನಡೆಸಿರುವವರನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಎಂ.ಪಿ.ಸುನಿಲ್ ಸುಬ್ರಮಣಿ ಅವರು ಒತ್ತಾಯಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲೆಡೆ ಯಶಸ್ವಿಯಾಗಿ ವಿರಾಟ ಹಿಂದೂ ಸಂಗಮ ಕಾರ್ಯಕ್ರಮ ನಡೆದಿದೆ. ನಾಪೋಕ್ಲುವಿನಲ್ಲಿ ಕಾರ್ಯಕ್ರಮವನ್ನು ಹಾಳುಮಾಡುವ ಉದ್ದೇಶದಿಂದ ಕಾರ್ಯಕ್ರಮದ ಪ್ರಚಾರದ ವೇಳೆ ಪ್ರಶ್ನಿಸಿ ಏಕಾಏಕಿ ಹಲ್ಲೆ ನಡೆಸಿದ್ದಾರೆ. ದುಷ್ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತಾಗಬೇಕು ಎಂದು ಸುನಿಲ್ ಸುಬ್ರಮಣಿ ನುಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರ ಬಿ.ಕೆ. ಅರುಣ್ ಕುಮಾರ್, ಪ್ರಮುಖರಾದ ನಾಗೇಶ್ ಕುಂದಲ್ಪಾಡಿ, ಶಜಿಲ್ ಕೃಷ್ಣನ್ ಇದ್ದರು.

ನಿಧನ ಸುದ್ದಿ

ನಾರಾಯಣ ಪೂಜಾರಿ ಬದಿನಡಿ



ಮಂಗಳೂರು: ನೀರುಮಾರ್ಗ ಸಮೀಪದ ಪಡು ಬೊಂಡಂತಿಲದ ಬದಿನಡಿ ನಿವಾಸಿ ನಾರಾಯಣ ಪೂಜಾರಿ (90) ಅವರು ಭಾನುವಾರ ನಿಧನ ಹೊಂದಿದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಬಂಧುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸ್ವಗೃಹದಲ್ಲಿ ನಡೆಯಲಿದೆ.

ರಾಮಕೃಷ್ಣ ಆಚಾರ್ಯ



ಮುಳ್ಳೇರಿಯ: ಮುಳ್ಳೇರಿಯ ಪೇಟೆಯಲ್ಲಿ ದುರ್ಗಾ ವರ್ಕ್‌ಶಾಪ್ ಎಂಬ ಗ್ಯಾರೇಜ್‌ನ ಮಾಲಕ ಪಾರ್ಥಕೊಚ್ಚಿ ನಿವಾಸಿ ರಾಮಕೃಷ್ಣ ಆಚಾರ್ಯ (79) ನಿಧನ ಹೊಂದಿದರು. ಮೃತರು ಪತ್ನಿ ಲೀಲಾವತಿ, ಮಕ್ಕಳಾದ ದಿನೇಶ್, ಶಿವಪ್ರಸಾದ್, ಉಷಾ, ಮೌನೇಶ್, ವೇಣುಗೋಪಾಲ್, ಚರಣ್ ರಾಜ್ ಅವರನ್ನು ಅಗಲಿದ್ದಾರೆ.

ಪದ್ಮನಾಭ ಚೆಟ್ಟಿಯಾರ್

ಕುಂಬಳೆ: ನಾರಾಯಣಮಂಗಲ ನಿವಾಸಿ ಎನ್.ಪದ್ಮನಾಭ ಚೆಟ್ಟಿಯಾರ್ (77) ಶನಿವಾರ ಬೆಳಗ್ಗೆ ನಿಧನ ಹೊಂದಿದರು. ನಾರಾಯಣಮಂಗಲ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಹಿರಿಯ ಸದಸ್ಯರಾದ ಅವರು ಕಾಸರಗೋಡು ವೀವರ್ಸ್ ಕೋ ಓಪರೇಟಿವ್ ಸೊಸೈಟಿಯ ಮಾಜಿ ನಿರ್ದೇಶಕರೂ ಆಗಿದ್ದರು. ಮೃತರು ಪತ್ನಿ ರಾಜೀವಿ, ಮಕ್ಕಳಾದ ಎನ್.ಶಶಿಧರ, ದಿವಾಕರ, ಗೋಪಾಲಕೃಷ್ಣ, ಜಲಜಾಕ್ಷಿ ಅವರನ್ನು ಅಗಲಿದ್ದಾರೆ.

ಚಂದು ಕುಟ್ಟಿ ನಾಯರ್

ಮುಳ್ಳೇರಿಯ: ಬೋವಿಕ್ಕಾನ ಪಿಂಗುರಾನ್ ತರವಾಡು ಯಜಮಾನ ಮುಳಿಯಾರು ಪಾಣೂರು ನಿವಾಸಿ ಚಂದು ಕುಟ್ಟಿ ನಾಯರ್ (90) ನಿಧನ ಹೊಂದಿದರು. ಮೃತರು ಪತ್ನಿ ಪಾರುಕುಟ್ಟಿಯಮ್ಮ,ಮಕ್ಕಳಾದ ಮೋಹನನ್, ರಾಜನ್, ಶ್ಯಾಮಲಾ, ಶೋಭನಾ ಅವರನ್ನು ಅಗಲಿದ್ದಾರೆ.

ನಜೀರ್ ಅಹಮದ್



ಮುಲ್ಕಿ: ಕಾರ್ನಾಡ್ ದರ್ಗಾ ರೋಡ್ ಬಳಿಯ ನಿವಾಸಿ ನಜೀರ್ ಅಹಮದ್ (70) ಅನಾರೋಗ್ಯದಿಂದ ಶನಿವಾರ ಸಂಜೆ ಸ್ವಗೃಹದಲ್ಲಿ ನಿಧನರಾದರು. ಅವರು ಪತ್ನಿ, 2 ಪುತ್ರರು, 3 ಪುತ್ರಿಯರನ್ನು ಅಗಲಿದ್ದಾರೆ ಅವರು ಕಾರ್ನಾಡ್ ಹಿಮಾಯತುಲ್ ಇಸ್ಲಾಂ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮುಲ್ಕಿ ಬಸ್ ನಿಲ್ದಾಣದ ಬಳಿ ಕಳೆದ 50 ವರ್ಷಗಳಿಂದ ಹೂವಿನ ವ್ಯಾಪಾರಿಯಾಗಿ ಜನಾನುರಾಗಿಯಾಗಿದ್ದರು.



ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಷನ್ ಬಂಟ್ವಾಳ ವಲಯದ ವತಿಯಿಂದ ಭಾರತ ಸರಕಾರದ ಅಕ್ಷಯ್ ಮಿತ್ರ ಯೋಜನೆಯಡಿ ಬಿ. ಮೂಡ ಗ್ರಾಮದ ಕೈಕಂಬದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕ್ಷಯ ರೋಗಿಗೆ ಒಂದು ತಿಂಗಳ ಪೌಷ್ಟಿಕ ಆಹಾರ ಸಾಮಗ್ರಿಗಳನ್ನೊಳಗೊಂಡ ಕಿಟ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ವಲಯದ ಅಧ್ಯಕ್ಷ ರಾಜೇಂದ್ರ ಕೆ., ಗೌರವಾಧ್ಯಕ್ಷ ಕಿಶೋರ್, ಮಾಜಿ ಅಧ್ಯಕ್ಷರುಗಳಾದ ದಯಾನಂದ ಬಂಟ್ವಾಳ, ಹರೀಶ್ ಮಾಣಿ , ಹರೀಶ್ ಕುಂದರ್, ಪ್ರಧಾನ ಕಾರ್ಯದರ್ಶಿ ರವಿ ಕಲ್ಪನೆ, ಕೋಶಾಧಿಕಾರಿ ಕೃಷ್ಣರಾಜ್ ರಾವ್, ಉಪಾಧ್ಯಕ್ಷರಾದ ಹರೀಶ್ ಸಾಟಿ, ಛಾಯಾ, ಕಾರ್ಯದರ್ಶಿ ಪ್ರಶಾಂತ್ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸುರತ್ಕಲ್ ವ್ಯಾಪ್ತಿಯಲ್ಲಿ ಒಳಚರಂಡಿ ಸಮಸ್ಯೆ: ಪ್ರತಿಭಟನೆಗೆ ಜನತೆ ಸಿದ್ಧತೆ

• **ಸುರತ್ಕಲ್:** ಪಾಲಿಕೆ ವ್ಯಾಪ್ತಿಯಲ್ಲಿ ಹದಗೆಟ್ಟಿರುವ ಒಳಚರಂಡಿ (ಡ್ರೈನೇಜ್) ವ್ಯವಸ್ಥೆ, ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಸಾರ್ವಜನಿಕರಿಂದ ತೆರಿಗೆ ವಸೂಲಿ ಮಾಡುತ್ತಿದ್ದರೂ ಸೌಲಭ್ಯ ನೀಡದೆ ಮಂಗಳೂರು ಮಹಾನಗರ ಪಾಲಿಕೆ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದ್ದು ಸಾಮೂಹಿಕ ಪ್ರತಿಭಟನೆಗೆ ಸಾರ್ವಜನಿಕರು ಸಜ್ಜಾಗುತ್ತಿದ್ದಾರೆ.



ಇದೀಗ ಸುರತ್ಕಲ್ ಭಾಗದಲ್ಲಿ ವಿವಿಧ ವಸತಿ ಸಮುಚ್ಚಯ, ಬಡಾವಣೆಗಳ ಮುಂದೆ ಮಾನಪ್ಪ ವಿರುದ್ಧ ಆಕ್ರೋಶದ ಆಬ್ಯಾನರುಗಳು ರಾರಾಜಿಸುತ್ತಿವೆ. ಸೂರತ್ಕಲ್, ಗುಡ್ಡೆಕೊಪ್ಲ, ಹೊಸಬೆಟ್ಟು ವಿವಿದೆಡೆ ಬ್ಯಾನರುಗಳನ್ನು ಹಾಕಲಾಗಿದ್ದು ಗಮನ ಸೆಳೆಯುತ್ತಿದೆ. ಜನರನ್ನು ಮಾಲಿನ್ಯದಿಂದ ರಕ್ಷಿಸಿ, ಒಳಚರಂಡಿ ಕೊಡಿ ಇಲ್ಲ ತೆರಿಗೆ ರದ್ದು ಮಾಡಿ, ಮನಪಾ ಗೆ ಧಿಕ್ಕಾರ ದಂತಹ ಬ್ಯಾನರ್ ಬರಹಗಳು ಜನರಲ್ಲಿರುವ ಆಕ್ರೋಶವನ್ನು ಹೊರ ಹಾಕುತ್ತಿವೆ. ಒಳಚರಂಡಿ ಗಾಗಿ ಎಡಿಬಿ 1 ಹಾಗೂ 2ನೆ ಹಂತದ ಕಾಮಗಾರಿಯಲ್ಲಿ ಕೋಟಿಗಟ್ಟಲೆ ಹಣ ವ್ಯಯಿಸಲಾಗಿದೆ. ಆದರೂ ಕೊಳಚರಂಡಿ ಸಂಪರ್ಕ ನೀಡದೆ ಪಾಲಿಕೆ ಯಾಕೆ ಮೌನಕ್ಕೆ ಜಾರಿದೆ ಎಂಬ ಪ್ರಶ್ನೆ ಸಾರ್ವಜನಿಕರದ್ದಾಗಿದೆ. ಒಳಚರಂಡಿ ಸಂಪರ್ಕ ಎಲ್ಲದೆ ಸುರತ್ಕಲ್ ಭಾಗದಲ್ಲಿ ಕೂಳೂರು, ನಂದಿನಿ ನದಿಗಳು ಕಲುಷಿತ ಗೊಂಡು ಲೋಕಾಯುಕ್ತಕ್ಕೂ ದೂರು ದಾಖಲಾಗಿ ತನಿಖೆಗೂ ಆದೇಶ ಬಂದಿದೆ. ಇಷ್ಟಾದರೂ ಒಳಚರಂಡಿ,ಈಗಿರುವುದರ ದುರಸ್ತಿ ಮಾಡಲಾಗಿದೆ. ಗುಡ್ಡೆ ಕೊಪ್ಲ ಎಸ್ ಟಿ ಪಿ ಸುಸ್ಥಿತಿಯಲ್ಲಿದೆ ಎಂಬ ವರದಿ ಬಂದಿದೆ. ಹೀಗಾಗಿ ಸದ್ಯದ ಪರಿಸ್ಥಿತಿ ಯಲ್ಲಿ ಈಗಿರುವ ಯೋಜನೆಯನ್ನೇ ಜಾರಿ ಮಾಡಿ ಸಂಪರ್ಕ ಕೊಡಿ ಎಂಬ ಒತ್ತಾಯ ನಾಗರಿಕರದ್ದಾಗಿದೆ. ಸದ್ಯ ಈಗಿರುವ ಒಳಚರಂಡಿ ವ್ಯವಸ್ಥೆಯಲ್ಲಿ ದುರಸ್ತಿಪಡಿಸಿ ಎಲ್ಲಾ ಕಡೆ ಸಂಪರ್ಕ ಕೊಡಬೇಕು. ಹೆಚ್ಚುತ್ತಿರುವ ಬಡಾವಣೆ, ವಸತಿ ಸಮುಚ್ಚಯಗಳಿಂದ ಮತ್ತಷ್ಟು ಮಾಲಿನ್ಯವಾಗುವುದನ್ನು ತಪ್ಪಿಸಬೇಕು. ಇದಕ್ಕಾಗಿ ನಮ್ಮ ಹೋರಾಟ ಮುಂದುವರಿಸುತ್ತೇವೆ ಎಂದು ಸ್ಥಳೀಯರಾದ ವೈ. ರವೀಂದ್ರ ರಾವ್ ಹಾಗೂ ಶ್ರೀಕಾಂತ್ ಕಾಮತ್ ಸುರತ್ಕಲ್ ಹೇಳಿದ್ದಾರೆ.

ಕೇರಳದ ಮೊದಲ 125 ಮೆ.ವ್ಯಾ. ಬ್ಯಾಟರಿ ಇಂಧನ ಸಂಗ್ರಹ ಯೋಜನೆಗೆ ಮೈಲಾಟಿಯಲ್ಲಿ ಶಿಲಾನ್ಯಾಸ

ಇಂಧನ ಕ್ಷೇತ್ರದಲ್ಲಿ ಕೇರಳದ ಹೊಸ ಹೆಜ್ಜೆ

• **ಕಾಸರಗೋಡು:** ಕೇರಳದ ಇಂಧನ ಕ್ಷೇತ್ರದಲ್ಲಿ ಹೊಸ ಇತಿಹಾಸ ಸೃಷ್ಟಿಸುವ ಮೂಲಕ ಮೈಲಾಟಿ 220 ಕೆವಿ ಸಬ್‌ಸ್ಟೇಷನ್‌ನಲ್ಲಿ ಸ್ಥಾಪಿಸಲಾಗುವ 125 ಮೆಗಾವ್ಯಾಟ್ ಮತ್ತು 500 ಮೆಗಾವ್ಯಾಟ್ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ (ಬಿಇಎಸ್‌ಎಸ್) ನಿರ್ಮಾಣದ ಶಿಲಾನ್ಯಾಸ ಕಾರ್ಯವನ್ನು ರಾಜ್ಯ ವಿದ್ಯುತ್ ಖಾತೆ ಸಚಿವ ಕೆ.ಕೃಷ್ಣನ್‌ಕುಟ್ಟಿ ಆನ್‌ಲೈನ್ ಮೂಲಕ ಶನಿವಾರ ಉದ್ಘಾಟಿಸಿದರು.

ಕಾಸರಗೋಡಿನ ಇಂಧನ ಕ್ರಾಂತಿಯ ಭಾಗವಾಗಲು ಸಂತೋಷವಾಗುತ್ತಿದೆ ಮತ್ತು ಕೇರಳದಲ್ಲಿ ಇಂಧನ ಕ್ಷೇತ್ರದಲ್ಲಿ ಪ್ರಸ್ತುತ ದೊಡ್ಡ ಬದಲಾವಣೆಗಳು ನಡೆಯುತ್ತಿವೆ ಮತ್ತು ಕಾಸರಗೋಡು ಜಿಲ್ಲೆಯ ವಿವಿಧ ವಿದ್ಯುತ್ ಸಮಸ್ಯೆಗಳನ್ನು ಈ ಯೋಜನೆಯ ಮೂಲಕ ಪರಿಹರಿಸಬಹುದು. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಖಚಿತಪಡಿಸುವುದು ಸರಕಾರದ ಗುರಿಯಾಗಿದೆ ಎಂದು ಸಚಿವರು ಹೇಳಿದರು.

ಸಮಾರಂಭದಲ್ಲಿ ಉದುಮ ಶಾಸಕ ಸಿ.ಎಚ್. ಕುಂಞಂಬು ಅಧ್ಯಕ್ಷತೆ ವಹಿಸಿದ್ದರು. ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕೆಎಸ್‌ಇಬಿಎಲ್ ವಿತರಣೆ ಮತ್ತು ಮಾನವ ಸಂಪನ್ಮೂಲ ನಿರ್ವಹಣಾ ನಿರ್ದೇಶಕ ಪಿ.ಸುರೇಂದ್ರ ಸ್ವಾಗತಿಸಿದರು. ಕೆಎಸ್ ಇಬಿಎಲ್ ಜನರೇಷನ್ ಇಲೆಕ್ಟ್ರಿಕಲ್ ಮತ್ತು ರೀಸ್ ನಿರ್ದೇಶಕ ಜಿ.ಸಜೀವ್ ಯೋಜನಾ ವರದಿಯನ್ನು ಮಂಡಿಸಿದರು.

2050ರ ವೇಳೆಗೆ ಕೇರಳವನ್ನು ಸಂಪೂರ್ಣವಾಗಿ ನವೀಕರಿಸಬಹುದಾದ ಇಂಧನ ಮೂಲಗಳ ಮೇಲೆ



ಅವಲಂಬಿತವಾಗಿ 'ನೆಟ್ ಕಾರ್ಬನ್ ನ್ಯೂಟ್ರಲ್' ರಾಜ್ಯವನ್ನಾಗಿ ಮಾಡುವ ಗುರಿಯತ್ತ ಇದು ನಿರ್ಣಾಯಕ ಹೆಜ್ಜೆಯಾಗಿದೆ. ಈ ಯೋಜನೆಯು ದೇಶದ ಮೊದಲ ನಾಲ್ಕು ಗಂಟೆಗಳ ಶೇಖರಣಾ ವ್ಯವಸ್ಥೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಈ ಯೋಜನೆಯನ್ನು ಜೆಎಸ್‌ಡಬ್ಲ್ಯೂ ಎನರ್ಜಿ ಲಿಮಿಟೆಡ್ 'ಬಿಲ್ಡ್ ಆನ್ ಆಪರೇಟ್' (ಬಿಒಒ) ಮಾದರಿಯಲ್ಲಿ 135 ಕೋಟಿ ರೂ.ಗಳ ಕೇಂದ್ರ ನೆರವಿನೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ.

ಕೆಎಸ್‌ಇಬಿಎಲ್ ಸ್ವತಂತ್ರ ನಿರ್ದೇಶಕ, ವಕೀಲ ವಿ.ಮುರುಗದಾಸ್, ಕಾಞಂಗಾಡು ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ, ಉದುಮ ಗ್ರಾಮ ಪಂಚಾಯತ್ ಅಧ್ಯಕ್ಷ ಪಿ.ವಿ.ರಾಜೇಂದ್ರನ್, ಮುಖ್ಯ ಇಂಜಿನಿಯರ್‌ಗಳಾದ ಕೆ.ಶಾಂತಿ ಮತ್ತು ಹರೀಶನ್ ಮೊಟ್ಟಮ್ಮಾಳ್ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಜಿಲ್ಲಾ ಪಂಚಾಯತ್ ಸದಸ್ಯೆ ಟಿ.ವಿ.ರಾಧಿಕಾ, ಕಾಞಂಗಾಡು ಬ್ಲಾಕ್ ಪಂಚಾಯತ್ ಸದಸ್ಯ ಬಶೀರ್ ಪಾಕ್ಯಾರ, ಉದುಮ ಗ್ರಾಮ ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷೆ ಪಿ.ಲಕ್ಷ್ಮಿ, ವಿದ್ಯುತ್ ನಿರೀಕ್ಷಕ ಟಿ.ಕೆ.ಶ್ರೀಜಾ, ಜೆಎಸ್‌ಡಬ್ಲ್ಯೂ ಎನರ್ಜಿ ಲಿಮಿಟೆಡ್ ಪ್ರತಿನಿಧಿ ಇಳಂಗೋ ಬಾಲಸುಬ್ರಹ್ಮಣ್ಯಂ, ಕಾಸರಗೋಡು ಇಂಡಸ್ಟ್ರಿಯಲ್ ಅಸೋಸಿಯೇಶನ್ ಪ್ರತಿನಿಧಿ ಎಸ್.ರಾಜಾರಾಂ, ಕೇರಳ ವ್ಯಾಪಾರಿ ವ್ಯಾಸಾಯಿ ಏಕೋಪನಾ ಸಮಿತಿ ಸದಸ್ಯ ಕೆ.ಎಂ.ಅಹಮ್ಮದ್ ಶೆರೀಫ್ ಉಪಸ್ಥಿತರಿದ್ದರು. ಕೆಎಸ್‌ಇಬಿಎಲ್ ಉಪ ಮುಖ್ಯ ಇಂಜಿನಿಯರ್ ಪಿ.ಎ.ಆಶಾ ವಂದಿಸಿದರು. ಈ ಯೋಜನೆಯನ್ನು ಅಕ್ಟೋಬರ್ 2026 ರೊಳಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಿದೆ.

ಯೋಜನೆ ಹೀಗಿದೆ

ಕೇರಳದ ವಿದ್ಯುತ್ ವಿತರಣಾ ಜಾಲವನ್ನು ಹೆಚ್ಚು ಸ್ಥಿತಿಸ್ಥಾಪಕವಾಗಿಸುವ ಗುರಿಯೊಂದಿಗೆ, ಕಾಸರಗೋಡು ಜಿಲ್ಲೆಯ ಮೈಲಾಟ್ಟಿಯಲ್ಲಿ ಅತ್ಯಾಧುನಿಕ ಬ್ಯಾಟರಿ ಶಕ್ತಿ ಸಂಗ್ರಹ ವ್ಯವಸ್ಥೆ (@CTT) ಕಾರ್ಯರೂಪಕ್ಕೆ ಬರುತ್ತಿದೆ. ರಾಜ್ಯದಲ್ಲಿ ಮೊದಲನೆಯದು ಮತ್ತು ಭಾರತದ ಅತಿದೊಡ್ಡ ಬ್ಯಾಟರಿ ಸಂಗ್ರಹ ವ್ಯವಸ್ಥೆಗಳಲ್ಲಿ ಒಂದಾದ ಈ ಯೋಜನೆಯು ಮುಂಬರುವ ವಿದ್ಯುತ್ ಬಿಕ್ಕಟ್ಟುಗಳನ್ನು ನಿವಾರಿಸಲು HTC@ ಗೆ ಸಹಾಯ ಮಾಡುವ ಪ್ರಮುಖ ಮೈಲಿಗಲ್ಲು.

ಈ ಯೋಜನೆಯ ಪ್ರಾಥಮಿಕ ಕಾರ್ಯವೆಂದರೆ ಹಗಲಿ ನಲ್ಲಿ ಸೌರ ವಿದ್ಯುತ್ ಸ್ಥಾವರ ಗಳಿಂದ ಉತ್ಪತ್ತಿಯಾಗುವ ಹೆಚ್ಚುವರಿ ವಿದ್ಯುತ್ ಅನ್ನು ಸಂಗ್ರಹಿಸಿ, ಪೀಕ್ ಸಮಯದಲ್ಲಿ ಅದನ್ನು ಗ್ರಿಡ್‌ಗೆ ಹಿಂತಿರುಗಿಸುವುದು. ಈ ಯೋಜನೆಯನ್ನು ಕೇಂದ್ರ ಸರ್ಕಾರದ ಕಾರ್ಯಸಾಧ್ಯತಾ ಅಂತರ ನಿಯೊಂದಿಗೆ ಕಾರ್ಯ ಗತಗೊಳಿಸಲಾಗುತ್ತಿದೆ.

ಸುಮಾರು 125 ಮೆಗಾವ್ಯಾಟ್ ಸಾಮರ್ಥ್ಯವಿರುವ ಈ ಸ್ಥಾವರವು ದಿನಕ್ಕೆ ಐದು ಲಕ್ಷ ಯೂನಿಟ್ ವಿದ್ಯುತ್ ಅನ್ನು ನಿರ್ವಹಿಸಬಲ್ಲದು.

ಮೈಲಾಟ್ಟಿ 220 ಕೆವಿ ಸಬ್‌ಸ್ಟೇಷನ್ ಕಾಂಪೌಂಡ್‌ನಲ್ಲಿ ಜೆಎಸ್‌ಡಬ್ಲ್ಯೂ ನಿಯೋ ಎನರ್ಜಿ ಎಂಬ ಖಾಸಗಿ ಕಂಪನಿಯು ಈ ಸ್ಥಾವರವನ್ನು ನಿರ್ಮಿಸುತ್ತಿದೆ. ನಿಗದಿತ ಸಮಯದೊಳಗೆ ನಿರ್ಮಾಣ ಪೂರ್ಣಗೊಂಡರೆ ಒಪ್ಪಂದದ ಪ್ರಕಾರ 8 ಕೋಟಿ ರೂ.ಗಳಿಗೂ ಹೆಚ್ಚಿನ ಪ್ರೋತ್ಸಾಹ ಧನ ನೀಡಲು ಮಂಡಳಿ ನಿರ್ಧರಿಸಿದೆ. ಯೋಜನೆ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದ ನಂತರ, ಕೆಎಸ್‌ಇಬಿ ರಾತ್ರಿ ವೇಳೆ ಹೆಚ್ಚಿನ ಬೆಲೆಗೆ ಹೊರಗಿನಿಂದ ವಿದ್ಯುತ್ ಖರೀದಿಸುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಕಾಸರಗೋಡು ಜಿಲ್ಲೆಯನ್ನು ಸೌರ ವಿದ್ಯುತ್ ಉತ್ಪಾದನೆಯ ಕೇಂದ್ರವನ್ನಾಗಿ ಮಾಡುವ ಕ್ರಮದ ಭಾಗವಾಗಿ ಇದು ಕೂಡ ಆಗಿದೆ. ಮೈಲಟ್ಟಿಯ ಹೊರತಾಗಿ, ಶ್ರೀಕಂಠಪುರಂ, ಪೋಥೆನ್‌ಕೋಡ್ ಮತ್ತು ಅರೀಕೋಡ್‌ಗಳಲ್ಲಿ ಇದೇ ರೀತಿಯ ಸಣ್ಣ ಪ್ರಮಾಣದ ಬ್ಯಾಟರಿ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಲು ವಿದ್ಯುತ್ ಇಲಾಖೆ ಕ್ರಮಗಳನ್ನು ಪ್ರಾರಂಭಿಸಿದೆ. ಅಕ್ಟೋಬರ್ ವೇಳೆಗೆ ಮೈಲಾಟ್ಟಿ ಯೋಜನೆಯ ವಾಣಿಜ್ಯ ಕಾರ್ಯಾಚರಣೆಗಳನ್ನು ಪ್ರಾರಂಭಿಸುವ ಗುರಿಯನ್ನು ಅಧಿಕಾರಿಗಳು ಹೊಂದಿದ್ದಾರೆ.

ಶಾರದಾ ವಿದ್ಯಾಲಯ: ಪುಟಾಣಿಗಳ ಜ್ಯೋತಿ ಪ್ರದಾನ ಸಂಭ್ರಮಾಚರಣೆ

• **ಮಂಗಳೂರು:** ನಗರದ ಕೊಡಿಯಾಲಬೈಲ್‌ನ ಶಾರದಾ ವಿದ್ಯಾಲಯದ ಭೂವರಾಹ ಬಯಲು ಸಭಾಂಗಣದಲ್ಲಿ ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಪೂರ್ವ ಪ್ರಾಥಮಿಕ ತರಗತಿಗಳ ಮುದ್ದು ಪುಟಾಣಿಗಳಿಗೆ ಜ್ಯೋತಿಪ್ರದಾನ ಸಮಾರಂಭವು ನೆರವೇರಿತು.

ಮಂಗಳೂರಿನ ಕೆ.ಎಂ.ಸಿ.ಆಸ್ಪತ್ರೆಯ ಮಕ್ಕಳ ವಿಭಾಗದ ಪ್ರೊ.ಡಾ. ನೂತನ್ ಕಾಮತ್ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ವಿವಿಧ ಶೈಲಿಯ ಪೋಷಕತ್ವದ ಪಾತ್ರದ ಬಗ್ಗೆ ಉಲ್ಲೇಖಿಸಿ, ಹೆತ್ತವರಿಗೆ ಅವರ ಜವಾಬ್ದಾರಿಗಳ ಕುರಿತು ಕಿವಿಮಾತನ್ನು ಹೇಳಿದರು.

ಶಾರದಾ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಆಡಳಿತ ನಿರ್ದೇಶಕರು ಹಾಗೂ ವಿಶ್ವಸ್ಥರಾದ ಸಮೀರ್ ಪುರಾಣಿಕ್, ವಿಶ್ವಸ್ಥರಾದ ಸುಧಾಕರ ರಾವ್ ಪೇಜಾವರ್, ಶಾರದಾ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ನಾಯ್ಕ್, ಶಾರದಾ ಶುಭೋದಯ ವಿದ್ಯಾಲಯದ ಪ್ರಾಂಶುಪಾಲರಾದ ಪ್ರತಿಭಾ ನೇಮಿರಾಜ್, ಶಾರದಾವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ



ಮೋಹನದಾಸ್ ಉಪಸ್ಥಿತರಿದ್ದರು.

ಶುಭೋದಯ ವಿದ್ಯಾಲಯ ಮೂಡುಶೆಡ್ಡೆ, ಶಾರದಾ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ತಲಪಾಡಿ, ಶಾರದಾ ವಿದ್ಯಾಲಯ ಮಂಗಳೂರಿನ ಪೂರ್ವ ಪ್ರಾಥಮಿಕತರಗತಿಯ ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಪಾಲ್ಗೊಂಡರು. ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ , ಸ್ಮರಣಿಕೆಗಳನ್ನು ವಿತರಿಸಲಾಯಿತು.

ಈ ಸಂದರ್ಭ ಶಾರದಾ ವಿದ್ಯಾಲಯದ ಮೊದಲ ಮಹಡಿಯಲ್ಲಿ ಶಿಶುವಿಹಾರದ ಮುದ್ದು ಪುಟಾಣಿಗಳಿಗೆ ನೂತನವಾಗಿ ವ್ಯವಸ್ಥೆಗೊಳಿಸಿದ ಮನೋರಂಜಕವಾದ ವರ್ಣ ವಿನ್ಯಾಸ ಚಿತ್ರಗಳಿಂದ ಒಡಗೂಡಿದ ಆಟದ ಕೋಣೆಯ ಉದ್ಘಾಟನೆ ನೆರವೇರಿತು.

ಶಾರದಾ ವಿದ್ಯಾಲಯದ ಪ್ರಾಂಶುಪಾಲೆ ಚಂದ್ರಿಕಾ ಭಂಡಾರಿ ಸ್ವಾಗತಿಸಿ, ವಿದ್ಯಾಲಯದ ಆಡಳಿತ ಪ್ರಾಂಶುಪಾಲ ದಯಾನಂದ ಕಟೀಲ್ ವಂದಿಸಿದರು. ಶಿಕ್ಷಕಿಯರಾದ ಅಂಜನಾ ಮಾಧವ ಅತ್ತಾವರ ಹಾಗೂ ಎಡ್ನಾ ವೇಗಸ್ ಕಾರ್ಯಕ್ರಮ ನಿರೂಪಿಸಿದರು.

ಅಂಬಿಕಾ ಶಿಕ್ಷಣ ಸಂಸ್ಥೆ ಮೌಲ್ಯಾಧಾರಿತ ಶಿಕ್ಷಣಕ್ಕೆ ಟೈಮ್ಸ್ ಬ್ಯುಸಿನೆಸ್ ಅವಾರ್ಡ್

• **ಪುತ್ತೂರು:** ನಗರದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳಿಗೆ ಮೌಲ್ಯಾಧಾರಿತ ಶಿಕ್ಷಣಕ್ಕಾಗಿ ದಿ ಟೈಮ್ಸ್ ಆಫ್ ಇಂಡಿಯಾ ನೀಡುವ ಟೈಮ್ಸ್ ಬ್ಯುಸಿನೆಸ್ ಅವಾರ್ಡ್ ದೊರಕಿದೆ.

ಮಂಗಳೂರಿನ ಅವತಾರ್ ಹೋಟೇಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳಿಗೆ ನೀಡಿ ಗೌರವಿಸಲಾಗಿದೆ. ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಅವರು ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಪರವಾಗಿ ಆಡಳಿತಾಧಿಕಾರಿ ಗಣೇಶ್ ಪ್ರಸಾದ್ ಎ. ಹಾಗೂ ಬಪ್ಪಳಿಗೆಯ ಅಂಬಿಕಾ ಪದವಿಪೂರ್ವ ವಿದ್ಯಾಲಯದ ಪ್ರಾಂಶುಪಾಲ ಗಣೇಶ್ ಪ್ರಸಾದ್ ಡಿ.ಎಸ್. ಪ್ರಶಸ್ತಿಯನ್ನು ಸ್ವೀಕರಿಸಿದರು.

ಪುತ್ತೂರಿನ ನಟ್ಟೋಜ ಫೌಂಡೇಶನ್ ಟ್ರಸ್ಟ್ ಆಶ್ರಯದಲ್ಲಿ ಬಪ್ಪಳಿಗೆಯಲ್ಲಿ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆ, ಅಂಬಿಕಾ ವಸತಿಯುತ ಪದವಿಪೂರ್ವ ವಿದ್ಯಾಲಯ, ಅಂಬಿಕಾ ಪದವಿ ಮಹಾವಿದ್ಯಾಲಯ ಹಾಗೂ ನೆಲ್ಲಿಕಟ್ಟೆಯಲ್ಲಿ ಅಂಬಿಕಾ ಪದವಿಪೂರ್ವ ವಿದ್ಯಾಲಯಗಳು ಮುನ್ನಡೆಯುತ್ತಿವೆ.



ನಮ್ಮ ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ದೇಶದ ರಾಯಭಾರಿಯಂತಾಗಬೇಕು. ಭಗವದ್ಗೀತೆಯಂತಹ ಉತ್ಕೃಷ್ಟ ಹಾಗೂ ಪವಿತ್ರ ವಿಚಾರಗಳಿಂದ ನಮ್ಮ ಮಕ್ಕಳು ಪುನೀತರಾಗಿ ಬೆಳೆಯಬೇಕು. ನಮ್ಮ ಆಚಾರ ವಿಚಾರಗಳನ್ನು ಮನನ ಮಾಡಿಕೊಂಡು ಬೆಳೆದಾಗ ಅವರೆಲ್ಲರೂ ನಿಜಾರ್ಥದಲ್ಲಿ ಭಾರತೀಯರೆನಿಸುತ್ತಾರೆ. ಶಿಕ್ಷಣ ಸಂಸ್ಥೆಗಳು ದೇಶದ ಬಗೆಗೆ ಅಭಿಮಾನವಿಲ್ಲದವರನ್ನು ಸೃಷ್ಟಿಸಿದರೆ ಅದು ಈ ದೇಶಕ್ಕೆ ಮಾಡುವ ಅವಮಾನವೆನಿಸುತ್ತದೆ.

■ ಸುಬ್ರಮಣ್ಯ ನಟ್ಟೋಜ, ಅಧ್ಯಕ್ಷರು, ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳು

ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮಾತ್ರವಲ್ಲದೆ ದೇಶಪ್ರೇಮ, ಧರ್ಮಜಾಗೃತಿ, ಸನಾತನ ಸಂಸ್ಕೃತಿ – ಸಂಸ್ಕಾರಗಳನ್ನು ಪ್ರತಿನಿತ್ಯ ವಿದ್ಯಾರ್ಥಿಗಳಲ್ಲಿ ಒಡಮೂಡಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಯೋಗವನ್ನು ಪಠ್ಯಕ್ರಮದಲ್ಲಿ ಸೇರಿಸಿದ ರಾಜ್ಯದ ಮೊದಲ ಪದವಿ ಪೂರ್ವ ಶಿಕ್ಷಣ ಸಂಸ್ಥೆಯಾಗಿ ಅಂಬಿಕಾ ಪದವಿಪೂರ್ವ ವಿದ್ಯಾಲಯಗಳು ಗುರುತಿಸಿಕೊಂಡಿವೆ.

ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಐದನೇ ಬೋಳೂರು ಶಾಖೆಯ ನೂತನ ಸ್ವಂತ ಕಚೇರಿ ಕಟ್ಟಡ, ಮುಖ್ಯ ಸಭಾಭವನ ಲೋಕಾರ್ಪಣೆ

ಕೃಷಿ ಸಾಲ, ಮರುಪಾವತಿಯಲ್ಲಿ ಕರಾವಳಿ ಅಗ್ರಗಣ್ಯ: ಡಾ. ಎಂಎನ್‌ಆರ್

• **ಮಂಗಳೂರು:** ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ 5ನೇ ಬೋಳೂರು ಶಾಖೆಯ ನೂತನ ಸ್ವಂತ ಕಚೇರಿ ಕಟ್ಟಡ ಮತ್ತು ಮುಖ್ಯ ಸಭಾಭವನದ ಉದ್ಘಾಟನೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಅವರು ಭಾನುವಾರ ನಗರದ ಸುಲ್ತಾನ್ ಬತ್ತೇರಿ ರಸ್ತೆಯ ಬೋಳೂರಿನಲ್ಲಿ ನೆರವೇರಿಸಿದರು.

ಈ ವೇಳೆ ಮಾತನಾಡಿದ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಕೃಷಿ ಸಾಲ ಮತ್ತು ಮರುಪಾವತಿಯ ವಿಚಾರದಲ್ಲಿ ದೇಶದಲ್ಲಿಯೇ ಅವಿಭಜಿತ ಕರಾವಳಿ ಜಿಲ್ಲೆ ಅಗ್ರಸ್ಥಾನದಲ್ಲಿದ್ದು, ಸಾಲ ಸಿಗದೇ ರೈತ ಸಂಕಷ್ಟಪಡುವ ಸ್ಥಿತಿ ಇಲ್ಲ ಎಂದರು.

ಕಳೆದ 29 ವರ್ಷಗಳಲ್ಲಿ ಕೃಷಿ ಸಾಲ ಶೇ.100ರಷ್ಟು ಮರುಪಾವತಿ ಮಾಡುವ ಮೂಲಕ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ದೇಶದಲ್ಲಿಯೇ ಅಗ್ರಸ್ಥಾನದಲ್ಲಿದೆ. ಈ ಬಗ್ಗೆ ನಬಾರ್ಡ್ ಅಧಿಕಾರಿಗಳೇ ಮಾಹಿತಿ ನೀಡಿದ್ದಾರೆ. ಇನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಲ ನೀಡಲು ನಬಾರ್ಡ್ ಕೂಡ ಮುಂದಾಗಿದೆ ಎಂದರು.



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ವಾಣಿಜ್ಯ ಬ್ಯಾಂಕ್‌ಗಳ ತವರೂರು. ಆದರೆ ಈಗ ಬಹುತೇಕ ಬ್ಯಾಂಕ್‌ಗಳು ವಿಲೀನಗೊಂಡಿದೆ. ವಾಣಿಜ್ಯ ಬ್ಯಾಂಕಿಂಗ್ ಸಿರಿವಂತರಿಗೆ ಮಾತ್ರ ಸಾಲ ನೀಡುತ್ತವೆ. ಆದರೆ ಸಹಕಾರಿ ಬ್ಯಾಂಕ್‌ಗಳು ಊರಿನ ಪ್ರತಿಯೊಬ್ಬರಿಗೂ ಸುಲಭದಲ್ಲಿ ಸಾಲ ಸೌಲಭ್ಯ ನೀಡುವ ಮೂಲಕ ಪ್ರತೀ ಮನೆಗೂ ಬೆಳಕಾಗಿದೆ ಹಾಗೂ ಮಹಿಳೆಯರಿಗೆ ಸಹಕಾರ ಕ್ಷೇತ್ರದ ಮೂಲಕ ಸ್ವಾವಲಂಬಿ ಬದುಕು ನಿರ್ಮಾಣ ಸಾಧ್ಯವಾಗಿದೆ ಎಂದರು.

ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಇಲ್ಲ. ನಾನು ಕೂಡ ರಾಜಕೀಯಕ್ಕೆ ಬರೋದಿಲ್ಲ. ಈ ವಿಚಾರದಲ್ಲಿ ನಾನು ಯಾವುದೇ ಒತ್ತಡಕ್ಕೂ ಬಗ್ಗುವುದಿಲ್ಲ. ರಾಜಕೀಯ ರಹಿತವಾಗಿ ಸಹಕಾರಿ ಕ್ಷೇತ್ರ ಅವಿಭಜಿತ ಜಿಲ್ಲೆಯಲ್ಲಿ ಪ್ರಗತಿಯನ್ನು ಕಾಣುತ್ತಿದೆ ಎಂದು ಡಾ.ಎಂಎನ್‌ಆರ್ ಹೇಳಿದರು.

ಶಾಸಕ ಡಾ. ವೈ. ಭರತ್ ಶೆಟ್ಟಿ ಮಾತನಾಡಿ, ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಇಂದು ಜಿಲ್ಲೆಯ ಪ್ರತಿಷ್ಠಿತ ಬ್ಯಾಂಕ್‌ಗಳಿಗೆ ಮೇಲ್ಪಂಕ್ತಿಯಾಗಿದೆ. ಸಹಕಾರಿ ಬ್ಯಾಂಕ್ ನಡೆಸುವುದು ಸುಲಭದ ಮಾತಲ್ಲ. ಆದರೆ ಸಾಲ ನೀಡುವಿಕೆಯ ವಿಚಾರದಲ್ಲಿ ಸಹಕಾರಿ ಬ್ಯಾಂಕ್‌ಗಳ ಸಾಧನೆ ಅತ್ಯುತ್ತಮವಾಗಿದೆ. ಸಾಕಷ್ಟು ಉದ್ಯಮಿಗಳು ತಮ್ಮ ಉದ್ಯಮವನ್ನು ಬೆಳೆಸಿದ್ದಾರೆ. ಸಾಕಷ್ಟು ಮಂದಿಯ ಜೀವನದಲ್ಲಿ ಸಹಕಾರಿ ಬ್ಯಾಂಕ್‌ಗಳು ಬದಲಾವಣೆ ತಂದಿದೆ ಎಂದರು.

ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಅತ್ಯುತ್ತಮ ಸೇವೆಯೊಂದಿಗೆ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದೆ. 5 ಕೋಟಿ 42 ಲಕ್ಷ ರೂ. ವೆಚ್ಚದಲ್ಲಿ ಹೊಸ ಕಟ್ಟಡ ಹಾಗೂ ಸಭಾ ಭವನದ ನಿರ್ಮಾಣ ಮಾಡಲಾಗಿದೆ. ಶೇ.18ರಷ್ಟು ಡಿವಿಡೆಂಟ್ ನೀಡಿದೆ. ಬ್ಯಾಂಕ್ ಸಾಕಷ್ಟು ಪ್ರಗತಿಯನ್ನು ಹೊಂದುತ್ತಿದ್ದು, ಉತ್ತಮ ಲಾಭವನ್ನು ಪಡೆಯುತ್ತಿದೆ

■ ಡಾ.ಎಂ.ಎನ್. ರಾಜೇಂದ್ರ ಕುಮಾರ್, ಅಧ್ಯಕ್ಷ, ಎಸ್‌ಸಿಡಿಸಿಸಿ ಬ್ಯಾಂಕ್

ಮಾಜಿ ಸಚಿವ ಬಿ.ನಾಗರಾಜ ಶೆಟ್ಟಿ ಶುಭಹಾರೈಸಿದರು. ಇದೇ ಸಂದರ್ಭ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಬ್ಯಾಂಕಿನ ವತಿಯಿಂದ ಸನ್ಮಾನಿಸಲಾಯಿತು. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಸಹಕರಿಸಿದ ಮುಗ್ರೋಡಿ ಕನ್‌ಸ್ಟ್ರಕ್ಷನ್ ಮಾಲೀಕ ಸುಧಾಕರ ಶೆಟ್ಟಿ ಅವರನ್ನು ಗೌರವಿಸಲಾಯಿತು.

ಬೋಳೂರು ಜಾರಂದಾಯ ದೈವಸ್ಥಾನದ ಅಧ್ಯಕ್ಷ ಬಲರಾಜ ಸಿ.ಕೋಟ್ಯಾನ್ ಮುಖ್ಯ ಅತಿಥಿಗಳಾಗಿದ್ದರು. ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಭಾಸ್ಕರ ಕೊಂಡೆ, ತುಕಾರಾಂ ಸನಿಲ್, ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷ ಧನಂಜಯ ಬಂಗೇರ, ನಿರ್ದೇಶಕರಾದ ಪ್ರೇಮ, ನೇಮಿರಾಜ್ ಶೆಟ್ಟಿ, ಶ್ರೀರಂಜನಿ, ಸಿತೇಶ್ ಕೊಂಡೆ, ಗಣೇಶ್ ಶೆಟ್ಟಿ, ಶರ್ಮಿಳಾ, ದ.ಕ. ಜಿಲ್ಲಾ ಸಹಕಾರಿ ಬ್ಯಾಂಕ್ ಪ್ರತಿನಿಧಿ ಕಿರಣ್ ಕುಮಾರ್ ಶೆಟ್ಟಿ, ಪ್ರಧಾನ ವ್ಯವಸ್ಥಾಪಕ (ಪ್ರಭಾರ) ಪ್ರೀತಮ್ ಪಿ.ಪೂಜಾರಿ ಮುಂತಾದವರು ಉಪಸ್ಥಿತರಿದ್ದರು.

ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಎ.ಲೋಕೇಶ್ ಭಂಡಾರಿ ಸ್ವಾಗತಿಸಿದರು. ನಿರ್ದೇಶಕ ಸುಮಂತ್ ರಾವ್ ವಂದಿಸಿದರು. ರೋಹಿತ್ ಉಳ್ಳಾಲ್ ನಿರೂಪಿಸಿದರು.

ಕಿರುಸುದ್ದಿ

ಚೆಸ್: ಗುಕೇಶ್ ಪಂದ್ಯ ಡ್ರಾ



ಹೊಸದಿಲ್ಲಿ: ಪ್ರಾಗ್ ಅಂತಾರಾಷ್ಟ್ರೀಯ ಚೆಸ್ ಫೆಸ್ಟಿವಲ್‌ನಲ್ಲಿ ಡೆವಿಡ್ ನಾವರಾ ಅವರೊಂದಿಗೆ ಡ್ರಾ ಸಾಧಿಸಿರುವ ನಂತರ ವಿಶ್ವಚಾಂಪಿಯನ್ ಡಿ. ಗುಕೇಶ್ ತಮ್ಮ ಗೆಲುವಿನ ಹುಡುಕಾಟ ಮುಂದುವರಿಸಿದ್ದಾರೆ. ನಾಲ್ಕನೇ ಸುತ್ತಿನ ಪಂದ್ಯಗಳ ನಂತರ ಭಾರತ ಸಂಭ್ರಮಿಸುವ ಫಲಿತಾಂಶ ಇನ್ನೂ ಮೂಡಿಬಂದಿಲ್ಲ. ಅರ್ವಿಂದ್ ಚಿತಂಬರಂ ತಮ್ಮ ಪಂದ್ಯದಲ್ಲಿ ಸೋಲೊಪ್ಪಿಕೊಂಡಿದ್ದಾರೆ.

ಭಾನುವಾರದ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಡೆವಿಡ್ ನಾವಾರಾ ಅವರನ್ನು ಎದುರಿಸಿದ್ದ ಗುಕೇಶ್ ಮೊದಲಿನಿಂದಲೂ ಸಮತೋಲಿತ ಪ್ರದರ್ಶನ ನೀಡಿದ್ದ ಗುಕೇಶ್ ಗೆಲುವಿನ ನಿರೀಕ್ಷೆಯಲ್ಲಿದ್ದರು. ಮಧ್ಯಮ ಆಟದಲ್ಲಿ ತಮ್ಮ ರಾಕ್‌ನೊಂದಿಗೆ ಎದುರಾಳಿಗೆ ವಿವಿಧ ಸವಾಲುಗಳನ್ನು ನೀಡಿದ ಅವರು, ಗೆಲುವನಂಚೆಗೇರುವ ಹೊತ್ತಿಗೆ ಕಂಬ್ಯಾಕ್ ಮಾಡಿದ ಡೆವಿಡ್ ಗುಕೇಶ್‌ಗೂ ಒತ್ತಡ ಹೇರಿದರು. ಫಲಿತಾಂಶಕ್ಕಾಗಿ ಉಭಯ ಗ್ರ್ಯಾಂಡ್ ಮಾಸ್ಟರ್‌ಗಳು ಅತ್ಯುತ್ತಮ ಪ್ರದರ್ಶನ ನೀಡಿದ ನಂತರ ಪಂದ್ಯವನ್ನು ಡ್ರಾ ಎಂದು ಘೋಷಿಸಲು 72 ನಡೆಗಳ ತನಕ ಪಂದ್ಯ ನಡೆಯಿತು. ಇನ್ನು ಅರ್ವಿಂದ್ ಚಿತಂಬರಂ ಜರ್ಮನಿಯ ಪ್ರತಿಭಾನ್ವಿತ ಗ್ರ್ಯಾಂಡ್‌ಮಾಸ್ಟರ್ ವೈಕೆಂಟ್ ಕೀಮರ್ ಅವರೊಂದಿಗೆ ಸೋತರು. ಆರಂಭದಲ್ಲಿ ತನ್ನ ಚಾಣಾಕ್ಷತೆಯಿಂದ ಭಾರತ ಗ್ರ್ಯಾಂಡ್‌ಮಾಸ್ಟರ್ ಮೇಲೆ ಒತ್ತಡ ಹೇರಿದ ಕೀಮರ್ ಕೊನೆಯತನಕ ತಮ್ಮ ಹಿಡಿತ ಮುಂದುವರಿಸಿದರು. ಪಂದ್ಯ ಗೆದ್ದು ಪ್ರಶಸ್ತಿ ಸ್ಥಾನಕ್ಕಾಗಿ ತಮ್ಮ ಸ್ಪರ್ಧೆಯನ್ನು ಇನ್ನಷ್ಟು ಗಟ್ಟಿಗೊಳಿಸಿದರು.

ಚಾಲೆಂಜರ್ಸ್ ವಿಭಾಗ: ಇನ್ನು ಚಾಲೆಂಜರ್ಸ್ ವಿಭಾಗದಲ್ಲಿ ವಿಶ್ವಕಪ್ ವಿಜೇತೆ, ಭಾರತೀಯ ಗ್ರ್ಯಾಂಡ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ಅಗ್ರಸ್ಥಾನಿ ವ್ಯಾಂಕ್ಲಾವ್ ಫಿನೆಕ್ ಅವರೊಂದಿಗೆ ಗೆದ್ದರು. ಸೂರ್ಯ ಶೇಖರ್ ಸ್ಟೀಪನ್ ಹರ್ಬೆಕ್ ಅವರೊಂದಿಗೆ ಡ್ರಾ ಮಾಡಿಕೊಂಡರು. ದಿವ್ಯಾ 1.5 ಅಂಕಗಳನ್ನು ಹೊಂದಿದ್ದಾರೆ. ಸೂರ್ಯ ಒಟ್ಟು ಒಂದು ಅಂಕ ಗಳಿಸಿದ್ದಾರೆ.

ಮಹಾ ಓಪನ್: ಫೆಡರಿಕೊ ಚಾಂಪಿಯನ್

ಮುಂಬೈ: ಆರನೇ ಶ್ರೇಯಾಂಕಿತ ಇಟಲಿಯ ಫೆಡರಿಕೊ ಸಿನಾ ಐದು ಪಂದ್ಯ ಅಂಕಗಳನ್ನು ಉಳಿಸಿಕೊಂಡು ಬ್ರಿಟನ್‌ನ ಫಾಕ್ಸ್ ವಿರುದ್ಧ ರೋಚಕ ಮೂರು ಸೆಟ್‌ಗಳ ಅಂತಿಮ ಹಣಾಹಣಿಯಲ್ಲಿ ಜಯ ಸಾಧಿಸಿ ಮಹಾ ಓಪನ್ ಪ್ರಶಸ್ತಿಯನ್ನು ಕಬಳಿಸಿದರು. ಶಿವ ಛತ್ರಪತಿ ಕ್ರೀಡಾ ಸಂಕೂಲ, ಮಳೂಂಜೆ ಬಾಳೆವಾಡಿ ಕ್ರೀಡಾಂಗಣದಲ್ಲಿ ನಡೆದ ಅಂತಿಮ ಪಂದ್ಯದಲ್ಲಿ ಚಿನಾ 6–3, 5–7, 7–6 (1) ಅಂತರದಲ್ಲಿ ಗೆದ್ದು ತಮ್ಮ ಮೊದಲ ಚಾಲೆಂಜರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

2 ಗಂಟೆ 29 ನಿಮಿಷಗಳ ಕಾಲ ನಡೆದ ಕಠಿಣ ಪೈಪೋಟಿಯಲ್ಲಿ ಚಿನಾ ಮೊದಲ ಸೆಟ್‌ನ್ನು 6–3 ಅಂತರದಲ್ಲಿ ಗೆದ್ದು ಆತ್ಮವಿಶ್ವಾಸದಿಂದ ಆರಂಭಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ಗಿಲ್ ತಿರುಗೇಟು ನೀಡಿ 5–7 ಅಂತರದಲ್ಲಿ ಜಯಿಸಿ ಪಂದ್ಯವನ್ನು ಸಮಬಲಕ್ಕೆ ತಂದರು.ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಇಬ್ಬರೂ ಆಟಗಾರರು ಸಮಾನ ಮಟ್ಟದ ಪೈಪೋಟಿ ನೀಡಿದರು. 5–6 ಅಂಕದಲ್ಲಿ ಚಿನಾ ತಮ್ಮ ಸರ್ವ್‌ನಲ್ಲಿ ಐದು ಬಾರಿ ಸೋಲಿನ ಅಂಚಿನಲ್ಲಿದ್ದರೂ ಪ್ರತಿಯೊಂದು ಸಂದರ್ಭದಲ್ಲೂ ಧೈರ್ಯದಿಂದ ಪಾರಾಗಿ ಸಮಬಲ ಸಾಧಿಸಿದರು. ಬಳಿಕ ನಡೆದ ಅಂತಿಮ ಸಮಪಾಲು ನಿರ್ಧಾರದಲ್ಲಿ 18 ವರ್ಷದ ಚಿನಾ 7–1 ಅಂತರದಲ್ಲಿ ಮೇಲುಗೈ ಸಾಧಿಸಿ ಪ್ರಶಸ್ತಿಯನ್ನು ಖಚಿತಪಡಿಸಿಕೊಂಡರು.



ಭಾನುವಾರ ಮುಕ್ತಾಯಗೊಂಡಿರುವ ಕರ್ನಾಟಕ ಶೂಟಿಂಗ್ ಲೀಗ್‌ನಲ್ಲಿ ಟ್ರಿಗರ್ ಟ್ಯಾಕ್ಟಿಶಿಯನ್ಸ್ ತಂಡ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಭಾನುವಾರದ ಫೈನಲ್‌ನಲ್ಲಿ ಬೆಂಗಳೂರು, ಕ್ಯಾಲಿಬರ್ ಕ್ಯಾಪಿಟಲ್ಸ್ ಕೂಡ ಉತ್ತಮ ಪ್ರದರ್ಶನ ನೀಡಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದುಕೊಂಡವು.

ವೆಸ್ಟ್ ಇಂಡೀಸ್ ಹೊರನೂಕಿದ ಸಂಜು | ಉಪಾಂತ್ಯದಲ್ಲಿ ಸೂರ್ಯ ಪಡೆಗೆ ಇಂಗ್ಲೆಂಡ್ ಸವಾಲು

ಸೆಮಿಗೆ ಕೊಂಡೊಯ್ದ ಸಂಜು ಸ್ಯಾಮ್ಸನ್

ಕೋಲ್ಕತ್ತಾ: ಕಳಪೆ ಲಯದಿಂದಾಗಿ ಟೀಕೆ ಎದುರಿಸಿದ್ದ ಸಂಜು ಸ್ಯಾಮ್ಸನ್ ಭಾರತೀಯರ ಪಾಲಿಗೆ ಸೆಮಿಗೆ ಕೊಂಡೊಯ್ದ ಹೀರೋ ಆಗಿ ಮೆರೆದರು. ವಿಂಡೀಸ್ ವಿರುದ್ಧದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ತಂಡವನ್ನು ಗೆಲ್ಲಿಸಿದ ಅವರು, ವಿಂಡೀಸ್ ತಂಡಕ್ಕೆ ವಿಶ್ವಕಪ್‌ನಿಂದ ಹೊರನೂಕಿದ್ದು, ಭಾರತ ಇಂಗ್ಲೆಂಡ್‌ನೊಂದಿಗೆ ಸೆಮಿಫೈನಲ್ ಆಡುವುದಕ್ಕೆ ಸಜ್ಜಾಗಿದೆ.

ಭಾನುವಾರದ ಪಂದ್ಯದಲ್ಲಿ ಭಾರತ ವಿಶ್ವಕಪ್ ಇತಿಹಾಸದಲ್ಲಿ ತನ್ನ ಅತ್ಯಧಿಕ ಗುರಿ ಮುಟ್ಟಿದೆ. ಕೊಹ್ಲಿ ಇಲ್ಲದೆ ಮೊದಲ ಬಾರಿಗೆ 150 ರನ್‌ಗೂ ಹೆಚ್ಚು ಗುರಿ ಮುಟ್ಟಿದೆ. ಲೀಲಾಜಾಲವಾಗಿ ಸೆಮಿಫೈನಲ್‌ಗೇರಿದೆ. ಭಾನುವಾರದ ಕ್ವಾರ್ಟರ್ ಫೈನಲ್ ರೋಚಕ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿ ದೊಡ್ಡ ಗುರಿ ನೀಡಿತು. ಗುರಿ ಬೆನ್ನತ್ತಿದ ಭಾರತ 19.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಪಂದ್ಯ ಗೆದ್ದುಕೊಂಡಿತು. ಸಂಜು ಸ್ಯಾಮ್ಸನ್ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿದರು. ಕೊನೆಯವರೆಗೂ ಆಡಿ ಪಂದ್ಯ ಗೆಲ್ಲಿಸಿದ ಹೀರೋ ಎನಿಸಿದರು. ವಿಂಡೀಸ್ ಪಾಲಿಗೆ ದುಸ್ವಪ್ನವಾಗಿದ್ದರು. ಪಂದ್ಯ ಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಜಸ್‌ಪ್ರೀತ್ ಬೂಮ್ರಾ ಪಂದ್ಯದ ಬೆಸ್ಟ್ ಬೌಲರ್ ಎನಿಸಿಕೊಂಡರು.

ಭಾರತಕ್ಕೂ ಆರಂಭಿಕ ಆಘಾತ: ಸಂಜು ಸ್ಯಾಮ್ಸನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆದರೂ ಭಾರತಕ್ಕೆ ಆರಂಭಿಕ ಓವರ್‌ಗಳಲ್ಲೇ ಅಭಿಷೇಕ್ ವಿಕೆಟ್ ಆಘಾತ ಎದುರಾಯಿತು. 10 ರನ್ ಗಳಿಸಿದ್ದಾಗ ಅಭಿಷೇಕ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಇಶಾನ್ ಕಿಶನ್ ಕೂಡ ಹೆಚ್ಚು ಹೊತ್ತು ನಿಲ್ಲದೆ ವಿಕೆಟ್ ಒಪ್ಪಿಸಿದರು. ಭಾರತಕ್ಕೆ ಆತಂಕ, ಒತ್ತಡ ಶುರುವಾಯಿತು. ಸೂರ್ಯ ಮತ್ತು ಸಂಜು ಸ್ಯಾಮ್ಸನ್ ಭಾರತ ಅಭಿಮಾನಿಗಳ ನಿರೀಕ್ಷೆ, ಆಸೆ ಮತ್ತು ಭರವಸೆ ಹೊತ್ತಿಕೊಂಡು, ಕೊಂಚ ಹೊತ್ತು ನಿರಾಳ ನೀಡಿದರು. ಅಲ್ಲಲ್ಲಿ ಬೌಂಡರಿಗಳನ್ನು ಬಾರಿಸುತ್ತಾ ಸಿಂಗಲ್‌ಗಳ ಮೂಲಕ ಪಂದ್ಯವನ್ನು ಕಸಿದುಕೊಳ್ಳತೊಡಗಿದರು ಸಂಜು, ಸೂರ್ಯ.

ಸಂಜು ಆಡಿದ್ದೇ ಆಟ: ಇಷ್ಟು ದಿನ ಹಿನ್ನಡೆ ಅನುಭವಿಸಿದ್ದ ಸಂಜು ಸ್ಯಾಮ್ಸನ್ ಈ ಪಂದ್ಯದಲ್ಲಿ ಭಾರತೀಯರ ಪಾಲಿಗೆ ಆಶಾಕಿರಣವಾಗಿದ್ದರು. 26 ಬಾಲ್‌ಗಳಲ್ಲಿ ಅರ್ಧಶತಕ ಪೂರೈಸಿಕೊಂಡ ಅವರು, ಟಿ20 ವಿಶ್ವಕಪ್‌ನಲ್ಲಿ ತಮ್ಮ ಮೊದಲನೇ ಶತಕ ಬಾರಿಸಿದರು. ಸೂರ್ಯ 18 ರನ್‌ಗೆ ಆಟ ನಿಲ್ಲಿಸಿದರು. ತಿಲಕ್ ವರ್ಮಾ ಕೂಡ ಸಂಜು ಸ್ಯಾಮ್ಸನ್ ಅವರೊಂದಿಗೆ ಜತೆಗೂಡಿದರು. ವಿಂಡೀಸ್ ಕಡೆಯಿಂದ ಪಂದ್ಯ ಕಸಿದುಕೊಂಡ ಈ ಜೋಡಿ 42 ರನ್‌ಗಳ ಜೊತೆಯಾಟ ನಿರ್ಮಿಸಿತು. ಪಾಂಡ್ಯ 17, ದುಬೆ 8★ ರನ್ ಗಳಿಸಿದರು. ಸಂಜು ಸ್ಯಾಮ್ಸನ್ ಅಜೇಯ 97 ರನ್ ಬಾರಿಸಿದರು.



ಭಾರತದ ಅತಿ ದೊಡ್ಡ ಚೇಸ್
196 ರನ್ ಗುರಿ ಬೆನ್ನತ್ತಿದ ಭಾರತ ವಿಶ್ವಕಪ್‌ನಲ್ಲಿ ತನ್ನ ಅತಿ ಹೆಚ್ಚು ರನ್ ಪೇರಿಸಿದ ದಾಖಲೆಯೊಂದನ್ನು ಮಾಡಿತು.

ಚೇಸ್-ಹೋಪ್ ಆಸರೆ

ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್‌ಗೆ ನಿಧಾನಗತಿ ಆರಂಭ ಸಿಕ್ಕಿತು. ಆರಂಭದಿಂದಲೇ ಸ್ಫೋಟಕ ಬ್ಯಾಟಿಂಗ್ ಮಾಡಬೇಕೆಂಬ ಶೈ ಹೋಪ್ ಅವರ ಯೋಜನೆ ವಿಫಲವಾಯಿತು. ಹಾರ್ದಿಕ್ ಪಾಂಡ್ಯ ಮತ್ತು ಅರ್ಷದೀಪ್ ಸಿಂಗ್ ಪ್ರಖರ ದಾಳಿ ಸಂಘಟಿಸಿದರು. ನಂತರ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡ ಚೇಸ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಆರಂಭದಲ್ಲಿ ಉತ್ತಮ ಬೌಲಿಂಗ್ ಮಾಡಿದ್ದರೂ ಭಾರತ ಮೊದಲ ವಿಕೆಟ್ ಪಡೆದುಕೊಳ್ಳು ಹೊತ್ತಿಗಾಗಲೇ 68 ರನ್ ದಂಡಿಸಿಕೊಂಡಿತು. 8.5 ಓವರ್‌ಗಳವರೆಗೆ ಬೌಲಿಂಗ್ ಮಾಡಬೇಕಾಯಿತು. ಹೋಪ್ ವಿಕೆಟ್ ಒಪ್ಪಿಸಿದ ನಂತರ ಹೆಟ್ಮೇರ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಅವರಿಷ್ಟು 27 ರನ್ ಜೋಡಿಸುವಷ್ಟರಲ್ಲಿ ಆರಂಭಿಕ ಚೇಸ್ 40 ರನ್‌ಗಳಿಸಿ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದರು. 11 ಓವರ್‌ಗಳಲ್ಲಿ 100ರನ್ ದಾಟಿದ್ದ ವಿಂಡೀಸ್ ದೊಡ್ಡ ಮೊತ್ತ ದಾಖಲಿಸುವತ್ತ ಸಾಗಿತ್ತು.

ಬೂಮ್ರಾ ಸ್ಟ್ರೈಕ್

ಅಷ್ಟೊತ್ತಿಗಾಗಲೇ ಬೌಲಿಂಗ್‌ಗೆ ಬಂದ ಬೂಮ್ರಾ ಸರಸರನೇ ಎರಡು ವಿಕೆಟ್ ಪಡೆದು ಸಂಭ್ರಮಿಸಿ ಬಿಟ್ಟರು. ವಿಂಡೀಸ್ ವೇಗಕ್ಕೆ ತಡೆಯೊಡ್ಡಿದರು. ಇಬ್ಬರು ಬಲಿಷ್ಠ ಬ್ಯಾಟರ ವಿಕೆಟ್ ಪಡೆದು ಬಲವಾದ ಪೆಟ್ಟು ನೀಡಿಬಿಟ್ಟರು. 14ನೇ ಓವರ್‌ನಲ್ಲಿ ರುದರ್‌ಫೋರ್ಡ್ ವಿಕೆಟ್ ಬಿದ್ದ ನಂತರ ವಿಂಡೀಸ್ ಭಾರೀ ಹಿನ್ನಡೆ ಅನುಭವಿಸಿದಂತಿತ್ತು. ಆದರೆ ಈ ಹಂತದಲ್ಲಿ ಬ್ಯಾಟಿಂಗ್‌ಗಿಳಿದ ಹೋಲ್ಡರ್ ಮತ್ತು ಜೇಸನ್ ಹೋಲ್ಡರ್ ಎಲ್ಲಾ ಲೆಕ್ಕಾಚಾರಕ್ಕೆ ಬ್ರೇಕ್ ಹಾಕಿದರು. ಭಾರತ ತಂಡದ ಬೌಲಿಂಗ್ ಪಡೆಯನ್ನು ಮನಬಂದಂತೆ ದಂಡಿಸಿದ ಈ ಜೋಡಿ, ಕೊನೆಯ 6 ಓವರ್‌ಗಳಲ್ಲಿ 76 ರನ್ ಜೋಡಿಸಿತು. ಮತ ಹಿಗ್ಗಿಸಿತು, ದೊಡ್ಡ ಗುರಿ ನೀಡುವುದಕ್ಕೆ ಆಸರೆಯಾಯಿತು. ಪೋವೆಲ್ ಔಟಾಗದೆ 34, ಹೋಲ್ಡರ್ 37 ರನ್‌ಗಳಿಸಿದರು. ಭಾರತ ಪರ ಬೂಮ್ರಾ 2 ವಿಕೆಟ್ ಕಿತ್ತರು.

ಸಂಕ್ಷಿಪ್ತ ಸ್ಕೋರ್

ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 195/4: ಚೇಸ್ 40, ಹೋಲ್ಡರ್ 37; ಬೂಮ್ರಾ 36/2
ಭಾರತ 19.2 ಓವರ್‌ಗಳಲ್ಲಿ 199/5: ಸ್ಯಾಮ್ಸನ್ 97★, ತಿಲಕ್ 27; ಜೋಸೆಫ್ 42/2

ದ.ಆಫ್ರಿಕಾಗೆ ಭರ್ಜರಿ ಗೆಲುವು

ಔಪಚಾರಿಕ ಪಂದ್ಯದಲ್ಲಿ ದ.ಆಫ್ರಿಕಾ ಜಿಂಬಾಬ್ವೆ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿತು. ಜಿಂಬಾಬ್ವೆ ತಂಡದ ನಾಯಕ ಸಿಕಂದರ್ ರಜಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಅವರಿಗೆ ಪಂದ್ಯಶ್ರೇಷ್ಠ ಪ್ರಶಸ್ತಿ ಸಿಕ್ಕರೂ ಪಂದ್ಯ ಗೆದ್ದ ಸಂಭ್ರಮಾಚರಣೆ ಸಿಗಲೇ ಇಲ್ಲ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿತು. ಗುರಿ ಬೆನ್ನತ್ತಿದ ದ.ಆಫ್ರಿಕಾ 17.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 154 ರನ್‌ಗಳಿಸಿತು. ತಂಡದ ಪರ ಬ್ರೇವಿಸ್ 42, ಮಿಲ್ಲರ್ 22, ರ್ಯಾನ್ 32 ಮತ್ತು ಲಿಂಡೆ 30 ರನ್ ಬಾರಿಸಿದರು.

ಹಾಕಿ: ವಿಶ್ವಕಪ್ ಅರ್ಹತಾ ಸುತ್ತಿಗೆ ಭಾರತ ತಂಡ

ಹೊಸದಿಲ್ಲಿ: ಭಾರತದ ರಾಷ್ಟ್ರೀಯ ಹಾಕಿ ಸಂಸ್ಥೆ ಮಹಿಳೆಯರ ಎಫ್ ಐಎಚ್ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಗಳಿಗೆ ತಂಡ ಪ್ರಕಟಿಸಿದೆ. ಎಫ್ ಐಎಚ್‌ನಲ್ಲಿ ಹಿನ್ನಡೆ ಅನುಭವಿಸಿರುವ ನಂತರ ವಿಶ್ವಕಪ್ ಅರ್ಹತೆ ಪಡೆಯುವಲ್ಲಿ ವಿಫಲವಾಗಿರುವ ಭಾರತ ಮಹಿಳೆಯರ ತಂಡಕ್ಕೆ ಇದು ಕೊನೆಯ ಅವಕಾಶವಾಗಿದೆ. ಮಾರ್ಚ್ 8ರಿಂದ ಈ ಪಂದ್ಯಗಳು ಶುರುವಾಗಲಿವೆ. ಮಹಿಳಾ ಹಾಕಿ ತಂಡಕ್ಕೆ ಕೋಚ್ ಆಗಿರುವ ಜೋರ್ಡ್ ಮರಿಜ್ನೆ ಅವರ ನೇತೃತ್ವದಲ್ಲಿ ಇದೇ ಮೊದಲ ಬಾರಿಗೆ ಭಾರತ ಕಣಕ್ಕಿಳಿಯಲಿದೆ. ಈ ಕೂಟಕ್ಕೆ ಭಾರತವೇ ಆತಿಥ್ಯ ನೀಡಲಿದ್ದು, ಹೈದರಾಬಾದ್‌ನಲ್ಲಿ ಪಂದ್ಯಗಳು ನಡೆಯಲಿವೆ. ಭಾರತದ ಮಿಡಲ್‌ಫೀಲ್ಡರ್ ಸಲಿಮಾ ಟೆಟೆ ಅವರು ಪಂದ್ಯಾವಳಿಗೆ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ವಿಶ್ವಕಪ್ ಅರ್ಹತಾ ಸುತ್ತಿನ ವಿಚಾರವಲ್ಲದೆ, ಇದೇ ವರ್ಷ ನಡೆಯಲಿರುವ ಏಷ್ಯನ್ ಗೇಮ್ಸ್‌ಗಾಗಿ ಈ ಪಂದ್ಯಾವಳಿ ಮುಖ್ಯ ಪಾತ್ರ ವಹಿಸಲಿದೆ. ಆತಿಥ್ಯ ಭಾರತ, ಇಟಲಿ, ಇಂಗ್ಲೆಂಡ್, ಸ್ಕಾಟ್ಲೆಂಡ್, ಕೋರಿಯಾ, ಉರುಗ್ವೆ, ವೇಲ್ಸ್ ಮತ್ತು ಆಸ್ಟ್ರೀಯಾ ತಂಡಗಳು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಭಾಗವಹಿಸಲಿವೆ.

ಭಾರತ ತಂಡ
ಗೋಲ್‌ಕೀಪರ್‌ಗಳು: ಬನ್ಸಾರಿ ಸೋಲಂಕಿ, ಬಿಚು ದೇವಿ ಖಿರಿಬಮ್.
ಡಿಫೆಂಡರ್ಸ್: ಸುಶೀಲಾ ಚಾನು, ನಿಕ್ಕಿ ಪ್ರಧಾನ್, ಮನಿಶಾ ಚೌಹಾಣ್, ಉದಿತಾ, ಇಶಿಕಾ ಚೌಧರಿ.
ಮಿಡ್‌ಫೀಲ್ಡರ್‌ಗಳು: ನೇಹಾ, ಸಲಿಮಾ ಟೆಟೆ (ಸಿ), ಸುನೆಲಿತಾ ಟೊಪ್ಪೊ, ಸಾಕ್ಷಿ ರಾಣಾ, ವೈಷ್ಣವಿ ಫಾಲ್ಕೆ, ರುತಾಜಾ ಪಿಸಲ್, ದೀಪಿಕಾ ಸೊರೆಂಗ್
ಫಾರ್ವರ್ಡ್‌ಗಳು: ನವನೀತ್ ಕೌರ್, ಇಶಿಕಾ, ಲಾಲ್ರೆಮ್ಸಿಯಾಮಿ, ಬ್ಯೂಟಿ ಡಂಗ್‌ಡಂಗ್, ಬಲ್ಜೀತ್ ಕೌರ್, ಅಣ್ಣು

ಶ್ರೀಲಂಕಾ ಪ್ರಧಾನ ಕೋಚ್ ರಾಜೀನಾಮೆ

ಕೊಲಂಬೋ: ಜಂಟಿ ಆತಿಥ್ಯ ಶ್ರೀಲಂಕಾ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿ ಸೂಪರ್–8 ಹಂತದಲ್ಲೇ ಹೊರಬಿದ್ದ ನಂತರ ಪ್ರಧಾನ ತರಬೇತುದಾರ, ಮಾಜಿ ಕ್ರಿಕೆಟಿಗ ತಮ್ಮ ಕೋಚ್ ಹುದ್ದೆಯಿಂದ ಕೆಳಗಿಳಿದರು.



ವಿಶ್ವಕಪ್‌ಗೆ ಭಾರತದೊಂದಿಗೆ ಶ್ರೀಲಂಕಾ ಕೂಡ ಆತಿಥ್ಯ ವಹಿಸಿತ್ತು. ತನ್ನೆಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲೇ ಆಡಿರುವ ತಂಡ ಲೀಗ್ ಹಂತದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ದುಸನ್ ಶಣಕ ಪಡೆ ಸೂಪರ್ 8ರ ಹಂತದಲ್ಲಿ ಮೂರೂ ಪಂದ್ಯಗಳನ್ನು ಸೋತಿದೆ. ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳೊಂದಿಗೆ ನಡೆದಿರುವ ಪಂದ್ಯಗಳಲ್ಲಿ ಸೋತು ಹೊರನಡೆದಿದೆ. ಈ ಬೆನ್ನಲ್ಲೇ ಸನತ್ ಜಯಸೂರ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಈ ವಿಚಾರದ ಬಗ್ಗೆ ಮಾತನಾಡಿರುವ ಅವರು, (ಕೋಚ್ ಸ್ಥಾನವನ್ನು ಬೇರೆಯವರಿಗೆ ನೀಡುವ ಸಮಯ ಬಂದಿದೆ. ಇಂಗ್ಲೆಂಡ್ ವಿರುದ್ಧ ನಡೆದಿದ್ದ ಕೂಟದಲ್ಲೇ ನಾನು ಕೋಚ್ ಆಗಿ ಹೆಚ್ಚು ದಿವಸದ ವರೆಗೆ ಇರಲಾರೆ ಎಂದು ಹೇಳಿದ್ದೆ. ವಿಶ್ವಕಪ್ ಮುಗಿದ ನಂತರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕೆಂದು ನಾನು ತೀರ್ಮಾನ ಮಾಡಿದ್ದೆ ಎಂದು ಹೇಳಿದರು. ಅಸಲಿಯತ್ತಾಗಿ ಅವರ ಅವಧಿ ವರ್ಷದ ಜೂನ್ ವರೆಗೂ ಇತ್ತು. ಆದರೆ ವಿಶ್ವಕಪ್ ಸೋಲಿನಿಂದ ಬೇಸರಗೊಂಡು ರಾಜೀನಾಮೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಸಹಭಾಗಿತ್ವದೊಂದಿಗೆ ಬೆಂಬಲ ನೀಡುವುದಾಗಿ ಆರ್‌ಸಿಬಿ ಕೇರ್ಸ್ ಘೋಷಣೆ

ಹಾಕಿ, ಅಥ್ಲೆಟಿಕ್ಸ್, ಶೂಟಿಂಗ್ ವೃದ್ಧಿಗೆ ಆರ್‌ಸಿಬಿ ಸನ್ನದ್ಧ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಾಮಾಜಿಕ ಜವಾಬ್ದಾರಿ ಉಪಕ್ರಮವಾದ ಆರ್‌ಸಿಬಿ ಕೇರ್ಸ್ ತನ್ನ ಕ್ರೀಡಾ ಅಭಿವೃದ್ಧಿ ದೃಷ್ಟಿಕೋನವನ್ನು ಮತ್ತಷ್ಟು ವಿಸ್ತರಿಸಿದೆ. ಈಗಾಗಲೇ ಕ್ರಿಕೆಟ್ ಮೂಲಕ ಸಾಮಾಜಿಕ ಬದಲಾವಣೆಗೆ ಕೈಜೋಡಿಸಿದ್ದ ಈ ಕಾರ್ಯಕ್ರಮ, ಇದೀಗ ಹಾಕಿ, ಅಥ್ಲೆಟಿಕ್ಸ್ ಹಾಗೂ ಶೂಟಿಂಗ್ ಕ್ರೀಡೆಗಳತ್ತ ಗಮನ ಹರಿಸಿದೆ. ಬೆಂಗಳೂರುದಲ್ಲಿ ನಡೆದ ಘೋಷಣೆಯಲ್ಲಿ ಆರ್‌ಸಿಬಿ ಕೇರ್ಸ್, ಯಸ್ ಫಾರ್ ಹಾಕಿ ಮತ್ತು ಅಶ್ವಿನಿ ಸ್ಪೋರ್ಟ್ಸ್ ಫೌಂಡೇಶನ್ ಜೊತೆ ಕೈಜೋಡಿಸಿರುವುದಾಗಿ ತಿಳಿಸಿದೆ. ಈ ಉಪಕ್ರಮವು ಗೋ ಸ್ಪೋರ್ಟ್ಸ್ ಸಹಭಾಗಿತ್ವದಲ್ಲಿ ಜಾರಿಗೆ ಬರಲಿದೆ.

ಯಾವ್ಯಾವ ಬೆಂಬಲ?: ಹಾಕಿ ಕ್ಷೇತ್ರದಲ್ಲಿ, ಯಸ್ ಫಾರ್ ಹಾಕಿ ಮೂಲಕ ಕರ್ನಾಟಕದ ಸರ್ಕಾರಿ ಶಾಲಾ ಮಕ್ಕಳಿಗೆ ಸಮರ್ಪಕ ತರಬೇತಿ, ಕೃತಕ ಟರ್ಫ್ ಮೈದಾನ ಸೌಲಭ್ಯ, ಪೋಷಣಾ ಆಹಾರ, ಕ್ರೀಡಾ ಸಾಮಗ್ರಿ ಹಾಗೂ ಲೀಗ್ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿಭಾವಂತ ಆಟಗಾರರನ್ನು ಗುರುತಿಸಲು ತಂತ್ರಜ್ಞಾನ ಆಧಾರಿತ ಮಾನಿಟರಿಂಗ್ ವ್ಯವಸ್ಥೆಯನ್ನೂ ರೂಪಿಸಲಾಗುತ್ತಿದೆ. ಅಥ್ಲೆಟಿಕ್ಸ್ ಮತ್ತು ಶೂಟಿಂಗ್ ವಿಭಾಗದಲ್ಲಿ ಅಶ್ವಿನಿ ಸ್ಪೋರ್ಟ್ಸ್ ಜೊತೆಗೆ ಕೈಜೋಡಿಸುವ ಮೂಲಕ ಉನ್ನತ ಮಟ್ಟದ ತರಬೇತಿ, ಕ್ರೀಡಾ ಮನೋವೈದ್ಯಕೀಯ ಸಹಾಯ, ಗುಣಮಟ್ಟದ ಉಪಕರಣಗಳು ಹಾಗೂ ಸ್ಪರ್ಧಾತ್ಮಕ ಅನುಭವ ನೀಡಲಾಗುತ್ತದೆ. ಮಾಜಿ ಅಥ್ಲೀಟ್ ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತ ಅಶ್ವಿನಿ ನಾಚಪ್ಪಾ ಈ ಸಹಭಾಗಿತ್ವವನ್ನು ಕ್ರೀಡಾಪಟುಗಳ ಸಮಗ್ರ ಬೆಳವಣಿಗೆಗೆ ಮಹತ್ವದ ಹೆಜ್ಜೆ ಎಂದು ವಿವರಿಸಿದರು. ಆರ್‌ಸಿಬಿ ಸಿಇಒ ರಾಜೇಶ್ ಮೆನನ್ ಭಾರತ ಜಾಗತಿಕ ಕ್ರೀಡಾ ರಾಷ್ಟ್ರವಾಗಬೇಕಾದರೆ ನೆಲಮಟ್ಟದ ವ್ಯವಸ್ಥೆ ಬಲವಾಗಿರಬೇಕು. ಇಆ ಇಬ್ಬಥಿಂ ದೀರ್ಘಕಾಲಿಕ ಹಾಗೂ ಶಾಶ್ವತ ಪ್ರತಿಭಾ ಮಾರ್ಗವನ್ನು ನಿರ್ಮಿಸಲು ಬದ್ಧವಾಗಿದೆ, ಎಂದು ಹೇಳಿದರು.

ಇದೇ ವೇಳೆ, 400ಕ್ಕೂ ಹೆಚ್ಚು ಸಿದ್ಧಿ ಸಮುದಾಯದ ಮಕ್ಕಳನ್ನು ಒಳಗೊಂಡ Bridges of Sports ಯೋಜನೆಯೂ ಮುಂದುವರಿಯುತ್ತಿದೆ. ಈ ವಿಸ್ತರಣೆಯೊಂದಿಗೆ RCB Cares ಕರ್ನಾಟಕದಲ್ಲಿ ಸಮಗ್ರ, ಸಮಾನ ಹಾಗೂ ಕಾರ್ಯಕ್ಷಮ ಕ್ರೀಡಾ ಪರಿಸರ ನಿರ್ಮಾಣದತ್ತ ಮತ್ತೊಂದು ಗಟ್ಟಿಯಾದ ಹೆಜ್ಜೆ ಇಟ್ಟಿದೆ.

ಅಂತಿಮ ಪಂದ್ಯದಲ್ಲಿ ಹೀಲೀ ಅನಂತ ಆಟ

ಹಾಬರ್ಟ್: ತಮ್ಮ ಕೊನೆಯ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಸ್ಮರಣೀಯ ಇನ್ನಿಂಗ್ಸ್ ಕಟ್ಟಿದ ಆಸ್ಟ್ರೇಲಿಯಾ ನಾಯಕಿ ಆಲೆಸ್ಸಾ ಹೀಲೀ ತಂಡಕ್ಕೆ ಕ್ಲೀನ್‌ಸ್ವೀಪ್ ಉಡುಗೊರೆ ನೀಡಿದರು. ಅದರಂತೆ ಅವರ ಅಗಾಧ ಕೊಡುಗೆಗೆ ಆಸ್ಟ್ರೇಲಿಯಾ ಬಹುಪರಾಕ್ ಎಂಬುವ ಘೋಷಣೆಯೊಂದಿಗೆ ಪಂದ್ಯಶ್ರೇಷ್ಠ ಪ್ರಶಸ್ತಿ ನೀಡಿ ಬೀಳ್ಕೊಟ್ಟಿತು. ಮೂರೂ ವಿಭಾಗದ ದೊಡ್ಡ ಸರಣಿಯಲ್ಲಿ ಟಿ20ಯನ್ನು ಗೆದ್ದು ಬೀಗಿದ್ದ ಭಾರತಕ್ಕೆ ವೈಟ್‌ವಾಷ್ ಹಿನ್ನಡೆ ನಿಶ್ಯಬ್ಧ ಮಾಡಿದೆ. ಎರಡು ಪಂದ್ಯಗಳ ಗೆಲುವಿನ ವಿಶ್ವಾಸದೊಂದಿಗೆ ಬ್ಯಾಟಿಂಗ್‌ಗಿಳಿದ ಆಸ್ಟ್ರೇಲಿಯಾ ಬರೋಬ್ಬರಿ 409 ರನ್ ಚಚ್ಚಿತು. ಇದರಲ್ಲಿ ಹೀಲೀ 158, ಬೆಥ್ ಮೂನಿ 101 ರನ್ ಗಳಿಸಿದರು. ದೊಡ್ಡ ಗುರಿ ಬೆನ್ನತ್ತಿದ ಭಾರತ 224 ರನ್ ಗಳಿಸುವಷ್ಟರಲ್ಲೇ ಸುಸ್ತಾಯಿತು. ಸರಣಿ ವೈಟ್ ವಾಷ್ ಆಯಿತು. ಒಂದೂ ಪಂದ್ಯ ಗೆಲ್ಲದ ಭಾರತ ಏಕದಿನ ಸರಣಿಯನ್ನು 0–3ರಿಂದ ಬಿಟ್ಟುಕೊಟ್ಟಿತು. ನಿವೃತ್ತಿಯ ಪಂದ್ಯದಲ್ಲಿ ದಾಖಲೆಗಳನ್ನು ಮಾಡಿದ ಹೀಲೀ 158 ರನ್‌ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿದರು. ಮೂನಿ ಕೂಡ ಶತಕ ಬಾರಿಸಿ ಮಿಂಚಿದರು. ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಅಲ್ಲಾ ಕಿಂಗ್ 4 ವಿಕೆಟ್ ಕಿತ್ತು ಪಂದ್ಯದ ಬೆಸ್ಟ್ ಬೌಲರ್ ಎನಿಸಿದರು. ಹತ್ತಾರು ಕಪ್‌ಗಳನ್ನು ಗೆಲ್ಲಿಸಿಕೊಟ್ಟ ಹೀಲೀಯವರೇ ಪಂದ್ಯದ ಕೇಂದ್ರ ಬಿಂದುವಾಗಿದ್ದರು. ಪಂದ್ಯದ ಬಳಿಕ ನಿವೃತ್ತಿ ಹೇಳಿದ ಅವರು, ಭಾವನಾತ್ಮಕ ವಿದಾಯಕ್ಕೆ ಸಾಕ್ಷಿಯಾದರು.

ಹೀಲೀ ಸ್ಮರಣೀಯ ಶತಕ: ತಮ್ಮ ಕೊನೆಯ ಪಂದ್ಯದಲ್ಲಿ ದೊಡ್ಡ ದಾಖಲೆಯನ್ನು ಮಾಡುವ ಯೋಜನೆಯೊಂದನ್ನು ಹಾಕಿಕೊಂಡೇ ಮೈದಾನಕ್ಕಿಳಿದ ಹೀಲೀ ಭಾರತೀಯ ಬೌಲರ್‌ಗಳನ್ನು ಕಾಡಿದರು. ಮನಬಂದಂತೆ ದಂಡಿಸಿ ಮೆರೆದಾಡಿದರು. ಬೌಂಡರಿಗಳ ಸುರಿಮಳೆಯನ್ನೇ ಸುರಿಸಿದರು. ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. ಸೆಟ್ ಆಗುವ ಔಪಚಾರಿಕತೆ ಮುಗಿಸುತ್ತಿದ್ದಂತೆ ದಂಡಿಸಲಾರಂಭಿಸಿದ್ದ ಅವರು ಬಾರಿಸಿದ್ದು ಬರೋಬ್ಬರಿ 27 ಬೌಂಡರಿ! ಲಿಚ್‌ಫೀಲ್ಡ್ ಬೇಗನೇ ವಿಕೆಟ್ ಒಪ್ಪಿಸುತ್ತಿದ್ದಂತೆ ಬ್ಯಾಟಿಂಗ್‌ಗಿಳಿದ ವಾಲ್ ಕೂಡ ಅವರಿಗೆ ಬೇಕಾದ ಸಾಥ್ ನೀಡಿದರು. ಮೊದಲ ಇನ್ನಿಂಗ್ಸ್ ಉದ್ದಕ್ಕೂ ಹೀಲೀ ಆಟಕ್ಕೆ ತಡೆಯೊಡ್ಡುವವರೆ ಇಲ್ಲ ಎಂಬಂತೆ ಭಾಸವಾಗುತ್ತಿತ್ತು. ವಾಲ್ 62ಕ್ಕೆ ವಿಕೆಟ್ ಒಪ್ಪಿಸುತ್ತಿದ್ದಂತೆ ಬೆಥ್ ಮೂನಿ ದಂಡಿಸುವ ಜವಾಬ್ದಾರಿ ಮೈಗೆತ್ತಿಕೊಂಡರು. ಭಾರತ ಪರ ಶ್ರೀ ಚಾರಣಿ ಬರೋಬ್ಬರಿ 106 ರನ್ ದಂಡಿಸಿಕೊಂಡಿದ್ದುಂಟು. ಬೆಥ್‌ಗೂ ನಾಗಾಲೋಟ. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತೀಯ ಬೌಲರ್‌ಗಳನ್ನು ದಂಡಿಸಿದ ಅವರು, 84 ಬಾಲ್‌ಗಳಲ್ಲಿ 106 ರನ್ ಗಳಿಸಿದರು. ಅಜೇಯವಾಗಿ!.



ಕುಸಿದ ಭಾರತ

ಇನ್ನು ಬ್ಯಾಟಿಂಗ್‌ಗಿಳಿದ ಭಾರತದ ಪರ ಯಾರೊಬ್ಬರೂ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಲಿಲ್ಲ. ರಾಡ್ರಿಗ್ಸ್ ಅದೆಲ್ಲಾ 42 ರನ್ ಗಳಿಸಿ ಹೋರಾಡಿದರೂ, ಅವರಿಗೆ ಸಾಥ್ ಸಿಗಲಿಲ್ಲ. ಅಂತಿಮದಲ್ಲಿ ಸ್ನೇಹ ರಾಣಾ 44 ರನ್‌ಗಳಿಸಿ ಅಂತರ ಕುಗ್ಗಿಸಿದರು. ಮಧ್ಯಮ ಕ್ರಮಾಂಕದಲ್ಲಿ ಮೂವರು ಬ್ಯಾಟರ್‌ಗಳು 18–30ರನ್‌ಗಳಿಸಿದ ನಿಟ್ಟಿನಲ್ಲಿ ಭಾರತ 224 ರನ್‌ಗಳಿಸಿತು.

ಸಂಕ್ಷಿಪ್ತ ಸ್ಕೋರ್

ಆಸ್ಟ್ರೇಲಿಯಾ 50 ಓವರ್‌ಗಳಲ್ಲಿ 409/7: ಹೀಲೀ 158, ಮೂನಿ 105★; ಸ್ನೇಹ 66/2
ಭಾರತ 45.1 ಓವರ್‌ಗಳಲ್ಲಿ 224/10: ಸ್ನೇಹ 44, ರಾಡ್ರಿಗ್ಸ್ 42; ಕಿಂಗ್ 33/4

ಭಾರತೀಯ ಆಟಗಾರ್ತಿಯರ ಅದ್ಭುತ ಪ್ರದರ್ಶನ

ಕಲಬುರಗಿ: ನಗರದ ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲು 35 ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನ ಮೊದಲ ದಿನ ಭಾರತೀಯ ಆಟಗಾರ್ತಿಯರು ಭರ್ಜರಿ ಪ್ರದರ್ಶನ ನೀಡಿ ಉತ್ತಮ ಆರಂಭ ಮಾಡಿದ್ದಾರೆ. ಒಟ್ಟು 12 ಭಾರತೀಯ ಆಟಗಾರ್ತಿಯರು 2ನೇ ಹಾಗೂ ಅಂತಿಮ ಅರ್ಹತಾ ಸುತ್ತಿಗೆ ಪ್ರವೇಶಿಸಿ, ದೇಶೀಯ ಆಟಗಾರ್ತಿಯರ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.


ವಿದೇಶಿ ಶ್ರೇಯಾಂಕಿತ ಆಟಗಾರ್ತಿಯರಲ್ಲಿ ಕೆಲವರು ಸುಲಭವಾಗಿ ಮುಂದಿನ ಸುತ್ತಿಗೆ ಪ್ರವೇಶಿಸಿದರೂ, ದಿನದ ಗಮನ ಭಾರತೀಯ ಆಟಗಾರ್ತಿಯರ ಮೇಲೆಯೇ ನೆಟ್ಟಿತ್ತು. ಆರಂಭಿಕ ಪಂದ್ಯಗಳಲ್ಲಿ 11ನೇ ಶ್ರೇಯಾಂಕಿತ ವಂಶಿತಾ ಪಠಾನಿಯಾ ಅವರು ಅರುಣಕುಮಾರ್ ಲಕ್ಷ್ಮೀ ಪ್ರಭಾ ಅವರನ್ನು 6–3, 6–1 ಅಂತರದಲ್ಲಿ ಸೋಲಿಸಿದರು. ಅಗ್ರ ಶ್ರೇಯಾಂಕಿತ ಮರಿಯಾ ಮಿಖೈಲೋವಾ ಅವರು ಚಂದನಾ ಪೊಟುಗಾರಿಯ ವಿರುದ್ಧ 6–2, 6–1 ಅಂತರದಲ್ಲಿ ಗೆದ್ದು ಮುಂದುವರಿದರು. ಎರಡನೇ ಶ್ರೇಯಾಂಕಿತ ಸಿಂಗಾಪುರದ ಈವಾ ಮೇರಿ ಡೆಸ್ವಿಗ್ನೆಸ್ ಅವರು ವೈಲ್ಡ್ ಕಾರ್ಡ್ ಆಟಗಾರ್ತಿ ಓಮ್ನಾ ಯಾದವ್ ದಾವುಣಬೋಯಿನಾ ಅವರನ್ನು 6–1, 6–3 ಅಂತರದಲ್ಲಿ ಮಣಿಸಿದರು. ಸೌಮ್ಯ ರೋಂಡೆ 15ನೇ ಶ್ರೇಯಾಂಕಿತ ದಿಶಾ ಬೆಹೆರಾ ಅವರನ್ನು 7–5, 6–4 ಅಂತರದಲ್ಲಿ ಸೋಲಿಸಿ ಅಚ್ಚರಿ ಫಲಿತಾಂಶ ನೀಡಿದರು. ಕಾಶಿಶ್ ಭಾಟಿಯಾ ನಾಲ್ಕನೇ ಶ್ರೇಯಾಂಕಿತ ಪೂಜಾ ಇಂಗಳೇಗೆ 6–4, 6–0 ಅಂತರದಲ್ಲಿ ಮಣಿಸಿ ದಿನದ ಅತ್ಯುತ್ತಮ ಪ್ರದರ್ಶನಗಳಲ್ಲಿ ಒಂದನ್ನು ದಾಖಲಿಸಿದರು. 12ನೇ ಶ್ರೇಯಾಂಕಿತ ಆಹಾನ್ ಆಹಾನ್ ಡ್ಯಾನಿಕಾ ಫರ್ನಾಂಡೋ ವಿರುದ್ಧ ತೀವ್ರ ಪೈಪೋಟಿಯಲ್ಲಿ ಮೊದಲ ಸೆಟ್ ಸೋತ ಬಳಿಕ ಮರುಪ್ರವೇಶ ಮಾಡಿ 5–7, 6–4, 11–9 ಅಂತರದಲ್ಲಿ ಜಯಿಸಿದರು. ಐಶ್ವರ್ಯ ಜಾಧವ್ ಐದನೇ ಶ್ರೇಯಾಂಕಿತ ಪ್ರತ್ಯುಷಾ ರಾಚಮಡಿ ಅವರನ್ನು 6–3, 6–1 ಅಂತರದಲ್ಲಿ ಸುಲಭವಾಗಿ ಸೋಲಿಸಿದರು. 16ನೇ ಶ್ರೇಯಾಂಕಿತ ಶ್ರೀಮಣ್ಯ ರೆಡ್ಡಿ ಅನುಗೊಂಡ ಸಂಜನಾ ಸಿರಿಮಲ್ಲಾ ವಿರುದ್ಧ 3–6, 6–4, 10–6 ಅಂತರದಲ್ಲಿ ಹೋರಾಟಮಯ ಜಯ ಸಾಧಿಸಿದರು. 13ನೇ ಶ್ರೇಯಾಂಕಿತ ಮಹಿಕಾ ಖನ್ನಾ ವೈಲ್ಡ್ ಕಾರ್ಡ್ ಆಟಗಾರ್ತಿ ಹೃದಯೇಶಿ ಪೈ ಅವರನ್ನು 6–1, 6–3 ಅಂತರದಲ್ಲಿ ಮಣಿಸಿದರು. ವೈಲ್ಡ್ ಕಾರ್ಡ್ ಆಟಗಾರ್ತಿ ಸ್ನಿಗ್ಧಾ ಕಾಂತಾ ಆರನೇ ಶ್ರೇಯಾಂಕಿತ ಮಲೇಶಿಯಾದ ಎಲ್ಸಾ ವಾನ್ 6–1, 5–7, 10–3 ಅಂತರದಲ್ಲಿಸೋಲಿಸಿಗಮನಸೆಳೆದರು. 9ನೇಶ್ರೇಯಾಂಕಿತ ಸಂದೀಪ್ತಿ ಸಿಂಗ್ ರಾವ್ ಸ್ನೆಲಿ ಪ್ರಶಾಂತಕುಮಾರ್ ಠಕ್ಕರ್ ವಿರುದ್ಧ 7–5, 6–2 ಅಂತರದಲ್ಲಿ ಗೆದ್ದರು. 10ನೇ ಶ್ರೇಯಾಂಕಿತ ಯಶಸ್ವಿನಿ ಪನ್ವಾರ್ ಅವರು ಆಕೃತಿ ಸೊಂಕುಸಾರೆ ನಾರಾಯಣ ಸೊಂಕುಸಾರೆ ವಿರುದ್ಧ 6–4, 6–4 ಅಂತರದಲ್ಲಿ ಜಯಿಸಿದರು. 8ನೇ ಶ್ರೇಯಾಂಕಿತ ಬೇಲಾ ತಾಮ್ಹಂಕರ ಮತ್ತು 14ನೇ ಶ್ರೇಯಾಂಕಿತ ಲಕ್ಷ್ಮಿಸಿರಿ ದಂಡು ಅವರು ಕ್ರಮವಾಗಿ ಜಿಗ್ನಾಸಾ ನರಸಿಂಹಾಣಿ ಮತ್ತು ಜೀತೇಶ್ ಕುಮಾರಿ ವಿರುದ್ಧ ನೇರ ಸೆಟ್‌ಗಳಲ್ಲಿ ಜಯಗಳಿಸಿದರು.



ಐಟಿಎಫ್ ಡಬ್ಲ್ಯು35 ಅರ್ಹತಾ ಸುತ್ತಿನ ಮೊದಲ ದಿನ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5911

ಎಡದಿಂದ ಬಲಕ್ಕೆ
1.ಸ್ನೇಹಿತ–ಸಂಗಾತಿಯೊಂದಿಗೆ ಇರುವ ಸಂಬಂಧ (4)
3.ಉಡುಗಿ ಹೋಗುವ ಕಾಲುಗಳಲ್ಲಿರುವ ಶಕ್ತಿ (4)
5.ಹತ್ತು ನೂರು–ಸಹಸ್ರಗಳು ತಿರುಗಿವೆ (3)
6.ನಗರಕ್ಕೆ ಬಂದ ಹಾಸ್ಯಗಾರ (4)
8.ವಾಕ್ಪಟುತ್ವವುಳ್ಳವನು (4)
10.ಕಡೆಗೂ ಗವಾ ಹೇಳಲು ಬಂದ ಗೊಲ್ಲ (4)
12.ಸಾಧ್ವಿ–ಗರತಿಯೀಕೆ (4)
14.ಸತಿಯ ನಡುವೆ ಒಂದು ಸಂಘವಿದೆ (3)
15.ವಕೀಲರು ಧರಿಸುವ ಕಪ್ಪು ಮೇಲಂಗಿ (4)
16.ವಸ್ತುವಿನ ಅತಿ ಕೆಳಗಿನ ಅಂಶ (4)

ಮೇಲಿನಿಂದ ಕೆಳಕ್ಕೆ
1.ಸ್ಥಿರ–ಏಕ ಬಗೆಯ ಚಿತ್ತ (5)
2.ಯುದ್ಧದಲ್ಲಿ ಶೌರ್ಯ ಮೆರೆಯುವವನು (5)
3.ಇವು ಯುದ್ಧದ ಸಾಮಾನುಗಳು (5)
4.ಅತಿ ಶ್ರೀಮಂತ ವ್ಯಕ್ತಿಯೀತ (5)
7.ಮೋಡಿ–ಮಂತ್ರಗಳ ಬಳಕೆ (3)
9.ತ್ರಿಭುಜವಿಲ್ಲಿ ತಲೆಕೆಳಗಾಗಿದೆ (3)
10.ಸಂಸ್ಕೃತದಲ್ಲಿ ಬಂಗಾರ (3)
11. ತುಪ್ಪ–ಎಣ್ಣೆಗಳ ಅಡಿಯಲ್ಲಿ ನಿಲ್ಲುವ ಕಸರು (3)
12. ನೈತಿಕವಾಗಿ ಪತನ ಹೊಂದಿದವನು (3)
13. ಅತ್ತಿಗೆಗೆ ಕಂಡ ಹೊಣೆಗಾರ (3)

5910 ಉತ್ತರ

ಎಡದಿಂದ ಬಲಕ್ಕೆ:
1.ಕದಂಬ 3.ಜಗದೀಶ
5.ದಯಾಮಯ
6.ಲಕ್ಷಾಂತರ 8.ಜನಸುಖಿ
11.ಪಾಕರಿಪು
14.ಕಳೆಕಟ್ಟು 15.ಕನ್ನಡಿಗ
16.ಕಟ್ಟುಬಿಚ್ಚು 17.ತಕ್ಕಡಿ

ಮೇಲಿನಿಂದ ಕೆಳಕ್ಕೆ :
1.ಕಲಶಜ 2.ಬದಲಿಸು
3.ಜಯಲಕ್ಷ್ಮಿ 4.ಶಬರ
7.ತರಕಾರಿ 9.ನವಬೆಳೆ
10.ಬೆಟ್ಟುಕಚ್ಚು
12.ಕಲ್ಲಂಗಡಿ
13.ಪುರಸ್ಕೃತ 14.ಕನಕ

ಕಿರುಸುದ್ದಿ

ಆನ್‌ಲೈನ್ ವಂಚನೆ : ಪೊಲೀಸರಿಗೆ ದೂರು

ಬ್ರಹ್ಮಾವರ: ವ್ಯಕ್ತಿಯೊಬ್ಬರ ಬ್ಯಾಂಕ್ ಖಾತೆಯಿಂದ ಅವರ ಅರಿವಿಗೆ ಬಾರದಂತೆ ಹಣ ವರ್ಗಾವಣೆ ಮಾಡುವ ಮೂಲಕ ಆನ್‌ಲೈನ್ ವಂಚನೆ ಎಸಗಿರುವ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಾಂತಾರು ಗ್ರಾಮದ ಬಿ.ಅಶೋಕ (64) ಎಂಬವರ ಬ್ಯಾಂಕ್ ಖಾತೆಯಿಂದ ಫೆ.23ರಂದು ರಾತ್ರಿಯಿಂದ ಫೆ.24ರಂದು ಬೆಳಗ್ಗಿನ ಮಧ್ಯಾವಧಿಯಲ್ಲಿ ಅವರ ಅರಿವಿಗೆ ಬಾರದೇ ಆರೋಪಿಗಳು ಹಂತ ಹಂತವಾಗಿ ಒಟ್ಟು 99,950 ರೂ. ಹಣವನ್ನು ವರ್ಗಾವಣೆ ಮಾಡಿ ವಂಚನೆ ಎಸಗಿರುವುದಾಗಿ ದೂರಲಾಗಿದೆ.

ಪೊಲೀಸ್ ಮ್ಯಾರಥಾನ್ ಓಟದ ವೇಳೆ ಕುಸಿದು ಬಿದ್ದು ಎಸ್‌ಐ ನಾಸೀರ್ ಹುಸೇನ್ ಸಾವು

ಉಡುಪಿ: ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಭಾನುವಾರ ಬೆಳಿಗ್ಗೆ ನಗರದ ಅಜ್ಜರಕಾಡು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ ‘ಸೈಬರ್ ಜಾಗೃತಿ’ ಮ್ಯಾರಥಾನ್ ಓಟದಲ್ಲಿ ಪಾಲ್ಗೊಂಡಿದ್ದ ಕುಂದಾಪುರ ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ (ಎಸ್‌ಐ) ನಾಸೀರ್ ಹುಸೇನ್ (58) ಅವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.



‘ನಮ್ಮ ಪೊಲೀಸ್ ನಮ್ಮ ಹೆಮ್ಮೆ’ ಹಾಗೂ ‘ಡ್ರಗ್ ಫ್ರೀ ಕರ್ನಾಟಕ’ ಅಭಿಯಾನದ ಭಾಗವಾಗಿ ಆಯೋಜಿಸಲಾಗಿದ್ದ 5 ಕಿ.ಮೀ. ಮ್ಯಾರಥಾನ್‌ನಲ್ಲಿ ನೂರಾರು ಪೊಲೀಸರೊಂದಿಗೆ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದ ನಾಸೀರ್ ಹುಸೇನ್, ಓಟದ ಮಧ್ಯೆ ಹಠಾತ್ ಕುಸಿದು ಬಿದ್ದು ತೀವ್ರವಾಗಿ ಅಸ್ವಸ್ಥಗೊಂಡರು. ತಕ್ಷಣವೇ ಅವರನ್ನು ಉಡುಪಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಪರೀಕ್ಷಿಸಿದ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು.

ನಾಸೀರ್ ಹುಸೇನ್ ಅವರು ಉಡುಪಿ ಜಿಲ್ಲೆಯ ಅಮಾಸೆಬೈಲು, ಕುಂದಾಪುರ ನಗರ, ಸಂಚಾರ ಠಾಣೆ, ಶಂಕರನಾರಾಯಣ, ಕಾರ್ಕಳ ಗ್ರಾಮಾಂತರ ಸೇರಿದಂತೆ ಚಿಕ್ಕಮಗಳೂರು ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಪಿಎಸ್‌ಐ ಆಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದರು.

ಮೀನುಗಾರಿಕೆ ಸಂದರ್ಭ ಎದೆನೋವು: ಮೀನುಗಾರ ಸಾವು

ಗಂಗೊಳ್ಳಿ: ಮೀನುಗಾರಿಕೆ ನಡೆಸುತ್ತಿದ್ದ ಸಂದರ್ಭ ಮೀನುಗಾರನೋರ್ವ ಎದೆನೋವಿನಿಂದ ಆಯತಪ್ಪಿ ದೋಣಿಯಲ್ಲಿ ಬಿದ್ದು ಮೃತಪಟ್ಟ ಘಟನೆ ಗಂಗೊಳ್ಳಿ ಸಮೀಪ ನಡೆದಿದೆ. ಮೀನುಗಾರಿಕೆ ಕೆಲಸ ಮಾಡಿ ಕೊಂಡಿದ್ದ ಗಂಗೊಳ್ಳಿಯ ಜಗನ್ನಾಥ ಖಾರ್ವಿ (43) ಎಂಬವರು ಪ್ರಜ್ವಲ್ ಖಾರ್ವಿ ಎಂಬವರ ಶ್ರೀ ಗಣಮಣಿ ಪ್ರಸಾದ್ ನಾಡದೋಣಿಯಲ್ಲಿ ಇತರರೊಂದಿಗೆ ಗಂಗೊಳ್ಳಿ ದಾಕುಹಿತ್ಲು ವಿನಿಂದ ಮೀನುಗಾರಿಕೆಗೆ ಹೊರಟಿದ್ದು, ಸುಮಾರು 5 ಮಾರು ದೂರ ಅರಬ್ಬೀ ಸಮುದ್ರದಲ್ಲಿ ಮೀನುಗಾರಿಕೆ ಮಾಡುತ್ತಿದ್ದಾಗ ವಿಪರೀತ ಗಾಳಿ ಬಂದಾಗ ದೋಣಿಯಲ್ಲಿ ಆಯತಪ್ಪಿ ದೋಣಿಯೊಳಗೆ ಬಿದ್ದು, ಎದೆ ನೋವು ಕಾಣಿಸಿಕೊಂಡಿತ್ತು. ಕೂಡಲೇ ಅವರನ್ನು ಗಂಗೊಳ್ಳಿ ಬಂದರಿಗೆ ತಂದು ಕುಂದಾಪುರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಜಗನ್ನಾಥ ಖಾರ್ವಿ ಮೃತಪಟ್ಟಿದ್ದಾರೆ. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದೇಶಿ ಗಿಫ್ಟ್ ಆಸೆ ತೋರಿಸಿ ಮಹಿಳೆಗೆ 13.99 ಲ.ರೂ. ವಂಚನೆ

ಉಡುಪಿ: ವಿದೇಶದಿಂದ ಕೋರಿಯರ್ ಮೂಲಕ ಬೆಲೆಬಾಳುವ ಉಡುಗೊರೆ ಬಂದಿದೆ ಎಂದು ನಂಬಿಸಿ ಮಹಿಳೆಯೊಬ್ಬರಿಂದ ಹಂತ ಹಂತವಾಗಿ 13,99,700 ರೂ. ಪಡೆದು ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಶಿರ್ವ ನಿವಾಸಿ ವಿದ್ಯಾ ಅವರಿಗೆ ವಾಟ್ಸಪ್ ಮೂಲಕ ಪರಿಚಯವಾದ ವ್ಯಕ್ತಿಯೊಬ್ಬ ತಾನು ವಿದೇಶದಲ್ಲಿದ್ದು, ಗಿಫ್ಟ್ ಕಳುಹಿಸಿದ್ದೇನೆ ಎಂದು ನಂಬಿಸಿದ್ದ. ಬಳಿಕ ವಿಮಾನ ನಿಲ್ದಾಣದ ಅಧಿಕಾರಿಗಳೆಂದು ಕರೆ ಮಾಡಿದ ಅಪರಿಚಿತರು, ಪಾರ್ಸೆಲ್‌ನಲ್ಲಿ ವಿದೇಶಿ ಕರೆನ್ಸಿ ಇರುವುದು ಕಾನೂನು ಬಾಹಿರ ಎಂದು ಬೆದರಿಸಿದ್ದಾರೆ. ಇದನ್ನು ಸರಿಪಡಿಸಲು ತೆರಿಗೆ, ಮನಿ ಎಕ್ಸ್‌ಚೇಂಜ್ ಹಾಗೂ ಡಾಕ್ಯುಮೆಂಟೇಶನ್ ಹೆಸರಿನಲ್ಲಿ ಫೆ. 23 ರಿಂದ 27ರ ಅವಧಿಯಲ್ಲಿ ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಹಾಕಿಸಿಕೊಂಡಿದ್ದಾರೆ. ಒಟ್ಟು 37 ಲಕ್ಷ ರೂ. ಮೌಲ್ಯದ ವಿದೇಶಿ ಪೌಂಡ್ ಸಿಗುವ ಆಸೆಗೆ ಬಿದ್ದ ಮಹಿಳೆ ವಂಚಕರ ಜಾಲಕ್ಕೆ ಸಿಲುಕಿದ್ದಾರೆ. ಶಿರ್ವ ಠಾಣೆಯಲ್ಲಿ ಐಟಿ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಕೊಲ್ಲಿ ರಾಷ್ಟ್ರಗಳಿಂದ ಭಯಾನಕ ಅನುಭವ ಹಂಚಿಕೊಂಡ ಮಂಗಳೂರಿಗರು | ಮನೆಮಂದಿಗೂ ಆತಂಕ

ಕರಾವಳಿಗೂ ತಟ್ಟುತ್ತಿದೆ ಯುದ್ಧದ ಬಿಸಿ

ಮಂಗಳೂರು: ಇಸ್ರೇಲ್ –ಇರಾನ್ ನಡುವಿನ ಯುದ್ಧದಿಂದಾಗಿ ಗಲ್ಫ್ ರಾಷ್ಟ್ರಗಳಲ್ಲಿ ಉದ್ಯೋಗ ಕಂಡುಕೊಂಡಿರುವ ಕರಾವಳಿಯ ಹಲವು ಮಂದಿ ಆತಂಕಕ್ಕೀಡಾಗಿದ್ದಾರೆ. ಸರ್ಕಾರ ಸುರಕ್ಷತೆಗೆ ವಿಶೇಷ ಮುತುವರ್ಜಿ ವಹಿಸಿದ್ದರೂ ಕೂಡ ಮನೆ ಮಂದಿಯ ಆತಂಕ ದೂರವಾಗಿಲ್ಲ.





‘ಹೊಸ ದಿಗಂತ’ದೊಂದಿಗೆ ಮಾತನಾಡಿದ ಮೂಲತಃ ಮಂಗಳೂರಿನ ಅತ್ತಾವರ ನಿವಾಸಿ ಸದ್ಯ ಕುವೈಟ್‌ನಲ್ಲಿ ವಾಸವಾಗಿರುವ ಲತಾಮಣಿ ಅವರು, ಯುದ್ಧ ಆರಂಭವಾದಾಗಿನಿಂದ ಒಂದು ರೀತಿಯ ಭಯ ನಮ್ಮನ್ನು ಆವರಿಸಿದೆ. ಎಲ್ಲಿ ಏನಾಗುತ್ತದೋ ಎಂಬ ಭೀತಿ ಸತತವಾಗಿ ಕಾಡುತ್ತಿದೆ. ನಿದ್ದೆಯಿಲ್ಲದ ರಾತ್ರಿಗಳು ನಮ್ಮದಾಗಿವೆ. ಒಮ್ಮೆ ಯುದ್ಧ ಮುಗಿಯಲಿ ಎಂದು ಕಾಯುತ್ತಿದ್ದೇವೆ ಎಂದರು.

ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಐದಾರು ಕಡೆಗಳಲ್ಲಿ ಭಾರೀ ಸ್ಫೋಟವಾಗಿತ್ತು. ಅದರಿಂದ ಹೆಚ್ಚು ಗಲಿಬಿಲಿಗೊಂಡಿದ್ದೆವು. ಮನೆಯಿಂದ ಹೊರಬರಲು ಕೂಡ ಭಯವಾಗುತ್ತಿದೆ ಎಂದವರು ಅಲ್ಲಿನ ಸ್ಥಿತಿಯನ್ನು ವಿವರಿಸಿದರು.

ದುಬೈನಲ್ಲಿ ಉದ್ಯೋಗ ಮಾಡಿಕೊಂಡಿರುವ ಮಂಗಳೂರಿನ ಕೊಂಚಾಡಿ ನಿವಾಸಿ ಸಂದೀಪ್ ಅವರು ಕೂಡ ಅಲ್ಲಿನ ಆತಂಕದ ಸ್ಥಿತಿಯನ್ನು ವಿವರಿಸಿದರು. ಕೆಲಸಕ್ಕೆ ಹೋಗದೆ ಮನೆಯಲ್ಲಿ ಇದ್ದೇವೆ. ನಾವು ವಾಸವಾಗಿರುವ ಪ್ರದೇಶದಲ್ಲಿ ಸದ್ಯ ಯಾವುದೇ ಅಪಾಯವಿಲ್ಲ. ಆದರೆ ತೈಲ ಸಂಸ್ಥೆಗಳಿರುವ ಪ್ರದೇಶದಲ್ಲಿ ಹೆಚ್ಚಿನ ಆತಂಕವಿದೆ. ಅಲ್ಲಿ ದಾಳಿ ಮುಂದುವರಿದಿದೆ. ಕೆಲಸಕ್ಕೆ ಹೋಗಲು ಸಾಧ್ಯವಾಗದಿದ್ದರೆ ವರ್ಕ್ ಫ್ರಂ ಹೋಮ್ ಅನಿವಾರ್ಯವಾಗಲಿದೆ ಎಂದವರು ಹೇಳಿದರು.

ಆತಂಕದ ವಾತಾವರಣ

ದುಬೈಯಲ್ಲೂ ಒಂದು ರೀತಿಯ ಆತಂಕದ ವಾತಾವರಣವಿದೆ. ನಿರಂತರ ದಾಳಿ ಜನತೆಯನ್ನು ಆತಂಕಕ್ಕೀಡು ಮಾಡಿದೆ. ದುಬೈಯ ಪಾಮ್ ಜುಮೇರಿಯಾ ಬಳಿ ನಿರಂತರ ದಾಳಿ ಆಗುತ್ತಲೇ ಇದೆ.

■ **ಅಜಯ್, ಮಂಚಿ ಆಳಾಬೆ,** ದುಬೈಯಲ್ಲಿ ಉದ್ಯೋಗಿ

ಕೊಡಗು ಜಿಲ್ಲೆಯಲ್ಲಿ ಸಹಾಯವಾಣಿ ಆರಂಭ

ಮಡಿಕೇರಿ: ಮಧ್ಯ ಪ್ರಾಚ್ಯ ಹಾಗೂ ಕೊಲ್ಲಿ ದೇಶಗಳಲ್ಲಿ ಯುದ್ಧ ಸಂಭವಿಸಿದ್ದು, ಅಪಾರ ಪ್ರಮಾಣದ ಸಾವು ನೋವು ಸಂಭವಿಸಿದ್ದು, ಕರ್ನಾಟಕದ ಹಲವರು ಸಿಲುಕಿಕೊಂಡಿರುವ ಮಾಹಿತಿಯಿದೆ. ಕೊಡಗು ಜಿಲ್ಲೆಯ ಯಾರಾದರೂ ಈ ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿದ್ದರೆ, ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ನೀಡಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆಗಳು: 08272 221077 , 08272 221099 ವಾಟ್ಸಾಪ್ ಸಂಖ್ಯೆ 8550001077.

ಕುವೈಟ್‌ನಿಂದ ರಜೆಯಲ್ಲಿ ಬಂದಿದ್ದರು

ಶನಿವಾರ ಕುವೈಟ್‌ಗೆ ತೆರಳಲು ಸಿದ್ಧವಾಗಿದ್ದ ಇಂಜಿನಿಯರ್ ಆಗಿರುವ ಮಂಜೇಶ್ವರದ ಮೋಹನದಾಸ್ ಕಾಮತ್ ಅವರು ವಿಮಾನ ರದ್ದಾದ ಕಾರಣ ಪ್ರಯಾಣ ಮುಂದೂಡುವಂತಾಗಿದೆ. 10 ದಿನದ ರಜೆಯಲ್ಲಿ ಪತ್ನಿ ಹಾಗೂ ಮಕ್ಕಳ ಕುಟುಂಬ ಸಮೇತ ಮಂಗಳೂರಿಗೆ ಬಂದಿದ್ದು, ನಿಗದಿಯಂತೆ ಶನಿವಾರ ಕುವೈಟ್‌ಗೆ ತೆರಳಬೇಕಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಕುವೈಟ್‌ನಲ್ಲಿ ಯುದ್ಧದ ವಾತಾವರಣದಿಂದಾಗಿ ಅಲ್ಲಿನ ಶಾಲೆಗಳು ಮಕ್ಕಳಿಗೆ ಆನ್‌ಲೈನ್ ತರಗತಿ ನಡೆಸುವುದಾಗಿ ತಿಳಿಸಿದ್ದಾರೆ ಎನ್ನುತ್ತಾರೆ ಅವರು.

ಭೀಕರ ಸ್ಫೋಟದಿಂದ ಕೂದಲೆಳೆ ಅಂತರದಲ್ಲಿ ಪಾರು

ಉಡುಪಿ: ಅರಬ್ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧದ ಭೀಕರತೆ ಇದೀಗ ಕರಾವಳಿಯ ಕುಟುಂಬಗಳ ನೆಮ್ಮದಿ ಕೆಡಿಸಿದ್ದು, ಬಹ್ರೇನ್‌ನ ಬ್ಯಾರನ್‌ನಲ್ಲಿ ನೆಲೆಸಿರುವ ಉಡುಪಿ ಜಿಲ್ಲೆಯ ತೆಕ್ಕಟ್ಟೆ ಮೂಲದ ಕುಟುಂಬವೊಂದು ಭೀಕರ ಸ್ಫೋಟದಿಂದ ಕೂದಲೆಳೆ ಅಂತರದಲ್ಲಿ ಪಾರಾಗಿದೆ. ಶನಿವಾರ ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಈ ಭಾಗದಲ್ಲಿ ಭೀಕರ ಸ್ಫೋಟ ಸಂಭವಿಸಿದ್ದು, ಸ್ಥಳೀಯರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ.



ತೆಕ್ಕಟ್ಟೆ ಮೂಲದ ಅಶೋಕ್ ಶೆಟ್ಟಿ, ಅವರ ಪತ್ನಿ ಅಕ್ಷತಾ ಶೆಟ್ಟಿ ಹಾಗೂ ಅಶೋಕ್ ಶೆಟ್ಟಿ ಅವರ ಸಹೋದರ ರವೀಂದ್ರ ಶೆಟ್ಟಿ ಅವರು ಪ್ರಸ್ತುತ ಬ್ಯಾರನ್‌ನಲ್ಲಿ ನೆಲೆಸಿದ್ದಾರೆ. ಸ್ಫೋಟ ಸಂಭವಿಸಿದ ತಕ್ಷಣವೇ ಪ್ರಾಣಾಪಾಯದಿಂದ ಪಾರಾಗಲು ಈ ಕುಟುಂಬವು ಸುರಕ್ಷಿತ ಸ್ಥಳದತ್ತ ಧಾವಿಸಿದೆ. ಈ ಸಂದರ್ಭದಲ್ಲಿ ಅಕ್ಷತಾ ಶೆಟ್ಟಿ ಅವರು ಸುಮಾರು 7 ಕಿಲೋಮೀಟರ್ ದೂರದವರೆಗೆ ಓಡಿ ಹೋಗಿ ಸುರಕ್ಷಿತ ನೆಲೆ ತಲುಪುವ ಮೂಲಕ ಅಪಾಯದಿಂದ ಪಾರಾಗಿದ್ದಾರೆ. ಪ್ರಸ್ತುತ ಈ ಕುಟುಂಬವು ಯುದ್ಧದ ಭೀತಿಯ ನಡುವೆಯೇ ಅಲ್ಲಿ ಕಾಲ ಕಳೆಯುವಂತಾಗಿದೆ.

ಘಟನೆಯ ಕುರಿತು ಈ ಕುಟುಂಬವು ಈಗಾಗಲೇ ಭಾರತೀಯ ರಾಯಭಾರ ಕಚೇರಿ ಹಾಗೂ ಉಡುಪಿ ಜಿಲ್ಲಾ ಸಹಾಯವಾಣಿಗೆ ಶನಿವಾರ ರಾತ್ರಿಯೇ ಇಮೇಲ್ ಮೂಲಕ ಮಾಹಿತಿ ರವಾನಿಸಿದೆ. ಜಿಲ್ಲಾಡಳಿತವು ಈಗಾಗಲೇ ಇವರ ಮಾಹಿತಿಯನ್ನು ಪಡೆದುಕೊಂಡಿದ್ದು, ಅವರ ಸುರಕ್ಷತೆಯ ಬಗ್ಗೆ ನಿಗಾ ವಹಿಸಿದೆ. ಅರಬ್ ರಾಷ್ಟ್ರಗಳ ರಾಜಧಾನಿ ನಗರಗಳ ಮೇಲೆ ನಿರಂತರ ದಾಳಿಯ ಭೀತಿ ಇರುವುದರಿಂದ, ಅಲ್ಲಿರುವ ಕನ್ನಡಿಗರನ್ನು ಸುರಕ್ಷಿತವಾಗಿ ರಕ್ಷಿಸುವಂತೆ ರಾಯಭಾರ ಕಚೇರಿಗೆ ಮನವಿ ಮಾಡಲಾಗಿದೆ.

ಗಲ್ಫ್ ರಾಷ್ಟ್ರಗಳಲ್ಲಿರುವವರ ಸುರಕ್ಷತೆಗಾಗಿ ರಾಜ್ಯ ಸರ್ಕಾರ ಸಹಾಯವಾಣಿ ಆರಂಭಿಸಿದೆ. ದ.ಕ.: 0824- 2442590, ಉಡುಪಿ: 0820-10770820, 2574802, ಕೊಡಗು: 08272-221077.

ಶ್ರೀಕೃಷ್ಣ ಮಠದಲ್ಲಿ ನಾಳೆ ಚಂದ್ರಗ್ರಹಣ ಆಚರಣೆ: ವಿಶೇಷ ಪೂಜೆ, ಅನುಷ್ಠಾನ

ಉಡುಪಿ: ಮಾ. 3ರ ಮಂಗಳವಾರದಂದು ಸಂಭವಿಸಲಿರುವ ಗ್ರಸ್ತೋದಯ ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಉಡುಪಿಯ ಶ್ರೀಕೃಷ್ಣ ಮಠದಲ್ಲಿ ವಿಶೇಷ ಧಾರ್ಮಿಕ ವಿಧಿವಿಧಾನಗಳು ಜರುಗಲಿವೆ. ಈ ಕುರಿತು ಮಾಹಿತಿ ನೀಡಿರುವ ಮಠದ ದಿವಾನರಾದ ಜೆ. ಉದಯ ಸರಳತ್ತಾಯ ಅವರು, ಅಂದು ಸಂಜೆ ನಮ್ಮ ಭಾಗದಲ್ಲಿ 6.19ಕ್ಕೆ ಸೂರ್ಯಾಸ್ತವಾಗಲಿದ್ದು, ಸಂಜೆ 6.39 ರಿಂದ 6.47 ರವರೆಗೆ ಕೇವಲ ಎಂಟು ನಿಮಿಷಗಳ ಕಾಲ ಗ್ರಹಣವು ಗೋಚರವಾಗಲಿದೆ ಎಂದು ತಿಳಿಸಿದ್ದಾರೆ.

ಗ್ರಹಣದ ಪ್ರಯುಕ್ತ ಶ್ರೀಕೃಷ್ಣಮಠದಲ್ಲಿ ಏಕಾದಶಿಯ ಮಾದರಿಯಲ್ಲೇ ಉಪವಾಸ ಕ್ರಮವನ್ನು ಪಾಲಿಸಲಾಗುತ್ತಿದ್ದು, ಅಂದು



ಮಧ್ಯಾಹ್ನ ಮತ್ತು ರಾತ್ರಿಯ ಭೋಜನ ಪ್ರಸಾದದ ವ್ಯವಸ್ಥೆ ಇರುವುದಿಲ್ಲ. ಗ್ರಹಣ ಕಾಲದಲ್ಲಿ ಮಠದ ದ್ವಾರಗಳು ತೆರೆದಿದ್ದು, ಮಧ್ವ ಸರೋವರದಲ್ಲಿ ವಿಶೇಷ ಜಪ ಮತ್ತು ಅನುಷ್ಠಾನಗಳು ನಡೆಯಲಿವೆ. ಗ್ರಹಣ ಪರ್ವಕಾಲ ಮುಗಿದ ನಂತರ ಅಂದರೆ ರಾತ್ರಿ 7 ಗಂಟೆಗೆ ಶುದ್ಧಿಸ್ನಾನ ನೆರವೇರಿಸಿ ಶ್ರೀಕೃಷ್ಣನಿಗೆ ವಿಶೇಷ ರಾತ್ರಿ ಪೂಜೆಯನ್ನು ಸಲ್ಲಿಸಲಾಗುತ್ತದೆ.

ಸಾಂಪ್ರದಾಯಿಕ ಮೆರವಣಿಗೆ

ವಿಶೇಷವೆಂದರೆ ಗ್ರಹಣದ ದಿನವೇ ಹೋಳಿ ಹುಣ್ಣಿಮೆಯೂ ಬಂದಿರುವುದರಿಂದ ಮಠದಿಂದ ಕಡಿಯಾಳಿ ದೇವಸ್ಥಾನದವರೆಗೆ ಸಾಂಪ್ರದಾಯಿಕ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಗ್ರಹಣ ಶಾಂತಿಯ ನಂತರದ ದಿನ ಅಂದರೆ ಬುಧವಾರದಂದು ಎಂದಿನಂತೆ ಮಧ್ಯಾಹ್ನದ ಮಹಾ ಪೂಜೆ ಮತ್ತು ಸಾರ್ವಜನಿಕ ಅನ್ನದಾನ ಸೇವೆಗಳು ಸುಸೂತ್ರವಾಗಿ ನಡೆಯಲಿವೆ ಎಂದು ಅವರು ವಿವರಿಸಿದ್ದಾರೆ.

ಉಡುಪಿ: ಒಂದೇ ದಿನ ನಾಲ್ವರ ಸಾವು

ಉಡುಪಿ: ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದ ಕಾರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಮೃತಪಟ್ಟ ಘಟನೆ ಕುಕ್ಕುಂದೂರು ಗ್ರಾಮದ ಮಹಾತ್ಮ ಗಾಂಧಿ ಶಾಲೆಯ ಎದುರು ಶನಿವಾರ ರಾತ್ರಿ ಸಂಭವಿಸಿದೆ.

ಕುಕ್ಕುಂದೂರಿನ ರಕ್ಷಿತ್ ಮತ್ತು ಶಿವಾನಂದ ಮೃತರು. ಕಾರ್ಕಳದಿಂದ ಬೈಲೂರು ಕಡೆಗೆ ತೆರಳುತ್ತಿದ್ದಾಗ, ಉಡುಪಿ ಕಡೆಯಿಂದ ಕಾರ್ಕಳಕ್ಕೆ ಬರುತ್ತಿದ್ದ ಕಾರು ಮುಂದಿದ್ದ ವಾಹನವನ್ನು ಓವರ್‌ಟೇಕ್ ಮಾಡುವ ಭರದಲ್ಲಿ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಸವಾರರು ರಸ್ತೆಗೆ ಎಸೆಯಲ್ಪಟ್ಟು ತಲೆಗೆ ತೀವ್ರ ಪೆಟ್ಟಾಗಿದ್ದು, ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯೆ ಮೃತಪಟ್ಟಿದ್ದಾರೆ. ಕಾರು ಚಾಲಕ ಘಟನೆ ಬಳಿಕ ಸ್ಥಳದಿಂದ ಪರಾರಿಯಾಗಿದ್ದಾನೆ. ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೀರಲ್ಲಿ ಮುಳುಗಿ ಮಹಿಳೆ ಸಾವು

ಹೊಸಂಗಡಿಯ ಭಾಗಿಮನೆ ಬಳಿ ಟ್ರೆಕ್ಕಿಂಗ್ ಹೋಗಿದ್ದ ಮಹಿಳೆಯೊಬ್ಬರು ನದಿಯಲ್ಲಿ ಮುಳುಗಿ ಮೃತಪಟ್ಟ ಘಟನೆ ನಡೆದಿದೆ. ಕುಂದಾಪುರದ ಮೆಡಿಕಲ್ ಶಾಪ್‌ವೊಂದರ ಮಾಲಕಿ ಶುಭಶ್ರೀ ಕಾರಂತ್ (53) ಮೃತಪಟ್ಟ ಮಹಿಳೆ. ಕುಂದಾಪುರದಿಂದ 8–10 ಜನರ ತಂಡ ಹೊಸಂಗಡಿಯ ಮೆಟ್ಕಲ್ ಗುಡ್ಡ ಕಡೆಗೆ ಟ್ರೆಕ್ಕಿಂಗ್ ಹೋಗಿದ್ದರು. ಈ ವೇಳೆ ಶುಭಶ್ರೀ ಅವರು ನದಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಮೃತದೇಹವನ್ನು ಕುಂದಾಪುರದ ಸರಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಅಮಾಸೆಬೈಲು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಕಲೆಹಾಕಿದ್ದಾರೆ.

ಸಂಶಯಾಸ್ಪದ ಸಾವು

ಬೆಂಗಳೂರಿನಿಂದ ಉಡುಪಿಗೆ ಪ್ರವಾಸಕ್ಕೆ ಬಂದಿದ್ದ ಲೆನ್ಸಿ ಮೇರಿ (36) ಎಂಬವರು ಶನಿವಾರ ಬೆಳಿಗ್ಗೆ ಸಂಶಯಾಸ್ಪದವಾಗಿ ಮೃತಪಟ್ಟಿದ್ದಾರೆ. ಫಿನ್ ಡೆಮ್ ಕಂಪನಿಯ ಉದ್ಯೋಗಿಯಾಗಿರುವ ಇವರು ಒಂಬತ್ತು ಜನರ ತಂಡದೊಂದಿಗೆ ಪಡುಕೆರೆಯ ಬೀಚ್ ಹೌಸ್‌ನಲ್ಲಿ ತಂಗಿದ್ದರು. ಶನಿವಾರ ಬೆಳಗಿನ ಜಾವ 2 ಗಂಟೆಯವರೆಗೆ ಸಹೋದ್ಯೋಗಿಗಳೊಂದಿಗೆ ಮಾತನಾಡುತ್ತಾ ಕುಳಿತಿದ್ದ ಇವರು ಬಳಿಕ ಮಲಗಿದ್ದರು. ಬೆಳಿಗ್ಗೆ 8.30ಕ್ಕೆ ಎಬ್ಬಿಸಿದಾಗ ಸ್ಪಂದಿಸದ ಕಾರಣ ತಕ್ಷಣ ಉಡುಪಿಯ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮಲ್ಪೆ ಠಾಣೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣ ದಾಖಲಾಗಿದೆ.

ಕಾಡಾನೆ ದಿಢೀರ್ ದಾಳಿ: ಪಿಯು ವಿದ್ಯಾರ್ಥಿನಿ ಸ್ಥಳದಲ್ಲಿಯೇ ಸಾವು

ಮಡಿಕೇರಿ: ಶಾಲೆ ಬಿಟ್ಟು ಮನೆಗೆ ಮರಳುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ಕಾಡಾನೆ ದಾಳಿಗೆ ಸಿಲುಕಿ ಸ್ಥಳದಲ್ಲೇ ಸಾವಿಗೀಡಾದ ಮನಕಲಕುವ ಘಟನೆ ಇಲ್ಲಿಗೆ ಸಮೀಪದ ಬೆಟ್ಟತ್ತೂರು ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದೆ.

ಬೆಟ್ಟತ್ತೂರು ಗ್ರಾಮದ ಗಿರೀಶ್ ಎಂಬವರ ಪುತ್ರಿ, ಮಡಿಕೇರಿಯ ಸಂತ ಜೋಸೆಫರ ಶಾಲೆಯ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಪೂಜಾ (16) ಸಾವಿಗೀಡಾದ ಬಾಲಕಿ.



ಶನಿವಾರ ಸಂಜೆ 5.30ರ ವೇಳೆಗೆ ಬಸ್‌ನಿಂದಿಳಿದು ಬೆಟ್ಟತ್ತೂರಿನ ತನ್ನ ಮನೆಗೆ ನಡೆದುಕೊಂಡು ಹೋಗುವ ವೇಳೆ ಏಕಾಏಕಿ ಕಾಡಾನೆ ದಾಳಿ ನಡೆಸಿದೆ. ದಾಳಿಯಿಂದ ತೀವ್ರವಾಗಿ ಗಾಯಗೊಂಡ ಪೂಜಾ ಸ್ಥಳದಲ್ಲೇ ಸಾವಿಗೀಡಾಗಿದ್ದಾಳೆ. ಘಟನೆಯ ಮಾಹಿತಿ ತಿಳಿದು ಸ್ಥಳೀಯರು ಹಾಗೂ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು.



ಮೃತದೇಹವನ್ನು ಮಡಿಕೇರಿಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಯಿತು.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ

ಘಟನೆಯ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯ ಇಲಾಖೆಯ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಟ್ಟತ್ತೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಡಾನೆಗಳ ಓಡಾಟ ಹೆಚ್ಚಾಗಿರುವುದರಿಂದ ಹಲವು ಬಾರಿ ದೂರು ನೀಡಿದ್ದರೂ ಸಮರ್ಪಕ ಕ್ರಮಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿದ್ದಾರೆ. ಗ್ರಾಮದ ಬಳಿ ಕಾಡಾನೆಗಳ ಸಂಚಾರ ನಿಯಂತ್ರಿಸಲು ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ. ಅಮಾಯಕ ಬಾಲಕಿಯ ಜೀವ ಹೋಗಿರುವುದು ದುರದೃಷ್ಟಕರ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಫೆಬ್ರವರಿ ಎರಡನೇ ವಾರದಲ್ಲಿ ಇದೇ ಗ್ರಾಮದ ರಸ್ತೆಯಲ್ಲಿ ರೆಸಾರ್ಟ್ ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ಯುವಕನೊಬ್ಬನ ಮೇಲೆ ಕಾಡಾನೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿತ್ತು. ಅದೃಷ್ಟವಶಾತ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಗ್ರಾಮಸ್ಥರಿಂದ ರಸ್ತೆ ತಡೆದು ಪ್ರತಿಭಟನೆ

ಮಡಿಕೇರಿ: ಮಡಿಕೇರಿ ತಾಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ಶನಿವಾರ ಸಂಜೆ ಆನೆ ದಾಳಿಗೆ ವಿದ್ಯಾರ್ಥಿನಿಯೊಬ್ಬಳು ಸಾವಿಗೀಡಾದ ಘಟನೆಗೆ ಸಂಬಂಧಿಸಿದಂತೆ ಭಾನುವಾರ ಬೆಟ್ಟತ್ತೂರು ಗ್ರಾಮಸ್ಥರು ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಮದೆ ಗ್ರಾಮದಲ್ಲಿ ರಸ್ತೆ ತಡೆ ನಡೆಸುವ ಮೂಲಕ ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದರು. ಇದೇ ಸಂದರ್ಭ ಅರಣ್ಯಾಧಿಕಾರಿಗಳು ಕುಟುಂಬಸ್ಥರಿಗೆ ಪರಿಹಾರದ ಚೆಕ್ ವಿತರಿಸಿದರು. ಆದರೆ ಚೆಕ್‌ನಲ್ಲಿ ಅರಣ್ಯ ಅಧಿಕಾರಿಗಳ ಸಹಿ ಇಲ್ಲದಿರುವುದನ್ನು ಗಮನಿಸಿದ ಗ್ರಾಮಸ್ಥರು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡ ಪ್ರಸಂಗವೂ ನಡೆಯಿತು. ಅರಣ್ಯ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದ ಗ್ರಾಮಸ್ಥರು, ಪರಿಹಾರ ಚೆಕ್ ಸಹಿ ಹಾಕದ ಅರಣ್ಯಾಧಿಕಾರಿ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದರಲ್ಲದೆ, ಮೃತ ವಿದ್ಯಾರ್ಥಿನಿಯ ಸಹೋದರನಿಗೆ ಸರಕಾರಿ ಉದ್ಯೋಗ ನೀಡುವಂತೆ ಆಗ್ರಹಿಸಿದರು. ಈ ಬಗ್ಗೆ ಇಲಾಖೆಯ ಉನ್ನತ ಅಧಿಕಾರಿಗಳ ಗಮನ ಸೆಳೆಯುವುದಾಗಿ ಭರವಸೆ ನೀಡಿದ ಅಧಿಕಾರಿಗಳು, ಕಾಡಾನೆ ಸೆರೆಗೆ ಇಂದಿನಿಂದಲೇ ಕೂಂಬಿಂಗ್ ಕಾರ್ಯಾಚರಣೆ ನಡೆಸುವುದಾಗಿ ಮಾಹಿತಿ ನೀಡಿದರು.

ಬೆಳ್ತಂಗಡಿ: ಚಿನ್ನಕ್ಕೆ ಪಾಲಿಶ್ ನೆಪದಲ್ಲಿ ವಂಚನೆ: ಆರೋಪಿ ಪೊಲೀಸ್ ವಶಕ್ಕೆ

ಬೆಳ್ತಂಗಡಿ: ಚಿನ್ನವನ್ನು ಪಾಲಿಶ್ ಮಾಡಿಕೊಡುವ ನೆಪದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಮನೆಗೆ ಬಂದು ಚಿನ್ನವನ್ನು ಪಡೆದು ರಾಸಾಯನಿಕ ಬಳಸಿ ಕರಗಿಸಿ ತೆಗೆದುಕೊಂಡುಹೋಗಿ ವಂಚನೆ ಮಾಡಿ ಪರಾರಿಯಾದ ಪ್ರಕರಣ ಸಂಬಂಧ ವೇಣೂರು ಪೊಲೀಸರು 18 ದಿನದಲ್ಲಿಯೇ ಆರೋಪಿಯನ್ನು ಹೆಡೆಮುರಿ ಕಟ್ಟಿದ್ದಾರೆ.

ಬೆಳ್ತಂಗಡಿ ತಾಲೂಕಿನ ಕಾಶಿಪಟ್ನ ಮಹಿಳೆಯೊಬ್ಬರ ಮನೆಗೆ ಸೇಲ್ಸ್‌ಮ್ಯಾನ್ ರೂಪದಲ್ಲಿ ಆಗಮಿಸಿ ಚಿನ್ನದ ಒಡವೆಗಳನ್ನು ತೊಳೆದು ಪಾಲಿಶ್ ಮಾಡಿಕೊಡುವ ನೆಪದಲ್ಲಿ ಚಿನ್ನವನ್ನು ಫೆ.10ರಂದು ಪಡೆದು ಕರಗಿಸಿ ವಂಚನೆ ಮಾಡಿ ಪರಾರಿಯಾಗಿದ್ದ ಪ್ರಕರಣ ಸಂಬಂಧ ಆರೋಪಿ ಬಿಹಾರ ರಾಜ್ಯದ ಸುಪೋಲ್ ಜಿಲ್ಲೆಯ ತ್ರಿವೇಣಿಗಂಜ್ ತಾಲೂಕಿನ ರಘುನಾಥಪುರ ಗ್ರಾಮದ ವಾರ್ಡ್ ನಂಬರ್ 5 ರ ನಿವಾಸಿ ಸೂರಜ್ ದೇವ್ ಮಂಡಲ್ ಮಗನಾದ ಚಂದನ್ ಕುಮಾರ್ (30) ಎಂಬಾತನನ್ನು ವೇಣೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅಕ್ಷಯ್ ಡವಗಿ ಮತ್ತು ಸಬ್ ಇನ್ಸ್‌ಪೆಕ್ಟರ್ ಓಮನ ಎನ್ ನೇತೃತ್ವದ ಸಿಬ್ಬಂದಿಗಳು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಸಾಕ್ಷಿದಾರಗಳನ್ನು ಕಲೆ ಹಾಕಿ ಮಂಗಳೂರು ನಗರದ ಮೂಡಬಿದಿರೆ ತಾಲೂಕಿನ ಗಂಟಲ್ಕಟ್ಟೆ ಎಂಬಲ್ಲಿ ಫೆ.28 ರಂದು ಮಧ್ಯಾಹ್ನ 2 ಗಂಟೆಗೆ ಬಂಧಿಸಿದ್ದಾರೆ.

- **ಆರೋಪಿ ಯಾವುದೋ ರಾಸಾಯನಿಕ ವಸ್ತು ಬಳಸಿ ಚಿನ್ನವನ್ನು ಕರಗಿಸಿ ತೆಗೆದುಕೊಂಡು ಪರಾರಿಯಾಗಿದ್ದಾನೆ**
- **ಫೆ.10ರಂದು ದೂರು ನೀಡಿದ್ದು ಅದರಂತೆ ಪೊಲೀಸರು ತನಿಖೆ ನಡೆಸಿ ಕೊನೆಗೂ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿ**

ಪ್ರಕರಣದ ವಿವರ

ಬೆಳ್ತಂಗಡಿ ತಾಲೂಕಿನ ಕಾಶಿಪಟ್ನ ಗ್ರಾಮದ ಪಣೆಲಾಜೆ ರುಕ್ಮಿಣಿ ಶೆಟ್ಟಿಗಾರ್ ಎಂಬವರ ಮನೆಗೆ ಫೆ.10ರಂದು ಅಪರಿಚಿತ ವ್ಯಕ್ತಿಯೊಬ್ಬ ಸೇಲ್ಸ್‌ಮ್ಯಾನ್ ರೂಪದಲ್ಲಿ ಬಂದು ಚಿನ್ನದ ಒಡವೆಗಳನ್ನು ತೊಳೆದು ಪಾಲಿಶ್ ಮಾಡಿಕೊಡುವುದಾಗಿ ಹೇಳಿದಾಗ ರುಕ್ಮಿಣಿಯವರು ಮನೆಯ ಲಾಕರ್‌ನಲ್ಲಿದ್ದ 25 ಸಾವಿರ ಮೌಲ್ಯದ ಲಕ್ಷ್ಮೀ ಪೆಂಡೆಂಟ್ ಇರುವ 2.3/4 ಪವನ್ ಚಿನ್ನವನ್ನು ಕೊಟ್ಟಾಗ ಮಗ್ ಒಂದರಲ್ಲಿ ನೀರನ್ನು ತೆಗೆದುಕೊಂಡು ಬಂದು ಬ್ರೆಷ್ ಮೂಲಕ ತೊಳೆಯುವಂತೆ ನಟಿಸಿ ಪೇಪರ್ ಒಂದರಲ್ಲಿ ಚಿನ್ನವನ್ನು ವಾಪಸ್ ಕಟ್ಟಿ ಫ್ಯಾನ್ ಗಾಳಿಗೆ ಇಟ್ಟು ಒಣಗಿಸುವಂತೆ ಹೇಳಿ ಕೊಟ್ಟು ಹೋಗಿದ್ದು. ಬಳಿಕ ಬಿಚ್ಚಿ ನೋಡಿದಾಗ ಅರಶಿನ ಪುಡಿಯಂತೆ ಕಾಣುವ ಚಿನ್ನದ ಸರದ ಸಣ್ಣ ಸಣ್ಣ ತುಂಡುಗಳು ಹಾಗೂ ತ್ರಾಮ ಬಣ್ಣಕ್ಕೆ ತಿರುಗಿದ ಲಕ್ಷ್ಮೀ ಪೆಂಡೆಂಟ್ ಮಾತ್ರವೇ ಇತ್ತು. ಆರೋಪಿ ಯಾವುದೋ ರಾಸಾಯನಿಕ ವಸ್ತು ಬಳಸಿ ಚಿನ್ನವನ್ನು ಕರಗಿಸಿ ತೆಗೆದುಕೊಂಡು ಪರಾರಿಯಾಗಿದ್ದಾನೆ ಎಂದು ವೇಣೂರು ಪೊಲೀಸ್ ಠಾಣೆಯಲ್ಲಿ ಫೆ.10 ರಂದು ದೂರು ನೀಡಿದ್ದು ಅದರಂತೆ ಪೊಲೀಸರು ತನಿಖೆ ನಡೆಸಿ ಕೊನೆಗೂ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿನಿ.ಸಿ.ಕೆ ಮತ್ತು ಬೆಳ್ತಂಗಡಿ ವೃತ್ತ ನಿರೀಕ್ಷಕ ರವಿ ಬಿ.ಎಸ್. ಮಾರ್ಗದರ್ಶನದಲ್ಲಿ ವೇಣೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅಕ್ಷಯ್ ಡವಗಿ ಮತ್ತು ಸಬ್ ಇನ್ಸ್‌ಪೆಕ್ಟರ್ ಓಮನ ಎನ್. ನೇತೃತ್ವದ ಸಿಬ್ಬಂದಿ ಎಎಸ್‌ಐ ವೆಂಕಟೇಶ್ ನಾಯ್ಕ್, ಎಎಸ್‌ಐ ಬೆನ್ನಿಚ್ಚನ್, ಕೃಷ್ಣ ಕೇಶವತಿ, ಬಸವರಾಜ್, ಮೋಹನ್, ರಾಕೇಶ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 33° 23° | ಉಡುಪಿ 31° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 02, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಬೇಡಡ -ಮುಳಿಯಾರು ಗ್ರಾಮಗಳನ್ನು ಬೆಸೆಯಿತು 'ಚೊಟ್ಟೆ' ಸೇತುವೆ



ಪುಟ 6

ಉಜಿರೆ ದೇವಳ ಬ್ರಹ್ಮಕಲಶಕ್ಕೆ ಎರಡೂವರೆ ಲಕ್ಷಕ್ಕಿಂತ ಅಧಿಕ ಭಕ್ತರ ಆಗಮನ ನಿರೀಕ್ಷೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಸೋಮವಾರ 02, ಮಾರ್ಚ್ 2026

ಸುತ್ತಮುತ್ತ

ಉಜಿರೆ ಬ್ರಹ್ಮಕಲಶೋತ್ಸವಕ್ಕೆ ಇಂದು ಚಾಲನೆ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಾರಂಭೋತ್ಸವ ಮಾ.2ಕ್ಕೆ ಬೆಳಿಗ್ಗೆ 9:30ರಿಂದ ಆರಂಭವಾಗಲಿದೆ. ದೇವಳದ ನೂತನ ಆಡಳಿತ ಕಾರ್ಯಾಲಯ 'ಸುಶಾಸನ' ಮತ್ತು ತಂತ್ರಿ ನಿವಾಸ 'ಸುವಾಸ' ಇದರ ಉದ್ಘಾಟನೆಯನ್ನು ಶ್ರೀ ಬಾಳೆಕುದ್ರು ಮಠದ ಶ್ರೀ ವಾಸುದೇವ ಸದಾಶಿವಾಶ್ರಮ ಸ್ವಾಮೀಜಿ ನೆರವೇರಿಸುವರು. ಬ್ರಹ್ಮಕಲಶೋತ್ಸವದ ಕಾರ್ಯಾಲಯ 'ಸುರಭಿ' ಇದರ ಉದ್ಘಾಟನೆಯನ್ನು ಸುರ್ಯ ಶ್ರೀ ಸದಾಶಿವ ರುದ್ರ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಡಾ. ಸತೀಶ್ಚಂದ್ರ ಸುರ್ಯಗುತ್ತು, ಭೋಜನ ಶಾಲೆ 'ಸುಪ್ರಸಾದ' ಉದ್ಘಾಟನೆಯನ್ನು ಉಜಿರೆ ರಬ್ಬರ್ ಸೊಸೈಟಿ ಅಧ್ಯಕ್ಷ ಶ್ರೀಧರ್ ಜಿ.ಭಿಡೆ, ಪಾಕಶಾಲೆ 'ಸುರುಚಿ' ಇದರ ಉದ್ಘಾಟನೆಯನ್ನು ಕ್ಷೇಮವನದ ಸಿಇಒ ಶ್ರದ್ಧಾ ಅಮಿತ್, ಹಸಿರು ವಾಣಿ ಉಗ್ರಾಣ 'ಸಮೃದ್ಧಿ'ಯ ಉದ್ಘಾಟನೆಯನ್ನು ಎಸ್‌ಕೆಡಿಆರ್‌ಡಿಪಿಯ ಸಿಇಒ ಅನಿಲ್ ಕುಮಾರ್ ಎಸ್.ಎಸ್., ಮಾಧ್ಯಮ ಕೇಂದ್ರವನ್ನು ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್ ಉದ್ಘಾಟಿಸಲಿರುವರು. ಬೆಳಿಗ್ಗೆ ರತ್ನವರ್ಮ ಹೆಗ್ಗಡೆ ಕ್ರೀಡಾಂಗಣ ಬಳಿಯಿಂದ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟ,ಬೆಳ್ತಂಗಡಿ ವಲಯದಿಂದ ಹಸಿರು ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 10ರಿಂದ ಕೃಷ್ಣಾನುಗ್ರಹ ಸಭಾಭವನದಲ್ಲಿ ಸಭಾ ಕಾರ್ಯಕ್ರಮ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ ನೆರವೇರಲಿದೆ. ಸಂಜೆ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಉಜಿರೆಯ ದಕ್ಷಾ ಮೆಲೋಡೀಸ್ ತಂಡದವರಿಂದ ಸಂಗೀತ ರಸಮಂಜರಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಮಾಜಿಕ ಸಮಸ್ಯೆಗಳಿಗೆ ರಾಷ್ಟ್ರಭಾವ ಜಾಗೃತಿಯೇ ಪರಿಹಾರ: ಡಾ. ಭಟ್

ಸುರತ್ಕಲ್: ಭಾರತದ ಮೇಲೆ ನಡೆದ ವಿದೇಶಿ ಆಕ್ರಮಣಗಳನ್ನು ಒಟ್ಟಾಗಿ ಎದುರಿಸುವ ಸಂಘಟನಾತ್ಮಕ ಚಿಂತನೆಯ ಕೊರತೆ ನಮ್ಮ ಹಿನ್ನಡೆಗೆ ಕಾರಣವಾಯಿತು ಎಂದು ಆರ್‌ಎಸ್‌ಎಸ್ ಪ್ರಮುಖರಾದ ಡಾ. ಕಲ್ಲಡ್ಕ



ಪ್ರಭಾಕರ್ ಭಟ್ ನುಡಿದರು. ಶನಿವಾರ ಗೋವಿಂದ ದಾಸ ಕಾಲೇಜಿನ ಎ. ವಿ. ಹಾಲ್‌ನಲ್ಲಿ 27ನೇ ತಿಂಗಳಿನ ಮಂಥನ ಕಾರ್ಯಕ್ರಮದಲ್ಲಿ 'ಹಿಂದೂ ಸಮಾಜದ ಮೇಲಿನ ಆಕ್ರಮಣ – ಸವಾಲುಗಳು – ಪರಿಹಾರ' ಎಂಬ ವಿಚಾರದ ಬಗ್ಗೆ ಮಾತನಾಡಿದರು. ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡ ಬ್ರಿಟಿಷರು ದೇಶವಾಸಿಗಳ ಮಧ್ಯೆ ಜಾತೀಯತೆಯ ಒಡಕು ಸೃಷ್ಟಿಸಿ ರಾಷ್ಟ್ರೀಯ ಏಕತೆ ತುಂಡರಿಸುವ ಪ್ರಯತ್ನ ಮಾಡಿದರು. ಸ್ವಾಭಿಮಾನ ಶೂನ್ಯವಾದ ಹಿಂದು ಸಮಾಜ ತುಷ್ಟೀಕರಣದ ತೆವಲಿಗೆ ಬಲಿಯಾಯಿತು. ಹಿಂದೂ ಜಾಗರಣದ ಕಾರ್ಯದಿಂದ ಈ ಸಮಸ್ಯೆಗೆ ಉತ್ತರ ಸಿಗುವಂತಾಯಿತು.ಗೋ ಹತ್ಯೆ, ಮತಾಂತರ ಮುಂತಾದ ಸಾಮಾಜಿಕ ಸಮಸ್ಯೆಗಳಿಗೆ ರಾಷ್ಟ್ರ ಭಾವ ಜಾಗೃತಿಯೊಂದೇ ಪರಿಹಾರ ಎಂದು ವಿವರಿಸಿದರು. ಮಂಗಳೂರು ಮಹಾನಗರ ಸಂಘ ಚಾಲಕ್ ಡಾ. ಸತೀಶ್ ರಾವ್ ಇದ್ದರು. ಯಜ್ಞೇಶ್ ಐತಾಳ್ ಸ್ವಾಗತಿಸಿ, ಶಕುಂತಲಾ ಸುರೇಶ ವಂದಿಸಿದರು. ಡಾ. ಪ್ರಶಾಂತ್ ಭಟ್ ಪ್ರಾರ್ಥಿಸಿದರು.

ಕೊಲ್ಲಾಡು ದೈವಸ್ಥಾನದಲ್ಲಿ ನೇಮ

ಮುಲ್ಕಿ: ಬೆಳ್ಳಾಯರು ಗ್ರಾಮದ ಕೊಲ್ಲಾಡು ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ನೇಮ ನಡೆಯಿತು. ಧ್ವಜಸ್ತಂಭ ಮುಹೂರ್ತ, ಚಪ್ಪರ ಏರುವುದು, ಸಂಜೆ



ಭಂಡಾರ ಹೊರಡುವುದು, ರಾತ್ರಿ ಸಾರ್ವಜನಿಕ ಅನ್ನಸಂತರ್ಪಣೆ ಬಳಿಕ ಶ್ರೀ ಕೋರ್ದಬ್ಬು ಮತ್ತು ಶ್ರೀ ತನ್ನಿಮಾನಿಗ ದೈವದ ನೇಮ, ಪ್ರಸಾದ ವಿತರಣೆ ನಡೆಯಿತು. ಮಾ. 1ಕ್ಕೆ ಗುಳಿಗ ಮತ್ತು ಧೂಮಾವತಿ ಹಾಗೂ ಬಂಟದೈವಗಳ ನೇಮ ನಡೆಯಿತು. ರವೀಂದ್ರ ಶೆಟ್ಟಿ ಬಳ್ಕುಂಜೆ ಗುತ್ತು, ದೈವಸ್ಥಾನದ ಸೇವಾ ಸಮಿತಿ ಅಧ್ಯಕ್ಷ ಜೈ ಕೃಷ್ಣ ಶೆಟ್ಟಿ ಕಲ್ಲಿಮಾರು, ಸಮಿತಿಯ ಕೆ ಕಿರಣ್ ಕುಮಾರ್ ಶೆಟ್ಟಿ ಕೊಲ್ಲಾಡು ಗುತ್ತು, ವಿದ್ಯಾಧರ್ ಶೆಟ್ಟಿ ಕೊಲ್ಲಾಡು ಗುತ್ತು, ಸುಜಿತ್ ಆಳ್ವ ಪ್ರವೀಣ್ ಶೆಟ್ಟಿ ಪ್ರಮೋದ್ ಶೆಟ್ಟಿ ಸಂತೋಷ್ ಶೆಟ್ಟಿ ದಿನೇಶ್ ಪೂಜಾರಿ ಪುಷ್ಪರಾಜ್ ಕೋಟ್ಯಾನ್ ಮತ್ತಿತರರಿದ್ದರು.

ಭಕ್ತಾದಿಗಳಿಂದ ಹಸಿರು ಹೊರೆಕಾಣಿಕೆ ಸಮರ್ಪಣೆ | ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ

ಮಲೆಂಗಲ್ಲು ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಗೌಜಿ ಆರಂಭ

ಬೆಳ್ತಂಗಡಿ: ಪದ್ಮುಂಜ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮಾರ್ಗದರ್ಶನ ದೊಂದಿಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮಾ. 1 ರಂದು ಚಾಲನೆ ಪಡೆಯಿತು. ಮಾ.1 ರಂದು ಬೆಳಿಗ್ಗೆ 8 ರಿಂದ ವಿವಿಧ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮ, ಸಾಮೂಹಿಕ ಪ್ರಾರ್ಥನೆ, ಉಗ್ರಾಣ ಮುಹೂರ್ತ ಹಾಗೂ ಕಾರ್ಯಾಲಯ ಉದ್ಘಾಟನೆ ನಡೆಯಿತು.

ಪದ್ಮುಂಜ ಶ್ರೀ ಕಲ್ಕುಡ ದೈವಸ್ಥಾನದಿಂದ ಚೆಂಡೆ-ಘೋಷಗಳ ವೈಭಯುತ ಮೆರವಣಿಗೆಯೊಂದಿಗೆ ಹಸಿರು ಹೊರೆಕಾಣಿಕೆ ಸಮರ್ಪಣೆಗೊಂಡಿತು. ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಸಂಚಾಲಕ ಹರ್ಷ ಮೇಲಾಂಟ ಮೊಗರೋಡಿ ಹೊರಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿದರು. ಹಿಂಗಾರ, ತೆಂಗಿನಕಾಯಿ, ಸೀಯಾಳ,





ಹಲಸು, ಅಡಿಕೆ, ತರಕಾರಿ, ಅಕ್ಕಿ ಸಹಿತ ನಾನಾ ಬಗೆಯ ವಸ್ತುಗಳನ್ನು ಭಕ್ತರು ಕ್ಷೇತ್ರಕ್ಕೆ ಹೊರೆಕಾಣಿಕೆಯಾಗಿ ಅರ್ಪಿಸಿದರು. ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು ಸಂಜೆ ಕ್ಷೇತ್ರದ ತಂತ್ರಿಗಳಿಗೆ ಹಾಗೂ ಇತರ ಋತ್ವಿಜರಿಗೆ ಪೂರ್ಣಕುಂಭ ಸ್ವಾಗತ, ಸಂಜೆ 6 ರಿಂದ ದೇವತಾ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹವಾಚನ, ಆಚಾರ್ಯಾದಿ ಋತ್ವಿಗ್ವರಣ, ಪ್ರಸಾದಶುದ್ದಿ ಅಂಕುರಾರೋಪಣ, ರಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಪೂಜಾಬಲಿ, ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು.

ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಕ್ಷೇತ್ರಕ್ಕೆ ಆಗಮಿಸಿ ದೇವರ ದರ್ಶನ ಮಾಡಿ, ಪ್ರಸಾದ ಸ್ವೀಕರಿಸಿದರು. ಇವರೊಂದಿಗೆ ಹೈಕೋರ್ಟ್ ವಕೀಲ ರಾಜಶೇಖರ್ ಇಳಿಯೂರು ಜೊತೆಗಿದ್ದರು. ನರದವು ಕೇಸರಿ ಪತಾಕೆಯಿಂದ ಕಂಗುಗೊಳಿಸುತ್ತಿತ್ತು. ಸಂಜೆ ಪದ್ಮುಂಜ ಅಂಗನವಾಡಿ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮ, ಜೀ ಕನ್ನಡ ಸರಿಗಮಪ ಲಿಟಲ್ ಚಾಂಪ್ಸ್ ಖ್ಯಾತಿಯ ಸಾಲುಮರದ ತಿಮ್ಮಕ್ಕ ಗ್ರೀನರಿ ನ್ಯಾಷನಲ್ ಅವಾರ್ಡ್ ವಿಜೇತೆ ಬೆಂಗಳೂರಿನ ಜ್ಞಾನ ಗುರುರಾಜ್‌ರಿಂದ ಭಕ್ತಿ ಗಾಯನ, ಪದ್ಮುಂಜ ತೆಲಿಕೆದ ಕಲಾವಿದೆರ್ ಅವರ ಕಲಾ ಕಾಣಿಕೆ ದಿ.ಗೋವಿಂದ ಪೂಜಾರಿ ಕಕ್ಕೆಪದವು ವಿರಚಿತ ತುಳು ಸಾಂಸಾರಿಕ ಹಾಸ್ಯಮಯ ನಾಟಕ ಮೋಕೆಗಾದ್- ಮೋಸ ಪ್ರದರ್ಶನಗೊಂಡಿತು.

ಅನುವಂಶೀಯ ಮೊತ್ತೇಸರರು ಚಿದಾನಂದ ರಾವ್ ಕೊಲ್ಲಾಜೆ, ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋಡಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್ ಮಾರುತಿಪುರ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠಲ ಶೆಟ್ಟಿ ಕೊಲ್ಲೊಟ್ಟು, ಆಡಳಿತ ಮಂಡಳಿ ಕಾರ್ಯದರ್ಶಿ ಜಿತೇಶ್ ಜೈನ್ ಆಡೆಂಜ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪ್ರಫುಲ್ಲಚಂದ್ರ ಅಡ್ಯಂತಾಯ ಮೊಗರೋಡಿ, ಆಡಳಿತ ಮಂಡಳಿ ಕೋಶಾಧಿಕಾರಿ ರಕ್ಷಿತ್ ಪಣೆಕರ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ನಾರಾಯಣ ಗೌಡ ಮುಚ್ಚೂರು, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ಮಲೆಂಗಲ್ಲು, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ರಘುಪತಿ ಭಟ್ ಮತ್ತು ಧನ್ಯ ಕುಮಾರ್ ಪದ್ಮುಂಜ, ಕೋಶಾಧಿಕಾರಿ ಉದಯ ಕುಮಾರ್ ಮೇಲಾಂಟ, ಪ್ರಧಾನ ಅರ್ಚಕ ವಿಜಯ ಕುಮಾರ್ ಭಟ್ ಸಹಿತ ಮತ್ತಿತರರು ಉಪಸ್ಥಿತರಿದ್ದರು.

ಗಮನ ಸೆಳೆಯುತ್ತಿವೆ ಕಲಾಕೃತಿಗಳು!

ಕ್ಷೇತ್ರಕ್ಕೆ ಆಗಮಿಸಿ ಭಕ್ತರಿಗೆ ಹಣ್ಣಿನ ತಂಪು ಪಾನೀಯ, ದೇವಸ್ಥಾನದ ಆವರಣದ ಬಂಡೆ ಕಲ್ಲಿನ ಮೇಲೆ ಶಿವಲಿಂಗ, ಗಜ ಸಹಿತ ನಾನಾ ಕಲಾಕೃತಿಗಳುನ್ನು ಚಿತ್ರಿಸಲಾಗಿತ್ತು. ವಿಶಾಲ ಸಭಾ ವೇದಿಕೆ ಹಾಗೂ ಅನ್ನಛತ್ರ ಸಹಿತ ನಾನ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿದ್ದು ಮಾ. 6 ರವರೆಗೆ ಮಲೆಂಗಲ್ಲು–ಪದ್ಮುಂಜದಲ್ಲಿ ಬ್ರಹ್ಮಕಲಶೋತ್ಸವದ ವೈಭವ ಮನೆ ಮಾಡಿದೆ.

ಕಿನ್ಯ ಕೇಶವ ಶಿಶು ಮಂದಿರದಲ್ಲಿ ಜನ್ಮದಿನ ಆಚರಣೆ, ಪೋಷಕರ ಪಾದಪೂಜೆ

ಸಂಸ್ಕಾರಯುತ ಶಿಕ್ಷಣದಿಂದ ಸತ್ಪ್ರಜೆಗಳ ನಿರ್ಮಾಣ

ಉಳ್ಳಾಲ: ಭಾರತದಲ್ಲಿ ಕುಟುಂಬ ಜೀವನವೇ ಸಂಸ್ಕಾರದ ಮೂಲ ಕೇಂದ್ರ. ಮನೆಯೇ ಮೊದಲ ಪಾಠ ಶಾಲೆ. ತಾಯಿಯೇ ಮೊದಲ ಗುರು, ಹತ್ತರ ಸಂಸ್ಕಾರವನ್ನು ಮೊದಲು ತಮ್ಮ ಜೀವನದಲ್ಲಿ ರೂಢಿಸಿಕೊಂಡಾಗ ಮಕ್ಕಳು ನೋಡಿ ಕಲಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪರ್ಯಾವರಣ ಪ್ರಮುಖರಾದ ಚಂದ್ರಹಾಸ ಮಾಸ್ಟರ್ ಕೊಲ್ಯ ಹೇಳಿದರು.

ಅವರು ಕಿನ್ಯ ಕೇಶವ ಶಿಶು ಮಂದಿರದಲ್ಲಿ ಜರಗಿದ ಸಾಮೂಹಿಕ ಹುಟ್ಟುಹಬ್ಬ ಹಾಗೂ ತಾಯಂದಿರ ಪಾದ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕುಟುಂಬ ಜೀವನ ಹಾಗೂ ಅದರ ಮಹತ್ವವನ್ನು ನಾವು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಈ ಮೂಲಕ ನಮ್ಮ ಉತ್ತಮ ಸಂಸ್ಕೃತಿಯನ್ನು ಮಕ್ಕಳಿಗೆ ಧಾರೆ ಎರೆಯುವುದರ ಮೂಲಕ ಸನಾತನ ಧರ್ಮವನ್ನು ಉಳಿಸುವುದಕ್ಕೆ ನಿರಂತರ ಪ್ರಯತ್ನಶೀಲರಾಗಬೇಕು ಎಂದರು.

ಕಿನ್ಯ ಕೇಶವ ಶಿಶು ಮಂದಿರವು ಕಳೆದ 37 ವರ್ಷಗಳಿಂದ ವ್ಯಕ್ತಿ ನಿರ್ಮಾಣದ ಕಾರ್ಯವನ್ನು ಮಾಡುತ್ತಾ ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಬಾಲ್ಯದಲ್ಲಿ ನೀಡುವುದರ ಮೂಲಕ ಉತ್ತಮ ಸತ್ಪ್ರಜೆಯನ್ನು ನಿರ್ಮಿಸುವುದಕ್ಕೆ ನಿರಂತರವಾಗಿ ನಾನಾ ಚಟುವಟಿಕೆಗಳ ಮೂಲಕ ಪ್ರಯತ್ನಿಸುತ್ತಿರುವುದು ಶ್ಲಾಘನೀಯ ಎಂದರು.



ಕೋಶಾಧಿಕಾರಿ ಶ್ರೀನಿವಾಸ್ ಗಟ್ಟಿ ಸೋಮೇಶ್ವರ ಹಾಗೂ ಅವರ ಧರ್ಮಪತ್ನಿ ಮೋಹಿನಿ ಗಟ್ಟಿ ವಿಶ್ವಸ್ಥ ಮಂಡಳಿ ಸದಸ್ಯ ಸುಧಾಕರ ಆಳ್ವ ಸಾಂತ್ಯ ಗುತ್ತು, ಜಿಲ್ಲಾ ಪರ್ಯಾವರಣಸಂಯೋಜಕಲೋಕೇಶ್ ಬಂಗೇರ ದೇವಿ ನಗರ, ಪ್ರಸಾದ್ ಮತ್ತಡ, ವ್ಯವಸ್ಥಾಪಕ ನಾರಾಯಣ ಕಜೆ ಇದ್ದರು.

ನೈತಿಕ ಮೌಲ್ಯ ವೃದ್ಧಿ

ಪೋಷಕಿ ಶಿಕ್ಷಕಿ ಆಶಾ ಮತ್ತಡ ತಮ್ಮ ಅನಿಸಿಕೆ ವ್ಯಕ್ತಪಡಿಸಿ, ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ನೈತಿಕ ಮೌಲ್ಯ ವೃದ್ಧಿಯಾಗುತ್ತದೆ ಎಂದರು.

ಪೋಷಕಿ, ಉಪನ್ಯಾಸಕಿ ಶ್ರುತಿ ವಿದ್ಯಾನಗರ ಮಾತನಾಡಿ, ಶಿಶುಮಂದಿರದಲ್ಲಿ ಕಲಿತ ಎಲ್ಲಾಚಟುವಟಿಕೆಗಳನ್ನುಮನೆಯಲ್ಲಿಯೂ ಪಾಲಿಸುತ್ತಾ ಮಗುವಿನ ಮೂಲಕ ಇಡೀ ಪರಿವಾರಕ್ಕೆ ಆದ ನಿದರ್ಶನಗಳನ್ನು ತಿಳಿಸಿ ಶಿಶು ಮಂದಿರದ ಕಾರ್ಯವನ್ನು ಮೆಚ್ಚಿ ಕೊಂಡರು. ಶಿಶುಮಂದಿರದ ಕಾರ್ಯವನ್ನು ಶ್ಲಾಘಿಸಿದರು. ಆಡಳಿತ ಮಂಡಳಿ ಸಹ ವ್ಯವಸ್ಥಾಪಕ ರವಿ ಕಿನ್ಯ, ಉಪಾಧ್ಯಕ್ಷ ಸಚ್ಚಿದಾನಂದ ಕಜೆ, ಶಿಕ್ಷಣ ಪ್ರಮುಖರಾದ ರಾಜೇಶ್ವರಿಪಿಲಿಕಾರ್,ಮಾತೃಮಂಡಳಿಯ ಅಧ್ಯಕ್ಷೆ ನಯನ ಪಾರ್ಥಸಾರಥಿ , ಭಜನಾ ಪ್ರಮುಖರಾದ ಜಯಮಾಲ ವಿದ್ಯಾನಗರ, ಅಶ್ವಿನಿ ಮಾತಾಜಿ, ಸಹಾಯಕಿ ಪ್ರಜ್ಞಾ ಕನಕಮೋಗೇರ್ ಉಪಸ್ಥಿತರಿದ್ದರು.

ಮೊಗೇರ ದುಡಿ ಆಯನ ರಾಜ್ಯಮಟ್ಟದ ಸಮಾವೇಶದಲ್ಲಿ ಕ್ಯಾ. ಚೌಟ ಹೇಳಿಕೆ

ಮೊಗೇರ ಸಮಾಜದಲ್ಲಿ ಸನಾತನ ಸಂಸ್ಕೃತಿ ಜೀವಂತ

ಸುಳ್ಯ: ತುಳುನಾಡು ವಿಭಿನ್ನ ಭೂಪ್ರದೇಶ, ಸಂಸ್ಕೃತಿಯನ್ನು ಹೊಂದಿದೆ. ಮೊಗೇರ ಸಮುದಾಯ ಸನಾತನ ಸಂಸ್ಕೃತಿಯನ್ನು ಜೀವಂತವಾಗಿ ಉಳಿಸಿದೆ ಎಂದು ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.



ಕರ್ನಾಟಕ ರಾಜ್ಯ ಮೊಗೇರ ಸಂಘದ ವತಿಯಿಂದ ಮೊಗೇರ ಬಾಂಧವರ ಸ್ವಾಭಿಮಾನ ಮತ್ತು ಒಗ್ಗಟ್ಟಿಗಾಗಿ ಸುಳ್ಯದ ಕೊಡಿಯಾಲಬೈಲ್ ಸಮುದಾಯ ಭವನದಲ್ಲಿ ನಡೆದ ಮೋಗೇರ ದುಡಿ ಆಯನ ಕಾರ್ಯಕ್ರಮದ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮೊಗೇರ ಸಮಾಜ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದರೂ ನಮ್ಮ ಸಂಸ್ಕೃತಿ ಉಳಿಸಿದ ಪಾತ್ರ ವಹಿಸಿದ್ದಾರೆ. ಮಕ್ಕಳನ್ನು ವ್ಯಕ್ತಿ ನಿರ್ಮಾಣ ಕೆಲಸ ಮಾಡೋಣ, ಆ ಮೂಲಕ ರಾಷ್ಟ್ರನಿರ್ಮಾಣ ಸಾಧ್ಯವಾಗಲಿದೆ ಎಂದ ತಿಳಿಸಿದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಸಮುದಾಯದಲ್ಲಿ ಸಾಧನೆ ಮಾಡಬೇಕು ಎಂಬ ಗುರಿ ನಮ್ಮಲ್ಲಿರಬೇಕು. ಒಗ್ಗಟ್ಟಿನಿಂದ ನಮ್ಮ ಉದ್ದೇಶ, ಹೋರಾಟ ಈಡೇರಲಿದೆ. ಅಂಬೇಡ್ಕರ್ ಅವರ ಸಂವಿಧಾನದಿಂದ ನಾವಿಂದು ವಿವಿಧ ಸ್ಥಾನ-ಮಾನ, ಅಧಿಕಾರವನ್ನು ಪಡೆದಿದ್ದೇವೆ. ಬದುಕು, ಜೀವನ ನಡೆಸುವ ಶಿಕ್ಷಣ ಮಕ್ಕಳಿಗೆ ನೀಡಬೇಕು. ಬೇರೆಯವರ ಅಡಿಯಾಳು ಆಗದೇ ನಮ್ಮ ಸ್ವಂತ ಸಾಮರ್ಥ್ಯದಿಂದ ಮುಂದುವರಿಯೋಣ ಎಂದರು. ಕರ್ನಾಟಕ ರಾಜ್ಯ ಮೊಗೇರ ಸಂಘದ ರಾಜ್ಯಾಧ್ಯಕ್ಷ ನಂದರಾಜ್ ಸಂಕೇಶ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವ ಎಸ್. ಅಂಗಾರ, ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಮಾಜಿ ಅಧ್ಯಕ್ಷ ಪಿ.ಸಿ.ಜಯರಾಮ, ಬಿಜೆಪಿ ಸುಳ್ಯ ಅಧ್ಯಕ್ಷ ವೆಂಕಟ್ ವಳಲಂಬೆ, ಜೆಡಿಎಸ್ ಅಧ್ಯಕ್ಷ ಸುಕುಮಾರ ಕೊಡ್ತುಗುಳಿ, ಪ್ರಮುಖರಾದ ಡಾ.ರಘು ಬೆಳ್ಳಾಡಿ, ವಿಶ್ವನಾಥ ಬೆಂಗಳೂರು, ರಾಮಪ್ಪ ಮಂಜೇಶ್ವರ, ಸುಂದರ ಮೇರ, ಡಾ.ರತ್ನಾವತಿ, ಕೆ.ಎಂ. ಮುಸ್ತಫಾ, ಲಕ್ಷ್ಮಣ ಪಾರೆ, ಸೀತಾರಾಮ ಕುಂಜಾಡಿ, ಅಪ್ಪು ಮಾರ್ನೆ, ಜನಾರ್ದನ ಮಗೋಡು, ಚಂದ್ರ ಬಿ., ನಿಟ್ಟೋಣಿ, ವಸಂತ ಅಡೀಲೊಡು, ಕೃಷ್ಣ ಕಾಟೀಪಳ್ಳ, ಸದಾನಂದ ನಕ್ರೆ, ಮಧುಮಯ್ ಮತ್ತಿತರರು ಇದ್ದರು. ಚಿತ್ತರಂಜನ್ ಪ್ರಾಸ್ತಾವಿಸಿ ಆನಂದ್ ಕುಂಜಾಡಿ ವಿಷಯ ಮಂಡಿಸಿದರು. ಕರುಣಾಕರ ಪಲ್ಲತ್ತಡ್ಕ ಸ್ವಾಗತಿಸಿ, ಸವಿತಾ ಮುಂಡಾಜೆ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದ ಅಂಗವಾಗಿ ನಗರದ ರಸ್ತೆಯಲ್ಲಿ ಮೆರವಣಿಗೆ ನಡೆಯಿತು.

ಬೇಡಿಕೆ ಈಡೇರಿಕೆಗೆ ಪ್ರಯತ್ನ

ಹಿಂದು ಸಮಾಜ ಒಗ್ಗಟ್ಟಾಗಿ ಸಾಗಬೇಕು. ದೇಶದ ಅಭಿವೃದ್ಧಿ ಸಮಾಜದ ಅಭಿವೃದ್ಧಿಗೆ ಇದು ಅಗತ್ಯ. ನರೇಂದ್ರ ಮೋದಿ ಸರಕಾರ ಹಿಂದುಳಿದವರ ಏಳಿಗೆಗಾಗಿ ಯೋಜನೆಯನ್ನು ಕಾರ್ಯಕ್ರಮಗಳನ್ನು ಮಾಡುತ್ತಿದೆ. ಮೊಗೇರ ಸಮಾಜದ ಬೇಡಿಕೆಗಳನ್ನು ವಿಮರ್ಶೆ ಮಾಡಿಕೊಂಡು ನನ್ನ ಹಂತದಲ್ಲಿ ಈಡೇರಿಸಲು ಪ್ರಯತ್ನಿಸುತ್ತೇನೆ.

● ಕ್ಯಾ. ಬ್ರಿಜೇಶ್ ಚೌಟ

ಗೆಜ್ಜೆಗಿರಿ ದೇಯಿ ಬೈದ್ಯೆತಿ ನೇಮ: ಮಾತೆ, ಮಕ್ಕಳ ಪುನೀತ ಸಮಾಗಮ



ಬಡಗನ್ನೂರು: ಶ್ರೀ ಕ್ಷೇತ್ರ ಗೆಜ್ಜೆಗಿರಿ ಆದಿದೈವ ಧೂಮಾವತಿ, ಸಾಯನ ಬೈದ್ಯರಗುರುಪೀಠ, ದೇಯಿ ಬೈದ್ಯೆತಿ, ಕೋಟಿ-ಚೆನ್ನಯ ಮೂಲಸ್ಥಾನದಲ್ಲಿ ವಾರ್ಷಿಕ ನೇಮೋತ್ಸವ, ಮಾತೆ ಮಕ್ಕಳ ಪುನೀತ ಸಮಾಗಮ ನಡೆದು ಸಮಾಪನಗೊಂಡಿತು.

ದೇಯಿ ಬೈದ್ಯೆತಿ ಸಮಾಧಿಯಲ್ಲಿ ದೀಪಾರಾಧನೆ, ನಡೆಯಿತು. ಫೆ.28ರಂದು ಬೆಳಿಗ್ಗೆ ವಿವಿಧ ವೈದಿಕ ಕಾರ್ಯಕ್ರಮಗಳು ನಡೆದು ಮಡಿಲು ಸೇವೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆದು ಸಂಜೆ ಧೂಮಾವತಿ ಬಲಿ ಉತ್ಸವ, ರಾತ್ರಿ ಬೈದರ್ಕಳರು ಗರಡಿ ಇಳಿಯುವುದು, ದೇಯಿ ಬೈದ್ಯೆತಿ ನೇಮ, ಮಾತೆ -ಮಕ್ಕಳ ಪುನೀತ ಸಮಾಗಮ, ದೇಯಿ ಬೈದ್ಯೆತಿ ಸಮಾಧಿಯಲ್ಲಿ ದೀಪಾರಾಧನೆ ನಡೆಯಿತು. ಕ್ಷೇತ್ರದ ತಂತ್ರಿವರ್ಯ ಮೂಡಬಿದ್ರೆ ಶಿವಾನಂದ ತಂತ್ರಿಯವರ ನೇತೃತ್ವದಲ್ಲಿ ವೈದಿಕ ವಿಧಿ-ವಿಧಾನದೊಂದಿಗೆ ತೌಳವ ಪರಂಪರೆಯ ಆನುಸಾರ ನಡೆಯಿತು.

ಶ್ರೀ ಕ್ಷೇತ್ರ ಗೆಜ್ಜೆಗಿರಿ ದೇಯಿ ಬೈದ್ಯೆತಿ, ಕೋಟಿ-ಚೆನ್ನಯ ಮೂಲಸ್ಥಾನ ಆಡಳಿತ ಸಮಿತಿ ಗೌರವಾಧ್ಯಕ್ಷ ಪೀತಾಂಬರ ಹೇರಾಜೆ, ಡಾ. ರಾಜಶೇಖರ ಕೋಟ್ಯಾನ್ ಜಯಂತ ನಡುಬೈಲು, ಅಧ್ಯಕ್ಷ ರವಿ ಪೂಜಾರಿ ಚಿಲಿಂಬಿ, ಮೊಕ್ತೇಸರ ಶ್ರೀಧರ ಪೂಜಾರಿ, ಪ್ರಧಾನ ಕಾರ್ಯದರ್ಶಿ ಡಾ. ರಾಜಾರಾಮ್ ಕೆ.ಬಿ, ಜತೆ ಕಾರ್ಯದರ್ಶಿ ಡಾ. ಸಂತೋಷ್ ಭರಂಫಳ್ಳಿ, ಕೋಶಾಧಿಕಾರಿ ಮೋಹನ್‌ದಾಸ್ ವಾಮಂಜೂರು, ಅಭಿವೃದ್ಧಿ ಸಮಿತಿ ಅಧ್ಯಕ್ಷ ಸಂಜೀವ ಪೂಜಾರಿ ಬಿರ್ವ, ಉಪಾಧ್ಯಕ್ಷ ಶೈಲೇಂದ್ರ ವೈ. ಸುವರ್ಣ, ಕಾರ್ಯದರ್ಶಿ ಉಲ್ಲಾಸ್ ಕೋಟ್ಯಾನ್, ದೀಪಕ್ ಕೋಟ್ಯಾನ್, ಹರೀಶ್ ಸಾಲ್ಯಾನ್ ಮುಂಬೈ, ಲೀಲಾವತಿ ಗೆಜ್ಜೆಗಿರಿ, ರವೀಂದ್ರ ಸುವರ್ಣ, ಹಾಗೂ ಭಕ್ತಾದಿಗಳು ಭಾಗವಹಿಸಿದರು.

ಉಜಿರೆ ಬ್ರಹ್ಮಕಲಶೋತ್ಸವ ಸಂಭ್ರಮ: 'ಬೃಹತ್ ವಾಹನ ಜಾಥ'ಕ್ಕೆ ಚಾಲನೆ



ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ, ವಿಜಯ ಗೋಪುರ ಲೋಕಾರ್ಪಣೆ, ಬ್ರಹ್ಮರಥ ಹಾಗೂ ಪುಷ್ಪರಥ ಸಮರ್ಪಣಾ ಮಹೋತ್ಸವವು ಮಾ.3ರಿಂದ 11ರ ವರೆಗೆ ನಡೆಯಲಿರುವ ಹಿನ್ನಲೆಯಲ್ಲಿ ತಾಲೂಕಿನ ಮಹಾಜನತೆಗೆ ಮಹೋತ್ಸವದ ಅರಿವು ಮೂಡಿಸಿ, ಜ್ಞಾಪಿಸುವ ಪ್ರಯುಕ್ತ ಉಜಿರೆಯ ವರ್ತಕರ ಸಂಘ, ಆಟೋರಿಕ್ಷಾ ಮಾಲಕರು ಹಾಗೂ ಸಾರ್ವಜನಿಕ ಭಕ್ತರ ಸಹಕಾರದಿಂದ ಮಾ. 1ರಂದು ಬೆಳಿಗ್ಗೆ 11ಕ್ಕೆ ಪುಂಜಾಲಕಟ್ಟೆ ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಬೃಹತ್ ವಾಹನ ಜಾಥಾಕ್ಕೆ ವಿ.ಪ. ಸದಸ್ಯ ಪ್ರತಾಪಸಿಂಹ ನಾಯಕ್,ಪ್ರಶಾಂತ್ ಪುಂಜಾಲಕಟ್ಟೆ ಮತ್ತು ಸ್ಥಳೀಯ ನಾಗರಿಕರು ಚಾಲನೆ ನೀಡಿದರು.

100ಕ್ಕೂ ಹೆಚ್ಚು ಸ್ಕೂಟರ್, ಮೋಟಾರ್ ಸೈಕಲ್ ಹಾಗೂ ಕಾರುಗಳು ಜಾಥಾದಲ್ಲಿ ಭಾಗವಹಿಸಿ ಧರ್ಮಸ್ಥಳಕ್ಕೆ ಬಂದು ಬಳಿಕ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ರಥ ಬೀದಿಯಲ್ಲಿ ಸಮಾಪನಗೊಳಿಸಿದರು.

ಈ ಸಂದರ್ಭ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು ಶುಭಾಶಂಸನೆಗೈದು, ಮಾ.5ರಂದು ಕ್ಷೇತ್ರಕ್ಕೆ ಬರಲಿರುವ ನೂತನ ಬ್ರಹ್ಮ ರಥವನ್ನು ನಾರಾವಿಯಿಂದ ಎದುರುಗೊಂಡು ಗುರುವಾಯನಕೆರೆಯಿಂದ ಬೃಹತ್ ಮೆರವಣಿಗೆಯಲ್ಲಿ ಬರಮಾಡಿಕೊಳ್ಳಲು ಎಲ್ಲರ ಸಹಕಾರವಿರಲಿ ಎಂದರು.

ಉಜಿರೆ ವರ್ತಕ ಮತ್ತು ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಪ್ರಸಾದ್ ಬಿ.ಎಸ್., ಕಿರಣಚಂದ್ರ ಪುಷ್ಪಗಿರಿ, ಸಂಚಾಲಕ ಮೋಹನ ಕುಮಾರ್, ಮೋಹನ ಶೆಟ್ಟಿಗಾರ್, ರವೀಂದ್ರ ಶೆಟ್ಟಿ ಬಳಂಜ, ರವಿಕುಮಾರ್ ಬರಮೇಲು, ಭರತ್ ಕುಮಾರ್, ಆನಂದ ಸುವರ್ಣ, ರವಿಚಂದ್ರ ಚೆಕ್ಕಿತ್ತಾಯ ಮೊದಲಾದವರು ಉಪಸ್ಥಿತರಿದ್ದರು.

ಕುಂಜತ್ತಬೈಲು ಶ್ರೀ ಕ್ಷೇತ್ರದ ಬ್ರಹ್ಮಕಲಶ: ಆಮಂತ್ರಣ ಬಿಡುಗಡೆ



ಸುರತ್ಕಲ್: ಅರ್ತಿವೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಕೊಂಗ್ರಿಬೈಲು ಕುಂಜತ್ತಬೈಲು ಇದರ ಅಷ್ಟಬಂಧ ಬ್ರಹ್ಮಕಲಶೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಭಾನುವಾರ ನಡೆಯಿತು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಹಾಗೂ ಮಂಗಳೂರು ಉತ್ತರದ ಶಾಸಕರು ಡಾ. ಭರತ್ ಶೆಟ್ಟಿ ಅವರು ಭಾಗವಹಿಸಿ ಬಿಡುಗಡೆಗೊಳಿಸಿ, ಏ.6 ರಿಂದ 12ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಭಕ್ತಾದಿಗಳು ಆಗಮಿಸಿದೇವರ ಸೇವೆ ಮಾಡುವ ಜತೆಗೆ ಬ್ರಹ್ಮ ಕಲಶೋತ್ಸವಕ್ಕೆ ದೇಣಿಗೆ ನೀಡುವ ಮೂಲಕ ಯಶಸ್ಸಿಗೆ ತನು ಮನ ಧನದ ಮೂಲಕ ಕೈ ಜೋಡಿಸಲು ಮನವಿ ಮಾಡಿದರು.

ಈ ಸಂದರ್ಭ ದೇವಳದ ಪ್ರಧಾನ ಅರ್ಚಕ ನಾರಾಯಣ ಮಯ್ಯ ಅವರು ಪ್ರಾರ್ಥಿಸಿ, ಸಹಕಾರ ಕೋರಿದರು. ಆಡಳಿತ ಮೊಕ್ತೇಸರ ಡಾ. ನರೇಶ್ ರೈ ಡೆಪ್ಪುಣಿಗುತ್ತು, ಬಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಶಾಸಕ ಡಾ. ವೈ. ಭರತ್ ಶೆಟ್ಟಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಿಠಲ್ ಆಳ್ವ ಹಳೆಮೊಗರು, ಮೊಕ್ತೇಸರ ಸದಾಶಿವ ರೈ ನಾರ್ದಬೆಟ್ಟು, ಶೇಖರ್ ಕೋಟ್ಯಾನ್, ಗೋಪಾಲ್ ಬಂಗೇರ, ಜಗದೀಶ್ ಶೆಟ್ಟಿ, ಕಾರ್ಯಾಧ್ಯಕ್ಷ ಅವಿನಾಶ್ ನಾಯ್ಕ್, ಪ್ರಧಾನ ಕಾರ್ಯದರ್ಶಿ ಶರತ್ ಕುಮಾರ್, ದೀಪಕ್ ಪೂಜಾರಿ, ಕೋಶಾಧಿಕಾರಿ ಶಂಭು ಶೆಟ್ಟಿ ಪ್ರಮುಖರಾದ ರಮಾನಂದ ಭಂಡಾರಿ, ದಿವಾಕರ ಪಕ್ಕಳ, ಶಿತೇಶ್ ಕೊಂಡೆ ಮತ್ತು ಸಮಿತಿಯ ಸರ್ವ ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು. ಭಾನುವಾರ ದೇವಸ್ಥಾನದಲ್ಲಿ ಭಕ್ತಾದಿಗಳು, ಸಂಘ ಸಂಸ್ಥೆಗಳ ಸದಸ್ಯರು ಕರ ಸೇವೆ ನಡೆಸಿದರು.

ಮಲೆಂಗಲ್ಲು ಶ್ರೀ ಉಮಾಮಹೇಶ್ವರ ಕ್ಷೇತ್ರದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭಾ ಕಾರ್ಯಕ್ರಮ | ಭಾರತ ಮಾತೆಗೆ ಪುಷ್ಪ ನಮನ

ದ.ಕ. ಜಿಲ್ಲೆಯೇ ಅತೀ ಎತ್ತರದಲ್ಲಿರುವ ಎರಡನೇ ಶಿವನ ದೇಗುಲವಿದು: ಕೇಶವ ಬಂಗೇರ

ಬೆಳ್ತಂಗಡಿ: ಮನೆ-ಮನಸ್ಸುಗಳು ಜೋಡಣೆಯಾಗಲು ಸಮಾಜ ಒಂದಾಗಬೇಕು. ಸಾಮರಸ್ಯ ಬದುಕಿಗೆ ಮಿಡಿಯುವ ಹೃದಯ ಬ್ರಹ್ಮಕಲಶೋತ್ಸವದಲ್ಲಿ ಆಗಬೇಕು. ಭಗವಂತನಿಗೆ ಕಲಶಾಭಿಷೇಕವಾಗುವುದರೊಂದಿಗೆ ನಮ್ಮ ಹೃದಯಕ್ಕೂ ಅಭಿಷೇಕ ಆಗಬೇಕು. ಭರತ ಮತ್ತು ಶ್ರೀರಾಮರ ಬಂಧುತ್ವದ ಕಲ್ಪನೆ, ಚಿಂತನೆಗಳು ನಮ್ಮಲ್ಲಿ ಮೈಗೂಡಬೇಕು. ದೇವರ ಸಾನಿಧ್ಯ ಬೆಳಗುವುದಾರ ಜೊತೆಗೆ ನಮ್ಮ ಮನಸ್ಸು, ಹೃದಯ, ಸಮಾಜ, ಬೆಳಗಬೇಕು ಎಂದು ಮಂಗಳೂರು ಗುರುದೇವ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಕೇಶವ ಬಂಗೇರ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಪದ್ಮುಂಜದ ಮಲೆಂಗಲ್ಲು ಉಮಾಮಹೇಶ್ವರ ದೇವಸ್ಥಾನ ಅಷ್ಟಬಂಧ ಬ್ರಹ್ಮಕಲಶೋತ್ಸವ ಪ್ರಯುಕ್ತ



ಮಾ.1ಕ್ಕೆ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಧಾರ್ಮಿಕ ಉಪನ್ಯಾಸ ನೀಡಿದರು.

ಬೆಟ್ಟದಲ್ಲಿ ಕಲ್ಲಿನ ಮೇಲೆ ವಿರಾಜಮಾನರಾಗಿರುವ ಉಮಾಮಹೇಶ್ವರನ ಸುತ್ತಲೂ ಹಸಿರು ತೋರಣದಿಂದ ಕೂಡಿದ ಸಾನಿಧ್ಯ. ಪ್ರಕೃತಿಯಲ್ಲಿ ಭಗವಂತನನ್ನು ಕಂಡವರು ಭಾರತೀಯರು. ಮುಂದಿನ ತಲೆಮಾರು ಬೆಳೆಯಲು ಉದಾತ್ತವಾದ ಪರಿಸರ ಜೀವಂತವಾಗಿರಿಸಿ, ಭಗವಂತನ ಆರಾಧನ ಕೇಂದ್ರವನ್ನು ಹೇಗೆ ಬೆಳಗಿಸಬಹುದು ಎನ್ನುವುದಕ್ಕೆ ಹಿಂದು ಸಮಾಜಕ್ಕೆ ಮಲೆಂಗಲ್ಲು ಆದರ್ಶ ಎಂದರು.

ಜಿಲ್ಲೆಯಲ್ಲಿ ಬಂಟ್ವಾಳದ ಕಾರಿಂಜ ಹೊರತು ಪಡಿಸಿ ಅತ್ಯಂತ ಎತ್ತರದಲ್ಲಿರುವ ಮಗದೊಂದು ಶಿವನ ದೇಗುಲ ಮಲೆಂಗಲ್ಲು, ಆಗಾಗಿ ಜಿಲ್ಲೆಯಲ್ಲಿ ಉಮಾ ಮತ್ತು ಶಿವನನ್ನು ಎತ್ತರದಲ್ಲಿ ಆರಾಧಿಸುವ ಏಕೈಕ ಕ್ಷೇತ್ರ ಮಲೆಂಗಲ್ಲು, ದೇಹದ ಅರ್ಧಭಾಗವನ್ನು ಶಿವ ಉಮೆಗೆ ನೀಡುವ ಮೂಲಕ ಹೆಣ್ಣು ಮತು ಗಂಡು ಭಾರತೀಯ ಸಮಾಜದಲ್ಲಿ ಅವರಿಬ್ಬರಿಗೂ ಏಕ ಸ್ಥಾನಮಾನವಿದೆ ಎಂದು ಜಗತ್ತಿಗೆ ಸಂದೇಶ ನೀಡಿದ ಪುಣ್ಯ ಸ್ಥಳ ಭಾರತ ಭೂಮಿ. ಹಿಂದು ಧರ್ಮ ನಮ್ಮ ಕರ್ತವ್ಯವನ್ನು ನೆನಪಿಸುತ್ತದೆ ಎಂದು ತಿಳಿಸಿದರು.

ದೇವಸ್ಥಾನದ ಅನುವಂಶೀಯ ಮೊಕ್ತೇಸರಾದ ಚಿದಾನಂದ ರಾವ್ ಕೊಲ್ಲಾಜೆ ಅಧ್ಯಕ್ಷತೆ ವಹಿಸಿದ್ದರು. ಮೊಗರೋಡಿ ಲಕ್ಷ್ಮೀಶ ಮೇಲಾಂಟ ಕಾರ್ಯಾಲಯ ಉದ್ಘಾಟಿಸಿದರು. ಸುದರ್ಶನ್ ಕಣೆಯೂರು ಗುತ್ತು, ಮುಗೇರಡ್ಕ ಮೂವರು ದೈವಗಳ ದೈವಸ್ಥಾನ ಆಡಳಿತ ಮೊಕ್ತೇಸರ ಮನೋಹರ ಗೌಡ ಅಂತರ, ಕಣೆಯೂರು ಶ್ರೀ ಮಾಹಮ್ಮಾಯಿ ದೇವಸ್ಥಾನದ ಬಾಬು ನಾಯ್ಕ ಮೈಪಾಜೆ, ಪೆರ್ಲ ಬೈಪಾಡಿ ಶ್ರೀ ಸಿದ್ದಿವಿನಾಯಕ ದೇವಸ್ಥಾನದ ಮೊಕ್ತೇಸ ಹರೀಶ್ ಕೋಡಿಮಜಲು, ಕಣೆಯೂರು ಶ್ರೀ ಮಹಾವಿಷ್ಣು ಭಜನಾ ಮಂಡಳಿ ಅಧ್ಯಕ್ಷ ಚಂದ್ರಶೇಖರ ಕೊರಂಟಾಜೆ, ಗುರುಪ್ರಸಾದ್ ಮಲೆಂಗಲ್ಲು, ಕಣೆಯೂರು ಗ್ರಾ.ಪಂ. ಮಾಜಿ ಅಧ್ಯಕ್ಷೆ ಅರುಣಾ ಎಸ್. ಶೆಟ್ಟಿ ಬಾಬು ಗೌಡ ಪೊಯ್ಯ ಹೊಸಮನೆ, ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋಡಿ, ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್ ಮಾರುತಿಪುರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠ್ಠಲ ಶೆಟ್ಟಿ ಕೊಲ್ಲೊಟ್ಟು ಇದ್ದರು. ಸಭೆಯಲ್ಲಿ ಭಾರತ ಮಾತೆಗೆ ಪುಷ್ಪ ನಮನ ಸಲ್ಲಿಸಲಾಯಿತು. ಕಲಶ ಸಮಿತಿ ಸಂಚಾಲಕಿ ಶಾರಾದ ಆರ್. ರೈ ಸ್ವಾಗತಿಸಿ, ಚೇತನಾ ನಾರಾಯಣ ವಂದಿಸಿ, ಕೆ.ಪಿ. ನವೀನ್ ಕುಮಾರ್, ಶೋಭಾ ಸೀತಾರಾಮ ಹಾಗೂ ಸಂಧ್ಯಾ ಆನಂದ ನಿರೂಪಿಸಿದರು.

ವಿಶೇಷ ದೇಗುಲ

ಮಲೆ ಎಂದರೆ ಪರ್ವತದ ಕಲ್ಲು, ಎಂದರೆ ಶಿಲೆಯ ಮೇಲೆ ನಿರ್ಮಾಣವಾಗಿರುವ ಮಲೆಂಗಲ್ಲು ದೇವಾಲಯ ವಿಶೇಷ ಚೈತನ್ಯವಿರುವ ಸಾನಿಧ್ಯ. ಇಲ್ಲಿ ತಪಸ್ಸು ಮಾಡಿದಲ್ಲಿ ರುದ್ರ ದೇವರು ಒಲಿಯುವ ಅಪೂರ್ವ ಕ್ಷೇತ್ರ ಇದಾಗಿದೆ. ಮನಸ್ಸಿನ ನಿಯಮಕರಾಗಿರುವ ರುದ್ರದೇವರು ಆರಾಧಿಸಿದಲ್ಲಿ ನಮ್ಮ ಕೆಲಸ ಕಾರ್ಯಗಳು ಸಫಲ್ಯ ಕಂಡುಕೊಳ್ಳುತ್ತದೆ. ಹಾಗೆಯೇ ನಮ್ಮ ಜೀವನ ಸಾರ್ಥಕತೆಯ ಕಡೆಗೆ ಕೊಂಡ್ಯೊಯುವ ಶಿವಪಾರ್ವತಿಯರ ಕ್ಷೇತ್ರ.

● ಅನಂತ ಪದ್ಮನಾಭ ಆಸ್ರಣ್ಣ, ಶ್ರೀಕ್ಷೇತ್ರ ಕಟೀಲುದ

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಸೋಮವಾರ 02, ಮಾರ್ಚ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತಮುತ್ತ

ಮಾ.3, 4: ಡಾ.ಬಿ.ಆರ್. ಅಂಬೇಡ್ಕರ್ ಕುರಿತು ವಿಚಾರ ಸಂಕಿರಣ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣ ಕೇಂದ್ರದ ಸಹಯೋಗದೊಂದಿಗೆ, "ಡಾ. ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಕೋನದಲ್ಲಿ ಅಭಿವೃದ್ಧಿಯ ಭಾರತ' ವಿಷಯದ ಮೇಲೆ ಮಾ.3, 4ರಂದು ಎರಡು ದಿನಗಳ ವಿಶೇಷ ವಿಚಾರ ಸಂಕಿರಣವನ್ನು ವಿವಿಯ ಮಂಗಳ ಸಭಾಂಗಣದಲ್ಲಿ ನಡೆಯಲಿದ್ದು ವಿವಿಧ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪ್ಪಿನಂಗಡಿ: ವಿಪತ್ತು ನಿರ್ವಹಣಾ ತರಬೇತಿಗೆ ವಿದ್ಯಾರ್ಥಿಗಳು ಆಯ್ಕೆ

ಉಪ್ಪಿನಂಗಡಿ: ಕೇಂದ್ರ ಸರ್ಕಾರದ ಮೈ ಯುವ ಭಾರತ್ ಸ್ವಯಂ ಸೇವಕರುಗಳಿಗೆ ಯುವ ಆಪದ್ ಮಿತ್ರ ಯೋಜನೆಯಲ್ಲಿ ವಿಪತ್ತು ನಿರ್ವಹಣಾ ತರಬೇತಿ ಶಿಬಿರಕ್ಕೆ ಉಪ್ಪಿನಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 25 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಪ್ರವೀಣ್ ಕುಮಾರ್ ತಿಳಿಸಿದ್ದಾರೆ.
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇದರ ಆಶ್ರಯದಲ್ಲಿ ಜಿಲ್ಲಾ ಸ್ಕೌಟ್ಸ್ ಅಂಡ್ ಗೈಡ್ಸ್ ತರಬೇತಿ ಕೇಂದ್ರ ಪಿಲಿಕುಳ ಮಂಗಳೂರು ಇಲ್ಲಿ ಫೆ. 23ರಿಂದ ಮಾ. 1ರ ತನಕ ವಿಪತ್ತು ನಿರ್ವಹಣಾ ತರಬೇತಿ ಶಿಬಿರ ನಡೆಯುತ್ತಿದ್ದು, ಕಾಲೇಜಿನ ಅನನ್ಯ ಜಿ, ದೀಕ್ಷಿತಾ, ಸುಶ್ಮಿತಾ, ಶರಣ್ಯ, ರಮ್ಯ ಎಂ , ಹಿತೇಶ್, ಜೀವನ್, ಕೌಶಿಕ್, ಅಕಾಶ್, ಚರಣ್, ಜಿತೇಶ್, ಹೇಮಚಂದ್ರ, ಮನಿಶ್, ರಕ್ಷಿತ್, ಮನ್ವಿತ್, ಹರ್ಷಿತ್, ಸುಜಿತ್, ಪ್ರದೀಪ್, ಧನರಾಜ್, ಗೌತಮ್, ನಿರ್ಝಾಮ್ , ಹರ್ಷಿತ್, ಅನ್ವಿತ್, ಪ್ರಜ್ವೇಶ್ , ಚರಣ್ ರವಗಳು ತರಬೇತಿಗೆ ಆಯ್ಕೆಯಾಗಿದ್ದಾರೆ.
ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ 250 ಮಂದಿ ಸ್ವಯಂ ಸೇವಕರುಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಗಾಯಾಳು ಆರೋಗ್ಯ ವಿಚಾರಿಸಿದ ಶಾಸಕ ಪೊನ್ನಣ್ಣ

ಮಡಿಕೇರಿ: ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ನಾಪೋಕ್ಲುವಿನಲ್ಲಿ ಶುಕ್ರವಾರ ನಡೆದ ಅಹಿತಕರ ಘಟನೆಯಲ್ಲಿ ಗಾಯಗೊಂಡಿದ್ದ ಗೌತಮ್ ಅವರ ಆರೋಗ್ಯ ವಿಚಾರಿಸಿದರಲ್ಲದೆ, ಘಟನೆಯ ಬಗ್ಗೆ ಮಾಹಿತಿಯನ್ನು ಪಡೆದರು.
ಈ ಸಂದರ್ಭ ಮಾಧ್ಯಮದವರೊಂದಿಗೆ ಮಾತನಾಡಿದ ಪೊನ್ನಣ್ಣ ಅವರು, ಇಂತಹ ಘಟನೆ ನಡೆದಿರುವುದು ನಿಜಕ್ಕೂ ದುರಾದೃಷ್ಟಕರ ಮತ್ತು ಅತ್ಯಂತ ಖಂಡನೀಯ. ತಪ್ಪಿತಸ್ಥರೆಲ್ಲರೂ ಕಾನೂನು ಶಿಕ್ಷೆಗೆ ಒಳಗಾಗಲಿದ್ದಾರೆ. ಘಟನೆ ನಡೆದ ಕೂಡಲೇ ಆರೋಪಿಗಳನ್ನು ಬಂಧಿಸಿದ ಪೊಲೀಸರ ಕ್ರಮ ಶ್ಲಾಘನೀಯ. ನಿಷ್ಪಕ್ಷಪಾತವಾಗಿ ತನಿಖೆ ಮಾಡಿ ಕಾನೂನು ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು. ಈ ಸಂದರ್ಭ ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕೊಡಗು ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಅಧ್ಯಕ್ಷ ಸೂರಜ್ ಹೊಸೂರು, ತೋರೇರಂಡ ನಂದ ದೇವಯ್ಯ, ಅಪ್ಪಚೆಟ್ಟೋಳಂಡ ಮಿಥುನ್ ಮಾಚಯ್ಯ, ಕುಂಜಿಲ್ಲಂಡ ಮಂಜು ದೇವಯ್ಯ, ಇಟ್ಟೀರ ಭವನ್, ಪ್ರತೀಕ್ ಪೊನ್ನಣ್ಣ ಮತ್ತಿತರ ಪ್ರಮುಖರು ಹಾಜರಿದ್ದರು.

ಮುಲ್ಕಿ: ವಿಜೃಂಭಣೆಯ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ

ಮುಲ್ಕಿ: ಚರಂತಿಪೇಟೆಯ ಸಾರ್ವಜನಿಕ ಸತ್ಯನಾರಾಯಣ ಪೂಜಾ ಸಮಿತಿಯ ಆಶ್ರಯದಲ್ಲಿ 19ನೇ ವರ್ಷದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆಯು ಮಾ.1ರಂದು ಚರಂತಿಪೇಟೆ ಯುವಕ ವೃಂದ ಕಟ್ಟೋಣದ ಮುಂಭಾಗದ ದಿ. ಬೋಳ ಸೀತಾರಾಮ ಶೆಟ್ಟಿ ವೇದಿಕೆಯಲ್ಲಿ ವೇದಿಕೆಯಲ್ಲಿ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಬೆಳಗ್ಗೆ ವೇದಮೂರ್ತಿ ಪದ್ಮನಾಭ ಭಟ್, ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಕಲಶ ಪ್ರತಿಷ್ಠೆ ಸತ್ಯನಾರಾಯಣ ಪೂಜೆಯ ಕಥಾವಾಚನ, ಮಧ್ಯಾಹ್ನ ಭಜನಾ ಕಾರ್ಯಕ್ರಮ, ಮಂಗಳಾರತಿ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭ ಚರಂತಿಪೇಟೆಯ ಸಾರ್ವಜನಿಕ ಸತ್ಯನಾರಾಯಣ ಪೂಜಾ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಗ್ರಾಮಸ್ಥರು ಉಪಸ್ಥಿತರಿದ್ದರು.

ಬಂಗ್ಲೆಗುಡ್ಡೆ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಸುಬ್ರಹ್ಮಣ್ಯ: ಕೊಲ್ಲಮೊಗ್ರು ಗ್ರಾಮದ ಬಂಗ್ಲೆಗುಡ್ಡೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಿಸಲಾಯಿತು. ಇದರ ಅಂಗವಾಗಿ ಪ್ರಯೋಗ, ಮಾದರಿ ಹಾಗೂ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಹಿರಿಯ ವಿದ್ಯಾರ್ಥಿ ಹರ್ಷ ಜಾಲುಮನೆ ಉದ್ಘಾಟಿಸಿದರು.
ಈ ಸಂದರ್ಭದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿ ಕುಶಾಲಪ್ಪ ತುಂಬತ್ತಜೆ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಜಯಶ್ರೀ ಚಾಂತಾಳ, ಮುಖ್ಯೋಪಾಧ್ಯಾಯಿನಿ ಕಮಲ ಸೇರಿದಂತೆ ಎಸ್.ಡಿ.ಎಂ.ಸಿ ಸದಸ್ಯರು, ಪೋಷಕರು, ಹಳೆವಿದ್ಯಾರ್ಥಿಗಳು, ಶಾಲಾ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.






ಕಟೀಲು ಕುದ್ರುವಿನಲ್ಲಿ ಮೂಲ್ಕಿ ತಾಲೂಕು ಸಮ್ಮೇಳನ | ಸರ್ವಾಧ್ಯಕ್ಷ ಕೃಷ್ಣಮೂರ್ತಿ ಕವತ್ತಾರು ಹೇಳಿಕೆ

ಪುಸ್ತಕ ಪ್ರಕಟಿಸಿದ ಬಳಿಕವೂ ಲೇಖಕನಿಗೆ ಜವಾಬ್ದಾರಿ ಇದೆ

ಕಟೀಲು: ಪುಸ್ತಕ ಬರೆದು ಮುಗಿಸುವುದೇ ಮುಖ್ಯವಾಯ ಅಲ್ಲ, ಅದರ ಆಚೆಗೂ ಲೇಖಕನ ಜವಾಬ್ದಾರಿ ಇದೆ ಎಂದು ಮೂಲ್ಕಿ ತಾಲೂಕು ಸಮ್ಮೇಳನಾಧ್ಯಕ್ಷ ಕೃಷ್ಣಮೂರ್ತಿ ಕವತ್ತಾರು ಹೇಳಿದರು.
ಕಟೀಲು ಕುದ್ರುವಿನಲ್ಲಿ ಮೂಲ್ಕಿ ತಾಲೂಕು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು. ನಾನು ಕೇವಲ ಪುಸ್ತಕ ಅಕ್ಷರಗಳಲ್ಲೇ ಸಾಹಿತ್ಯವನ್ನು ಕಂಡುಕೊಂಡವನಲ್ಲ, ನನ್ನ ಸುತ್ತ ಮುತ್ತಲಿನ ಸಂವೇದನೆ, ಪರಿಸರ, ಆಚರಣೆ, ಸಂಬಂಧ, ವ್ಯವಹಾರ, ಕಲೆ ಇವೆಲ್ಲದರ ಮೂಲಕ ಸಾಹಿತ್ಯವನ್ನು ಜೀವಿಸಿದವನು. ಇಂದು ನಾನು ಕಟೀಲಿನಲ್ಲಿದ್ದೇನೆ. ಇದು ಕೇವಲ ಊರಲ್ಲ, ತುಂಬಾ ದುಃಖವಾದಾಗ ಸಾಂತ್ವನ ಮಾಡುವ ಕೈ, ಸಂತೋಷಗೊಂಡಾಗ ಮಲಗುವ ಅಮ್ಮನ ಮಡಿಲು, ನನ್ನ ತೊದಲು ಭಾಷೆಗೆ ಧ್ವನಿ, ಏನನ್ನೂ ಅರಿಯದೆ ನಾನು ಗೀಚಿದ ಬರವಣಿಗೆಗೆ ಪುಸ್ತಕ, ಜಾತ್ರೆ ಸಮಾರಂಭಗಳು, ಕೋಲವೆಲ್ಲವನ್ನೂ ನೋಡಿ ಆದ ನನ್ನ ಕುತೂಹಲಕ್ಕೆ ಸಾಕ್ಷಿ, ನನಗೆ ಧೈರ್ಯಕೊಟ್ಟ ಬೆಚ್ಚನೆಯ ಅಪ್ಪುಗೆ, ಹೀಗೆ ನನ್ನ ಬದುಕಿನ ಎಲ್ಲವೂ ಆಗಿದೆ, ಈ ನನ್ನ ಕಟೀಲು. ರಾತ್ರಿಯೆಲ್ಲಾ ಕೋಲ, ಯಕ್ಷಗಾನ ನೋಡಿ ಮನೆಗೆ ಬಂದು ಕುಣಿದದ್ದು, ಅಂದು ಯಕ್ಷಗಾನ ವೇಷ ಹಾಕಿ ಮರುದಿನ ಕಿವಿಯಲ್ಲಿ ಸ್ವಲ್ಪ ಬಣ್ಣ ಉಳಿಸಿಕೊಂಡೇ ತರಗತಿಗೆ ಹೋಗಿದ್ದು ಇವೆಲ್ಲವೂ ಅವಿಸ್ಮರಣೀಯ ಎಂದರು,
ಕುವೆಂಪು ಮತ್ತು ಇನ್ನಿತರ ಜನಪ್ರಿಯ ಬರಹಗಾರರೆಲ್ಲ ಪ್ರಕೃತಿ ಮತ್ತು ಆಧ್ಯಾತ್ಮವನ್ನೇ ಕೇಂದ್ರವನ್ನಾಗಿಸಿಕೊಂಡೇ ಸಾಹಿತ್ಯ ರಚಿಸಿದ್ದೇ ಹೊರತು ಕೇವಲ ಕಾವ್ಯವನ್ನಷ್ಟೇ ರಚಿಸಿದ್ದಲ್ಲ, ಆಧ್ಯಾತ್ಮವೆಂದರೆ ನಮ್ಮಲ್ಲಿನ ಪ್ರಬುದ್ಧ ನಂಬಿಕೆಗಳು ಮತ್ತು ಆಚರಣೆಗಳು. ನಮ್ಮೊಳಗಿನ ಎಲ್ಲದಕ್ಕೂ ಬೆಂಬಲವಾಗಿ ನಿಲ್ಲುವುದೇ ಈ ಪ್ರಕೃತಿ.
ಕೋಲ, ಭೂತರಾಧನೆಯಂತಹ ಪ್ರಕೃತಿಯೊಂದಿಗಿನ ಆಚರಣೆಗಳೂ ಇದಕ್ಕೆ ಸ್ಫೂರ್ತಿ. ನಮ್ಮಲ್ಲಿನ ಸಾಹಿತ್ಯ ಮತ್ತು ಆಚರಣೆಗಳ ಭಾಗವಾದ ರಂಗಭೂಮಿಯನ್ನು ತೀರಾ ಪ್ರತ್ಯೇಕವಾಗಿ ನೋಡಲು ಅಸಾಧ್ಯ. ಎರಡೂ ಅಭಿವ್ಯಕ್ತಿಗಳು ಸೂಕ್ಷ್ಮ ಮತ್ತು ಪ್ರಭಾವಿ ಮಾಧ್ಯಮವಾಗಿವೆ ಎಂದರು.
ಒಳ್ಳೆಯ ಸಾಹಿತ್ಯ ಎಂದರೆ ಓದುವಾಗ ನನಗೂ ಗೊತ್ತಿತ್ತಲ್ಲಾ ಅಂತ ಅನಿಸುವುದು. ಬಾಲ್ಯದಲ್ಲಿ ಸಾಹಿತ್ಯದ ಕುತೂಹಲಿಯಾದ ನಾನು ರಂಗಭೂಮಿ ಯೆಡೆಗೆ ವಾಲಿದ್ದೇ ಒಂದು ವಿಸ್ಮಯ. ಒಂದು ಊರಿನ ಅರಳಿಕಟ್ಟೆಯ ಚರ್ಚೆ ಅಥವಾ ಜಗಲಿ ಮೇಲಿನ ಹಿರಿಯರ ಮಾತುಕತೆ ಆದರ ಗರ್ಭದಲ್ಲಿ ಅಡಗಿರುವ ಜನರ ಊರಿನ ಬದುಕೆಲ್ಲವೂ ರಂಗದ ಮೇಲೆ ದೃಶ್ಯ ಆಗುತ್ತದೆ. ಸಾಹಿತ್ಯವೇ ಒಂದು ಸ್ಥಲನ. ಹೇಳಲೇಬೇಕಾದ ವಿಚಾರಗಳನ್ನ ಕಲ್ಪನೆಯೊಂದಿಗೆ ಅಭಿವ್ಯಕ್ತಿಸುವಾಗ ಸಿಗುವ ಆನಂದವೇ ಹೊಸ ನಿರೂಪಣೆಯ ಸೃಷ್ಟಿಗೆ ಕಾರಣವಾಗುತ್ತದೆ.
ನಮ್ಮಲ್ಲಿನ ಆರಾಧನಾ ರಂಗಭೂಮಿ ಇದೆ. ಅದು ಒಂದು ವಿಭಿನ್ನ ಮತ್ತು ಪ್ರಮುಖವಾದ ರಂಗಭೂಮಿ. ಏಕೆಂದರೆ ಬದುಕನ್ನು ಹೊರತುಪಡಿಸಿ ರಂಗಭೂಮಿಯನ್ನು ನೋಡಲಾಗುವುದಿಲ್ಲ, ನಾವು ಮತ್ತೊಬ್ಬರೊಂದಿಗೆ ವಿಷಯ-ವಿಚಾರಗಳನ್ನು ಹಂಚಿಕೊಳ್ಳುವಾಗ ಮಾತಿನ ಶೈಲಿ, ಮೌನ, ಭಾವನೆಗಳ ವಿನಿಮಯ ಅಥವಾ ನಾವು ಮಾಡುವ ಸಂವಹನವೆಲ್ಲವೂ ರಂಗಭೂಮಿಯೇ. ಜಾತ್ರೆಯಲ್ಲಿ ದೇವಸ್ಥಾನ ಪ್ರವೇಶಿಸುವಾಗ-ಮೊದಲಿಗೆ ಸಿಗುವ ಖಾಲಿ ಮಂಡಲ, ತೊಟ್ಟಿಲು, ಅಲ್ಲಿನ ಹೋಟೆಲ್, ಸಂತೆ, ಅಂಗಳ, ಕೊನೆಗೆ ದೇವಳವನ್ನು ಪ್ರವೇಶಿಸುವಾಗ ಕಾಣುವ ದೇವರು, ಆದರ ಮೇಲಿನ ಭಕ್ತಿ, ಭಾವ, ಕಥೆ, ಹಂಬಲ, ಆರಾಧನಾ ಮೂರ್ತಿಯ ವೈಭವ.... ಒಟ್ಟಾರೆ ಇಡೀ ಪ್ರಪಂಚವನ್ನು ಕಂಡ ಅನುಭವವಾಗೋದಂತೂ ಸತ್ಯ. ಇವುಗಳೇ ಆರಾಧನಾ ರಂಗಭೂಮಿಯ ವ್ಯಾಖ್ಯಾನ. ಭಕ್ತಿ, ನಂಬಿಕೆ, ಸೌಂದರ್ಯ, ಸಂಗೀತ, ಮನೋವಿಕಾಸ, ಉಲ್ಲಾಸ ಹೀಗೆ ಯಾವುದೋ ಒಂದು ಕಾರಣಕ್ಕೆ ಬಂದವನಿಗೆ ಇವೆಲ್ಲದರ ಅನುಭವವಾಗುತ್ತವೆ. ಅದೇ ಈ ನಾಡಿನ ಸಾಂಸ್ಕೃತಿಕ ಜಗತ್ತಿಗಿರುವ ಶಕ್ತಿ. ನಮ್ಮ ಬದುಕು ಕೇವಲ ಬಹಿರಂಗ ಆಗಿರುವ ಸಮಯದಲ್ಲಿ ಭಾವನೆಗೆ ಬೆಲೆ ಕೊಟ್ಟು ಬದುಕುವ ಬದುಕೇ ರಂಗಭೂಮಿ ಎಂದು ಹೇಳಿದರು.

ಜೀವನ ಕಲಿಕೆ ಶಿಕ್ಷಣದ ಧ್ಯೇಯವಾಗಲಿ
ಕೇವಲ ಬೌದ್ಧಿಕವಾಗಿ ಅಕ್ಷರಗಳನ್ನಷ್ಟೇ ತಲೆಗೆ ತುಂಬುವ ವಿದ್ಯಾಭ್ಯಾಸ ಮುಂದೊಂದು ದಿನ ದೊಡ್ಡತಲೆಯ ಮಕ್ಕಳ ಹುಟ್ಟಿಗೆ ಕಾರಣವಾಗಬಹುದಲ್ಲವೇ? ಯೋಚಿಸಿ. ಭವಿಷ್ಯದ ಪ್ರಜೆಗಳಾಗುವ ಇಂದಿನ ವಿದ್ಯಾರ್ಥಿಗಳ ಗತಿ? ಅಂದರೆ ಬದುಕಿನ ದರ್ಶನವಿಲ್ಲದ ಅಕ್ಷರವೇ ಎಲ್ಲಾ ಅಲ್ಲ, ಉತ್ತಮ ಜೀವನವನ್ನು ಕಲಿಸುವುದೇ ಶಿಕ್ಷಣದ ಧ್ಯೇಯವಾಗಬೇಕು. ಈಗೀಗ ತಾಂತ್ರಿಕ ಯುಗ ಶೀಘ್ರವಾಗಿ, ತುರ್ತೆಂಬಂತೆ ಬೆಳೆಯುತ್ತಿದೆ. ಆದರ ಮಧ್ಯೆ ಸಂಬಂಧಗಳ ಸೂಕ್ಷ್ಮಗಳು ಮರೆಯಾಗುತ್ತಿವೆ. ಮಾನಸಿಕ ರೋಗ ಅನ್ನೋದು ಜಗತ್ತಿನಾದ್ಯತ್ಯಂತ ವೇಗವಾಗಿ ವ್ಯಾಪಿಸುತ್ತಿದೆ ಎಂದರು.

ಉದ್ಘಾಟನೆ
ಮೂಲ್ಕಿ ತಾಲೂಕು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಾಸಕ ಉಮಾನಾಥ ಕೋಟ್ಯಾನ್ ಐದು ಕೃತಿಗಳನ್ನು ಬಿಡುಗಡೆಗೊಳಿಸುವ ಮೂಲಕ ಉದ್ಘಾಟಿಸಿದರು. ಕಮಲಾದೇವಿ ಪ್ರಸಾದ ಆಸ್ರಣ್ಣ ಅವರ ಯಕ್ಷಾಕೃತಿ, ಉದಯಕುಮಾರ ಹಬ್ಬು ಅವರ ನೆರೂದಾನ ಇಪ್ಪತ್ತು ಪ್ರೇಮಗೀತೆಗಳು, ಛತ್ರಪತಿ ಶಿವಾಜಿ ಮಹಾರಾಜ್ ಜೀವನ ಚರಿತ್ರೆ, ಎಕ್ಕಾರು ಗ್ರಂಥಾಲಯದ ಸಂಚಿಕೆ ಪುಸ್ತಕಮನೆ, ಸೋಂದಾ ಭಾಸ್ಕರ ಭಟ್ ಅವರ ಅಂಕಣ ಬರಹಗಳ ಸಂಗ್ರಹ ಶ್ಲೋಕಸಾಗರ ಕೃತಿಗಳನ್ನು ಉಮಾನಾಥ ಕೋಟ್ಯಾನ್ ಬಿಡುಗಡೆಗೊಳಿಸಿ ಸಮ್ಮೇಳನವನ್ನು ಉದ್ಘಾಟಿಸಿ, ಈ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಬದಲಾಯಿಸಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ. ಶಾಲೆಗಳಲ್ಲಿ ಕಥೆಯ ಮೂಲಕ ಬೋಧಿಸುವ ಸಂಪ್ರದಾಯ ಇಲ್ಲವಾಗಿದೆ. ಇಂಗ್ಲಿಷ್ ಮೋಹ ಕನ್ನಡವನ್ನು ಮಾತನಾಡಲು ಹಿಂಜರಿಯುವ ಸ್ಥಿತಿ ಬಂದಿದೆ. ಇದಕ್ಕೆ ಸರಕಾರ ಹಾಗೂ ಅಧಿಕಾರಿಗಳು ಕಾರಣ ಎಂದರು.
ಚಿತ್ರಕೂಟವನ್ನು ಕರ್ನಾಟಕ ಪರಿಸರ ಪ್ರವಾಸೋದ್ಯಮ ಮಂಡಳಿಯ ಅಧ್ಯಕ್ಷೆ ಶಾಲೆಟ್ ಪಿಂಟೋ ವಿಶಿಷ್ಟವಾಗಿ ಉದ್ಘಾಟಿಸಿದರು.
ಸಮಾನಾಂತರ ವೇದಿಕೆಯನ್ನು ಕಸಾಪ ಮಾಜಿ ಅಧ್ಯಕ್ಷ ಡಾ. ಹರಿಕೃಷ್ಣ ಪುನರೂರು ಉದ್ಘಾಟಿಸಿದರು. ಕಟೀಲು ದೇಗುಲದ ಆನುವಂಶಿಕ ಮೊಕ್ತೇಸರ ವಾಸುದೇವ ಆಸ್ರಣ್ಣ ಕನ್ನಡ ಭುವನೇಶ್ವರಿಯ ಮೆರವಣಿಗೆಗೆ ಚಾಲನೆ ನೀಡಿದರು.
ಕಥೆಗಾರ ಹಂಝುಮಲಾರ್, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಶ್ರೀಧರ ಡಿ.ಎಸ್., ಸಮ್ಮೇಳನ ಸಮಿತಿಯ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಪಟ್ಟಣ ಪಂಚಾಯತ್ ಉಪಾಧ್ಯಕ್ಷೆ ಪದ್ಮಲತಾ, ಕಸಾಪ ಜಿಲ್ಲಾಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್, ಮಾಜಿ ಅಧ್ಯಕ್ಷ ಪ್ರದೀಪಕುಮಾರ ಕಲ್ಕೂರ, ಕಸಾಪ ಮೂಲ್ಕಿ ಘಟಕಾಧ್ಯಕ್ಷ ಮಿಥುನ ಕೊಡೆತ್ತೂರು, ಕಾರ್ಯದರ್ಶಿಗಳಾದ ಹೆರಿಕ್ ಪಾಯಸ್, ಪ್ರಕಾಶ ಆಚಾರ್, ಸಮ್ಮೇಳನ ಸಮಿತಿಯ ಪ್ರಧಾನ ಕಾರ್ಯದರ್ಶಿ ದೊಡ್ಡಯ್ಯ ಮೂಲ್ಯ ಇದ್ದರು. ಸಮ್ಮೇಳನ ಸಮಿತಿಯ ಅಧ್ಯಕ್ಷ ಶ್ರೀಹರಿನಾರಾಯಣದಾಸ ಆಸ್ರಣ್ಣ ಸ್ವಾಗತಿಸಿದರು. ಕಿರಣ್ ಅತ್ತೂರು, ರಾಜಶೇಖರ್ ನಿರೂಪಿಸಿದರು.



ದಮನಿತರ ಧ್ವನಿಗೂ ಬೆಲೆ ಇರಲಿ- ಬಾಬು ಕೊರಗ

ಸಾಹಿತ್ಯ ಸಮ್ಮೇಳನಗಳಲ್ಲಿ ದಮನಿತರ ಧ್ವನಿ ಕೇಳುವಂತಾಗಬೇಕು ಎಂದು ಸಾಹಿತಿ, ಸಂಶೋಧಕ ಬಾಬು ಕೊರಗ ಹೇಳಿದರು. ಅವರು ಕಟೀಲಿನ ಮೂಲ್ಕಿ ತಾಲೂಕು ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ನುಡಿಗಳನ್ನಾಡಿದರು. ಬಂಡಾಯ ಸಾಹಿತ್ಯ ಪ್ರಖರತೆಯನ್ನು ಕಳೆದುಕೊಂಡಿದೆ. ಶೋಷಿತರ ಧ್ವನಿಗಳನ್ನು ಕೇಳುವಂತಾಗಬೇಕು ಎಂದು ಅವರು ಹೇಳಿದರು. ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷ ಕೃಷ್ಣಮೂರ್ತಿ ಕವತ್ತಾರು ದಂಪತಿಗಳನ್ನು ಸಂಮಾನಿಸಲಾಯಿತು. ಕವಿ ವಿಲ್ಸನ್ ಕಟೀಲು, ಸಮ್ಮೇಳನಾಂಗ ನಡೆಸಿದ ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಅನಂತಪದ್ಮನಾಭ ಆಸ್ರಣ್ಣ ಶ್ರೀಹರಿನಾರಾಯಣದಾಸ ಆಸ್ರಣ್ಣ ದಯಾನಂದ ಕಟೀಲ್, ಡಾ.ಎಂ.ಪಿ.ಶ್ರೀನಾಥ್, ಮಿಥುನ ಕೊಡೆತ್ತೂರು, ಹರಿಕ್ ಪಾಯಸ್, ಪ್ರಕಾಶ್ ಆಚಾರ್, ಮಂಗಳೂರು ಕಸಾಪ ಮಂಜುನಾಥ ರೇವಣ್‌ಕರ್, ಮೂಡುಬಿದ್ರೆ ಕಸಾಪ ವೇಣುಗೋಪಾಲ್ ಶೆಟ್ಟಿ ಉಳ್ಳಾಲ ಕಸಾಪದ ಧನಂಜಯ ಕುಂಬ್ಳೆ, ಮತ್ತಿತರರಿದ್ದರು.

ಕಟೀಲು ನಂದಿನಿಯ ಪರಿಕಲ್ಪನೆಯ ಚಿತ್ರಕೂಟ

ಕಟೀಲು ಕ್ಷೇತ್ರ, ನಂದಿನೀ ನದಿ ಹೀಗೆ ಪರಿಕಲ್ಪನೆಯ ಚಿತ್ರಕೂಟ ಸಮ್ಮೇಳನದ ವಿಶೇಷ ಆಕರ್ಷಣೆಯಾಗಿತ್ತು. ನದಿಯಲ್ಲಿ, ನದಿಯ ಬಂಡೆಕಲ್ಲಿನಲ್ಲಿ, ನದಿ ದಡದಲ್ಲಿ, ಕುದ್ರುವಿನಲ್ಲಿ, ಮರದಡಿಯಲ್ಲಿ ಹೀಗೆ ಅಲ್ಲಲ್ಲಿ ಕೂತ 40ಕ್ಕೂ ಹೆಚ್ಚು ಹಿಂಕಿರಿಯ ಕಲಾವಿದರು ಕಟೀಲು ಕ್ಷೇತ್ರವನ್ನು ತಮ್ಮ ಕಲೆಯಿಂದ ಸೆರೆಹಿಡಿದರು. ಬಳಿಕ ಅವನ್ನು ದೇವರ ಸನ್ನಿಧಿಗೆ ಒಪ್ಪಿಸಿ ಧನ್ಯರಾದರು. ಕಲಾವಿದರನ್ನು ದೇಗುಲದ ಅರ್ಚಕ ಶ್ರೀಹರಿನಾರಾಯಣದಾಸ ಆಸ್ರಣ್ಣ ದೇವರ ಶೇಷವಸ್ತ್ರ ನೀಡಿ ಗೌರವಿಸಿದರು. ಸಮ್ಮೇಳನಾಧ್ಯಕ್ಷ ಕೃಷ್ಣಮೂರ್ತಿ ಕವತ್ತಾರು, ಕಸಾಪ ಜಿಲ್ಲಾಧ್ಯಕ್ಷ ಎಂ.ಪಿ. ಶ್ರೀನಾಥ್, ಕ್ಯಾಪ್ಸ್ ಫೌಂಡೇಶನ್‌ನ ಚಂದ್ರಶೇಖರ ಶೆಟ್ಟಿ, ಉಳ್ಳಾಲ ಕಸಾಪದ ಧನಂಜಯ ಕುಂಬ್ಳೆ, ಮೂಲ್ಕಿ ಕಸಾಪದ ಮಿಥುನ ಕೊಡೆತ್ತೂರು, ರವಿ ಪಾವಂಜೆ ಇದ್ದರು. ಕುದ್ರುವನ್ನು ಎತ್ತಿನ ಗಾಡಿ, ಆಲಂಕಾರಿಕ ವಸ್ತು, ಕನ್ನಡ ಧ್ವಜಗಳಿಂದ ಅಲಂಕರಿಸಲಾಗಿತ್ತು. ಪುಸ್ತಕ, ಖಾದಿ ಬಟ್ಟೆ, ಚನ್ನಪಟ್ಟಣ ಆಟಿಕೆ....ಹೀಗೆ ವಿವಿಧ ವಸ್ತುಗಳ ಮಾರಾಟ ಇತ್ತು.

ಮೇಳೈಸಿದ ಪಟ್ಟಾಂಗ ಕಟ್ಟೆ

ಕಟೀಲಿನ ಕುದ್ರುವಿನಲ್ಲಿ ನಡೆದ ಮೂಲ್ಕಿ ಸಾಹಿತ್ಯ ಸಮ್ಮೇಳನ ಒಟ್ಟು ಮೂರು ವೇದಿಕೆಗಳಲ್ಲಿ ನಡೆಯಿತು. ಮರದ ಬುಡದಲ್ಲಿ ಹಾಕಿದ ಪಾಡ್ದನ ಕೋಗಿಲೆ ನೆನಪಿನ ಪುಟ್ಟ ವೇದಿಕೆ- ಪಟ್ಟಾಂಗಕಟ್ಟೆಯಲ್ಲಿ ಸಾಹಿತ್ಯಾಸಕ್ತರಿಗೆ ಎಂಥಾ ಪುಸ್ತಕ ಓದಬೇಕು?, ಓದಿ ಏನಾಗಬೇಕಿದೆ? ಯಾಕೆ ಬರೆಯಬೇಕು? ಬರೆದು ಮಾಡುವುದೇನು ಹೀಗೆ ಸಾಹಿತ್ಯಾಸಕ್ತರಿಗೆ ಮಾತನಾಡಲು ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಹತ್ತು ಹನ್ನೆರಡು ಮಂದಿಯಷ್ಟೇ ಭಾಗವಹಿಸುವಂತಹ ಪರಿಕಲ್ಪನೆಯ ಪುಟ್ಟ ವೇದಿಕೆಯಲ್ಲಿ ದೊಡ್ಡಸಂಖ್ಯೆಯಲ್ಲಿ ಜನ ಸೇರಿ, ಚರ್ಚೆ ಸಂವಾದದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಬಾಳೆಪುಣಿ ಗ್ರಾಮದಲ್ಲಿ ಸ್ವಚ್ಛ ಮನೆ ಸ್ವಯಂ ಘೋಷಣೆ,ಮಾಹಿತಿ ಶಿಕ್ಷಣ



ಕೊಣಾಜೆ: ಬಾಳೆಪುಣಿ ಗ್ರಾಮ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಜನ ಶಿಕ್ಷಣ ಟ್ರಸ್ಟ್ ಹಾಗೂ ಇತರ ಇಲಾಖೆಗಳ ಸಹಭಾಗಿತ್ವದಲ್ಲಿ ಕಸ ಮುಕ್ತ ಗ್ರಾಮ -ಕ್ಯಾನ್ಸರ್ ಮುಕ್ತ ಗ್ರಾಮ ಸ್ವಚ್ಛ ಮನೆ ಸ್ವಯಂ ಘೋಷಣೆ ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮ ಗುರುವಾರ ಬಾಳೆಪುಣಿಯಲ್ಲಿ ನಡೆಯಿತು.
ಈ ಸಂದರ್ಭದಲ್ಲಿ ಗ್ರಾ.ಪಂ. ಕಾರ್ಯದರ್ಶಿ ಆಯಿಷಾ ಭಾನು, ಜಿಲ್ಲಾ ಸ್ವಚ್ಛತ ರಾಯಭಾರಿ ಶೀನ ಶೆಟ್ಟಿ ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿ ಜ್ಯೋತಿ, ಆರೋಗ್ಯ ಕಾರ್ಯಕ್ರಮ ಸಂಯೋಜಕಿ ತೇಜಸ್ವಿನಿ, ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರು ಕೃಷ್ಣ ಮೂಲ್ಯ, ಪಂಚಾಯತ್ ಸಿಬ್ಬಂದಿ ಸದಾನಂದ, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಮುದಾಯ ಆರೋಗ್ಯ ಅಭಿಯಾನ ಕಸ ಮುಕ್ತ ಕ್ಯಾನ್ಸರ್ ಮುಕ್ತ ಅಭಿಯಾನಕ್ಕೆ ಮತ್ತು ಗ್ರಾಮವನ್ನು ಸಂಪೂರ್ಣ ಕಸಮುಕ್ತವನ್ನಾಗಿಸಲು ಕಸವನ್ನು ಕೊಡದ ಮನೆಗಳಿಗೆ ನೋಟಿಸ್ ನೀಡುವುದು, ಮನೆಯ ಕಸವನ್ನು ತಂದು ಸಾರ್ವಜನಿಕ ಸ್ಥಳಗಳಿಗೆ ಹಾಕಿದರೆ 5000 ರೂ. ದಂಡ ಹಾಕುವುದು ತೀರ್ಮಾನಿಸಲಾಯಿತು.
ಹೂ ಹಾಕುವ ಕಲ್ಲು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 450 ಮಕ್ಕಳ ಮನೆಗಳಿಂದ ಪ್ರಪ್ರಥಮ ಬಾರಿಗೆ ಸ್ವಚ್ಛ ಸ್ವಯಂ ಘೋಷಣಾ ಪತ್ರವನ್ನು ಪಡೆದು ಮಾದರಿಯಾದ ಬಾಳೆಪುಣಿ ಹೂ ಹಾಕುವ ಕಲ್ಲು ಪಿಎಂ ಶ್ರೀ ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ವಿಜಯಲಕ್ಷ್ಮಿ ಹಾಗೂ ನಿರಂತರವಾಗಿ ಸ್ವಚ್ಛತಾ ಅರಿವು ಸ್ಟಾಲ್ ಮೂಲಕ ಜಾಗೃತಿ ಮೂಡಿಸುತ್ತಿರುವ ಎಸ್‌ವಿವಿ ಶಿಕ್ಷಕಿಯಾದ ವಿನಯ ಪ್ರಭ ಅವರನ್ನು ಗುರುತಿಸಿ ಅಭಿನಂದಿಸಲಾಯಿತು.

ಸುಬ್ರಹ್ಮಣ್ಯ ಸರ್ಕಾರಿ ಶಾಲೆ ಮುಖ್ಯಗುರು ಮಾಧವ ಮೂಕಮಲೆಗೆ ಅಭಿನಂದನೆ



ಸುಬ್ರಹ್ಮಣ್ಯ: ಸರಳ ಸಜ್ಜನಿಕೆಯು ಗುರುತ್ವದ ಶ್ರೇಷ್ಠ ಸಂಕೇತ.ನಗು ಮೊಗದಿಂದ ಮಾರ್ಗದರ್ಶನ ನೀಡುವ ಗುರುಗಳ ಗುಣವು ಸರ್ವರ ಪ್ರೀತಿಯನ್ನು ಸಂಪಾದಿಸುತ್ತದೆ. ಜ್ಞಾನ ನೀಡುವುದರೊಂದಿಗೆ ಮಕ್ಕಳಿಗೆ ತನ್ನೊಳಗಿನ ಕಲಾ ಪ್ರತಿಭೆಗಳನ್ನು ಹೇಳಿಕೊಡುವ ಮೂಲಕ ಮಾಧವರು ಸವ್ಯಸಾಚಿ ಗುರುಗಳಾಗಿ ಗೌರವ ಸಂಪಾದಿಸಿದವರು ಎಂದು ಎಸ್. ಎಸ್. ಪಿ.ಯು. ಕಾಲೇಜಿನ ಹಿರಿಯ ಆಯ್ಕೆ ಶ್ರೇಣಿ ಉಪನ್ಯಾಸಕಿ ರೇಖಾರಾಣಿ ಸೋಮಶೇಖರ್ ಹೇಳಿದರು.
ನಿವೃತ್ತರಾಗಲಿರುವ ಸುಬ್ರಹ್ಮಣ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಗುರು ಮಾಧವ ಮೂಕಮಲೆ ಅವರಿಗೆ ಕಾಲೇಜಿನ ಬೆಳ್ಳಿ ಹಬ್ಬ ಸಭಾಂಗಣದಲ್ಲಿ ನಡೆದ ಅಭಿನಂದನಾ ಸಮಾರಂಭ ಹಾಗೂ ಸ್ನೇಹ ಸಮ್ಮಿಲನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 36 ವರ್ಷಗಳಿಂದ ಸರಕಾರಿ ಸೇವೆಯಲ್ಲಿದ್ದು ಸುಮಾರು 10ಕ್ಕೂ ಅಧಿಕ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಎಲ್ಲಾ ಕಡೆಗಳಲ್ಲಿ ಸಹೃದಯಿ ಸಹಕಾರ ದೊರಕಿದೆ ಎಂದು ಮಾಧವ ಮೂಕಮಲೆ ಹೇಳಿದರು.
ಹಿರಿಯ ಉಪನ್ಯಾಸಕಿ ಜಯಶ್ರೀ ವಿ. ದಂಬೆಕೋಡಿ, ಪ್ರೌಢಶಾಲಾ ಮುಖ್ಯ ಗುರು ನಂದಾ ಹರೀಶ್, ಹಿರಿಯ ಶಿಕ್ಷಕ ಎಂ. ಕೃಷ್ಣ ಭಟ್ ಶುಭ ಹಾರೈಸಿದರು. ದೈಹಿಕ ಶಿಕ್ಷಣ ಉಪನ್ಯಾಸಕ ರಾಧಾಕೃಷ್ಣ ಚಿದ್ಗಲ್, ಹಿರಿಯ ಉಪನ್ಯಾಸಕ ಶ್ರೀಧರ್ ಪುತ್ರನ್, ಸರಕಾರಿ ಪ್ರಾಥಮಿಕ ಶಾಲಾ ಹಿರಿಯ ಶಿಕ್ಷಕಿ ವಿನೋದಾ, ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷ ಶೇಷಕುಮಾರ್ ಶೆಟ್ಟಿ ವೇದಿಕೆಯಲ್ಲಿದ್ದರು. ಉಪನ್ಯಾಸಕ ರತ್ನಾಕರ ಸುಬ್ರಹ್ಮಣ್ಯ ಕಾರ್ಯಕ್ರಮ ನಿರ್ವಹಿಸಿದರು. ಮಹೇಶ್ ಕೆ.ಎಚ್. ಸಹಕರಿಸಿದರು.

ಫಿಲೋಮಿನಾ: ಅಗ್ನಿಯಿಲ್ಲದೆ ಅಡುಗೆ ಸ್ಪರ್ಧೆ-ಮಾಸ್ಟರ್ ಮಿಕ್ಸ್ ಶೆಫ್ಸ್



ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ವತಿಯಿಂದ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ 'ಮಾಸ್ಟರ್ ಮಿಕ್ಸ್ ಶೆಫ್ಸ್' ಎಂಬ ಶೀರ್ಷಿಕೆಯಲ್ಲಿ ಅಗ್ನಿಯಿಲ್ಲದೆ ಅಡುಗೆ ಸ್ಪರ್ಧೆ ಆಯೋಜಿಸಲಾಯಿತು.
ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ರೆ.ಡಾ. ಆ್ಯಂಟನಿ ಪ್ರಕಾಶ್ ಮೊಂತೆರೋ, ವಿದ್ಯಾರ್ಥಿಗಳು ಇಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಜೀವನ ಮೌಲ್ಯಗಳು ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ಆರೋಗ್ಯಕರ ಮತ್ತು ಪೌಷ್ಟಿಕ ಆಹಾರ ಸೇವನೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅಗತ್ಯವೆಂದು ಅವರು ತಿಳಿಸಿದರು.

11 ತಂಡಗಳು ಭಾಗಿ
ವಿವಿಧ ಸ್ನಾತಕೋತ್ತರ ವಿಭಾಗಗಳಿಂದ ಒಟ್ಟು 11 ವಿದ್ಯಾರ್ಥಿ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಿ, ತಮ್ಮ ಸೃಜನಶೀಲತೆ, ವಿನ್ಯಾಸ ಕೌಶಲ್ಯ ಹಾಗೂ ಪೌಷ್ಟಿಕ ಅರಿವು ಪ್ರದರ್ಶಿಸಿದರು. ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಸಂಯೋಜಕಿ ಶ್ರೀಮಣಿ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರತಿಭಾ ಸ್ವಾಗತಿಸಿ, ವಂದಿಸಿದರು.

ಕೋಟ ಶ್ರೀ ಅಮೃತೇಶ್ವರೀ ಹಲವು ಮಕ್ಕಳ ತಾಯಿ ದೇವಸ್ಥಾನದ ವತಿಯಿಂದ ನೇರವೇರಿತು ಏಕಃ ಪವಿತ್ರ ನಾಗಮಂಡಲೋತ್ಸವ

ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರಿಂದ ಶ್ರೀ ನಾಗದೇವರ ದರುಶನ

ಕೋಟ: ಇಲ್ಲಿನ ಕೋಟ ಅಮೃತೇಶ್ವರೀ ಹಲವು ಮಕ್ಕಳ ತಾಯಿ ದೇಗುಲದ ವತಿಯಿಂದ ನಡೆದ ಏಕಃ ಪವಿತ್ರ ನಾಗಮಂಡಲೋತ್ಸವಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ನಾಗದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.
ನಾಗಮಂಡಲ ಪ್ರಯುಕ್ತ ಬೆಳಗ್ಗೆ ಗಣಪತಿಯಾಗ, ವಿವಿಧ ಹೋಮಗಳು, ಬ್ರಹ್ಮಕಲಶಾಭಿಷೇಕ, ದಂಪತಿ ಪೂಜೆ, ಆಚಾರ್ಯ ಪೂಜೆ, ನಾಗ ಸಂದರ್ಶನ, ಪಲ್ಲಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿತು. ಕೆ. ವೆಂಕಟರಮಣ ಹೊಳ್ಳ ಕಾರ್ಕಡ ಇವರ ನಾಗದರ್ಶನದೊಂದಿಗೆ ಕೋಟ ಗಾಂಧೀ ಮೈದಾನದಲ್ಲಿ ಪಲ್ಲ ಪೂಜೆ ನೆರವೇರಿತು.
ಅನ್ನಪ್ರಸಾದಕ್ಕೆ ಐದು ಚಪ್ಪರಗಳಲ್ಲಿ ಕುಳಿತು ಪ್ರಸಾದ ಸ್ವೀಕರಿಸಲು ವ್ಯವಸ್ಥೆ ಕಲ್ಪಿಸಲಾಗಿತ್ತು. ಒಂದೊಂದು ಚಪ್ಪರದಲ್ಲಿ 500 ಮಂದಿಯಂತೆ ಸುಮಾರು ಎರಡೂವರೆ ಸಾವಿರ ಮಂದಿ ಒಮ್ಮೆ ಕುಳಿತು ಪ್ರಸಾದ ಸ್ವೀಕರಿಸಿದರು. ಜತೆಗೆ ಸ್ವಯಂಸೇವಾ ಪದ್ಧತಿಯಲ್ಲಿ ಸಾವಿರಾರು ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಕೋಟದ ರಾಜಶೇಖರ ದೇಗುಲದಲ್ಲಿ ಬ್ರಹ್ಮ ಸಮುದಾಯಕ್ಕೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಬೆಳಗ್ಗೆಯಿಂದ ಸಂಜೆ ತನಕ ಮೂವತ್ತು ಸಾವಿರ ಅಧಿಕ ಮಂದಿಗೆ ಅನ್ನದಾನ ವ್ಯವಸ್ಥೆ ಮಾಡಲಾಗಿತ್ತು. ಅದೇ ರೀತಿ ಸಂಜೆಯ ತನಕ ನಿರಂತರವಾಗಿ ಅನ್ನದಾನ ಸೇವೆ ನಡೆದು ಮೂವತ್ತು ಸಾವಿರಕ್ಕೂ ಮಿಕ್ಕಿ ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು.
ಭಕ್ತರಿಗೆ ಯಾವುದೇ ಸಮಸ್ಯೆಗಳಾಗದಂತೆ ನೋಡಿಕೊಳ್ಳಲು ಆಯಾಯ ಅನ್ನಸಂತರ್ಪಣೆ ಚಪ್ಪರಗಳಲ್ಲಿ ಸ್ವಯಂಸೇವಕರನ್ನು ನೇಮಿಸಲಾಗಿತ್ತು. ಸುಮಾರು ಎರಡು ಸಾವಿರಕ್ಕೂ ಅಧಿಕ ಮಂದಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು.
ಅನ್ನಸಂತರ್ಪಣೆಯ ಅನಂತರ ಎಲ್ಲರೂ ಮೂಲ ನಾಗ ಸಾನಿಧ್ಯಕ್ಕೆ ಭೇಟಿ ನೀಡಿ, ಅಮೃತೇಶ್ವರೀ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಸುತ್ತಲಿನ 20 ಗ್ರಾಮಗಳ 50ಕ್ಕೂ ಹೆಚ್ಚು ಸಂಘಟನೆಗಳು ಸ್ವಯಂ ಸೇವಕರಾಗಿ ಸೇವೆ ನೀಡಿದರು. ವೇದಮೂರ್ತಿ ಮಧುಸೂದನ ಬಾಯರಿ ಅವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನೆರವೇರಿತು.
ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಆನಂದ ಸಿ. ಕುಂದರ್, ಸದಸ್ಯರಾದ ಕೆ.ಸುಬ್ರಾಯ ಜೋಗಿ, ಸುಭಾಷ್ ಶೆಟ್ಟಿ, ಗಣೇಶ್ ಕೆ. ನೆಲ್ಲಿಬೆಟ್ಟು, ಜ್ಯೋತಿ ದೇವದಾಸ್ ಕಾಂಚನ್, ಸುಧಾ ಎ. ಪೂಜಾರಿ, ರತನ್ ಐತಾಳ, ಶಿವ ಪೂಜಾರಿ, ಚಂದ್ರಶೇಖರ ಆಚಾರ್, ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ ನಾಡೋಜ ಡಾ.ಜಿ. ಶಂಕರ್, ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ ಉಪಸ್ಥಿತರಿದ್ದರು.



ಸುತ್ತಮುತ್ತ

ಕಟೀಲು ಶಿವಳ್ಳಿ ಸ್ಪಂದನ ವಲಯದ ಅಧ್ಯಕ್ಷರಾಗಿ ಶ್ರೀನಿವಾಸ ಉಡುಪ



ಮಂಗಳೂರು: ಕಟೀಲು ಶಿವಳ್ಳಿ ಸ್ಪಂದನ ವಲಯದ ನೂತನ ಕಾರ್ಯಕಾರಿ ಮಂಡಳಿಯ ಆಯ್ಕೆ ನಡೆದಿದ್ದು, ಅಧ್ಯಕ್ಷರಾಗಿ ಶ್ರೀನಿವಾಸ ಉಡುಪ ಶರಣ ಆಯ್ಕೆ ಆಗಿದ್ದಾರೆ. ಕಾರ್ಯದರ್ಶಿಯಾಗಿ ಹರಿ ಉಡುಪ ಶರಣ, ಕೋಶಾಧಿಕಾರಿಯಾಗಿ ಗುರುರಾಜ ಭಟ್ ಗೋಪಾಲಕೃಷ್ಣ ನಗರ, ಗೌರವಾಧ್ಯಕ್ಷರು ಮತ್ತು ಮಾರ್ಗದರ್ಶಕರಾಗಿ ವೇದಮೂರ್ತಿ ವೆಂಕಟರಾಜ ಉಡುಪ ಅತ್ತೂರುಬೈಲು, ವೇದಮೂರ್ತಿ ಅಂಗಡಿಮಾರು ವಿಶ್ವೇಶ ಭಟ್, ಭುವನಾಭಿರಾಮ ಉಡುಪ ಯುಗಪುರುಷ ಕಿನ್ನಿಗೋಳಿ, ಪ್ರಸನ್ನ ಭಟ್ ನೆಲ್ಲಿತೀರ್ಥ, ಶ್ರೀನಿವಾಸ ಭಟ್ ಮುಚ್ಚೂರು, ವೆಂಕಟೇಶ್ ಭಟ್ ಪಂಜ ಸುರಿಗಿರಿ, ದಿನೇಶ್ ರಾವ್ ಎಕ್ಕಾರು ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಪಾರ್ಥಸಾರಥಿ ಪಂಜ, ನಾಗ ಭಟ್ ಎಳತ್ತೂರು, ಹಯವದನ ಭಟ್ ಕೆಮ್ರಾಲ್, ರಂಗನಾಥ ರಾವ್ ಕೊನಿಕಾ, ಪಕ್ಷಿಕೆರೆ ಕಾರ್ತಿಕ್ ಬೆಳ್ಳಿರಾಯ, ಕಿನ್ನಿಗೋಳಿ ಪ್ರಸಾದಿನಿ ಭಟ್ ಕೆಮ್ರಾಲ್, ಸಂಘಟನಾ ಕಾರ್ಯದರ್ಶಿಯಾಗಿ ಸುರೇಶ್ ರಾವ್ ಭಟ್ ಕೋಡು, ತಾಲೂಕು ಪ್ರತಿನಿಧಿ ಮತ್ತು ಸಮನ್ವಯ ಸಂಯೋಜಕಕಾರಿ ಡಾ. ಗುರುರಾಜ ಉಡುಪ ಕಿಲಂಜೂರು. ಪದಾಧಿಕಾರಿಗಳಾಗಿ ಭರತ್ ಬಿ. ರಾವ್ ಕೆಮ್ರಾಲ್, ಗಣೇಶ್ ರಾವ್ ಎಸ್. ಕೋಡಿ, ಟಿ. ಆರ್. ಪ್ರಕಾಶ್ ಭಟ್ ತಾಳಿಪಾಡಿ, ನಾರಾಯಣ ಭಟ್ ಕೋಡು, ರವೀಂದ್ರ ರಾವ್ ಪುಚ್ಚಾಡಿ, ವೇಣುಗೋಪಾಲ್ ಮುಚಿಂತಾಯ ಪದ್ಮನೂರು, ವಿನಯ ಉಡುಪ ಗೋಳಿಜೋರ, ಟಿ. ರಾಮ್‌ಕುಮಾರ್ ರಾವ್ ಸುರಿಗಿರಿ, ವೆಂಕಟೇಶ್ ಉಡುಪ ಕೋಡು, ಗುರುಪ್ರಸಾದ್ ಪೆರ್ಮುದೆ, ಶ್ರೀನಿವಾಸ ಉಡುಪ ಮಾಡ, ವಿಘ್ನೇಶ್ ಉಡುಪ ಕೆರೆಮನೆ ಅವರು ಆಯ್ಕೆಯಾಗಿದ್ದಾರೆ.

ಕಿಲ್ಪಾಡಿ ವಿದ್ಯಾಪೀಠದಲ್ಲಿ ಮಾಹಿತಿ ಕಾರ್ಯಕ್ರಮ

ಮುಲ್ಕಿ: ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠದ ಶಾಲಾ ಸಭಾಭವನದಲ್ಲಿ ಹಿಂಸೆ, ಅಪರಾಧ , ಅಪಘಾತಗಳ ಸಂದರ್ಭ ರಕ್ಷಣೆ ಮತ್ತು ಭದ್ರತೆ. ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ವಕೀಲ ಡೇನಿಯಲ್ ದೇವರಾಜ್, ಸಮಾಜದಲ್ಲಿ ನಡೆಯುವ ಅಪರಾಧ ಮತ್ತು ಅದಕ್ಕೆ ಕಾನೂನಿನ ಶಿಕ್ಷೆ ಮತ್ತು ಹಿಂಸೆಗೆ ಅಥವಾ ತೊಂದರೆಗೆ ಒಳಗಾದ ವ್ಯಕ್ತಿಗೆ ಕಾನೂನಿನಲ್ಲಿ ಇರುವ ರಕ್ಷಣೆಯ ಬಗ್ಗೆ ಮಾಹಿತಿ ನೀಡಿದರು. ಸಹ ಶಿಕ್ಷಕಿ ಜಯಲಕ್ಷ್ಮಿ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು. ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಕೆ. ನರಸಿಂಹ ಪೈ ಕಾರ್ಯದರ್ಶಿ ಎಚ್ ರಾಮದಾಸ್ ಕಾಮತ್, ಶಾಲಾ ಮುಖ್ಯೋಪಾಧ್ಯಾಯನಿ ಕಾಮಾಕ್ಷಿ ಆರ್. ನಾಯಕ್ ಇದ್ದರು. ವಿದ್ಯಾರ್ಥಿನಿ ಪವಿತ್ರಾ ಸ್ವಾಗತಿಸಿ, ವಂಶಿ ವಂದಿಸಿ, ತನುಶ್ರೀ ನಿರೂಪಿಸಿದರು.

ನಾಳೆ ಬ್ರಹ್ಮರಕೊಟ್ಲು ಟೋಲ್ ಗೇಟ್ ತೆರವು ಹೋರಾಟ



ಬಂಟ್ವಾಳ: ಬ್ರಹ್ಮರಕೊಟ್ಲು ಟೋಲ್ ಗೇಟ್ ತೆರವು ಹೋರಾಟ ಸಮಿತಿ' ನೇತೃತ್ವ ಸಮಾನ ಮನಸ್ಕ ಸಂಘಟನೆಗಳ ಸಹಭಾಗಿತ್ವದಲ್ಲಿ ಬ್ರಹ್ಮರಕೊಟ್ಲು ಟೋಲ್ ಗೇಟ್ ತೆರವಿಗೆ ಆಗ್ರಹಿಸಿ ಮಾ.3ರಂದು ಟೋಲ್ ಗೇಟ್ ಬಳಿ ಸಾಮೂಹಿಕ ಧರಣಿ ನಡೆಯಲಿದೆ ಎಂದು ಮಾಜಿ ಸಚಿವ ಹಾಗೂ 'ಬ್ರಹ್ಮರಕೊಟ್ಲು ಟೋಲ್ ಗೇಟ್ ತೆರವು ಹೋರಾಟ ಸಮಿತಿ' ಗೌರವಾಧ್ಯಕ್ಷ ಬಿ. ರಮಾನಾಥ ರೈ ಅವರು ತಿಳಿಸಿದ್ದಾರೆ. ಶನಿವಾರ ಬಂಟ್ವಾಳ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು,ಅಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 12.30 ರವರೆಗೆ ಧರಣಿ ನಡೆಯಲಿದೆ. ಈ ಹೋರಾಟಕ್ಕೆ ವಾಹನ ಚಾಲಕ,ಮಾಲಕರ ಸಹಿತ ಜಿಲ್ಲೆಯ ವಿವಿಧ ಸಂಘಟನೆಗಳು ಕೂಡ ಈಗಾಗಲೇ ಬೆಂಬಲವನ್ನು ಸೂಚಿಸಿದ್ದು,ಧರಣಿಯಲ್ಲೂ ಪಾಲ್ಗೊಳ್ಳಲಿದ್ದಾರೆ ಎಂದರು. ಎರಡು ಟೋಲ್ ಗೇಟ್ ಗಳ ನಡುವೆ ಇರಬೇಕಾದ ಕನಿಷ್ಠ ಅಂತರ, ಸರ್ವೀಸ್ ರಸ್ತೆಗಳು, ತಡೆಯಿಲ್ಲದ ಸಂಚಾರದ ಅವಕಾಶ ಸಹಿತ ಬಹುತೇಕ ನಿಯಮ ಗಳನ್ನು ಉಲ್ಲಂಘಿಸಿ ಬ್ರಹ್ಮರಕೊಟ್ಲು ಟೋಲ್ ಗೇಟ್‌ನಲ್ಲಿ ಸುಂಕ ಸಂಗ್ರಹಿಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರೂಪಿಸಿರುವ ನಿಯಮಗಳನ್ನು ಉಲ್ಲಂಘಿಸಿ ಕಾರ್ಯಾಚರಿಸುತ್ತಿರುವ ಬ್ರಹ್ಮರಕೊಟ್ಲು ಟೋಲ್ ಕೇಂದ್ರವನ್ನು ಶಾಶ್ವತವಾಗಿ ತೆರವು ಗೊಳಿಸಬೇಕು,ಇಲ್ಲದಿದ್ದಲ್ಲಿ ಹಂತ, ಹಂತವಾಗಿ ಹೋರಾಟವನ್ನು ನಡೆಸಲಾಗುವುದು ಎಂದು ಎಚ್ಚರಿಸಿದರು. ದೇಶದ ಯಾವ ಮೂಲೆಯಲ್ಲು ಬ್ರಹ್ಮರಕೊಟ್ಲುವಿನಂತಹ ಟೋಲ್ ಕೇಂದ್ರ ಇಲ್ಲ ಎಂದ ಅವರು ಈಗಾಗಲೇ 23 ವರ್ಷಗಳ ದೀರ್ಘ ಅವಧಿಯನ್ನು ಈ ಟೋಲ್ ಕೇಂದ್ರ ದಾಟಿದೆ. ಯಾವುದೇ ಬೈಪಾಸ್ ರಸ್ತೆಗಳು, ಮೇಲ್ಸೇತುವೆ, ಕೆಳ ಸೇತುವೆಗಳು, ಸರ್ವೀಸ್ ರಸ್ತೆಗಳ ಸಹಿತ ಮೂಲ ಸೌಲಭ್ಯಗಳು ಇಲ್ಲದ ಈ ರಸ್ತೆಯಲ್ಲಿ ಟೋಲ್ ಸಂಗ್ರಹ ಮುಂದುವರಿಸುವುದು ಯಾವುದೇ ಕಾರಣಕ್ಕೂ ನ್ಯಾಯಯುತ ಅಲ್ಲ ಎಂದರು. ಈ ನಡುವೆ ವಳಾಲು,ಗಂಜಿಮಠ,ಪಣಕಜೆ ಎಂಬಲ್ಲಿ ಮೂರು ಟೋಲ್ ಕೇಂದ್ರ ನಿರ್ಮಾಣವಾಗಲಿದೆ. ಈ ಮೂರು ಟೋಲ್ ಕೇಂದ್ರ ಬ್ರಹ್ಮರಕೊಟ್ಲು ಟೋಲ್ ಗೇಟ್‌ನಿಂದ ಸರಾಸರಿ 30 ಕಿ.ಮೀ. ದೂರದಲ್ಲಿದೆ. ಇಲ್ಲೂ ನಿಯಮ ಉಲ್ಲಂಘಿಸಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಹೋರಾಟಗಾರ ಮುನೀರ್ ಕಾಟಿಪಳ್ಳ ಹೋರಾಟದ ಬಗ್ಗೆ ಮಾಹಿತಿ ನೀಡಿದರು. ಸಮಿತಿ ಸಂಚಾಲಕರಾಷ ಬಿ.ಶೇಖರ್, ಮೋಹನ್ ಶೆಟ್ಟಿ,ಪ್ರಮುಖರಾದ ಪಿಯೂಸ್ ಎಲ್ ರೊಡ್ರಿಗಸ್, ಬೇಬಿಕುಂದರ್ ಮೊದಲಾದವರು ಉಪಸ್ಥಿತರಿದ್ದರು.

ಬಂಟ್ವಾಳದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ದಿವ್ಯಾಂಗ ಸಮ್ಮೇಳನದಲ್ಲಿ ಡಾ. ಕೃಷ್ಣಪ್ರಸಾದ ಕೂಡ್ಲು ಘೋಷಣೆ

ಪ್ರಸಾದ್ ನೇತ್ರಾಲಯದಲ್ಲಿ ಉಚಿತ ಚಿಕಿತ್ಸೆ, ಫಿಸಿಯೋಥೆರಪಿ

ಬಂಟ್ವಾಳ: ಬಿ.ಸಿ.ರೋಡಿನ ರೋಟರಿ ಹಾಲ್ ನಲ್ಲಿ ಸಕ್ಷಮ ದಕ್ಷಿಣ ಕನ್ನಡ ಜಿಲ್ಲಾ ಘಟಕ ಆಶ್ರಯದಲ್ಲಿ ಭಾನುವಾರ ಸಕ್ಷಮ ದಕ್ಷಿಣ ಕನ್ನಡ ಜಿಲ್ಲಾ ಘಟಕ ವತಿಯಿಂದ ದಕ್ಷಿಣ ಕನ್ನಡ ಜಿಲ್ಲಾ ದಿವ್ಯಾಂಗ ಸಮ್ಮೇಳನ ನಡೆಯಿತು.

ಮಂಗಳೂರು ಪ್ರಸಾದ್ ನೇತ್ರಾಲಯದ ಎಂ.ಡಿ ಡಾ. ಕೃಷ್ಣಪ್ರಸಾದ ಕೂಡ್ಲು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಂಶವಾಹಿ (ಜೀನ್)ಗಳ ಕುರಿತು ಸಂಶೋಧನೆಗಳು ಹಾಗೂ ಚಿಕಿತ್ಸಾ ವಿಧಾನಗಳು ಭಾರತದಲ್ಲೂ ಪ್ರಗತಿಯಲ್ಲಿದ್ದು ಯಶಸ್ವಿಯಾಗಿ ಸಾಮಾನ್ಯ ವರ್ಗದ ಕೈಗೆಟಕುವಂಥ ಯೋಜನೆಗಳು ಜಾರಿಯಾದರೆ, ದಿವ್ಯಾಂಗರಿಗೆ ಅನುಕೂಲವಾಗುತ್ತದೆ. ದಿವ್ಯಾಂಗರು ವಿಶೇಷವಾದ ಶಕ್ತಿ ಪಡೆದವರಾಗಿದ್ದು ಸೂಕ್ತ ನೆರವು ಅಗತ್ಯವಾಗಿದೆ. ಕಣ್ಣುಸಹಿತ ಬೇರೆ ಬೇರೆ ನ್ಯೂನತೆಗಳನ್ನು ಸರಿಪಡಿಸಲು ಸಾಧ್ಯ ಎಂದ ಅವರು, ಸಕ್ಷಮದ ಶಿಫಾರಸಿನಲ್ಲಿ ಬಂದ ದಿವ್ಯಾಂಗರಿಗೆ ತಮ್ಮಲ್ಲಿ ಉಚಿತ ಚಿಕಿತ್ಸೆ ಹಾಗೂ ಫಿಸಿಯೋಥೆರಪಿಯನ್ನು ಉಚಿತವಾಗಿ ಒದಗಿಸುವುದಾಗಿ ತಿಳಿಸಿದರು.



ಅಧ್ಯಕ್ಷತೆಯನ್ನು ವಹಿಸಿದ್ದ ಸಕ್ಷಮ ಜಿಲ್ಲಾ ಘಟಕ ಅಧ್ಯಕ್ಷ ರಾಜಶೇಖರ ಭಟ್ ಕಾಕುಂಜೆ ಮಾತನಾಡಿ, ವಿಶೇಷವಾಗಿ ಅಗತ್ಯವುಳ್ಳ ದಿವ್ಯಾಂಗರಿಗೆ ಬೇಕಾದ ಸಕಲ ನೆರವು ಒದಗಿಸಲು ಸಕ್ಷಮ ಸದಾ ಬದ್ಧವಾಗಿದೆ ಎಂದರು. ಮುಖ್ಯ ಅತಿಥಿಗಳಾಗಿ ಬಿಎಎಸ್ ಎಫ್ ಇಂಡಿಯಾ ಲಿಮಿಟೆಡ್ ಮಾನವ ಸಂಪನ್ಮೂಲ ಅಧಿಕಾರಿ ಸಂತೋಷ್ ಪೈ ಮಾತನಾಡಿ, ತಮ್ಮ ಸಂಸ್ಥೆಯಿಂದ ನೆರವು ನೀಡುವುದಾಗಿ ಘೋಷಿಸಿದರು.

ಸಕ್ಷಮ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಕೇಶವ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಸಕ್ಷಮ ಕಾರ್ಯಾಚರಣೆ ಕುರಿತು ವಿವರಿಸಿದರು.ವಿಕಾಸಂ ಸೇವಾ ಫೌಂಡೇಶನ್ ಸಹಸಂಸ್ಥಾಪಕ ಗೋಪಾಲ್ ಗೋವಿಂದತೋಟ ಶುಭ ಹಾರೈಸಿದರು. ವಿಕಾಸಂ ಸಹಸಂಸ್ಥಾಪಕ ಧರ್ಮಪ್ರಸಾದ್ ರೈ, ವೈದ್ಯರು ಹಾಗೂ ಉಪನ್ಯಾಸಕ ಮತ್ತು ಆರೆಸ್ಸೆಸ್ ತಾಲೂಕು ಸಂಘಚಾಲಕ್ ಡಾ. ಬಾಲಕೃಷ್ಣಕುಮಾರ್ ಇದ್ದರು. ಸಕ್ಷಮ ದ.ಕ. ಜಿಲ್ಲಾ ಘಟಕ ಕಾರ್ಯದರ್ಶಿ ಹರೀಶ್ ಪ್ರಭು ವರದಿ ವಾಚಿಸಿದರು. ವಿಶೇಷಚೇತನ ಸಾಧಕರಾದ ತಾಲೂಕು ಹಿರಿಯ ನಾಗರಿಕರ ಸಬಲೀಕರಣ ಹಾಗೂ ವಿಶೇಷ ಚೇತನರ ಕಲ್ಯಾಣ ಇಲಾಖೆ ಎಂ.ಆರ್. ಡಬ್ಲ್ಯು ಗಿರೀಶ್ ಕುಮಾರ್ ಎ ಮತ್ತು ಪುತ್ತೂರಿನ ಸಾಧಕಿ ನೇಹಾ ರೈ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಅವರು ಮಾತನಾಡಿ, ನಿಮ್ಮ ಮಕ್ಕಳನ್ನು ದುರ್ಬಲರು ಅಂದು ಕೊಳ್ಳಬೇಡಿನಾನು ಈ ಮಟ್ಟಕ್ಕೆ ಬೆಳೆಯಲು ನನ್ನ ತಾಯಿ ಕಾರಣ,, ನಿಮ್ಮ ಮಕ್ಕಳನ್ನು ದುರ್ಬಲರು ಎಂದು ಅಂದುಕೊಳ್ಳಬೇಡಿ, ಅವರನ್ನು ಗಟ್ಟಿಗೊಳಿಸಿ, ಅವರನ್ನು ಬೆಂಬಲಿಸಿ, ಅವರಿಗೆ ಶಿಕ್ಷಣ ಕೊಡಿ, ಅವರ ಕೌಶಲ್ಯಗಳನ್ನು ಹೆಚ್ಚಿಸುವಂತೆ ಮಾಡಿ, ನೀವು ಬೆಂಬಲಿಸಿದರೆ, ನನ್ನ ಹಾಗೆ ಎಲ್ಲ ಮಕ್ಕಳು ಬೆಳೆಯಲು ಸಾಧ್ಯವಾಗುತ್ತದೆ ಎಂದು ಸನ್ಮಾನ ಸ್ವೀಕರಿಸಿದ ನೇಹಾ ರೈ ಹೇಳಿದರು.

ಸಮಾಜ ಸ್ಪಂದಿಸುವಿಕೆ ಅಗತ್ಯ

ಕಾರ್ಯಕ್ರಮದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಹಿರಿಯ ಪತ್ರಕರ್ತ ಹರೀಶ್ ಮಾಂಬಾಡಿ, ಪ್ರಸ್ತುತ ವ್ಯವಸ್ಥೆಯಲ್ಲಿ ದಿವ್ಯಾಂಗರು ಎದುರಿಸುವ ಸವಾಲುಗಳ ಕುರಿತು ವಿವರಿಸಿ, ಸಮಾಜದ ಕಾಳಜಿ ಸ್ಪಂದನೆ ಅಗತ್ಯವಾಗಿದ್ದು, ಸರಕಾರ ಹಾಗೂ ಖಾಸಗಿ ಬಸ್ ಗಳಲ್ಲಿ ಉಚಿತ ಪ್ರಯಾಣ, ಉದ್ಯೋಗ ಮೀಸಲಾತಿಯನ್ನು ಒದಗಿಸಬೇಕು ಎಂದರು.

ದಿವ್ಯಾಂಗರ ಕುರಿತು ಆರಂಭಿಕ ಗುರುತಿಸುವಿಕೆ ಕುರಿತು ವಿಕಾಸಂ ಸಹಸಂಸ್ಥಾಪಕ ಗಣೇಶ್‌ಭಟ್ ವಾರಣಾಸಿ ವಿಚಾರ ಮಂಡಿಸಿ ಸರಿಯಾದ ಸಮಯದಲ್ಲಿ ಗುರುತಿಸುವಿಕೆ ಅಗತ್ಯ ಎಂದರು. ನಿರಾಮಯ ಯೋಜನೆ, ಕಾನೂನು ಪೋಷಕತ್ವ ಯುಡಿಐಡಿ ಕಾರ್ಡ್ ಕುರಿತು ಚೇತನ ಬಾಲವಿಕಾಸ ಕೇಂದ್ರದ ಗಣರಾಜ ಭಟ್ ವಿಚಾರ ಮಂಡಿಸಿದರು. ವಿಕಾಸಂ ಸಹಸಂಸ್ಥಾಪಕ ಗಣೇಶ್ ಭಟ್ ವಾರಣಾಸಿ ಸ್ವಾಗತಿಸಿದರು. ಸದಸ್ಯ ಮಂಜುನಾಥ್ ವಂದಿಸಿದರು. ಸುರೇಖಾ ಯಳವರ ಕಾರ್ಯಕ್ರಮ ನಿರ್ವಹಿಸಿದರು. ಸಮಾರೋಪ ಸಮಾರಂಭದಲ್ಲಿ ಭಾಸ್ಕರ ಹೊಸಮನೆ ವಂದಿಸಿದರು. ಸತೀಶ್ ರಾವ್ ಸಹಕರಿಸಿದರು. ಲೋಕಾಕ್ಷ ಜಾದೂ ಅವರಿಂದ ಜಾದೂ ಪ್ರದರ್ಶನ ನಡೆಯಿತು. ವಿಶೇಷಚೇತನ ವಿದ್ಯಾರ್ಥಿ ಕೌಶಿಕ್ ಆಚಾರ್ಯ ಅವರು ಕಾಲಿನಲ್ಲಿ ಭಗತ್ ಸಿಂಗ್ ಚಿತ್ರ ಬರೆದು ಗಮನ ಸೆಳೆದರು. ಅರ್ಹ ದಿವ್ಯಾಂಗರಿಗೆ ಉಪಕರಣಗಳ ವಿತರಣೆ ನಡೆಯಿತು.

ರಾಮಕೃಷ್ಣ ಮಿಷನ್‌ನಿಂದ 'ಮಾರ್ಚ್ ತಿಂಗಳ ಸ್ವಚ್ಛತಾ ಶ್ರಮದಾನ' ಕಾರ್ಯಕ್ರಮ



ಮಂಗಳೂರು: ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನದ 'ಮಾರ್ಚ್ ತಿಂಗಳ ಸ್ವಚ್ಛತಾ ಶ್ರಮದಾನ' ಕಾರ್ಯಕ್ರಮ ಮಂಗಳೂರು ಮಹಾನಗರ ಪಾಲಿಕೆಯ ಹಿರಿಯ ಆರೋಗ್ಯಾಧಿಕಾರಿ ಡಾ. ಮಂಜಯ್ಯ ಶೆಟ್ಟಿ ಹಾಗೂ ಕೆನಡಾ ಓಂಟಾರಿಯೊ ಸರ್ಕಾರದ ಆರ್ಥಿಕ ತಜ್ಞ ಪ್ರಾಂಜಲ್ ಘಾಟೆ ಭಾನುವಾರ ಕದ್ರಿಯಲ್ಲಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಪ್ರಾಂಜಲ್ ಘಾಟೆ, ರಾಮಕೃಷ್ಣ ಮಿಷನ್ ನೇತೃತ್ವದಲ್ಲಿ ನಡೆಯುತ್ತಿರುವ ಸ್ವಚ್ಛತಾ ಅಭಿಯಾನದಲ್ಲಿ ತೊಡಗಿರುವ ಸ್ವಯಂಸೇವಕರು ಹಾಗೂ ಮಂಗಳೂರು ನಾಗರಿಕರ ಸಮರ್ಪಿತ ಪ್ರಯತ್ನ ಶ್ಲಾಘನೀಯ ಎಂದರು. ನಿವೃತ್ತ ಯೋಧ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಸ್ವಚ್ಛ ಮಂಗಳೂರು ಸಂಯೋಜಕ ರಂಜನ್ ಬೆಳ್ಳರ್ಪಾಡಿ ಉಪಸ್ಥಿತರಿದ್ದರು. ಶ್ರಮದಾನ ಚಟುವಟಿಕೆಗಳ ಭಾಗವಾಗಿ, ಬಾಲಕೃಷ್ಣ ಭಟ್, ಅನಿರುದ್ಧ ನಾಯಕ್, ಪ್ರಕಾಶ್, ರಾಮಚಂದ್ರ ಭಟ್, ಗಂಗಾಧರ ಶಾಸ್ತ್ರಿ ಪದ್ಮನಾಭ ಸಾಲಿಯನ್, ಅವಿನಾಶ್, ಬಬಿತಾ ಶೆಟ್ಟಿ ರಾಜೀವಿ ಚಂದ್ರಶೇಖರ್, ಸುಕುಮಾರ್ ಸಾಲಿಯನ್ ಹಾಗೂ ಇತರ ಹಿರಿಯ ಸ್ವಯಂ ಸೇವಕರು ಕದ್ರಿ ದೇವಸ್ಥಾನದ ಪಾರ್ಕಿಂಗ್ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು. ನಿಟ್ಟೆ ಫಿಸಿಯೋಥೆರಪಿ ಸಂಸ್ಥೆಯ ಉಪನ್ಯಾಸಕ ಡಾ. ಪುರುಷೋತ್ತಮನ್ ಚಿಪ್ಪಾಲ, ಡಾ. ಜಯೇಶ್ ಚಂದ್ರನ್, ಡಾ. ರುಚಿತಾ, ಡಾ. ಹೇಮಂತ್ ಹಾಗೂ ಸೋಕ್ರಟೀಸ್‌ಅವರ ನೇತೃತ್ವದಲ್ಲಿ ವಿದ್ಯಾರ್ಥಿ ಸ್ವಯಂ ಸೇವಕರ ತಂಡವು ಸ್ವಚ್ಛತಾ ಕಾರ್ಯ ಕೈಗೊಂಡಿತು. ತಾರಾನಾಥ ಆಳ್ವ, ಕಮಲಾಕ್ಷ ಪೈ, ದಿಲ್ ರಾಜ್ ಆಳ್ವ, ಸಚಿನ್ ಶೆಟ್ಟಿ, ಭವಿತ್ ಸಾಲಿಯನ್, ವರುಣ್, ಗಗನ್, ಯಲ್ಲಪ್ಪ, ಮಂಜುನಾಥ್ ಸೇರಿದಂತೆ ಇತರ ವಿದ್ಯಾರ್ಥಿ ಸ್ವಯಂ ಸೇವಕರು ಕದ್ರಿ ವೃತ್ತದಲ್ಲಿದ್ದ ಹಿಂದು ದೇವತೆಗಳ ಚಿತ್ರಪಟಗಳು ಹಾಗೂ ಮೂರ್ತಿಗಳನ್ನು ತೆರವುಗೊಳಿಸಿದರು.

ಇಂದು ಉಪ್ಪಿನಂಗಡಿಯಲ್ಲಿ ಹುಣ್ಣಿಮೆ 2ನೇ ಮಖೆಜಾತ್ರೆ, ನಾಳೆ ತೀರ್ಥಸ್ನಾನ



ಉಪ್ಪಿನಂಗಡಿ: ಇತಿಹಾಸ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನದಲ್ಲಿ ಫೆ.15ರಿಂದ ವೇ. ಮೂ. ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ, ಪವಿತ್ರಪಾಣಿ ಕರಾಯ ವಿಷ್ಣುಮೂರ್ತಿ ಕುದ್ದಣ್ಣಾಯರ ಉಪಸ್ಥಿತಿಯಲ್ಲಿ ಕಾಲಾವಧಿ ಜಾತ್ರೆ ಮಖೆಜಾತ್ರೆ ಮತ್ತು ಉತ್ಸವಾದಿಗಳು ಆರಂಭ ಗೊಂಡಿದ್ದು, ಮಾ.2ಕ್ಕೆ ಹುಣ್ಣಿಮೆ 2ನೇ ಮಖೆಕೂಟ ಹಾಗೂ ರಥೋತ್ಸವವು ನಡೆಯಲಿದೆ.

ರಾತ್ರಿ 8. 30ರಿಂದ ಬಲಿಹೊರಟು ಉತ್ಸವ, ಬ್ರಹ್ಮರಥ ಸೇವೆ, ರಥೋತ್ಸವ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಉಪ್ಪಿನಂಗಡಿಯ ವತಿಯಿಂದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿ ನಾಗಧ್ವಜ ಕ್ಷೇತ್ರ ಇವರಿಂದ ಶ್ರೀ ತುಳಸಿ ಯಕ್ಷಗಾನ ಪ್ರದರ್ಶನ ನಡೆಯಲಿದೆ. ರಾತ್ರಿ 9ರಿಂದ ಸಿಡಿಮದ್ದು ಪ್ರದರ್ಶನ ನಡೆಯಲಿದೆ. ಮಾ.3ಕ್ಕೆ ಪ್ರಾತಃಕಾಲ ತೀರ್ಥಸ್ನಾನ ನಡೆಯಲಿದ್ದು, ಬೆಳಗ್ಗೆ 7.30ರಿಂದ ಬಲಿ ಹೊರಟು ಉತ್ಸವ, ದರ್ಶನಬಲಿ, ಬಟ್ಟಲು ಕಾಣಿಕೆ, ಮಹಾಕಾಳಿ ಅಮ್ಮನವರ ನೇಮಕ್ಕೆ ಪಡಿಯಕ್ಕಿ ಕೊಡುವುದು, ಮಹಾಪೂಜೆ ನಡೆಯಲಿದೆ. ಆ ದಿನ ಚಂದ್ರಗ್ರಹಣ ಇರುವುದರಿಂದ ಮಧ್ಯಾಹ್ನ ಸಾರ್ವಜನಿಕ ಅನ್ನಸಂತ ರ್ಪಣೆ ಬದಲಿಗೆ ಫಲಹಾರದ ವ್ಯವಸ್ಥೆ ಇರುತ್ತದೆ. ಸಂಜೆ 7ರಿಂದ ಉತ್ಸವ ನಡೆಯಲಿದೆ. ಮಾ.4ರಂದು ಬೆಳಗ್ಗೆ ಉತ್ಸವ, ಸಂಜೆ 7 ರಿಂದ ಉತ್ಸವ ನಡೆಯಲಿದೆ. ಮಾ.5ರಂದು ಬೆಳಗ್ಗೆ ಉತ್ಸವ ಸಂಜೆ 7ರಿಂದ ಉತ್ಸವ, ಶ್ರೀ ದೇವರ ಶಯನೋತ್ಸವ ನಡೆಯಲಿದ್ದು ಮಾ. 6ರಂದು ಬೆಳಗ್ಗೆ 6ರಿಂದ ಕವಾಟೋದ್ಘಾಟನೆ, ಸಂಜೆ 7ರಿಂದ ದೇವರು ಬಲಿ ಹೊರಟು ರಥಬೀದಿಯಿಂದ ಹಳೆ ಬಸ್‌ಸ್ಟ್ಯಾಂಡ್‌ವರೆಗೆ ಹೋಗಿ ಕಟ್ಟೆಪೂಜೆಯಾಗಿ ಸರಕಾರಿ ಪ್ರಾಥಮಿಕ ಶಾಲಾ ಮಾರ್ಗವಾಗಿ ಬಂದು ಸಂಗಮದಲ್ಲಿ ಅವಭೃತ ಸ್ನಾನವಾಗಿ ಧ್ವಜಾವರೋಹಣ ನಡೆಯಲಿದೆ. ಮಾ.6ಕ್ಕೆ ಗೆಳೆಯರು-94 ಅರ್ಪಿಸುವ ಅನುಗ್ರಹ ಮೆಲೋಡಿಸ್ ಮಂಗಳೂರು ಇವರಿಂದ ಉಪ್ಪಿನಂಗಡಿಯ ಹಳೇ ಬಸ್ ನಿಲ್ದಾಣದಲ್ಲಿ 33 ನೇ ವರ್ಷದ 'ಗೀತ್ ಸಂಗೀತ್' ನಡೆಯಲಿದೆ ಎಂದು ದೇವಾಲಯದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಉದ್ಯಮಿ ಎ.ಜೆ. ಶೇಖರ್ ಮನೆಗೆ ಕೊಂಡೆವೂರು ಶ್ರೀ ಭೇಟಿ



ಉಳ್ಳಾಲ: ತೊಕ್ಕೊಟ್ಟು ಕಾಪಿಕಾಡು, ಉಮಾಪುರಿಯ ಶ್ರೀ ಉಮಾ ಮಹೇಶ್ವರೀ ಕ್ಷೇತ್ರದ ಆಡಳಿತ ಮೊಕ್ತೇಸರರು ಉದ್ಯಮಿಗಳಾದ ಎ.ಜೆ. ಶೇಖರ್ ಅವರ ಮನೆಯ ಆರಾಧ್ಯ ದೈವಗಳಾದ ಮಂತ್ರದೇವತೆ, ಕಲ್ಲುರ್ಟಿ ಪಂಜುರ್ಲಿ, ಗುಳಿಗ ದೈವದ ವಾರ್ಷಿಕ ಕೋಲ ಉತ್ಸವವು ಶನಿವಾರ ರಾತ್ರಿ ನಡೆಯಿತು.

ಈ ಸಂದರ್ಭ ಉಪ್ಪಳ,ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರು ಎ.ಜೆ. ಶೇಖರ್ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರನ್ನ ಹರಸಿ ಆಶೀರ್ವದಿಸಿದರು. ಕಾಪಿಕಾಡು ಶ್ರೀ ಉಮಾಮಹೇಶ್ವರಿ ಕ್ಷೇತ್ರದಲ್ಲಿ ಕಳೆದ ತಿಂಗಳಲ್ಲಿ ನಡೆದ ಬ್ರಹ್ಮಕಲಶೋತ್ಸವದ ಅಭೂತಪೂರ್ವ ಯಶಸ್ಸಿಗೆ ಸ್ವಾಮೀಜಿಗಳು ಕ್ಷೇತ್ರದ ಆಡಳಿತ ಮೊಕ್ತೇಸರ ಎ.ಜೆ. ಶೇಖರ್ ಅವರನ್ನು ಅಭಿನಂದಿಸಿದರು. ಈ ವೇಳೆ ಮಾತನಾಡಿದ ಸ್ವಾಮೀಜಿಗಳು ಎ.ಜೆ.ಶೇಖರ್ ಅವರು, ನಮ್ಮ ಕೊಂಡೆವೂರು ಮಠದ ಮಕ್ಕಳಿಗೆ ನಿತ್ಯದ ಅನ್ನದಾಸೋಹದ ಸೇವೆಯಲ್ಲೂ ಅವರ ಕೊಡುಗೆ ದೊಡ್ಡದಿದೆ. ಮಠದ ಅಭಿವೃದ್ಧಿಯಲ್ಲೂ ಅವರು ಸದಾ ನಮ್ಮೊಂದಿಗೆ ಇದ್ದು ಸಹಕರಿಸುತ್ತಾರೆ. ಧಾರ್ಮಿಕ ಹಾಗೂ ಸಮಾಜಮುಖಿ ಕೈಂಕರ್ಯಗಳಲ್ಲಿ ನಿರಂತರ ತೊಡಗಿಸಿಕೊಳ್ಳುವ ಅವರಿಗೆ ಭಗವಂತನು ಆಯುಷ್ಯ, ಆರೋ ಗ್ಯ ನೀಡಿ ಸಮಾಜಕ್ಕೆಮತ್ತಷ್ಟುಸೇವೆನೀಡುವ ಶಕ್ತಿ ನೀಡಲೆಂದು ಹಾರೈಸಿದರು. ಎ.ಜೆ. ಶೇಖರ್, ಪತ್ನಿ ಪೂರ್ಣಿಮಾ ಶೇಖರ್, ಮಕ್ಕಳಾದ ಹಿತೇಶ್, ಹೇಮಂತ್, ಸೊಸೆ ನೇಹಾ ಹಿತೇಶ್, ಮಠದ ಪ್ರಮುಖರಾದ ಶೇಖರ್ ಕೊಂಡೆವೂರು ಉಪಸ್ಥಿತರಿದ್ದರು.



ಪಡುಬಿದ್ರಿ, ಶ್ರೀ ಪಲಿಮಾರು ಮೂಲಮಠದಲ್ಲಿ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ 'ಸಪ್ತತಿಸಂಭ್ರಮಮ್ ' ಕಾರ್ಯಕ್ರಮ ಯೋಗ ದೀಪಿಕಾ ಹಳೇ ವಿದ್ಯಾರ್ಥಿಗಳಿಂದ ಆಚರಿಸಲಾಯಿತು. ಧನ್ವಂತರೀ ಮಂತ್ರ ಹೋಮ, ವಾಯು ಸೋಮ ಈಸಾನ ದಿಕ್ಪಾಲ ಮಂತ್ರ ಹೋಮ ಜರಗಿತು. ಯೋಗದೀಪಿಕಾ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಕೋಶಾಧಿಕಾರಿಗಳು ಭಾಗವಹಿಸಿದರು.

ಸಂಘಟನೆಗಳ ಮೂಲಕ ಹಿಂದುಗಳನ್ನು ಒಂದುಗೂಡಿಸಿ: ಶರಣ್ ಪಂಪ್‌ವೆಲ್ ಕರೆ



ನಾಪೋಕ್ಲು: ರಾಷ್ಟ್ರೀಯ ಸ್ವಯಂಸೇವಕ ಸಂಘ ಇರುವುದೇ ಈ ದೇಶದ ರಕ್ಷಣೆಗಾಗಿ. ದೇಶಾದ್ಯಂತ ಹಳ್ಳಿಗಳಲ್ಲಿ, ಗ್ರಾಮಗಳಲ್ಲಿ, ನಗರಗಳಲ್ಲಿ ಹಿಂದು ಸಂಘಟನಾ ಮುಖಾಂತರ ಆ ಭಾಗದ ಹಿಂದುಗಳನ್ನು ಒಂದುಗೂಡಿಸಿ ಹಿಂದೂ ಧರ್ಮ ನಮ್ಮ ಸಂಸ್ಕೃತಿ ,ಸಂಪ್ರದಾಯ, ನಮ್ಮ ನಾಗರಿಕತೆ, ಪರಂಪರೆಯನ್ನು ಸ್ಮರಣೆ ಮಾಡಬೇಕಿದೆ ಎಂದು ವಿಶ್ವ ಹಿಂದೂ ಪರಿಷತ್ ದಕ್ಷಿಣ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್ ವೆಲ್ ಹೇಳಿದರು.

ಸಮೀಪದ ಚೆಯ್ಯಂಡಾಣೆ ಹಿಂದೂ ಸಂಗಮ ಆಯೋಜನಾ ಸಮಿತಿಯ ಮಂಡಲದ ವತಿಯಿಂದ ಆಯೋಜಿಸಲಾಗಿದ್ದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದಿಕ್ಸೂಚಿ ಭಾಷಣ ಮಾಡಿದರು.

ಚೆಯ್ಯಂಡಾಣೆ ಹಿಂದೂ ಸಂಗಮ ಮಂಡಲ ಅಧ್ಯಕ್ಷ ಪೋಕ್ಕೊಳಂಡ್ರ ಧನೋಜ್ ಮಾತನಾಡಿ, ಮುಂದಿನ ಯುವ ಪೀಳಿಗೆಗೆ ಧರ್ಮ ಮತ್ತು ಸಂಸ್ಕೃತಿಯ ಮಹತ್ವದ ಅರಿವು ಮೂಡಿಸುವ ಉದ್ದೇಶದಿಂದ ಈ ಹಿಂದೂ ಸಂಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹಿಂದೂ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಒಗ್ಗಟ್ಟಿನ ಸಂದೇಶ ಸಾರಿದ್ದಾರೆ ಎಂದರು . ನಿವೃತ್ತ ಕ್ಯಾಪ್ಟನ್ ಬಿದ್ದಂಡ ನಾಣಿ ನಾಣಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಮಾಜ ಸೇವಕಿ ಹಾಗೂ ವಕೀಲೆ ಬಾಚಬಂಡ ಅನುಪಮಾ ಕಿಶೋರ್ ಮಾತನಾಡಿದರು. ಕೆ.ಜಿ. ಬೋಪಯ್ಯ, ತಳೂರು ಕಿಶೋರ್ ಕುಮಾರ್, ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪುದಿಯೋಕ್ಕಡ ರಮೇಶ್ ಗ್ರಾಮ ಪಂಚಾಯತ್ ಅಧ್ಯಕ್ಷೆ ಕೌಶಿ ಕಾವೇರಮ್ಮ, ಬಿದ್ದಂಡ ರಾಜೇಶ್ ಅಚ್ಚಯ್ಯ, ಚೇನಂಡ ಸಂಪ, ಐತಿಚಂಡ ಭೀಮಯ್ಯ, ಬಿಳಿಯಂಡ್ರ ಪ್ರಸಾದ್, ಹಿಂದೂ ಸಂಗಮ ಮಂಡಲದ ಪದಾಧಿಕಾರಿಗಳು ಇದ್ದರು. ಇದಕ್ಕೂ ಮೊದಲು ಆಕರ್ಷಕ ಶೋಭಾಯಾತ್ರೆ ನಡೆಯಿತು.

ಲಿಪಿಕ ನೌಕರರ, ವಾಹನ ಚಾಲಕರ ಸಂಘ: ಪದಾಧಿಕಾರಿಗಳ ಪದಗ್ರಹಣ



ಬಂಟ್ವಾಳ: ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ.ನೌಕರರ ಸಂಘ ಬೆಂಗಳೂರು ಇದರ ದ.ಕ. ಜಿಲ್ಲಾ ಘಟಕದ 2025 -2029 ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ, ರಾಜ್ಯ ಸಂಘದ ಪದಾಧಿಕಾರಿಗಳಿಗೆ ಅಭಿನಂದನೆ ಹಾಗೂ ನಿವೃತ್ತ ಬೋಧಕೇತರ ನೌಕರರಿಗೆ ಗೌರವಾಭಿನಂದನಾ ಕಾರ್ಯಕ್ರಮ ಬಿ.ಸಿ.ರೋಡಿಗೆ ಸಮೀಪದ ಮೊಡಂಕಾಪು ಅನುಗ್ರಹ ಹಾಲ್‌ನಲ್ಲಿ ಶನಿವಾರ ನಡೆಯಿತು.

ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘದ ಅಧ್ಯಕ್ಷ ನವೀನ್ ಎಸ್.ಆರ್. ಕಾರ್ಯಕ್ರಮ ಉದ್ಘಾಟಿಸಿ, ಸಂಘಟನೆಯ ಉದ್ದೇಶಗಳನ್ನು ಅರಿತುಕೊಂಡು ಒಗ್ಗಟ್ಟಿನಿಂದ ಸಾಧನೆಯತ್ತ ಮುನ್ನಡೆಯಬೇಕಾಗಿದೆ. ಒತ್ತಡದ ಮಧ್ಯೆಯೇ ಅಧಿಕಾರಿಗಳು, ನೌಕರರು ತಂಡವಾಗಿ ಕಾರ್ಯಭಾರವನ್ನು ಮಾಡಿದಾಗ ಒಂದಷ್ಟು ನೆಮ್ಮದಿ ಸಿಗಲು ಸಾಧ್ಯ ಎಂದರು.

ಜಿಲ್ಲಾಧ್ಯಕ್ಷ ಹರ್ಷೇಂದ್ರ ಶೆಟ್ಟಿ ಬಿ.ಡಿ. ಅಧ್ಯಕ್ಷತೆ ವಹಿಸಿದ್ದರು, ರಾಜ್ಯ ಸಂಘದ ಗೌರವಾಧ್ಯಕ್ಷ ದೇವರಾಜು ಜಿ. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ದ.ಕ. ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ಆಡಳಿತ ಉಪನಿರ್ದೇಶಕ ಶಶಿಧರ್ ಜಿ.ಎಸ್., ಜಿಲ್ಲಾ ಅಕ್ಷರ ದಾಸೋಹ ಉಪನಿರ್ದೇಶಕ ಜ್ಞಾನೇಶ್ ಎಂ.ಪಿ., ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ, ರಾಜ್ಯ ಸಂಘದ ಕಾರ್ಯಾಧ್ಯಕ್ಷ ಪೃಥ್ವಿಕುಮಾರ್, ದ.ಕ.ಜಿಲ್ಲಾ ಗೌರವಾಧ್ಯಕ್ಷ ಶ್ರೀಧರನ್, ಜಿಲ್ಲಾ ಉಪಾಧ್ಯಕ್ಷ ಪ್ರಕಾಶ್ ಕೆ.ಆರ್, ಪ್ರಧಾನ ಕಾರ್ಯದರ್ಶಿ ಸ್ವಸ್ತಿಕ್ ಕುಮಾರ್, ಖಜಾಂಚಿ ಮಾರುತಿ, ಸಂಘಟನಾ ಕಾರ್ಯದರ್ಶಿ ಕಿರಣ್ ಎಸ್. ಹಾಗೂ ವಿವಿಧ ತಾಲೂಕುಗಳ ಅಧ್ಯಕ್ಷರು ಉಪಸ್ಥಿತರಿದ್ದರು.

ಮಂಗಳೂರು ವಿಶೇಷ ಘಟಕದ ಅಧ್ಯಕ್ಷೆ ವಿ.ಆರ್.ಶೋಭಾ ಸ್ವಾಗತಿಸಿದರು. ಗೌರವಾಧ್ಯಕ್ಷ ಬಾಲು ನಿರ್ವಹಿಸಿದರು.



ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವ ಅಂಗವಾಗಿ ಪರೆಂಕಿಲ ರಕ್ತೇಶ್ವರಿ ಕಟ್ಟೆಯಿಂದ ಊರ ಪರವೂರ ಭಕ್ತಾದಿಗಳ ಸಹಕಾರದೊಂದಿಗೆ ಶ್ರೀ ಆದಿಜನಾರ್ದನ ದೇವರಿಗೆ 'ಸಾರ್ವಜನಿಕ ಹೊರೆಕಾಣಿಕೆ' ಸಮರ್ಪಣೆ ಕಾರ್ಯಕ್ರಮ ನಡೆಯಿತು ಅರ್ಚಕ ಶ್ರೀನಿವಾಸ ಭಟ್ ಪರೆಂಕಿಲ ವಿಶೇಷ ಪ್ರಾರ್ಥನೆ ಸಲ್ಲಿಸಿ ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿದರು. ವಿಷ್ಣು ಮೂರ್ತಿ ಭಟ್ ಪರೆಂಕಿಲ, ಶ್ರೀಪತಿ ಭಟ್,ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಇದ್ದರು.

ಉಡುಪಿ ಯಕ್ಷಗಾನ ಕಲಾರಂಗದಿಂದ ವಿದ್ಯಾಪೋಷಕ್ ವಿದ್ಯಾರ್ಥಿನಿ ಶ್ರಾವ್ಯ ಖಾರ್ವಿ ಅವರಿಗೆ 'ಸರಸ್ವತಿ ಕೃಪಾ' ಹಸ್ತಾಂತರ

ದೋಣಿ ದುರಂತದಲ್ಲಿ ಮನೆ ಯಜಮಾನನನ್ನು ಕಳಕೊಂಡ ಕುಟುಂಬಕ್ಕೆ ಸೂರು

ಕುಂದಾಪುರ: ಹಣ ಇದ್ದವರೆಲ್ಲರ ದಾನ ಮಾಡುತ್ತಾರೆ ಎಂದಿಲ್ಲ, ಸಂಪಾದನೆ ಮಾಡಿದ ಹಣವನ್ನು ಒಳ್ಳೆಯ ಕೆಲಸಗಳಿಗೆ ವಿನಿಯೋಗ ಮಾಡಿದರೆ ಅದರಿಂದ ಮನಸ್ಸಿಗೆ ತೃಪ್ತಿಯಾಗುತ್ತದೆ. ಗಂಗೊಳ್ಳಿಯಲ್ಲಿ ನಡೆದ ದೋಣಿ ದುರಂತದಲ್ಲಿ ಕುಟುಂಬದ ಯಜಮಾನನನ್ನೇ ಕಳೆದುಕೊಂಡ ಕುಟುಂಬಕ್ಕೆ ಸಹಾಯ ಅಗತ್ಯತೆ ಇತ್ತು. ಇದನ್ನು ಮನಗಂಡು ವಿದ್ಯಾಪೋಷಕ್ ವಿದ್ಯಾರ್ಥಿನಿಯ ಈ ಕುಟುಂಬಕ್ಕೆ ಮನೆಯನ್ನು ನಿರ್ಮಿಸಿಕೊಟ್ಟಿರುವುದು ಉತ್ತಮ ಕಾರ್ಯ ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಯಕ್ಷಗಾನ ಕಲಾರಂಗ ಉಡುಪಿ ಇದರ ವತಿಯಿಂದ ದ್ವಿತೀಯ ಪಿಯುಸಿ ವಿದ್ಯಾಪೋಷಕ್ ವಿದ್ಯಾರ್ಥಿನಿ ಗಂಗೊಳ್ಳಿಯ ಶ್ರಾವ್ಯ ಖಾರ್ವಿ ಅವಳಿಗೆ ಕುಂದಾಪುರದ ವಸಂತ ಆಚಾರ್ಯ



ಅವರು ಮಾತೃಶ್ರೀ ಸರಸ್ವತಿ ಅವರ ಸವಿನೆನಪಿನಲ್ಲಿ ನಿರ್ಮಿಸಲಾದ ನೂತನ ಮನೆ 'ಸರಸ್ವತಿ ಕೃಪಾ'ವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು. ಯಾವ ಸ್ವಾರ್ಥವೂ ಇಲ್ಲದ ಸೇವೆಯನ್ನು ಯಕ್ಷಗಾನ ಕಲಾರಂಗ ಮಾಡುತ್ತಿದೆ. ಸಮಾಜ ಸೇವೆ ಹೇಗೆ ಮಾಡಬಹುದು ಎಂಬುದಕ್ಕೆ ಉದಾಹರಣೆ ಯಕ್ಷಗಾನ ಕಲಾರಂಗ. ಯಾರ ಶಿಫಾರಸ್ಸು ಇಲ್ಲದೆ ಸ್ವತ: ಅವರೇ ವಿದ್ಯಾರ್ಥಿಗಳ ಮನೆಗೆ ಹೋಗಿ ಮನೆಯ ಮತ್ತು ವಿದ್ಯಾರ್ಥಿಯ ಪರಿಸ್ಥಿತಿ ನೋಡಿ ಅರ್ಹತೆಗೆ ಸರಿಯಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಮನೆಯನ್ನು ನಿರ್ಮಿಸಿಕೊಡುತ್ತಿರುವುದು ಶ್ಲಾಘನೀಯ. ಯಕ್ಷಗಾನ ಕಲಾರಂಗದ ವತಿಯಿಂದ ಕಳೆದ ಸುಮಾರು ಮೂರು ವರ್ಷಗಳಿಂದ ಕುಂದಾಪುರ ವಿಧಾನಸಭಾ ಕ್ಷೇತ್ರದ ಸುಮಾರು 21 ಶಾಲೆಗಳಲ್ಲಿ ಯಕ್ಷ ಶಿಕ್ಷಣ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಕಾರ್ಯದರ್ಶಿ ಮುರಲಿ ಕಡೆಕಾರ್, ಯಕ್ಷಗಾನ ಕಲಾರಂಗದಿಂದ ನಿರ್ಮಿಸಲಾದ 90ನೇ ಮನೆ ಇದಾಗಿದ್ದು, ಗಂಗೊಳ್ಳಿಯಲ್ಲಿ ಈಗಾಗಲೇ 4 ಮನೆ ನಿರ್ಮಾಣ ಮಾಡಲಾಗಿದೆ. ಕಲಾರಂಗದ ಮೂಲಕ ಈ ವರ್ಷ ಸುಮಾರು 1.38 ಕೋಟಿ ರೂ. ವಿದ್ಯಾರ್ಥಿ ವೇತನ, ಯಕ್ಷಗಾನ ಕಲಾವಿದರಿಗೆ ಸಹಾಯ, ವಿದ್ಯಾಪೋಷಕ್‌ನ 10 ಮಕ್ಕಳಿಗೆ ಲ್ಯಾಪ್ ಟಾಪ್, ಹೆಲ್ತ್‌ಕಾರ್ಡ್ ನೀಡಲಾಗಿದೆ. ಜಿಲ್ಲೆಯ ಒಟ್ಟು 94 ಶಾಲೆಗಳಲ್ಲಿ ಯಕ್ಷ ಶಿಕ್ಷಣ ನೀಡಲಾಗುತ್ತಿದ್ದು, ಸುಮಾರು 3 ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಬಣ್ಣ ಹಚ್ಚಿದ್ದಾರೆ ಎಂದರು.

ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಅಧ್ಯಕ್ಷತೆ ವಹಿಸಿದ್ದರು. ದಾನಿ ವಸಂತ ಆಚಾರ್ಯ, ಶೋಭಾ ವಸಂತ ಆಚಾರ್ಯ, ಗಣೇಶ ಆಚಾರ್ಯ, ಸುರೇಶ ಆಚಾರ್ಯ, ದಿನೇಶ ಆಚಾರ್ಯ, ಉಷಾ ನಾಗೇಶ ಆಚಾರ್ಯ, ಯಕ್ಷಗಾನ ಕಲಾರಂಗದ ಪ್ರಮುಖರಾದ ಸದಾಶಿವ ರಾವ್, ರಾಜಗೋಪಾಲ ಆಚಾರ್ಯ, ವಿಜಯಕುಮಾರ್ ಮುದ್ರಾಡಿ, ಜಯರಾಮ ಪಡಿಯಾರ್, ಪ್ರಭಾಕರ ಬಂಡಿ, ಅಶೋಕ್, ಅನಂತರಾಜ್ ಉಪಾಧ್ಯಾಯ, ಗಣೇಶ ಬ್ರಹ್ಮಾವರ, ವಿನೋದಾ, ರೇಖಾ ಜಗನ್ನಾಥ ಖಾರ್ವಿ, ಮೊದಲಾದವರು ಇದ್ದರು. ಎಂ. ಗಂಗಾಧರ ರಾವ್ ಸ್ವಾಗತಿಸಿ, ಮುರಲಿ ಕಡೆಕಾರ್ ನಿರ್ವಹಿಸಿದರು. ನಾರಾಯಣ ಹೆಗ್ಡೆ ವಂದಿಸಿದರು.

ಸುತ್ತಮುತ್ತ

ಅಡೂರು ಜಾತ್ರೆ: ಇಂದು ಗೊನೆ ಮುಹೂರ್ತ

ಮುಳ್ಳೇರಿಯ: ಅಡೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ಮಹಾವಿಷ್ಣು ವಿನಾಯಕ ದೇವಳದ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಗೊನೆ ಮುಹೂರ್ತ ಮಾ.2ರಂದು ಜರಗಲಿದೆ. ವರ್ಷಾವಧಿ ಜಾತ್ರೆ ಮಾ.11ರಿಂದ 20ರ ವರೆಗೆ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ನೇತೃತ್ವದಲ್ಲಿ ನೆರವೇರಲಿದೆ. ಮಾ.23ರಿಂದ 25ರ ತನಕ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಸಾನಿಧ್ಯದಲ್ಲಿ ಶ್ರೀ ಮಹಾಗಣಪತಿ ಮತ್ತು ಶ್ರೀ ಮಹಾವಿಷ್ಣು ದೇವರಿಗೆ ಪುನರ್ ಪ್ರತಿಷ್ಠಾ ಕಲಶೋತ್ಸವ ನಡೆಯಲಿದೆ.

ಮಾ.5,6: ಕ್ಯಾನ್ಸರ್ ರೋಗ ಪತ್ತೆ ಶಿಬಿರ

ಮಂಜೇಶ್ವರ: ಪೈವಳಿಕೆ ಗ್ರಾ.ಪಂ. ಹಾಗೂ ಕುಟುಂಬ ಆರೋಗ್ಯ ಕೇಂದ್ರ ಬಾಯಾರು ಇವುಗಳ ವತಿಯಿಂದ ಮಾ.5 ಮತ್ತು 6ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ಗಂಟೆಯ ತನಕ ವಿಶೇಷವಾಗಿ ಮಹಿಳೆಯರಿಗೆ ಕ್ಯಾನ್ಸರ್ ರೋಗ ಪತ್ತೆ ಶಿಬಿರವು ಬಾಯಾರು ಕುಟುಂಬ ಆರೋಗ್ಯ ಕೇಂದ್ರದಲ್ಲಿ ನಡೆಯಲಿದೆ. ಪೈವಳಿಕೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಬದರುನ್ನೀಸಾ ಪಿ. ಉದ್ಘಾಟಿಸುವರು. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಸುಮನಾ ಜಿ.ಭಟ್ ಅಧ್ಯಕ್ಷತೆ ವಹಿಸುವರು. ಅಗತ್ಯ ವಿರುವವರಿಗೆ ಮಾಮ್ಮೋಗ್ರಾಫಿ ಮತ್ತು ಪಾಪ್ ಸ್ಮಿಯರ್ ಸೌಲಭ್ಯವಿದೆ.

ಅರ್ಜಿ ಆಹ್ವಾನ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳ ವಿಡಿಯೋಗಳನ್ನು ಚಿತ್ರೀಕರಿಸಲು ಫೋಟೋ , ವಿಡಿಯೋಗ್ರಾಫರ್‌ಗಳು, ಹವ್ಯಾಸಿ ಮತ್ತು ಸ್ವತಂತ್ರ ಛಾಯಾಗ್ರಾಹಕರು, ಸಂಸ್ಥೆಗಳಿಂದ ಅರ್ಜಿ ಆಹ್ವಾನಿ ಸಲಾಗಿದೆ. ಅರ್ಜಿ ಸ್ವೀಕರಿಸಲು ಕೊನೆ ದಿನ ಮಾ.3ರಂದು ಮಧ್ಯಾಹ್ನ 12 ಗಂಟೆ ಆಗಿದೆ. ಮಾಹಿತಿಗೆ ಜಿಲ್ಲಾಧಿಕಾರಿ, ಕಲೆಕ್ಟರೇಟ್, ಕಾಸರಗೋಡು – 671123 (8547616042) ಸಂಪರ್ಕಿಸಬಹುದು.

ಯೋಜನಾ ಸಂಶೋಧನಾ ವಿಜ್ಞಾನಿ ನೇಮಕಾತಿ

ಕಾಸರಗೋಡು: ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯಿಂದ ಧನಸಹಾಯ ಪಡೆದ ಸಂಶೋಧನಾ ಅಧ್ಯಯನಕ್ಕಾಗಿ ಎಸ್‌ಎಚ್‌ಎಸ್ ಆರ್‌ಸಿ ಕೇರಳ ಸಂಸ್ಥೆಯು ಒಂದು ವರ್ಷದ ಅವಧಿಗೆ ಯೋಜನಾ ಸಂಶೋಧನಾ ವಿಜ್ಞಾನಿ (ವೈದ್ಯಕೀಯ) ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂದರ್ಶನವು ಮಾ.5 ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ.

ತಾತ್ಕಾಲಿಕ ನೇಮಕಾತಿ

ಕಾಸರಗೋಡು: ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿ ಖಾಲಿಯಿರುವ ಎಂಎಲ್‌ಎಸ್‌ಪಿ ಹುದ್ದೆಗಳ ನೇಮಕಾತಿಗಾಗಿ ಮಾ.5ರಂದು ಬೆಳಗ್ಗೆ 10.30ಕ್ಕೆ ಸಂದರ್ಶನವು ಎನ್‌ಎಚ್‌ಎಂ (ಆರೋಗ್ಯ ಕೇರಳ) ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 0467 2209466 ಕರೆ ಮಾಡಬಹುದು.

ಎಣ್ಮಕಜೆ ಹಸಿರು ಕ್ರಿಯಾ ಸೇನೆಯಿಂದ ಸ್ಕಾಲರ್ ಶಿಪ್ ವಿತರಣೆ



ಪೆರ್ಲ: ತ್ಯಾಜ್ಯ ಮುಕ್ತ ಕೇರಳಕ್ಕಾಗಿ, ತ್ಯಾಜ್ಯ ಮುಕ್ತ ಪರಿಸರಕ್ಕಾಗಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ ಶಾಲೆಗಳಿಂದಲೇ ತ್ಯಾಜ್ಯ ವಸ್ತುಗಳ ನಿರ್ಮೂಲನೆ, ಪುನರುಪಯೋಗ ಹಾಗೂ ವಿವಿಧ ಚಟುವಟಿಕೆಗಳ ಮೂಲಕ ಅವರಿಗೆ ಮಾಹಿತಿ ನೀಡಲು ಹಸಿರು ಕ್ರಿಯಾ ಸೇನೆಯ ನೇತೃತ್ವದಲ್ಲಿ ಶುಚಿತ್ವ ಪಠನೋತ್ಸವ ಎಂಬ ಯೋಜನೆ ಹಮ್ಮಿಕೊಳ್ಳಲಾಯಿತು.
ಈ ನಿಟ್ಟಿನಲ್ಲಿ ಎಣ್ಮಕಜೆ ಗ್ರಾ.ಪಂ.ವ್ಯಾಪ್ತಿಯ 13 ಶಾಲೆಗಳ ಯುಪಿ, ಎಚ್‌ಎಸ್ ಮತ್ತು ಎಚ್‌ಎಸ್‌ಎಸ್ ವಿಭಾಗಗಳಿಂದ ತಲಾ 2 ಮಂದಿ ಮಕ್ಕಳನ್ನು ವಿದ್ಯಾರ್ಥಿವೇತನಕ್ಕೆ ಆಯ್ಕೆ ಮಾಡಿ ಸ್ಕಾಲರ್‌ಶಿಪ್ ವಿತರಿಸುವ ಕಾರ್ಯಕ್ರಮ ಪಂ. ಸಭಾಂಗಣದಲ್ಲಿ ಜರಗಿತು. ಪಂ. ಅಧ್ಯಕ್ಷೆ ಬಿ.ಕುಸುಮಾವತಿ ಸ್ಕಾಲರ್‌ಶಿಪ್ ವಿತರಿಸಿದರು. ಪಂ. ಉಪಾಧ್ಯಕ್ಷ ಅಬೂಬಕ್ಕರ್ ಸಿದ್ದಿಕ್ ವಳಮೊಗರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪಂಚಾಯತ್ ಸದಸ್ಯ ಸೋಮಶೇಖರ ಜೆ.ಎಸ್. ಅತಿಥಿಯಾಗಿದ್ದರು. ಪಂ. ಸಹಾಯಕ ಕಾರ್ಯದರ್ಶಿ ಗಿರೀಶ್, ಹೆಲ್ತ್ ಇನ್‌ಸ್ಪೆಕ್ಟರ್ ಬಾಬುರಾಜ್ , ಸ್ಥಾಯೀ ಸಮಿತಿ ಅಧ್ಯಕ್ಷರು ಮತ್ತಿತರರಿದ್ದರು.

46 ಕೋ.ರೂ.ವೆಚ್ಚದ 528 ಪಿಡಬ್ಲ್ಯುಡಿ ಯೋಜನೆ | ಆನ್‌ಲೈನ್ ಮೂಲಕ ಸೇತುವೆ ಉದ್ಘಾಟನೆ

ಬೇಡಡ್ಕ -ಮುಳಿಯಾರು ಗ್ರಾಮಗಳನ್ನು ಬೆಸೆಯಿತು 'ಚೊಟ್ಟೆ'



ಕಾಸರಗೋಡು: 2016ರಲ್ಲಿ ಆಸ್ತಿತ್ವಕ್ಕೆ ಬಂದ ಕೇರಳ ಮೂಲಭೂತ ಸೌಕರ್ಯ ಹೂಡಿಕೆ ನಿಧಿ ಮಂಡಳಿ (ಕಿಫ್‌ಬಿ) ಮೂಲಕ 10 ವರ್ಷಗಳಲ್ಲಿ ಕೇರಳದ ಅಭಿವೃದ್ಧಿ ಭಾರೀ ಮುನ್ನಡೆ ಸಾಧಿಸಿದೆ ಎಂದು ರಾಜ್ಯ ಲೋಕೋಪಯೋಗಿ–ಪ್ರವಾಸೋದ್ಯಮ ಇಲಾಖೆ ಸಚಿವ ಪಿ.ಎ.ಮುಹಮ್ಮದ್ ರಿಯಾಸ್ ಹೇಳಿದ್ದಾರೆ.
ಬೇಡಡ್ಕ ಮತ್ತು ಮುಳಿಯಾರು ಗ್ರಾ.ಪಂ.ಗಳನ್ನು ಸಂಪರ್ಕಿಸುವ ನಿಟ್ಟಿನಲ್ಲಿ ಚೊಟ್ಟೆ ಪ್ರದೇಶದಲ್ಲಿ ಪಯಸ್ವಿನಿ ಹೊಳೆಗೆ ನೂತನವಾಗಿ ನಿರ್ಮಿಸಲಾದ ಚೊಟ್ಟೆ ಸೇತುವೆಯನ್ನು ಭಾನುವಾರ ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.
ದೀರ್ಘಾವಧಿಯ ದೃಷ್ಟಿಕೋನ ಹೊಂದಿರುವ ಅಭಿವೃದ್ಧಿ ಚಟುವಟಿಕೆ ಕೆಐಐಎಫ್‌ಬಿ ಮೂಲಕ ಪೂರ್ಣಗೊಳಿಸಲಾಗಿದೆ. ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದ ಮೂಲ ಸೌಕರ್ಯ ಅಭಿವೃದ್ಧಿಗೆ 46,145 ಕೋಟಿ ರೂ. ಮೌಲ್ಯದ 528 ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ಸಚಿವರು ತಿಳಿಸಿದರು.
ಕೇರಳದ 13 ಜಿಲ್ಲೆಗಳಲ್ಲಿ ಸುಮಾರು 1200 ಕಿಲೋ ಮೀಟರ್ ಮಲೆನಾಡು ಹೆದ್ದಾರಿ ಮತ್ತು 9 ಜಿಲ್ಲೆಗಳಲ್ಲಿ ಸುಮಾರು 600 ಕಿಲೋ ಮೀಟರ್ ಕರಾವಳಿ ರಸ್ತೆಗಳು ಪೂರ್ಣಗೊಂಡಿವೆ. ಸುರಂಗ ಮಾರ್ಗದ ಕೆಲಸವೂ ಆರಂಭವಾಗಿದೆ. ರಸ್ತೆ ಅಭಿವೃದ್ಧಿ ಕಾರ್ಯಗಳಿಗೆ ಲೋಕೋಪಯೋಗಿ ಇಲಾಖೆ 3500 ಕೋ.ರೂ.ಗಳನ್ನು ಖರ್ಚು ಮಾಡಿದೆ. ಲೆವೆಲ್ ಕ್ರಾಸಿಂಗ್‌ಗಳಿಲ್ಲದ ಕೇರಳ ಎಂಬ ಗುರಿಯೊಂದಿಗೆ 150 ರೈಲ್ವೆ ಮೇಲ್ಸೇತುವೆ ನಿರ್ಮಿಸಲಾಗಿದೆ. ಅಲ್ಲದೆ ಜನರು ಪ್ರೇಕ್ಷಕರಲ್ಲ ಬದಲಾಗಿ ಕಾವಲುಗಾರರು ಎಂಬುದನ್ನು ನೆನಪಿಸಲು ಚಟುವಟಿಕೆಗಳನ್ನು ಜಾರಿಗೊಳಿಸಲಾಗಿದೆ ಎಂದು ಸಚಿವರು ತಿಳಿಸಿದರು.
ಅತಿಥಿಯಾಗಿದ್ದ ಕಾಸರಗೋಡು ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಮಾತನಾಡಿ, ನಮ್ಮ ದೇಶ ಅಭಿವೃದ್ಧಿ ಹಾದಿಯಲ್ಲಿದೆ ಮತ್ತು ಒಂದು ಸರಕಾರವು ಪ್ರಾರಂಭಿಸಿದ ಅಭಿವೃದ್ಧಿ ಚಟುವಟಿಕೆಗಳ ಮುಂದುವರಿಸುವುದು ಮತ್ತೊಂದು ಸರಕಾರದ ಜವಾಬ್ದಾರಿಯಾಗಿದೆ ಹೇಳಿದರು.
ಉದುಮ ಶಾಸಕ ಸಿ.ಎಚ್.ಕುಂಞಂಬು ಅಧ್ಯಕ್ಷತೆ ವಹಿಸಿದ್ದರು. ಕೆಆರ್‌ಎಫ್‌ಬಿ ಕಾರ್ಯನಿರ್ವಾಹಕ ಇಂಜಿನಿಯರ್ ಸಿ.ಜೆ.ಕೃಷ್ಣನ್ ವರದಿ ಮಂಡಿಸಿದರು.

> **ಸಾಧನೆಯಾಗಿದೆ**
> ಸ್ಥಗಿತಗೊಂಡಿದ್ದ ರಾಷ್ಟ್ರೀಯ ಹೆದ್ದಾರಿ 66ರ ಕನಸಿನ ಯೋಜನೆ ಪುನರುಜ್ಜೀವನಗೊಳಿಸುವ ಕೆಲಸವನ್ನು ರಾಜ್ಯ ಸರಕಾರವು ಕೈಗೆತ್ತಿಕೊಂಡಿದೆ ಮತ್ತು ಇದಕ್ಕಾಗಿ 5,500 ಕೋ.ರೂ.ಗೂ ಹೆಚ್ಚು ಖರ್ಚು ಮಾಡಿದೆ. 5 ವರ್ಷಗಳಲ್ಲಿ 100 ಸೇತುವೆಗಳ ಗುರಿಯೊಂದಿಗೆ ನಡೆಸಲಾದ ಕಾಮಗಾರಿ ಮೂಲಕ 150 ಸೇತುವೆ ನಿರ್ಮಿಸಲು ಸಾಧ್ಯವಾಗಿರುವುದು ಬಹುದೊಡ್ಡ ಸಾಧನೆ.
> • ಪಿ.ಎ.ಮುಹಮ್ಮದ್ ರಿಯಾಸ್, ಸಚಿವ

ಕಾರಡ್ಕ ಬ್ಲಾಕ್ ಪಂ. ಅಧ್ಯಕ್ಷ ಸಿ.ಬಾಲನ್, ಬ್ಲಾಕ್ ಪಂ. ಸದಸ್ಯೆ ಎ.ಪಿ.ನಿಶಾ, ಮುಳಿಯಾರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಬಿ.ಮಹಮ್ಮದ್ ಕುಂಞಿ, ಬೇಡಡ್ಕ ಗ್ರಾ.ಪಂ. ಉಪಾಧ್ಯಕ್ಷೆ ಎಂ.ರಾಧಾ, ಗ್ರಾ.ಪಂ. ಸದಸ್ಯರಾದ ಪ್ರಶಾಂತ್ ಪಯಟಿಯಾಳ್, ಕೆ.ಪ್ರಭಾಕರನ್, ಜಿಲ್ಲಾ ಯೋಜನಾ ಸಮಿತಿ ನಾಮನಿರ್ದೇಶಿತ ಅಧಿ ಕಾರಿ ಸಿ.ರಾಮಚಂದ್ರನ್, ಚೊಟ್ಟೆ ಸೇತುವೆ ಕ್ರಿಯಾ ಸಮಿತಿ ಅಧ್ಯಕ್ಷ ಮೋಹನನ್ ನಾಯರ್ ಪಾಲಕ್ಕಲ್, ರಾಜಕೀಯ ಪಕ್ಷದ ಪ್ರತಿನಿಧಿ ಎಂ.ಮಾಧವನ್ ಮಾತನಾಡಿದರು.
ಬೇಡಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಮತ್ತು ಸಂಘಟನಾ ಸಮಿತಿ ಅಧ್ಯಕ್ಷ ಇ.ಕುಂಞಿರಾಮನ್ ಸ್ವಾಗತಿಸಿ, ಕೆಆರ್‌ಎಫ್‌ಬಿ ಕಾಸರಗೋಡು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎಂ.ರಾಜೇಶ್ ಕುಮಾರ್ ವಂದಿಸಿದರು.

> **ವಿವಿಧ ವಲಯಗಳ ಪ್ರತಿನಿಧಿಗಳಿಗೆ ಸನ್ಮಾನ**
> ಸೇತುವೆಗೆ ಭೂದಾನ ಮಾಡಿದ ಮೋಹನನ್ ಪಾಲಕ್ಕಲ್, ಸೇತುವೆಯನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಿದ ಜಾಸ್ಮಿನ್ ಕನ್‌ಸ್ಟ್ರಕ್ಷನ್ ಮತ್ತು ಕೆಲಸದ ಮೇಲ್ವಿಚಾರಣೆ ನಡೆಸಿದ ಕೆಐಐಎಫ್‌ಬಿ ಕೇರಳ ರಸ್ತೆ ನಿಧಿ ಮಂಡಳಿಯ ಪ್ರತಿನಿಧಿಗಳು ಸೇರಿದಂತೆ 26 ಮಂದಿ ಸ್ಥಳೀಯ ನಿವಾಸಿಗಳನ್ನು ಸನ್ಮಾನಿಸಲಾಯಿತು.

ಮಾನ್ಯದಲ್ಲಿ ಬ್ರಹ್ಮಕುಮಾರೀಸ್ ಸಂಸ್ಥಾಪಕ ಪ್ರಜಾಪಿತ ಬ್ರಹ್ಮರ 90ನೇ ಜನ್ಮ ದಿನಾಚರಣೆ



ಬದಿಯಡ್ಕ: ಅರಿವಿಗಿಂತ ದೊಡ್ಡ ಗುರು ಬೇರೊಂದಿಲ್ಲ, ಎಲ್ಲಾ ಭಾವ ತೊಳಲಾಟ, ಮನಸ್ಸಿನ ಎಲ್ಲಾ ಕ್ಷೋಭೆಗಳನ್ನು ಮರೆತು ತಾನು ಯಾರೆಂಬ ರಹಸ್ಯ ಭೇದಿಸಿದಾಗ ಬದುಕು ಸಾರ್ಥಕ್ಯ ಗಳಿಸುತ್ತದೆ ಎಂದು ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದ ಕಾಸರಗೋಡು ವಲಯ ಸಂಯೋಜಕಿ ಬಿ.ಕೆ.ವಿಜಯಲಕ್ಷ್ಮೀ ಹೇಳಿದ್ದಾರೆ.
ನೀರ್ಚಾಲು ಸಮೀಪದ ಮಾನ್ಯದಲ್ಲಿ ಬ್ರಹ್ಮಕುಮಾರೀಸ್ ಈಶ್ವರೀಯ ವಿದ್ಯಾಲಯದ ಸ್ಥಳೀಯ ಘಟಕದ ನೇತೃತ್ವದಲ್ಲಿ ಭಾನುವಾರ ಪ್ರಜಾಪಿತ ಬ್ರಹ್ಮಕುಮಾರೀಸ್ ಸಂಸ್ಥಾಪಕ ಪ್ರಜಾಪಿತ ಬ್ರಹ್ಮ ಅವರ 90ನೇ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಭಾ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಸಂದೇಶ ನೀಡಿದರು.
ಬದಿಯಡ್ಕ ಗ್ರಾ.ಪಂ. ಸದಸ್ಯ ಶ್ಯಾಮಪ್ರಸಾದ ಮಾನ್ಯ, ಗೋವಿಂದ ನಾಯ್ಕ, ಬಾಲಗೋಕುಲ ಮಾನ್ಯ ಸಮಿತಿ ಸಂಚಾಲಕ ಮಧುಚಂದ್ರ ಮಾನ್ಯ, ವೈದ್ಯೆ ಡಾ.ಮಮತಾ ಮಂಗಳೂರು, ಪತ್ರಕರ್ತ ಪುರುಷೋತ್ತಮ ಭಟ್ ಕೆ. ಉಪಸ್ಥಿತರಿದ್ದು ಶುಭಹಾರೈಸಿದರು. ಬ್ರಹ್ಮಕುಮಾರೀಸ್ ಮಾನ್ಯ ಘಟಕದ ಸಂಚಾಲಕ ಎಂ.ಎಚ್. ಜನಾರ್ದನ ಸ್ವಾಗತಿಸಿದರು. ಬ್ರಹ್ಮಕುಮಾರ ಡಾ.ಸುಬ್ರಹ್ಮಣ್ಯ ವಂದಿಸಿದರು. ಬಿ.ಕೆ.ಕವಿತಾ ಕಾರ್ಯಕ್ರಮ ನಿರೂಪಿಸಿದರು. ಬಿ.ಕೆ.ರೇಷ್ಮಾ ಸಂಸ್ಥೆಯ ಬಗ್ಗೆ ಮಾತನಾಡಿದರು. ಕೃಪಾ , ಕೀರ್ತಿ ಸ್ವಾಗತ ನೃತ್ಯ ಪ್ರಸ್ತುತ ಪಡಿಸಿದರು. ಬಿ.ಕೆ.ಮಂಗಳಾ, ಬಿಂದು ಸಹಕರಿಸಿದರು.

> **ಅಧ್ಯಾತ್ಮ ಶಕ್ತಿಯಿಂದ ನೆಮ್ಮದಿ ಕಂಡುಕೊಳ್ಳಿ**
> ಇಂದಿನ ಒತ್ತಡದ ಜೀವನದಿಂದ ಪಾರಾಗಲು, ಟೆನ್ಷನ್ ರಹಿತವಾಗಲು ಆಟೆಕ್ಷನ್ ಜೀವನವೇ ಸೂತ್ರವಾಗಿದೆ. ಅಧ್ಯಾತ್ಮದ ಶಕ್ತಿ ಅಂತಹ ನೆಮ್ಮದಿಯನ್ನು ನೀಡುತ್ತದೆ.
> • ಬಿ.ಕೆ.ವಿಜಯಲಕ್ಷ್ಮೀ

ದಿವ್ಯಾಂಗರಿಗೆ ಸೈಡ್ ವ್ಹೀಲ್ ಸ್ಕೂಟರ್‌ಗಳ ವಿತರಣೆ, ಶ್ರವಣ ಉಪಕರಣ ಪರೀಕ್ಷಾ ಶಿಬಿರ



ಕಾಸರಗೋಡು: ಕೇರಳ ಸರಕಾರವು ಜಾರಿಗೆ ತಂದಿರುವ ಅಭಿವೃದ್ಧಿ ಮತ್ತು ಕಲ್ಯಾಣ ಚಟುವಟಿಕೆಗಳು ಸಾಮಾಜಿಕ ನ್ಯಾಯ ಆಧರಿಸಿವೆ , ಸಮಗ್ರ ಅಭಿವೃದ್ಧಿ ದೃಷ್ಟಿಕೋನ ಹೊಂದಿದೆ ಎಂದು ತೃಕ್ಕರೀಪ್ಪುರ ಶಾಸಕ ಎಂ.ರಾಜಗೋಪಾಲನ್ ಹೇಳಿದ್ದಾರೆ.
ಕಾಸರಗೋಡು ಜಿಲ್ಲಾ ವ್ಯಾಪ್ತಿಯ ದಿವ್ಯಾಂಗರಿಗೆ ಸೈಡ್ ವ್ಹೀಲ್ ಸ್ಕೂಟರ್‌ಗಳ ವಿತರಣೆ ಮತ್ತು ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದಿವ್ಯಾಂಗರಿಗೆ ಶ್ರವಣ ಉಪಕರಣಗಳ ಪರೀಕ್ಷಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವಾರು ಯೋಜನೆ ಜಾರಿಗೆ

ರಾಜ್ಯ ದಿವ್ಯಾಂಗ ಕಲ್ಯಾಣ ನಿಗಮದ ಮೂಲಕ ಸರಕಾರ ದಿವ್ಯಾಂಗ ಸಮುದಾಯದ ಪುನರ್ವಸತಿಗಾಗಿ ಹಲವಾರು ಅನುಕರಣೀಯ ಯೋಜನೆ ಜಾರಿಗೆ ತರುತ್ತಿದೆ. ವಿವಿಧ ವಲಯಗಳಲ್ಲಿ ಜನರು ಎದುರಿಸುತ್ತಿರುವ ನಿರ್ದಿಷ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರಕಾರ ಶ್ರಮಿಸುತ್ತಿದೆ. ಸಮಾಜದ ಹಿಂದುಳಿದ ಜನರನ್ನು ಮುಖ್ಯವಾಹಿನಿಗೆ ತರಲು ಅಗತ್ಯವಾದ ಸಾಮಾಜಿಕ, ಆರ್ಥಿಕ ಮತ್ತು ಆಡಳಿತಾತ್ಮಕ ಬೆಂಬಲವನ್ನು ಖಚಿತ ಪಡಿಸುತ್ತಿದೆ ಎಂದು ಅವರು ನುಡಿದರು.
ಕೇರಳ ರಾಜ್ಯ ದಿವ್ಯಾಂಗ ಕಲ್ಯಾಣ ನಿಗಮದ ಅಧ್ಯಕ್ಷ, ವಕೀಲ ಎಂ.ವಿ.ಜಯದಲಿ ಅಧ್ಯಕ್ಷತೆ ವಹಿಸಿದ್ದರು. ಚೆರುವತ್ತೂರು ಗ್ರಾಮ ಪಂಚಾಯತ್. ಅಧ್ಯಕ್ಷ ಟಿ. ನಾರಾಯಣನ್, ಉಪಾಧ್ಯಕ್ಷೆ ಮಿನಿ, ಕ್ಷೇಮ ಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ವಿ.ವಿ.ರೀನಾ, ಡಿಎಡಬ್ಲ್ಯುಎಫ್ ಜಿಲ್ಲಾ ಕಾರ್ಯದರ್ಶಿ ಸಿ.ವಿ.ಸುರೇಶ್, ರಾಜ್ಯ ಸಲಹಾ ಮಂಡಳಿ ಸದಸ್ಯ ರಾಮ ಮೊದಲಾದವರು ಮಾತನಾಡಿದರು. ವ್ಯವಸ್ಥಾಪಕ ನಿರ್ದೇಶಕ ಕೆ.ಮೊಯ್ದೀನ್ ಕುಟ್ಟಿ ಸ್ವಾಗತಿಸಿ, ವಂದಿಸಿದರು.

> **ಪ್ರಮಾಣ ಪತ್ರ ವಿತರಣೆ**
> 16 ಮಂದಿ ಫಲಾನುಭವಿಗಳಿಗೆ ಸೈಡ್ ವ್ಹೀಲ್ ಸ್ಕೂಟರ್ ವಿತರಿಸಲಾಯಿತು. ದಿವ್ಯಾಂಗ ವಲಯದ ಮಕ್ಕಳಿಗೆ ಜಾರಿಗೆ ತರಲಾದ ಹಸ್ತದಾನ ಯೋಜನೆ ಪ್ರಮಾಣಪತ್ರ ನೀಡಲಾಯಿತು.

ಮಾರ್ಚ್‌ನಲ್ಲಿ ಅಧಿಕಾರಿಗಳ ವರ್ಗಾವಣೆ ಬೇಡ: ಬದಿಯಡ್ಕ ಗ್ರಾಪಂ ಅಧ್ಯಕ್ಷರ ಮನವಿ



ಬದಿಯಡ್ಕ: ಆರ್ಥಿಕ ವರ್ಷ ಕೊನೆಗೊಳ್ಳುವ ಮಾರ್ಚ್ ತಿಂಗಳಲ್ಲಿ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಸರಕಾರವು ಬದಿಯಡ್ಕ ಗ್ರಾಮ ಪಂಚಾಯತ್‌ನ ಕತ್ತು ಹಿಸುಕಲು ಯತ್ನಿಸುತ್ತಿದೆ ಎಂದು ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ದೂರಿದ್ದಾರೆ. ಅವರು ರಾಜ್ಯ ಸ್ಥಳೀಯಾಡಳಿತ ಖಾತೆ ಸಚಿವರಿಗೆ ಪತ್ರ ಬರೆದು ಮಾರ್ಚ್ ತಿಂಗಳು ಕೊನೆಗೊಳ್ಳುವ ಮೊದಲು ಬದಿಯಡ್ಕ ಗ್ರಾ.ಪಂ. ಕಚೇರಿಯಿಂದ ಯಾವುದೇ ಅಧಿಕಾರಿಯನ್ನು ವರ್ಗಾಯಿಸಬಾರದು ಎಂದು ಒತ್ತಾಯಿಸಿ ದ್ದಾರೆ.
ನೂತನ ಬದಿಯಡ್ಕ ಗ್ರಾ.ಪಂ. ಆಡಳಿತ ವಹಿಸಿದ್ದ ವೇಳೆ ಗ್ರಾ.ಪಂ. ಕಚೇರಿಯಲ್ಲಿ 10ರಷ್ಟು ಉದ್ಯೋಗಿಗಳು ಇರಲಿಲ್ಲ, ಗ್ರಾ.ಪಂ. ಆಡಳಿತದ ಹಾಗೂ ಇತರರ ನಿರಂತರ ಒತ್ತಾಯದ ಮೇರೆಗೆ ಕಾರ್ಯದರ್ಶಿ ಸಹಿತ ಇತರ ಉದ್ಯೋಗಿಗಳ ನೇಮಕಾತಿ ನಡೆದಿತ್ತು. ಆದರೆ ಇದೀಗ ಕಾರ್ಯದರ್ಶಿಯವರು ರಾಜಕೀಯ ಒತ್ತಡದಿಂದ ಸ್ವತಃ ವರ್ಗಾವಣೆ ಪಡೆದಿದ್ದಾರೆ. ಇತರ ಉದ್ಯೋಗಿಗಳು ಕೂಡಾ ಇದೇ ಹಾದಿಯಲ್ಲಿದ್ದಾರೆ.
ಸ್ಥಳೀಯಾಡಳಿತ ಸಂಸ್ಥೆಗಳ ಆರ್ಥಿಕ ವರ್ಷ ಮಾರ್ಚ್ ತಿಂಗಳಲ್ಲಿ ಕೊನೆಗೊಳ್ಳಲಿದೆ. ವಾರ್ಷಿಕ ಬಜೆಟ್, ಯೋಜನೆ ರೂಪೀಕರಣ, ಕಳೆದ ವರ್ಷದ ಯೋಜನೆ ಪೂರ್ತಿಕರಣ ಎಂಬಿತ್ಯಾದಿಗಳು ಮಾರ್ಚ್ ತಿಂಗಳಲ್ಲಿ ಮುಗಿಸಬೇಕಿದೆ. ಆದರೆ ಉದ್ಯೋಗಿಗಳ ಕೊರತೆ ಈ ಎಲ್ಲಾ ಕೆಲಸ ಕಾರ್ಯಗಳ ವೇಗಕ್ಕೆ ಕಡಿವಾಣ ಹಾಕಲಿದೆ. ಮಾತ್ರವಲ್ಲ ಅಭಿವೃದ್ಧಿಯಲ್ಲಿ ಬದಿಯಡ್ಕ ಪಂ. ಹಿಂದುಳಿಯಲಿದೆ. ಈ ಹಿನ್ನೆಲೆ ಮಾರ್ಚ್ ಕೊನೆಯವರೆಗೆ ಬದಿಯಡ್ಕ ಪಂ.ನ ಯಾವುದೇ ಉದ್ಯೋಗಿಗೆ ವರ್ಗಾವಣೆ ನೀಡಬಾರದೆಂದಯ ಸ್ಥಳೀಯಾಡಳಿತ ಇಲಾಖೆ ಸಚಿವರಲ್ಲಿ ವಿನಂತಿಸಿದ್ದಾರೆ.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿ ವರ್ಷಾಚರಣೆಯ ಅಂಗವಾಗಿ ಉಳಿಯತ್ತಡ್ಕ ಯು.ಕೆ.ಗಟ್ಟಿ ಮೈದಾನದಲ್ಲಿ ಭಾನುವಾರ ನಡೆದ ಮಧೂರು ಪಂಚಾಯತ್ ಮಟ್ಟದ ವಿರಾಟ್ ಹಿಂದು ಸಂಗಮವನ್ನು ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ದೀಪಬೆಳಗಿಸಿ ಉದ್ಘಾಟಿಸಿ ಅನುಗ್ರಹ ಭಾಷಣ ಮಾಡಿದರು.

ಎಡನೀರು ವಲಯ: ಕುಂಡಂಗುಳಿ ಒಕ್ಕೂಟ ವಾರ್ಷಿಕೋತ್ಸವ, ಭಜನಾ ಮಂಗಳೋತ್ಸವ



ಮುಳ್ಳೇರಿಯ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಾಸರಗೋಡು ತಾಲೂಕು ಎಡನೀರು ವಲಯದ ಕುಂಡಂಗುಳಿ ಕಾರ್ಯಕ್ಷೇತ್ರದ ಕುಂಡಂಗುಳಿ ಒಕ್ಕೂಟದ ವಾರ್ಷಿಕೋತ್ಸವ ಮತ್ತು ಭಜನಾ ಮಂಗಳೋತ್ಸವ ಕಾರ್ಯಕ್ರಮ ಭಾನುವಾರ ಕುಂಡಂಗುಳಿ ವ್ಯಾಪಾರಿ ಭವನದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಸಡಗರದಿಂದ ಜರಗಿತು.
ಸಮಾರಂಭವನ್ನು ಚೆರಳಿಲ್ ರಾಘವನ್ ಗುರುಸ್ವಾಮಿ ಉದ್ಘಾಟಿಸಿದರು. ಅತಿಥಿಯಾಗಿದ್ದ ದಕ್ಷಿಣ ಕನ್ನಡ–2 ಜಿಲ್ಲೆಯ ಜಿಲ್ಲಾ ನಿರ್ದೇಶಕ ಎ.ಬಾಬು ನಾಯಕ್ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಇಂದು ಎಲ್ಲಾ ಪಾಲುದಾರ ಬಂಧುಗಳಿಗೆ ಸ್ವ ಸಹಾಯ ಸಂಘಗಳ ಮೂಲಕ ಆರ್ಥಿಕ ಸಹಾಯ ನೀಡುತ್ತಿದೆ ಎಂದರು. ಮಾತ್ರವಲ್ಲದೆ ಅಭಿವೃದ್ಧಿಗೆ ಪೂರಕವಾಗಿ ಕಾರ್ಯಚಟುವಟಿಕೆ ನಡೆಸುತ್ತಿದೆ. ಸಂಘದ ಎಲ್ಲಾ ಸದಸ್ಯರು ಸಂಘದ ಶ್ರೇಣಿ ಕಾಪಾಡಿಕೊಂಡು ಉತ್ತಮ ಗ್ರೇಡ್ ನಿರ್ವಹಣೆ ಮಾಡಬೇಕು ಎಂದರು.

ಬದುಕಿಗೆ ಭಜನೆ ಉತ್ತಮ ದಾರಿ

ಭಕ್ತಿ ಭಜನೆ ಮತ್ತು ಮನುಷ್ಯನ ಜೀವನ ನಿರ್ವಹಣೆಯಲ್ಲಿ ಧಾರ್ಮಿಕ ನಂಬಿಕೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಆಹಾರ ಸಂಸ್ಕಾರ ಮತ್ತು ನಮ್ಮ ದಿನನಿತ್ಯದ ಬದುಕಿಗೆ ಭಜನೆ ಉತ್ತಮ ದಾರಿಯಾಗಿದೆ ಎಂದರು.
ಕಾಸರಗೋಡು ತಾಲೂಕು ಯೋಜನಾಧಿಕಾರಿ ದಿನೇಶ್ ಅವರು ಸಂಘದ ಸದಸ್ಯರಿಗೆ ಮಾಹಿತಿ ಮಾರ್ಗದರ್ಶನ ನೀಡಿದರು.
ಪ್ರಮುಖರಾದ ರಾಧಾಕೃಷ್ಣ ಭಟ್, ದಾಕ್ಷಾಯಿಣಿ ಮತ್ತಿತರರಿದ್ದರು. ಒಕ್ಕೂಟ ಪದಾಧಿಕಾರಿಗಳು, ಸದಸ್ಯರಿದ್ದರು.
ಅಶ್ವಥ್, ಹರೀಶ್ ಕಾರ್ಯಕ್ರಮ ನಿರೂಪಿಸಿದರು. ಸೇವಾ ಪ್ರತಿನಿಧಿ ನವೀನ ಕುಮಾರಿ ಸ್ವಾಗತಿಸಿದರು. ವಿವಿಧ ಭಜನಾ ಮಂಡಳಿಯಿಂದ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿದವು.

ಹರ್ಷಿತಾ ಪೆರ್ಲರ ಕವನ ಸಂಕಲನ 'ಚಿಗುರು' ಬಿಡುಗಡೆ ಕಾರ್ಯಕ್ರಮ



ಪೆರ್ಲ: ಸವಿ ಹೃದಯದ ಕವಿಮಿತ್ರರು ವೇದಿಕೆ ವತಿಯಿಂದ ನಳಿನಿ ಐತ್ತಪ್ಪ ನಾಯ್ಕ ಪರಪ್ಪಕರ್ಯ ಅವರ ಪುತ್ರಿ ಹರ್ಷಿತಾ ಪೆರ್ಲ ಅವರ ಚೊಚ್ಚಲ ಕವನ ಸಂಕಲನವಾದ ಚಿಗುರು ಎಂಬ ಕೃತಿ ಬಿಡುಗಡೆ ಕಾರ್ಯಕ್ರಮ ಪೆರ್ಲ ವ್ಯಾಪಾರಿ ಭವನದಲ್ಲಿ ನಡೆಯಿತು.
ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠದ ಮುಖ್ಯೋಪಾಧ್ಯಾಯ ಸತ್ಯನಾರಾಯಣ ಶರ್ಮ ಪಂಜಿತ್ತಡ್ಕ ಕಾರ್ಯಕ್ರಮ ಉದ್ಘಾಟಿಸಿ, ಕವಿ ಮನಸ್ಸು ಬೆಳಕಿನಂತೆ ಪ್ರಖರ. ಬಾಲ್ಯಕಾಲದಲ್ಲಿ ಮೂಡಿದ ಆಸಕ್ತಿ ಅಭಿರುಚಿಗಳ ಮುಂದುವರಿಸುತ್ತಾ ಹೋದರೆ ಮಾತ್ರ ಸಮಾಜದಲ್ಲಿ ಸಾಧಕನಾಗಲು ಸಾಧ್ಯ.. ಎಂದರು.
ಮಂಗಳೂರು ತಾಲೂಕು ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಗೋಪಾಲಕೃಷ್ಣ ಶಾಸ್ತ್ರಿ ಕೃತಿ ಬಿಡುಗಡೆಗೊಳಿಸಿ, ಕವಿತ್ವವನ್ನು ಎಳೆಯದರಲ್ಲಿ ಗುರುತಿಸಿ ಪೋಷಿಸುತ್ತಿರುವುದು ಸ್ತುತ್ಯಾರ್ಹ ಎಂದರು. ಹಿರಿಯ ಕವಿ, ಪತ್ರಕರ್ತ, ಗಡಿನಾಡ ಚೇತನ ಪ್ರಶಸ್ತಿ ಪುರಸ್ಕೃತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅಧ್ಯಕ್ಷತೆ ವಹಿಸಿದ್ದರು.
ಶಿಕ್ಷಕಿ ಹಾಗೂ ಲೇಖಕಿ ಪ್ರೇಮಾ ಆರ್. ಶೆಟ್ಟಿ ಮೂಲ್ಕಿ ಕೃತಿ ಪರಿಚಯಿಸಿದರು. ಶಿಕ್ಷಕ ಗಣೇಶ್ ಆಚಾರ್ಯ ಅತಿಥಿಯಾಗಿದ್ದರು. ಕಸಾಪ ಕೇರಳ ಗಡಿನಾಡ ಘಟಕ ಅಧ್ಯಕ್ಷ ಡಾ. ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಹಿರಿಯ ಸಾಹಿತಿ ಹರೀಶ್ ಪೆರ್ಲ, ಚುಟುಕು ಸಾಹಿತ್ಯ ಪರಿಷತ್‌ನ ದ.ಕ.ಜಿಲ್ಲಾಧ್ಯಕ್ಷ ಹರೀಶ್ ಸುಲಾಯ ಒಡ್ಡಂಬೆಟ್ಟು, ಹಿರಿಯ ಸಾಹಿತಿ, ವ್ಯಂಗಚಿತ್ರಕಾರ ವೆಂಕಟ ಭಟ್ ಎಡನೀರು, ಎಣ್ಮಕಜೆ ಗ್ರಾ.ಪಂ.ಮಾಜಿ ಅಧ್ಯಕ್ಷೆ ಪುಷ್ಪಾ ಅಮೆಕ್ಕಳ, ಸಾಹಿತಿ, ಉಪನ್ಯಾ ಸಕ ಬಾಲಕೃಷ್ಣ ಬೇರಿಕೆ, ಪತ್ರಕರ್ತ ಜಯ ಮಣಿಯಂಪಾರೆ, ಕೃತಿಗಾರ್ತಿ ಹರ್ಷಿತಾ ಪೆರ್ಲ ಉಪಸ್ಥಿತರಿದ್ದರು. ಸವಿಹೃದಯದ ಕವಿಮಿತ್ರರು ವೇದಿಕೆ ಸಂಚಾಲಕ ಸುಭಾಷ್ ಪೆರ್ಲ ಪ್ರಸ್ತಾವನೆಗೈದರು. ಪೃಥ್ವಿ , ಶಿಕ್ಷಕಿ ಜ್ಯೋತ್ಸ್ನಾ ಎಂ. ಕಡಂದೇಲು, ವಿಜಯ ಕಾನ , ಪವಿತ್ರಾ ದಿನೇಶ್ ಮೊದಲಾದವರು ಉಪಸ್ಥಿತರಿದ್ದರು.



ಕಾಸರಗೋಡು ತೆರುವತ್ ಶ್ರೀ ಚಿರುಂಬಾ ಭಗವತೀ ಕ್ಷೇತ್ರದಲ್ಲಿ ಬ್ರಹ್ಮಕಲಶ ಮತ್ತು ನಡಾವಳಿ ಮಹೋತ್ಸವದ ಅಂಗವಾಗಿ ಶನಿವಾರ ಶ್ರೀ ವಿಷ್ಣುಮೂರ್ತಿ ದೈವದ ಕೋಲ ಶ್ರದ್ಧಾಭಕ್ತಿಯಿಂದ ಜರಗಿತು.

ಅಡೂರು ಗಾಳಿಮುಖದಲ್ಲಿ ಗೋಡಂಬಿ ಆಗ್ರೋ ಫಾರ್ಮ್ ಎಕ್ಸ್‌ಪೋ ಸಮಾರಂಭ | ಕೃಷಿಕರಿಗೆ ಮುಕ್ತ ಅವಕಾಶ

ಗೇರು ಬೀಜ ಕೃಷಿಕರಿಗೆ ಸ್ಥಳೀಯಾಡಳಿತ ಸಂಸ್ಥೆಗಳ ಸಹಕಾರ ಅತ್ಯಗತ್ಯ : ಕೆ.ಕೆ.ಸೋಯಾ

ಕಾಸರಗೋಡು: ಫಾರ್ಮ್ ಕೌನ್ಸಿಲ್ ಮತ್ತು ಗೋಡಂಬಿ ಅಭಿವೃದ್ಧಿ ಕಚೇರಿ ಇವುಗಳ ಜಂಟಿ ಆಶ್ರಯದಲ್ಲಿ ಅಡೂರು ಗಾಳಿಮುಖ ಗೇರುಬೀಜ ತೋಟದಲ್ಲಿ ಮೂರು ದಿನಗಳ ಫಾರ್ಮ್ ಫೆಸ್ಟ್ (ಗೋಡಂಬಿ ಆಗ್ರೋ ಫಾರ್ಮ್ ಎಕ್ಸ್‌ಪೋ) ಶನಿವಾರ ಪ್ರಾರಂಭವಾಗಿದೆ.
ಜಿ.ಪಂ. ಉಪಾಧ್ಯಕ್ಷೆ ಕೆ.ಕೆ.ಸೋಯಾ, ಫಾರ್ಮ್ ಫೆಸ್ಟ್ ಉದ್ಘಾಟಿಸಿ, ಗೇರುಬೀಜ ಕೃಷಿ ಇನ್ನಷ್ಟು ಪ್ರದೇಶಗಳಿಗೆ ವಿಸ್ತರಿಸಬೇಕು. ಕಾಸರಗೋಡು ಜಿಲ್ಲೆಯ ಗೇರುಬೀಜಕ್ಕೆ ವಿಶ್ವದಲ್ಲೇ ಮಹತ್ವದ ಸ್ಥಾನಮಾನವಿದೆ ಎಂದರು. ಗೇರು ಬೀಜ ಕೃಷಿಕರಿಗೆ ಪ್ರೋತ್ಸಾಹದ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳು ಸಹಕರಿಸಬೇಕಾಗಿವೆ ಎಂದರು.
ಕಾರಡ್ಕ ಗ್ರಾ.ಪಂ. ಅಧ್ಯಕ್ಷೆ ಎಂ. ಜನನಿ ಅಧ್ಯಕ್ಷತೆ ವಹಿಸಿದ್ದರು. ಕಾರಡ್ಕ ಬ್ಲಾಕ್ ಪಂ. ಅಧ್ಯಕ್ಷ ಸಿ.ಬಾಲನ್ ಮುಖ್ಯ ಭಾಷಣ ಮಾಡಿದರು. ಕಾಸರಗೋಡು ಪ್ರಧಾನ ಕೃಷಿ ಅಧಿಕಾರಿ ಪಿ.ರಾಘವೇಂದ್ರ ಯೋಜನೆ ಬಗ್ಗೆ ವಿವರಿಸಿದರು. ಕಾರಡ್ಕ ಬ್ಲಾಕ್ ಪಂ. ಉಪಾಧ್ಯಕ್ಷೆ ಬಿ.ಉಷಾ, ಬ್ಲಾಕ್ ಪಂ. ಸದಸ್ಯೆ ರೂಪಾ ಸತ್ಯನ್, ಗ್ರಾ.ಪಂ. ಉಪಾಧ್ಯಕ್ಷ ದಾಮೋದರ ರಾವ್, ಗ್ರಾ.ಪಂ. ಸದಸ್ಯೆ ಎ.ಬೇಬಿ, ಆತ್ಮ ಕಾಸರಗೋಡು ಯೋಜನಾ ನಿರ್ದೇಶಕ ಕೆ.ಆನಂದ, ಗ್ರಾ.ಪಂ.ಸ್ಥಾಯಿ ಸಮಿತಿ ಅಧ್ಯಕ್ಷ ಸವಿತಾ, ವಸಂತಿ, ಇ.ಎನ್.ಸುಹಾಸ್, ಗ್ರಾ.ಪಂ.ಕಾರ್ಯದರ್ಶಿ ಎ.ಅಜೇಶ್, ಅಡೂರು ಗಾಳಿಮುಖ ಗೋಡಂಬಿ ಬೀಜ ತೋಟದ ಕೃಷಿ ಅಧಿಕಾರಿ ಎನ್.ಸೂರಜ್ ಮಾತನಾಡಿದರು.
ಜಿ.ಪಂ. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಇರ್ಫಾನಾ ಇಕ್ಬಾಲ್ ಸ್ವಾಗತಿಸಿ, ಗೋಡಂಬಿ ಅಭಿವೃದ್ಧಿ ವಿಭಾಗದ ಅಧಿಕಾರಿ ಮನು ನರೇಂದ್ರನ್ ವಂದಿಸಿದರು.



> ■ ರೈತರಿಗೆ ಹೊಸ ತಂತ್ರಜ್ಞಾನಗಳು ಮತ್ತು ಗೋಡಂಬಿ ಕೃಷಿ , ಸಂಬಂಧಿತ ವಲಯಗಳಿಗೆ ಸಂಬಂಧಿಸಿದ ಅತ್ಯುತ್ತಮ ಪ್ರಭೇದಗಳ ಪರಿಚಯಿಸಲು ಸಹಕಾರಿ
>
> ■ ಗೋಡಂಬಿ ಬೀಜ ತೋಟದ ಸೌಂದರ್ಯ ಆನಂದಿಸಲು, ಕಡಿಮೆ ಬೆಲೆಯಲ್ಲಿ ವಿವಿಧ ಉತ್ಪನ್ನಗಳ ಪಡೆಯುವ ಅವಕಾಶ

> **ಕೃಷಿಕರ ಆದಾಯ ಹೆಚ್ಚಿಸುವ ಉದ್ದೇಶ**
> ಕೃಷಿ ಉತ್ಸವದ 3 ದಿನಗಳಲ್ಲಿಯೂ ಸಾರ್ವಜನಿಕರಿಗೆ ವೀಕ್ಷಣಾ ಸ್ಥಳ ತೆರೆದಿರುತ್ತದೆ. ರೈತರ ಆದಾಯ ಹೆಚ್ಚಿಸುವುದು, ಗುಣಮಟ್ಟದ ವಸ್ತುಗಳ ಒದಗಿಸುವುದು , ಆಧುನಿಕ ಕೃಷಿ ವಿಧಾನ ಉತ್ತೇಜಿಸುವ ಉದ್ದೇಶದಿಂದ ಕೃಷಿ ಉತ್ಸವ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಭಾಗವಾಗಿ ಸುಧಾರಿತ ಗೋಡಂಬಿ ಪ್ರಭೇದಗಳು, ಕಸಿ ಮಾಡಿದ ಸಸಿಗಳು, ಕುಬ್ಜ ಗೋಡಂಬಿ ಇತ್ಯಾದಿ ಪ್ರದರ್ಶಿಸಲಾಗುತ್ತದೆ, ವಿತರಿಸಲಾಗುತ್ತದೆ. ಗೋಡಂಬಿ ಕೃಷಿಗೆ ಸಂಬಂಧಿಸಿದ ಸಂದೇಹಗಳು, ಕೃಷಿ ತರಬೇತಿ, ತಜ್ಞರೊಂದಿಗೆ ಚರ್ಚೆ ಸಹ ಪ್ರದರ್ಶನದ ಭಾಗವಾಗಿ ಹಮ್ಮಿಕೊಳ್ಳಲಾಗಿದೆ.

ಕೃಷಿ ಪ್ರದರ್ಶನ ಮತ್ತು ಮಾರುಕಟ್ಟೆ ಮೇಳ

ಕೇರಳ ಸರಕಾರವು ನಡೆಸುವ ಎಲ್ಲಾ ಕೃಷಿ ಜಮೀನುಗಳಲ್ಲಿ ಕೃಷಿ ಉತ್ಸವಗಳನ್ನು ಆಯೋಜಿಸುವ ಮೂಲಕ ರೈತರಿಗೆ ಹೊಸ ತಂತ್ರಜ್ಞಾನಗಳು ಮತ್ತು ಗೋಡಂಬಿ ಕೃಷಿ ಹಾಗೂ ಸಂಬಂಧಿತ ವಲಯಗಳಿಗೆ ಸಂಬಂಧಿಸಿದ ಅತ್ಯುತ್ತಮ ಪ್ರಭೇದಗಳನ್ನು ಪರಿಚಯಿಸಲು ಸಾಧ್ಯವಾಗುತ್ತಿದೆ. ಕೃಷಿ ಸಚಿವರ ನಿರ್ದೇಶನದ ಮೇರೆಗೆ ಗೇರುಬೀಜ ತೋಟದಲ್ಲಿ ಮೂರು ದಿನಗಳ ಕೃಷಿ ಪ್ರದರ್ಶನ ಮತ್ತು ಮಾರುಕಟ್ಟೆ ಮೇಳವನ್ನು ಆಯೋಜಿಸಲಾಗಿದೆ. ಅದರಂತೆ ಫೆ.28ರಂದು ಆರಂಭವಾಗಿದ್ದು, ಮತ್ತು ಮಾ.2ರವರೆಗೆ ಕೃಷಿ ಉತ್ಸವ ಜರಗಲಿದೆ. ಈ ದಿನಗಳಲ್ಲಿ ಬೆಳಗ್ಗೆ 9 ರಿಂದ ಸಂಜೆ 6ರ ವರೆಗೆ ಗೇರುಬೀಜ ಕೃಷಿ ತೋಟವು ಸಾರ್ವಜನಿಕರಿಗೆ ಉಚಿತವಾಗಿ ತೆರೆದಿರುತ್ತದೆ. ಗಾಳಿಮುಖ, ಅಡೂರಿನಲ್ಲಿ ವ್ಯಾಪಿಸಿರುವ ಗೋಡಂಬಿ ಬೀಜ ತೋಟದ ಸೌಂದರ್ಯ ಆನಂದಿ ಸಲು, ಕಡಿಮೆ ಬೆಲೆಯಲ್ಲಿ ವಿವಿಧ ಉತ್ಪನ್ನಗಳ ಪಡೆ ಯಲು ಕೃಷಿ ಉತ್ಸವ ಸಾರ್ವಜನಿಕರಿಗೆ ಅವಕಾಶ ಒದಗಿಸುತ್ತಿದೆ.

ಕೃಷಿ ಇಲಾಖೆಗೆ ಸಂಬಂಧಿಸಿದ ಮಳಿಗೆ

ಕೃಷಿ ಇಲಾಖೆಗೆ ಸಂಬಂಧಿಸಿದ ಮಳಿಗೆಗಳ ಜೊತೆಗೆ ವಿವಿಧ ಕೃಷಿ ಸಂಸ್ಥೆಗಳ ಸಸಿಗಳನ್ನು ಸಹ ಉತ್ಸವದ ಭಾಗವಾಗಿ ಮಾರಾಟ ಮಾಡಲಾಗುತ್ತಿದೆ. ಕೃಷಿ ಇಲಾಖೆ ಚಟುವಟಿಕೆಗಳು ಮತ್ತು ಸೇವೆಗಳನ್ನು ಸಾರ್ವಜನಿಕರಿಗೆ ಪರಿಚಯಿಸುವುದು ಹಾಗೂ ಕೃಷಿ ಇಲಾಖೆಗೆ ಸಂಬಂಧಿಸಿದ ಸಸ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು ಕೃಷಿ ಉತ್ಸವ ಪ್ರಮುಖ ಉದ್ದೇಶ. ಸೂರ್ಯೋದಯ , ಸೂರ್ಯಾಸ್ತಗಳ ಸೌಂದರ್ಯ ಆನಂದಿಸಲು ಸೂಕ್ತ ಮಾವಿಲಂಕೋಟೆ ವೀಕ್ಷಣಾ ತಾಣ, ಅದರ ಸಂಬಂಧಿತ ಆಶ್ರಯ ಕೃಷಿ ಉತ್ಸವದ ಜೊತೆಗೆ ಉದ್ಘಾಟಿಸಲಾಯಿತು.

ಸುತ್ತಮುತ್ತ

ಏತ ನೀರಾವರಿ ಯೋಜನೆ ವಿದ್ಯುತ್ ಬಿಲ್ ಬಾಕಿ: ಶಾಸಕ ಸುನಿಲ್ ಆಕ್ರೋಶ

ಕಾರ್ಕಳ: ಸಾವಿರಾರು ರೈತರ ಕೃಷಿಗೆ ನೀರಾವರಿ ಸೌಲಭ್ಯ ಒದಗಿಸುತ್ತಿರುವ ಎಣ್ಣೆಹೊಳೆ ಏತ ನೀರಾವರಿ ಘಟಕಕ್ಕೆ ಇದೀಗ ಗ್ರಹಣ ಬಡಿದಿದ್ದು ರಾಜ್ಯ ಕಾಂಗ್ರೆಸ್ ಸರ್ಕಾರವು ಈ ಯೋಜನೆಯ ಸುಮಾರು 2 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ ಇರಿಸಿಕೊಂಡಿದೆ. ಈ ಮೂಲಕ ರೈತರಿಗೆ ನೀರಾವರಿ ಒದಗಿಸಲು ಅಸಮರ್ಥವಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದೆ ಎಂದು ಶಾಸಕ ಸುನಿಲ್ ಕುಮಾರ್ ಆರೋಪಿಸಿದ್ದಾರೆ. ಅಜೆಕಾರು-ಎಣ್ಣೆಹೊಳೆ- ಹಿರ್ಗಾನ ಗ್ರಾಮಗಳ



ನೂರಾರು ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಸ್ಥಾಪಿಸಲಾಗಿದೆ. ರಾಜ್ಯದಲ್ಲಿ ಈಗ ಬೇಸಿಗೆ ಪ್ರಾರಂಭವಾಗಿದ್ದು ನೀರಿನ ಸಮಸ್ಯೆ ಹಿಂದಿನ ವರ್ಷಗಳಿಗಿಂತ ತೀವ್ರ ಪ್ರಮಾಣದಲ್ಲಿ ಬಾಧಿಸುವ ಸಾಧ್ಯತೆ ಇದೆ. ಇಂಥ ಸಂದರ್ಭದಲ್ಲಿ ಈ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟ 2 ಕೋಟಿ ರೂಪಾಯಿಗೂ ಅಧಿಕ ವಿದ್ಯುತ್ ಬಾಕಿ ನೆಪದಲ್ಲಿ ಸಂಪರ್ಕ ಕಡಿತ ಮಾಡಿರುವುದು ಅಸಮಂಜಸ ಹಾಗೂ ರೈತ ವಿರೋಧಿ ಕ್ರಮ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಇಂಧನ ಇಲಾಖೆಯ ನಿರ್ವಹಣೆ ಹಾಳು ಬಿದ್ದು ಹೋಗಿದೆ. ಹೀಗಾಗಿ ಮೆಸ್ಕಾಂ ಏತ ನೀರಾವರಿ ಯೋಜನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಮೂರು ದಿನ ಕಳೆದರೂ ಸರ್ಕಾರ ಮೌನಕ್ಕೆ ಶರಣಾಗಿರುವುದು ಖಂಡನೀಯ, ರೈತರ ಬದುಕಿನ ಜೊತೆ ಚೆಲ್ಲಾಟವಾಡಿದರೆ ಪರಿಣಾಮ ಎದುರಿಸಬೇಕಾದೀತು ಎಂದು ಎಚ್ಚರಿಸಿದ್ದಾರೆ.

ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ವ್ಯಕ್ತಿ ನಾಪತ್ತೆ

ಉಡುಪಿ: ಕಳೆದ ಹಲವು ವರ್ಷಗಳಿಂದ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು ಚಿಕಿತ್ಸೆ ಪಡೆಯುತ್ತಿದ್ದ ಪುತ್ತೂರು ಗ್ರಾಮದ ಲಿಂಗೊಟ್ಟುಗುಡ್ಡೆ ನಿವಾಸಿ ಸುರೇಶ್ ಪೂಜಾರಿ (54) ಎನ್ನುವ ವ್ಯಕ್ತಿಯು ಫೆಬ್ರವರಿ 21 ರಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ಹೊರಹೋಗಿದ್ದು ವಾಪಸು ಮನೆಗೆ ಬಾರದೆ ನಾಪತ್ತೆಯಾಗಿದ್ದಾರೆ. 163 ಸೆಂ.ಮೀ ಎತ್ತರ, ಸಾಮಾನ್ಯ ಶರೀರ, ಗೋಧಿ ಮೈಬಣ್ಣ ಹೊಂದಿದ್ದು ಕನ್ನಡ ಹಾಗೂ ತುಳು ಮಾತಾಡಬಲ್ಲವರಾಗಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಉಡುಪಿ ನಗರ ಪೊಲೀಸ್ ಠಾಣೆ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ 0820-2520444, ಎಸ್.ಡಿ.ಪಿ.ಒ ಸಂ:0820-2521257, ಡಿಪಿಒ ಸಂ:0820-2534777, ರೇಂಜ್ ಸಂ: 8242220501, ಚೀಫ್ ಆಫೀಸ್ ದೂರವಾಣಿ ಸಂಖ್ಯೆ 22212108 ಅನ್ನು ಸಂಪರ್ಕಿಸುವಂತೆ ಉಡುಪಿ ನಗರ ಪೊಲೀಸ್ ಠಾಣಾಧಿಕಾರಿಗಳ ಕಚೇರಿಯ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸುಳುಗೋಡು: ಹಳ್ಳಿಹೊಳೆ ಶಾಲೆಯಲ್ಲಿ ಎನ್ನೆಸ್ಸೆಸ್ ಶಿಬಿರಕ್ಕೆ ಚಾಲನೆ

ಕುಂದಾಪುರ: ವಿದ್ಯಾರ್ಥಿಗಳು ಶಿಬಿರದಲ್ಲಿ ಪಡೆದ ಅನುಭವವನ್ನು ತಮ್ಮ ವ್ಯಾಸಂಗದ ನಂತರವೂ ಸೇವೆ, ಅನುಕಂಪದ ಸಾರ್ಥಕ ಜೀವಿಯಾಗಬೇಕು. ಆ ಮೂಲಕ ಹಳ್ಳಿಗಳ ಉದ್ಧಾರದ ನೆಲೆಯಲ್ಲಿ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕಮಲಶಿಲೆ ಬ್ರಾಹ್ಮಿ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಎಸ್. ಸಚ್ಚಿದಾನಂದ ಛಾತ್ರ ಹೇಳಿದರು.

ಬಸ್ರೂರು ಶ್ರೀ ಶಾರದಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ಸುಳುಗೋಡು ಹಳ್ಳಿಹೊಳೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಸಂಚಾಲಕಿ ಎಸ್. ಅನುಪಮ ಶೆಟ್ಟಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಂಜುನಾಥ ಶೆಟ್ಟಿ, ನಾಗೇಶ್ ನಾಯ್ಕ್, ಶ್ರೀನಿವಾಸ ಆಚಾರಿ, ಕೃಷ್ಣ ಛಾತ್ರಾ, ಪ್ರದೀಪ್ ಕೊಠಾರಿ, ಉಷಾಲತಾ ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಯೋಜಕ ಡಾ. ರವಿಚಂದ್ರ ಸ್ವಾಗತಿಸಿದರು. ಉಪನ್ಯಾಸಕ ಅಕ್ಷಯ್ ಮೊಳಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಕಾಲೇಜಿನ ಪ್ರಾಂಶುಪಾಲೆ ಡಾ. ಚಂದ್ರಾವತಿ ಶೆಟ್ಟಿ ವಂದಿಸಿದರು.

ಇಂದಿನಿಂದ ಮಾ.11ರವರೆಗೆ ಉಜಿರೆ ದೇವಸ್ಥಾನದ ಬ್ರಹ್ಮಕಲಶೋತ್ಸವ | ಎಲ್ಲ ಸಿದ್ಧತೆಗಳು ಪೂರ್ಣ

ಉತ್ಸವಕ್ಕೆ ಎರಡೂವರೆ ಲಕ್ಷಕ್ಕಿಂತ ಅಧಿಕ ಭಕ್ತರ ಆಗಮನ ನಿರೀಕ್ಷೆ

ಬೆಳ್ತಂಗಡಿ: ತಾಲೂಕಿನ ಪ್ರಸಿದ್ಧ ದೇವಸ್ಥಾನಗಳಲ್ಲೊಂದಾಗಿರುವ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮ ಕಲಶೋತ್ಸವದ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದು ಭಕ್ತಬಂಧುಗಳನ್ನು ಸ್ವಾಗತಿಸಲು ವಿವಿಧ ಸಮಿತಿಗಳು ಸಜ್ಜಾಗಿವೆ.

ಮಾ.2ರಿಂದ 11ರವರೆಗೆ ಕಾರ್ಯಕ್ರಮಗಳು ಜರುಗಲಿವೆ. ಈ ಹಿಂದೆ 2001 ಹಾಗೂ 2013ರಲ್ಲಿ ದೇವಸ್ಥಾನದ ಅಂದಿನ ಆನುವಂಶಿಕ ಆಡಳಿತ ಮೊಕ್ತೇಸರ ಕೀರ್ತಿಶೇಷ ವಿಜಯ ರಾಘವ ಪಡುವೆಟ್ನಾಯರ ನೇತೃತ್ವದಲ್ಲಿ ಬ್ರಹ್ಮಕಲಶ ನಡೆದಿತ್ತು. ಈ ಬಾರಿ ಅವರ ಪುತ್ರ ಶರತ್‌ಕೃಷ್ಣ ಪಡುವೆಟ್ನಾಯರ ಮುಂದಾಳತ್ವದಲ್ಲಿ ಜರುಗಲಿದೆ.

ಈಗಾಗಲೇ ದೇವಸ್ಥಾನದ ವಠಾರದಲ್ಲಿ ಉತ್ಸವಕ್ಕೆ ಬೇಕಾದ ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ಪೇಟೆ ಪ್ರದೇಶದಲ್ಲಿ ಶೃಂಗಾರ ಕಾರ್ಯ ಮುಗಿಯುವ ಹಂತದಲ್ಲಿದೆ. ಹತ್ತು ದಿನಗಳ ಕಾಲ ವೈದಿಕ, ಸಾಂಸ್ಕೃತಿಕ ಹಾಗೂ ಸಭಾ ಕಾರ್ಯಕ್ರಮಗಳು ನಡೆಯಲಿದ್ದು ಸುಮಾರು ಎರಡೂವರೆ ಲಕ್ಷಕ್ಕಿಂತ ಅಧಿಕ ಜನ ಸೇರುವ ನಿರೀಕ್ಷೆ ಇದೆ. ಪ್ರತಿದಿನ ಸೂರ್ಯೋದಯದಿಂದ ಸೂರ್ಯಾಸ್ತ ತನಕ ಜಿಲ್ಲೆಯ 150ರಷ್ಟು ಭಜನಾ ಸಂಘಗಳಿಂದ ಭಜನಾ ಕೀರ್ತನೋತ್ಸವ ನಡೆಯಲಿದೆ. ಅದಕ್ಕಾಗಿ ದೇವಳದ ರಥಬೀದಿಯಲ್ಲಿ ಸುನಾದ ಭಜನಾ ಕುಟೀರ ಸಿದ್ಧಗೊಂಡಿದೆ.

ರಾಜಗೋಪುರ, ಬ್ರಹ್ಮರಥ, ಪುಷ್ಪರಥ

ದೇವಸ್ಥಾನದ ಮುಂಭಾಗದಲ್ಲಿ ನಿರ್ಮಾಣಗೊಂಡಿರುವ ರಾಜ ಗೋಪುರ ಮಾ.4ರಂದು ಲೋಕಾರ್ಪಣೆಗೊಳ್ಳಲಿದೆ. ದೇವಸ್ಥಾನಕ್ಕೆ ಭಕ್ತರು





ನಿರ್ಮಿಸಿ ಕೊಟ್ಟಿರುವ ಬ್ರಹ್ಮರಥ ಹಾಗೂ ಪುಷ್ಪ ರಥ ಸಮರ್ಪಣೆ ಮಾ.8ರಂದು ಹಾಗೂ ಬ್ರಹ್ಮಕಲಶೋತ್ಸವ ಮಾ.11ರಂದು ಜರುಗಲಿದೆ. ದೇವ ಸ್ಥಾನದ ಒಳಭಾಗದಲ್ಲಿ ಮರದ ಕುಸುರಿ ಕೆಲಸಗಳನ್ನು ನಡೆಸಲಾಗಿದ್ದು ದೇಗುಲದ ಅಂದ ಇನ್ನಷ್ಟು ಆಕರ್ಷಣೀಯವಾಗಿದೆ. ದಿನಂಪ್ರತಿ ನೂರಾರು ಮಂದಿ ಶ್ರಮದಾನದಲ್ಲಿ ಭಾಗಿಯಾಗಿದ್ದಾರೆ. ಪಾರ್ಕಿಂಗ್ ವ್ಯವಸ್ಥೆಗೆ ದೇವಸ್ಥಾನದ ಸಮೀಪ 8 ಎಕರೆ ಜಾಗವನ್ನು ಸಮತಟ್ಟುಗೊಳಿಸಿ ರಸ್ತೆ ನಿರ್ಮಿಸಲಾಗಿದೆ. ದೇವಸ್ಥಾನದ ಹಿಂಭಾಗ ಅಜ್ಜರಕಲ್ಲು, ಕಾಲೇಜು, ಜನಾರ್ದನ ಶಾಲೆಯ ಮೈದಾನದಲ್ಲೂ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಬೆಂಗಳೂರು ಸಮಿತಿ ಸಹಕಾರ

ಬ್ರಹ್ಮಕಲಶೋತ್ಸವದ ಯಶಸ್ಸಿಗಾಗಿ ಬೆಂಗಳೂರಿನಲ್ಲಿ ವಿಶೇಷ ಸಮಿತಿ ರಚನೆಗೊಂಡಿದ್ದು, ತರಕಾರಿ, ಪುಷ್ಪಾಲಂಕಾರ, ದಿನಸಿ, ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿಗಳಿಗೆ ಆಗತ್ಯ ಬೇಕಾಗಿರುವ ಪರಿಕರಗಳನ್ನು ಒದಗಿಸುವ ವ್ಯವಸ್ಥೆ ಮಾಡಲಿದೆ.

> **ಸಾರ್ಥಕತೆ ಮೂಡುತ್ತದೆ**
>
> ನಮ್ಮ ಶ್ರಮದಲ್ಲಿ ಜನರು ಭಾಗಿಯಾದಾಗ ಸಾರ್ಥಕತೆ ಮೂಡುತ್ತದೆ. ನಮ್ಮ ನಂಬಿಕೆಗಳನ್ನು ಹಬ್ಬ ಉತ್ಸವಗಳ ಮೂಲಕ ಮುಂದಿನ ಪೀಳಿಗೆಗೆ ವರ್ಗಾಯಿಸುವ ಕೆಲಸ ನಡೆಯುತ್ತಿದೆ. ಬ್ರಹ್ಮಕಲಶೋತ್ಸವಕ್ಕೆ ಊರವರ ಸಹಕಾರ ಅಭೂತಪೂರ್ವವಾಗಿದ್ದು ದೇವಸ್ಥಾನದ ಹಾಗೂ ಜನರ ಬಾಂಧವ್ಯ ನೂರ್ಮಡಿಗೊಂಡಿದೆ.
>
> • ಕೆ. ಪ್ರತಾಪಸಿಂಹ ನಾಯಕ್, ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ

ಇಂದಿನ ಕಾರ್ಯಕ್ರಮಗಳು

ಪ್ರಾರಂಭೋತ್ಸವ ಶೀರ್ಷಿಕೆಯಡಿ ಮಾ.2ರಂದು ಬೆಳಗ್ಗೆ 9.30ಕ್ಕೆ ಹಂಗಾರಕಟ್ಟೆ ಬಾಳೆಕುದ್ರು ಮಠದ ಶ್ರೀ ವಾಸುದೇವ ಸದಾಶಿವಾಶ್ರಮ ಸ್ವಾಮೀಜಿಯವರು ದೇವಳದ ನೂತನ ಆಡಳಿತ ಕಾರ್ಯಾಲಯವಾದ ಸುಶಾನ ಮತ್ತು ತಂತ್ರಿ ನಿವಾಸ ಸುವಾಸದ ಉದ್ಘಾಟನೆ ನೆರವೇರಿಸಲಿದ್ದಾರೆ. ಬಳಿಕ ಸುರ್ಯ ಶ್ರೀ ಸದಾಶಿವರುದ್ರ ದೇವಸ್ಥಾನದ ಆಡಳಿತ ಮೊಕ್ತೇಸರ ಡಾ. ಸತೀಶ್ಚಂದ್ರ ಅವರು ಬ್ರಹ್ಮಕಲಶೋತ್ಸವ ಕಾರ್ಯಾಲಯವಾದ ಸುರಭಿಯನ್ನು, ಬೆಳ್ತಂಗಡಿ ತಾಲೂಕು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಅಧ್ಯಕ್ಷ ಶ್ರೀಧರ ಜಿ. ಭಿಡೆ ಅವರು ಭೋಜನ ಶಾಲೆಯಾದ ಸುಪ್ರಸಾದವನ್ನು, ಎಸ್‌ಕೆಡಿಆರ್‌ಡಿಪಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿಲ್‌ಕುಮಾರ್ ಹಸಿರುವಾಣಿ ಉಗ್ರಾಣವಾದ ಸಮೃದಿಯನ್ನು, ಕ್ಷೇಮವನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರದಾ ಅಮಿತ್ ಪಾಕಶಾಲೆ ಸುರುಚಿಯನ್ನು ಉದ್ಘಾಟಿಸಲಿದ್ದಾರೆ.

ಬಳಿಕ ಬೆಳಗ್ಗೆ 10 ಗಂಟೆಗೆ ಶ್ರೀಕೃಷ್ಣಾನುಗ್ರಹ ಸಭಾಭವನದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಬಾಳೆಕುದ್ರು ಶ್ರೀಗಳು ಆಶೀರ್ವಚನ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಬ್ರಹ್ಮಕಲಶೋತ್ಸವ ಸಮಿತಿ ಪ್ರತಾಪಸಿಂಹ ನಾಯಕ್ ವಹಿಸಲಿದ್ದಾರೆ. ವಿಜಯ ಗೋಪುರ ನಿರ್ಮಾಣ ಸಮಿತಿ ಅಧ್ಯಕ್ಷ ಶಶಿಧರ ಶೆಟ್ಟಿ ಬರೋಡ ಅವರು ಉಪಸ್ಥಿತರಿರಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ಗಂಟೆ 6 ರಿಂದ ದಕ್ಷಾ ಮೆಲೋಡೀಸ್ ಉಜಿರೆ ಇವರಿಂದ ಸಂಗೀತ ಕಚೇರಿ ನಡೆಯಲಿದೆ.

> **ಅಪಾರ ಸಂಖ್ಯೆಯ ಭಕ್ತರು ಭಾಗಿ**
>
> ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನ, ಡಿ. ಹರ್ಷೇಂದ್ರ ಕುಮಾರ್ ಸಹಕಾರದಲ್ಲಿ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ನಡೆಯಲಿದೆ. ಕಲ್ಪನೆಗೂ ಮೀರಿದ ರೀತಿಯಲ್ಲಿ ಭಕ್ತರ ಪಾಲ್ಗೊಳ್ಳುವಿಕೆಯಲ್ಲಿ ಪೂರ್ವ ತಯಾರಿಗಳು ನಡೆಯುತ್ತಿವೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದಿ ಯೋಜನೆಯ ಸಂಪೂರ್ಣ ಸಹಕಾರದಲ್ಲಿ ಅನೇಕ ಭಾಗಗಳಿಂದ ಹೊರೆಕಾಣಿಕೆ ಸಮರ್ಪಣೆ ನಡೆಯಲಿದೆ.
>
> • ಶರತ್‌ಕೃಷ್ಣ ಪಡುವೆಟ್ನಾಯ, ಆನುವಂಶಿಕ ಆಡಳಿತ ಮೊಕ್ತೇಸರ, ಉಜಿರೆ ಶ್ರೀ ಜನಾರ್ದನ ದೇವಸ್ಥಾನ

ಶ್ರೀಹೊಸ ಮಾರಿಗುಡಿ 'ಮಾತೃ ವೈಭವ' ಧಾರ್ಮಿಕ ಸಭೆ | ಡಾ. ಪ್ರಕಾಶ್ ಶೆಟ್ಟಿ ಆಶಯ

ಕಾಪು ಕ್ಷೇತ್ರ ತುಳುನಾಡಿಗೆ ಮುಕುಟ ಪ್ರಾಯ



ಶಿರ್ವ: ಕರಾವಳಿಯ ಹಲವಾರು ದೇಗುಲಗಳು ಜೀರ್ಣೋದ್ಧಾರ ಗೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಜಗತ್ತಿನಾದ್ಯಂತವಿರುವ ಅಮ್ಮನ ಭಕ್ತರ ಸಹಕಾರ ಮತ್ತು ಹಾರೈಕೆಯೊಂದಿಗೆ ಜೀರ್ಣೋದ್ಧಾರಗೊಂಡಿರುವ ಕಾಪುವಿನ ಅಮ್ಮನ ಕ್ಷೇತ್ರ ತುಳುನಾಡಿಗೆ ಮುಕುಟ ಪ್ರಾಯವಾಗಿ ಮೂಡಿ ಬಂದಿದೆ ಎಂದು ಬೆಂಗಳೂರು ಎಂ.ಆರ್.ಜಿ ಗ್ರೂಪ್ ಆಡಳಿತ ನಿರ್ದೇಶಕ ಡಾ.ಕೆ. ಪ್ರಕಾಶ್ ಶೆಟ್ಟಿ ಹೇಳಿದರು.

ಅವರು ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನ ಪ್ರಥಮ ವರ್ಧಂತ್ಯುತ್ಸವ - 'ಮಾತೃ ವೈಭವ' ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಬಂಟ್ವಾಳ ಮಾಣಿಲ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿಯವರು ಆಶೀರ್ವಚನ ನೀಡಿ, ಮಾತೃ ಶಕ್ತಿಯ ಅಗತ್ಯ ಇಂದಿನ ಸಮಾಜಕ್ಕೆ ಅತೀ ಅವಶ್ಯವಾಗಿದೆ. ಇಲ್ಲಿ ಕಾಪುವಿನ ಅಮ್ಮನ ಚೈತನ್ಯ ಶಕ್ತಿ ಭಕ್ತರನ್ನು ಸಲಹುತ್ತಾ ಮಾತೃ ಸ್ಥಾನದಲ್ಲಿ ವಿರಾಜಮಾನಳಾಗಿದ್ದಾಳೆ ಎಂದರು.

ಬೆಳಗಾವಿ ಹುಕ್ಕೇರಿ ಹಿರೇಮಠದ ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಜಿ ಮಾತನಾಡಿ, ಇಂದು ಜಾತಿಮತ ಮೀರಿ ಹಿಂದೂ ಸಮಾಜ ಬೆಳೆಯಬೇಕಿದ್ದು ಕಾಪುವಿನ ಅಮ್ಮನ ಕ್ಷೇತ್ರ ಎಲ್ಲಾ ವರ್ಗದವರನ್ನು ಒಗ್ಗೂಡಿಸಿ ಮುನ್ನಡೆಯುತ್ತಿರವುದು ಆಶಾದಾಯಕ ವಿಚಾರವಾಗಿದೆ ಎಂದರು.

ಶ್ರೀ ಹೊಸ ಮಾರಿಗುಡಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ರತ್ನಾಕರ ಶೆಟ್ಟಿ ನಡಿಕೆರೆ ಅಧ್ಯಕ್ಷತೆ ವಹಿಸಿದ್ದರು. ಅಭಿವೃದ್ಧಿ ಸಮಿತಿಯ ಕಾರ್ಯಾಧ್ಯಕ್ಷ ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಗೌರವಾಧ್ಯಕ್ಷರಾದ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಅನಿಲ್ ಬಳ್ಳಾಲ್, ಮುಂಬೈ ತುಂಗಾ ಗ್ರೂಪ್ ಆಫ್ ಹೋಟೆಲ್ಸ್‌ನ ಸುಧಾಕರ್ ಹೆಗ್ಡೆ ಮುಂಬೈ ಸಾಯಿ ಪ್ಯಾಲೇಸ್ ಗ್ರೂಪ್ ಆಫ್ ಹೋಟೆಲ್ಸ್ ರವಿ ಸುಂದರ್ ಶೆಟ್ಟಿ, ಮುಂಬೈ ಉಚ್ಚ ನ್ಯಾಯಾಲಯದ ನ್ಯಾಯವಾದಿ ಮಹೇಶ್ ಕೋಟ್ಯಾನ್, ಕಾಪು ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದ ಆಡಳಿತ ಮೊಕ್ತೇಸರ ಮನೋಹರ್ ಎಸ್. ಶೆಟ್ಟಿ ಅದಾನಿ ಸಂಸ್ಥೆಯ ಉಪಾಧ್ಯಕ್ಷ ಕಿಶೋರ್ ಆಳ್ವ, ಹಿರಿಯ ಸಹಕಾರಿ ಜಯಕರ ಶೆಟ್ಟಿ ಇಂದ್ರಾಳಿ, ಹುಬ್ಬಳ್ಳಿ ಉದ್ಯಮಿ ಸುಗ್ಗಿ ಸುಧಾಕರ್ ಶೆಟ್ಟಿ, ಪೂನಾ ಬಂಟ್ಸ್ ಸಂಘದ ಸಂತೋಷ್ ಶೆಟ್ಟಿ ಇನ್ನಾ, ವಿಶ್ವದೇವಾಡಿಗರ ಮಹಾಮಂಡಲದ ಅಧ್ಯಕ್ಷ ಧರ್ಮಪಾಲ ದೇವಾಡಿಗ, ರಂಜನಿ ಸುಧಾಕರ ಹೆಗ್ಡೆ ಅತಿಥಿಗಳಾಗಿ ವೇದಿಕೆಯಲ್ಲಿದ್ದರು.

ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಮಾಧವ ಆರ್. ಪಾಲನ್, ಶೇಖರ್ ಸಾಲ್ಯಾನ್, ಮನೋಹರ್ ರಾವ್ ಕಲ್ಯ, ರವೀಂದ್ರ ಮಲ್ಲಾರು, ಜಯಲಕ್ಷ್ಮೀ ಎಸ್. ಶೆಟ್ಟಿ ಚರಿತಾ ದೇವಾಡಿಗ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬಿಗ್ ಬಾಸ್ ಖ್ಯಾತಿಯ ರಕ್ಷಿತಾ ಶೆಟ್ಟಿ ಇವರನ್ನು ಸನ್ಮಾನಿಸಲಾಯಿತು.

ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಕೆ ವಾಸುದೇವ ಶೆಟ್ಟಿ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. 'ಮಾತೃ ವೈಭವ' ಸೇವಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯೋಗೀಶ್ ವಿ. ಶೆಟ್ಟಿ ವಂದಿಸಿದರು ಸತೀಶ್ ಶೆಟ್ಟಿ ಗುಡ್ಡೆಚ್ಚಿ ಕಾರ್ಯಕ್ರಮ ನಿರೂಪಿಸಿದರು.

ಶ್ರೀಕ್ಷೇತ್ರ ಉಚ್ಚಿಲ ಶ್ರೀಮಹಾಲಕ್ಷ್ಮೀ ದೇವಸ್ಥಾನದಲ್ಲಿ ಬೃಹತ್ ಸಮಾವೇಶ, ಬೈಕ್ ರ‍್ಯಾಲಿ

ಸಾಮೂಹಿಕ ಗುರು ಪಾದಕಾಣಿಕೆ ಸಮರ್ಪಣೆ

ಶಿರ್ವ: ದ.ಕ ಮೊಗವೀರ ಮಹಾಜನ ಸಂಘ ಸಂಚಾಲಿತ ಶ್ರೀಕ್ಷೇತ್ರ ಉಚ್ಚಿಲ ಶ್ರೀಮಹಾಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಅಂದಾಜು 3.5 ಕೋಟಿ ರೂ. ವ್ಯಚ್ಚದಲ್ಲಿ 30 ಅಡಿ ಎತ್ತರದ ಮೊಗವೀರ ಸಮಾಜದ ಕುಲಗುರುಗಳಾದ ಕೀರ್ತಿಶೇಷ ಶ್ರೀಮಾಧವ ಮಂಗಲ ಪೂಜಾರ್ಯರ ಕಂಚಿನ ಮತ್ತಳಿ ನಿರ್ಮಾಣದ ಪ್ರಯುಕ್ತ ಭಾನುವಾರ ಬೈಕ್ ರ‍್ಯಾಲಿಯಲ್ಲಿ ಸಾಮೂಹಿಕ ಗುರು ಪಾದಕಾಣಿಕೆ ಸಮರ್ಪಣೆ ಮತ್ತು ಬೃಹತ್ ಸಮಾವೇಶ ಸಂಪನ್ನಗೊಂಡಿತು.



ಯೋಜನೆಯ ರೂವಾರಿ ಹಾಗೂ ಮೊಗವೀರ ಮಹಾಜನ ಸಂಘದ ಗೌರವ ಅಧ್ಯಕ್ಷ ನಾಡೋಜ ಡಾ.ಜಿ.ಶಂಕರ್ ಬೈಕ್ ರ‍್ಯಾಲಿಯನ್ನು ಸ್ವಾಗತಿಸಿ, ಮತ್ಥಳಿ ಸ್ಥಳದಲ್ಲಿಯೇ ಗುರುಗಳ ಸ್ವರ್ಣ ಲೇಪಿತ ಪಾದುಕೆಗೆ ಪುಷ್ಪಾರ್ಚನೆ ಸಲ್ಲಿಸಿ ಬಳಿಕ ಜರುಗಿದ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ, ಶ್ರೀಕ್ಷೇತ್ರದ ಜೀರ್ಣೋದ್ಧಾರದ ಸಮಯದಲ್ಲಿ ನಡೆದ ಅಷ್ಟಮಂಗಲ ಪ್ರಶ್ನೆಯ ಸೂಚನೆಯ ಮೇರೆಗೆ ಶ್ರೀಗುರುಗಳ ಕಂಚಿನ ಮತ್ಥಳಿ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಸರ್ವರ ಸಹಕಾರದಿಂದ ಗುರು ಪರಂಪರೆಯನ್ನು ಸಮಾಜದ ಮುಂದಿನ ಪೀಳಿಗೆಗೆ ತಿಳಿಸುವ ಅನಿವಾರ್ಯತೆ ಇದೆ. ಸಮಾಜಕ್ಕಾಗಿ ದುಡಿಯುವುದರ ಜೊತೆಗೆ ಸಮಾಜದ ಜನರ ಕಷ್ಟಕ್ಕೆ ಸ್ಪಂದಿಸೋಣ ಎಂದರು.

ದ್ವಿಚಕ್ರ ವಾಹನ ಜಾಥಾವು ಉತ್ತರ ಭಾಗದವರು ಪಾಂಗಾಳ ಶ್ರೀಲಕ್ಷ್ಮೀಜನಾರ್ದನ ದೇವಳದಿಂದ ಮತ್ತು ಉಪ್ಪಳದಿಂದ ಹೆಜಮಾಡಿವರೆಗಿನ ಮೊಗವೀರ ಬಾಂಧವರು ದಕ್ಷಿಣ ಭಾಗದ ಹೆಜಮಾಡಿ ಟೋಲ್ ಪ್ಲಾಜಾದಿಂದ ರಾ.ಹೆ. 66ರ ಮೂಲಕ ಉಚ್ಚಿಲ ಕ್ಷೇತ್ರದ ವರೆಗೆ ಸಾಗಿ ಬಂದರು. ಸಹಸ್ರಾರು ಸಂಖ್ಯೆಯಲ್ಲಿ ಉಪ್ಪಳದಿಂದ ಶಿರೂರು ವರೆಗಿನ ಮೊಗವೀರರು ಪಾಲ್ಗೊಂಡಿದ್ದರು. ಪಾದಕಾಣಿಕೆಗೆ ಮೊಗವೀರರ ಬಾರ್ಕೂರು ವಲಯದಿಂದ 35 ಲಕ್ಷ, ಮಂಗಳೂರು ವಲಯದಿಂದ 25 ಲಕ್ಷ, ಮಧ್ಯ ವಲಯದಿಂದ 25 ಲಕ್ಷ ಉಡುಪಿ ವಲಯದಿಂದ 25 ಲಕ್ಷ, ಬಗ್ವಾಡಿ ವಲಯದಿಂದ 25 ಲಕ್ಷ, ವೇದಪ್ರಕಾಶ್ 10 ಲಕ್ಷ, ಪ್ರಸಾದ್ ರಾಜ್ ಕಾಂಚನ್ 5 ಲಕ್ಷ, ಮಸ್ತ್ ಸಂಘಟನೆಯಿಂದ 3 ಲಕ್ಷ, ಮೀನು ಮಾರಾಟ ಫೆಡರೇಶನ್ ನಿಂದ 2 ಲಕ್ಷ, ಮೋಹನ್ ಬೇಂಗ್ರೆ 2 ಲಕ್ಷ, ಅನಿಲ್ ಕುಮಾರ್ 2 ಲಕ್ಷ, ಸಂಧ್ಯಾ ಸುನಿಲ್ 2 ಲಕ್ಷ, ಮೆಂಡನ್ ಮೂಲಸ್ಥಾನ, ದಿನೇಶ್ ಎರ್ಮಾಲು, ಪವನ್ ಆನಂದ್, ಯಜ್ಞೇಶ್, ತಲಾ ಒಂದು ಲಕ್ಷ, ಶಶಿಕುಮಾರ್ 25 ಸಾವಿರ,ಸಹಿತ ಮತ್ತಿತರರು ದೇಣಿಗೆ ಸಮರ್ಪಿಸಿದರು. ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ.ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಶಾಸಕ ಯಶಪಾಲ್ ಸುವರ್ಣ, ದ.ಕ. ಮೊಗವೀರ ಮಹಾಜನ ಸಂಘದ ಉಪಾಧ್ಯಕ್ಷ ಮೋಹನ್ ಬೆಂಗ್ರೆ, ಉಚ್ಚಿಲ ಕ್ಷೇತ್ರಾಧ್ಯಕ್ಷ ಗಿರಿಧರ ಸುವರ್ಣ, ಮತ್ಥಳಿ ನಿರ್ಮಾಣ ಸಮಿತಿ ಕಾರ್ಯಾಧ್ಯಕ್ಷ ಮನೋಜ್ ಸಾಲಿಯಾನ್, ಹರಿಯಪ್ಪ ಕೋಟ್ಯಾನ್, ಯುವರಾಜ್ ಸಾಲಿಯಾನ್, ಪ್ರಸಾದ್ ರಾಜ್ ಕಾಂಚನ್, ರಮೇಶ್ ಕಾಂಚನ್, ವೇದಪ್ರಕಾಶ್ ಶ್ರೀಯಾನ್, ರವಿ ಕರ್ಕೇರ, ಸದಾಶಿವ ಬಂಗೇರ, ಉದುಕುಮಾರ್ ಹಟ್ಟಿಯಂಗಡಿ, ಅನಿಲ್ ಕುಮಾರ್ ಬೊಕ್ಕಪಟ್ಣ, ಚೇತನ್ ಬೆಂಗ್ರೆ, ನಾಗರಾಜ್, ದಿನೇಶ್ ಎರ್ಮಾಳ್, ಸತೀಶ್ ಅಮೀನ್ ಬಾರ್ಕೂರು, ಭಾಸ್ಕರ ಸಾಲಿಯಾನ್, ಶ್ರೀನಿವಾಸ ತೀರ್ಥಹಳ್ಳಿ, ಸಂಧ್ಯಾ ಸನಿಲ್, ಕವಿತಾ ಶರತ್, ಸುಗುಣಾ ಮೂಳುರು, ರಾಜೇಶ್ ಪುತ್ರನ್, ಸತೀಶ್ ಅಮೀನ್ ಬೆಣ್ಣೆಕುದ್ರು, ಪವನ್ ಆನಂದ್, ಸದಾನಂದ ಬಳ್ಕೂರು, ಮನೋಜ್ ಕಾಂಚನ್,ದಯಾಕರ ಸುವರ್ಣ, ಶಶಿಕುಮಾರ್ ಬೆಂಗ್ರೆ, ಬೇಬಿ ಸಾಲಿಯಾನ್, ಲಕ್ಷ್ಮಣ ಕೋಡುಕಲ್, ರವಿ ಕೊರವಡಿ, ಮತ್ತಿತರರು ಉಪಸ್ಥಿತರಿದ್ದರು. ದ.ಕ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ ಕೊಟ್ಯಾನ್ ಬೆಳ್ಳಂಪಳ್ಳಿ ಸ್ವಾಗತಿಸಿದರು. ಶರಣ್ ಕುಮಾರ್ ಮಟ್ಟು ಕಾರ್ಯಕ್ರಮ ನಿರೂಪಿಸಿದರು.

ಮರವಂತೆ ಶ್ರೀ ವರಾಹ ಮಹಾರಾಜ ದೇವಸ್ಥಾನದಲ್ಲಿ 'ಆಭಾರಿ' ಸೇವೆ

ಕುಂದಾಪುರ: ಮರವಂತೆಯ ಶ್ರೀ ವರಾಹ ಮಹಾರಾಜ ಸ್ವಾಮಿ ದೇವಸ್ಥಾನದಲ್ಲಿ ಮರವಂತೆಯ ಗ್ರಾಮಸ್ಥರು ಹಾಗೂ ರೈತರಿಂದ ವಿಶಿಷ್ಟವಾದ 'ಆಭಾರಿ' ಸೇವೆಯ ಸಮರ್ಪಣೆ ಭಾನುವಾರ ನಡೆಯಿತು.

ಪೂಜಾ ವಿಧಿಗಳನ್ನು ಪ್ರಧಾನ ಅರ್ಚಕ ಕೇಶವಾನಂದ ಅಡಿಗ, ನರಸಿಂಹ ಅಡಿಗ, ಅರ್ಚಕ ನಾಗೇಂದ್ರ ಭಟ್ ನೆರವೇರಿಸಿದರು. ಅನಂತರ ಸಮೀಪದ ಶ್ರೀ ಗಂಗಾಧರೇಶ್ವರನಿಗೂ ವಿಶೇಷಪೂಜೆ, ಶತರುದ್ರಾಭಿಷೇಕ ನೆರವೇರಿತು. ಆ ಬಳಿಕ ಸೌಪರ್ಣಿಕಾ ನದಿಗೆ ಪೂಜೆ ಸಲ್ಲಿಸಿ,



ದೈವಸ್ವರೂಪಿ ಮೊಸಳೆ ನೆಲೆಸಿರುವ ನೆಗಳನ ಗುಂಡಿಗೆ ಮೀನುಗಾರರಿಂದ ಅನ್ನದ ನೈವೇದ್ಯ ಮಾಡಿ ಬುಟ್ಟಿಗಳಲ್ಲಿ ಗ್ರಾಮಸ್ಥರು ಆಭಾರಿ ಸೇವೆ ಸಮರ್ಪಿಸಿದರು. ಸಂಜೆ ರಂಗಪೂಜೆ ನಡೆಯಿತು.

ಈ ಸಂದರ್ಭದಲ್ಲಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಾಜೇಶ್ ಹೆಬ್ಬಾರ್, ಸದಸ್ಯರಾದ ಗಣೇಶಪೂಜಾರಿ, ಎಚ್.ಅನುಕುಮಾರ್ ಶೆಟ್ಟಿ, ಸುಶೀಲಾ ಎಸ್. ಮೆಂಡನ್, ನಾಗವೇಣಿ ಪ್ರಭಾಕರ ಖಾರ್ವಿ, ಲಕ್ಷ್ಮಣ ಪೂಜಾರಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಜಶೇಖರ್ ಹೆಬ್ಬಾರ್, ಪ್ರಮುಖರಾದ ಶ್ರೀಧರ ದೇವಾಡಿಗ, ನರಸಿಂಹ ಪೂಜಾರಿ, ಆಭಾರಿ ಸಮಿತಿಯ ಅಧ್ಯಕ್ಷ ಕೃಷ್ಣ ಮೊಗವೀರ, ಕಾರ್ಯದರ್ಶಿ ಸೋಮಯ್ಯ ಬಿಲ್ಲವ, ಕೋಶಾಧಿಕಾರಿ ಗೋಪಾಲ ದೇವಾಡಿಗ ಮತ್ತಿತರರು ಇದ್ದರು.

ಸಸಿಹಿತ್ಲು ಕಡಲತೀರ: ಸ್ವಚ್ಛತಾ ಅಭಿಯಾನಕ್ಕೆ ಚಾಲನೆ



ಮುಲ್ಕಿ: ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನ ಮತ್ತು ಬೆಂಗಳೂರಿನ ಕ್ಯಾಪ್ಸ್ ಫೌಂಡೇಶನ್ ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಕಾರದಲ್ಲಿ ದೇವಸ್ಥಾನದ ಬ್ರಹ್ಮಕಲಶದ ಪೂರ್ವಭಾವಿಯಾಗಿ ಬೀಚ್ ಸ್ವಚ್ಛತಾ ಮಹಾ ಅಭಿಯಾನದ ಮೂಲಕ ಪ್ಲಾಸ್ಟಿಕ್ ಮುಕ್ತ ಅಭಿಯಾನ ಭಾನುವಾರ ನಡೆಯಿತು. ಕ್ಯಾಪ್ಸ್ ಸ್ಥಾಪಕ ಅಧ್ಯಕ್ಷ ಸಿಎಫ್ ಸಿಎ ಚಂದ್ರಶೇಖರ ಶೆಟ್ಟಿ ಮುಂಡ್ಕೂರು, ಕಿರಣ್ ಗುರಿಕಾರ, ರಾಜೇಂದ್ರ ಪ್ರಸಾದ್, ಉದಯ್ ಸುವರ್ಣ, ಸುರೇಂದ್ರ, ಅಶೋಕ್ ಸಸಿಹಿತ್ಲು ಯತೀಶ್ ಕೋಟ್ಯಾನ್, ಮೋಹನ್ ಬಂಗೇರ, ಸುಧಾಕರ್ ಆರ್ ಅಮೀನ್, ನಿರ್ಮಿತ ಎನ್. ಸಾಲ್ಯಾನ್ , ನಿಶಾ, ದಿವ್ಯಶ್ರೀ ರಮೇಶ್ ಕೋಟ್ಯಾನ್, ರಶ್ಮಿತ, ರಕ್ಷಿತಾ, ಜಯಶ್ರೀ, ಯಶಸ್ವಿನಿ, ನಿಶ್ಮಿತಾ, ಮೇಘನಾ, ವಿದ್ಯಾ ನಾಗರಾಜ್, ಪ್ರಮೀಳಾ ಇದ್ದರು.

ಪುತ್ತೂರಿನಲ್ಲಿ ಅಂತರ್ ಜಿಲ್ಲಾಮಟ್ಟದ ಗಾಣಿಗ ಸಂಗಮ | ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸಹೋದರ ಪ್ರಹ್ಲಾದ್ ಮೋದಿ ಅಭಿಪ್ರಾಯ

ವಿಶ್ವದಲ್ಲಿಯೇ ಭಾರತದ ಹೆಸರು ಚಿರಸ್ಥಾಯಿಯಾಗುವಲ್ಲಿ ಗಾಣಿಗ ಸಮಾಜದ ಕೊಡುಗೆಯೂ ಇದೆ

ಪುತ್ತೂರು: ವಿಶ್ವದಲ್ಲಿಯೇ ಭಾರತದ ಹೆಸರು ಚಿರಸ್ಥಾಯಿಯಾಗುವಲ್ಲಿ ಗಾಣಿಗ ಸಮಾಜದ ಕೊಡುಗೆಯೂ ಇದೆ. ದೇಶದಲ್ಲಿಯೇ ಇಂದು ದೊಡ್ಡ ಬದಲಾವಣೆ ಉಂಟಾಗಿದೆ. ಭ್ರಷ್ಟಾಚಾರ ನಿರ್ಮೂಲನೆಯಾಗಿದೆ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಪರಿಕಲ್ಪನೆಯ ಮೂಲಕ ಭಾರತವನ್ನು ವಿಶ್ವವೇ ಗುರುತಿಸುವಂತಾಗಿದೆ ಎಂದು ತೈಲಿಕ್ ಸಾಹು ರಾಥೋಡ್ ಮಹಾಸಭಾ ಮುಖ್ಯ ಸಲಹೆಗಾರ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸಹೋದರ ಪ್ರಹ್ಲಾದ್ ದಾಮೋದರದಾಸ್ ಮೋದಿ ಅಭಿಪ್ರಾಯಪಟ್ಟರು.

ಅವರು ಭಾನುವಾರ ಸಾಲ್ಮರದ ಕೊಟೇಚಾ ಸಭಾಂಗಣದಲ್ಲಿ ನಡೆದ ಅಂತರ್ ಜಿಲ್ಲಾಮಟ್ಟದ ಗಾಣಿಗ ಸಂಗಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ದೇಶದಾದ್ಯಂತ 14 ಕೋಟಿ ಗಾಣಿಗ ಸಮಾಜದವರಿದ್ದೇವೆ. ಗಾಣಿಗ ಸಮಾಜದ ಸಂಘಟನೆಯಾಗುವ ದೇಶಕ್ಕಾಗಿ ಏನು ಬೇಕಾದರೂ ಮಾಡಬಹುದು. ರಾಮಾಯಣ, ರಾಣಪ್ರತಾಪನ



ಆಡಳಿತಗಳಲ್ಲೂ ಗಾಣಿಗರ ಪಾತ್ರ ಉಲ್ಲೇಖವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಣಿಗರ ಕೊಡುಗೆ ಇದೆ. ಆದರೆ ನಾವು ಸಂಘಟಿತರಾಗಿಲ್ಲ, ಸಮುದಾಯಕ್ಕೆ ಹಲವು ರೀತಿಯ ವಂಚನೆಯಾಗಿದೆ ಎಂಬುವುದು ಸತ್ಯ ಎಂದರು.

ಸಂಸ್ಕಾರದ ಜೀವನ ಮತ್ತೆ ನೆನಪಾಗಲಿ

ಸನಾತನ ಧರ್ಮದ ಜತೆಗೆ ಸಂಘಟನೆ ಇಂದಿನ ಅಗತ್ಯವಾಗಿದೆ. ಮರೆತಿರುವ ಇತಿಹಾಸ, ಸಂಸ್ಕಾರದ ಜೀವನ ಮತ್ತೆ ನೆನಪಾಗಬೇಕಿದೆ ಎಂದರು.

ಸಂಸದ ಬ್ರಿಜೇಶ್ ಚೌಟ ಉದ್ಘಾಟಿಸಿ ಮಾತನಾಡಿ, ಯಾವುದೇ ಕ್ಷೇತ್ರದಲ್ಲಿಯೂ ಸಾಧನೆ ಮಾಡಬೇಕಾದರೆ ಮಹಿಳೆಯರ ಪಾತ್ರ ಬಹಳ ಮುಖ್ಯ. ಯುವಜನತೆ ಹೆಚ್ಚು ಹೆಚ್ಚಾಗಿ ಉದ್ಯಮ ಕ್ಷೇತ್ರಕ್ಕೆ ಬರಬೇಕು. ಪ್ರಧಾನಿ ಮೋದಿ ಅವರ ವಿಕಸಿತ ಭಾರತ ಸಂಕಲ್ಪ ಒಬ್ಬ ವ್ಯಕ್ತಿಯದ್ದಲ್ಲ, ಅದು ಇಡೀ ಭಾರತದೇಶದ ಸಂಕಲ್ಪವಾಗಿದೆ. ಗಾಣಿಗ ಸಮಾಜ ಗಟ್ಟಿಯಾಗಬೇಕಾದರೆ ಅದಕ್ಕೆ ಹಿಂದುತ್ವದ ಹಿನ್ನೆಲೆ ಬೇಕು. ದ.ಕ. ಜಿಲ್ಲೆಯಲ್ಲಿ ನಾವು ಹಿಂದುತ್ವದ ಗಟ್ಟಿತನ ಕಾಣಬಹುದಾಗಿದೆ. ಜಿಲ್ಲೆಯ ಸಂಸ್ಕೃತಿಗೆ ಅನುಗುಣವಾಗಿ ವಿಕಸಿತ ಭಾರತದ ಕಡೆಗೆ ಹೆಜ್ಜೆ ಹಾಕಬೇಕಾದರೆ ನಮ್ಮ ಒಗ್ಗಟ್ಟು ಅತೀ ಅಗತ್ಯ ಎಂದರು.

ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್.ಸುದರ್ಶನ್ ಮಾತನಾಡಿ, ಸಮುದಾಯದ ಅಭಿವೃದಿಯಾಗಬೇಕಾದರೆ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ನಾಯಕತ್ವ ಬೆಳೆಯಬೇಕು. ನ್ಯಾಯಾಂಗ ಹಾಗೂ ಕಾರ್ಯಾಂಗದಲ್ಲಿಯೂ ಗಾಣಿಗ ಸಮಾಜದ ಮಂದಿ ಅಧಿಕಾರಿಗಳಾಗಿ ಬರಬೇಕು. ಗಾಣಿಗ ಸಮಾಜದ ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಹೆಚ್ಚು ಚಿಂತನೆಗಳನ್ನು ನಡೆಸಬೇಕು ಎಂದರು.

ಶಾಸಕ ಅಶೋಕ್ ರೈ ಮಾತನಾಡಿ, ಪುತ್ತೂರಿನಲ್ಲಿ ಗಾಣಿಗ ಸಭಾಭವನ ನಿರ್ಮಾಣಕ್ಕೆ ಪಹಣಿಪತ್ರ ಸಹಿತ ಜಾಗ ಹುಡುಕಿಕೊಡಿ. ಅದಕ್ಕೆ ಮುಖ್ಯಮಂತ್ರಿಯವರ ಅನುಮೋದನೆ ಮಾಡಿಸಿಕೊಡುತ್ತೇನೆ ಎಂದು ಅವರು ಭರವಸೆ ನೀಡಿದರು.

ಗಾಣಿಗರ ಆತ್ಮಾವಲೋಕನ

ಮುಂಬೈ ಸಾಫಲ್ಯ ಸೇವಾ ಸಂಘದ ಅಧ್ಯಕ್ಷ ಶ್ರೀನಿವಾಸ ಸಪಲ್ಯ ಮಾತನಾಡಿ, ಇಚ್ಛಾಶಕ್ತಿ ಇದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಪುತ್ತೂರಿನಲ್ಲಿ ನಡೆದಿರುವುದು ಗಾಣಿಗ ಸಂಗಮ ಅಲ್ಲ, ಅದು ಗಾಣಿಗರ ಆತ್ಮಾವಲೋಕನ. ಗಾಣಿಗ ಸಮಾಜದ ಭವಿಷ್ಯವನ್ನು ನಿರ್ಧರಿಸುವ ಚಿಂತನೆಯಾಗಿದೆ. ಗಾಣಿಗ ಸಮಾಜದ ಆಚಾರ-ವಿಚಾರಗಳು ಪ್ರಸ್ತುತ ದಿಕ್ಕು ತಪ್ಪುತ್ತಿದೆ. ಅದಕ್ಕಾಗಿ ಸಂಘಟನೆ ಅತೀ ಅಗತ್ಯವಾಗಿದೆ. ಗಾಣಿಗರ ಜೀವನಸಂಸ್ಕೃತಿಯನ್ನು ಬಿಂಬಿಸುವ ವೆಬ್ ಸೈಟ್‌ಗಳ ಅಗತ್ಯವಿದ್ದು, ಸಂಘಟನೆ ಈ ಬಗ್ಗೆ ಚಿಂತನೆ ಮಾಡುವ ಕಾಲ ಬಂದಿದೆ ಎಂದರು.

ಅಧ್ಯಕ್ಷತೆಯನ್ನು ಪುತ್ತೂರು ಗಾಣಿಗ ಯಾನೆ ಸಪಲಿಗರ ಸಂಘದ ಅಧ್ಯಕ್ಷ ಲಕ್ಷ್ಮೀಪ್ರಸಾದ್ ಬೆಟ್ಟ ವಹಿಸಿದ್ದರು. ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ಮುಂಬೈ ಉದ್ಯಮಿ ವಸಂತ ಜಿ. ಸಪಲ್ಯ, ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ಅಖಿಲ ಕರ್ನಾಟಕ ಗಾಣಿಗ ಸಂಘದ ಎಂ.ಆರ್.ರಾಜಶೇಖರ್ ಗಾಣಿಗ, ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಶ್ವಾಸ್‌ಕುಮಾರ್ ದಾಸ್, ಬಂಟ್ವಾಳ ತಾ.ಪಂ. ಮಾಜಿ ಸದಸ್ಯ ಮಾಧವ ಮಾವೆ, ಉಪ್ಪಿನಂಗಡಿ ಗಾಣಿಗ ಸಂಘದ ಅಧ್ಯಕ್ಷ ಹರಿರಾಮಚಂದ್ರ, ಉದ್ಯಮಿ ಭುವನೇಶ್ ರಘು ಸಪಲ್ಯ ಪಾಣೆಮಂಗಳೂರು, ಪ್ರಹ್ಲಾದ್ ಮೋದಿ ಪುತ್ರಿ ಸೋನಾಲ್ ಬೆನ್ ಮೋದಿ, ಪ್ರವೀಣ್ ತೆಲಂಗಾಣ, ವಿನಯಕುಮಾರ್ ಬಾರ್ಕೂರು, ವಿಜಯಕುಮಾರ್, ಉದ್ಯಮಿ ಮನೋಜ್ ಕುಮಾರ್ ಉಪಸ್ಥಿತರಿದ್ದರು.

ಸನ್ಮಾನ, ವಿವಿಧ ಕಾರ್ಯಕ್ರಮ

ಗಾಣಿಗ ಸಮಾಜದ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಮಹಿಳೆಯರಿಗೆ ಸೀರೆ ವಿತರಣೆ ನಡೆಯಿತು. ವಧು-ವರರ ಅನ್ವೇಷಣೆಯ ನೋಂದಣಿ ನಡೆಸಲಾಯಿತು. ಡ್ಯಾನ್ಸ್ ಗಾಣಿಗ ಡ್ಯಾನ್ಸ್ ಸಹಿತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಪುತ್ತೂರು ಗಾಣಿಗ ಯಾನೆ ಸಪಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಜಯಂತ ಉರ್ಲಾಂಡಿ ಸ್ವಾಗತಿಸಿ, ಅಧ್ಯಕ್ಷ ಲಕ್ಷ್ಮೀಪ್ರಸಾದ್ ಬೆಟ್ಟ ವಂದಿಸಿದರು. ದೀಪಕ್ ಅಡ್ಯಾರ್ ಕಾರ್ಯಕ್ರಮ ನಿರ್ವಹಿಸಿದರು.